ಭಾನುವಾರ, ಸೆಪ್ಟೆಂಬರ್ 7, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 248 | ಪುಟ 16
• www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಎರಿನ್- ಗೇಬ್ರಿಯೆಲಾಗೆ ಕಿರೀಟ

ಎರಿನ್ ರೂಟ್ಲಿಫ್– ಗೇಬ್ರಿಯೆಲಾ ದಬ್ರೋವ್‌ಸ್ಕಿ ಜೋಡಿಯು ಶನಿವಾರ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡಿತು

ಕೇರಳ: ಶಿಶು ಮರಣ ಪ್ರಮಾಣ ಇಳಿಕೆ

1,000ಕ್ಕೆ 5 ಕೇರಳ

1,000ಕ್ಕೆ 5.6 ಅಮೆರಿಕ

ಅಮೆರಿಕಕ್ಕೆ ಹೋಲಿಸಿದರೆ ಭಾರತದ ರಾಜ್ಯವೊಂದರ ಶಿಶು ಮರಣ ಪ್ರಮಾಣವು ಕಡಿಮೆ ಇರುವುದು ಇದೇ ಮೊದಲು

ವೀಣಾ ಜಾರ್ಜ್, ಕೇರಳ ಆರೋಗ್ಯ ಸಚಿವೆ

ದೇಶವ್ಯಾಪಿ 'ಎಸ್‌ಐಆರ್'ಗೆ ಸಿದ್ಧತೆ 7 | ದಸರಾಕ್ಕೆ ಬಾನುಗೆ ಆಹ್ವಾನ ಪ್ರಶ್ನಿಸಿ ಪಿಐಎಲ್ 4A

ನೆರೆ ಸಂತ್ರಸ್ತರ ತೀರದ ಬವಣೆ

ಸಿಗದ ಮೂಲಸೌಕರ್ಯ; ಮುಗಿಯದ ಮನೆಗಳ ನಿರ್ಮಾಣ

• ಮನೋಜಕುಮಾರ್ ಗುದ್ದಿ

ಕಲಬುರಗಿ: ಪುನರ್ವಸತಿ ಕೇಂದ್ರಗಳಾಗಿ ದಶಕಗಳಾದರೂ ದೊರೆಯದ ಮೂಲಸೌಕರ್ಯ. ಬಿಡದ ಹಳೆಯ ಊರಿನ ನಂಟು. ಹಿಡಿ ಉಪ್ಪು ತರಲೂ ಮೂಲ ಗ್ರಾಮಕ್ಕೆ ಅಲೆದಾಡಬೇಕಾದ ಪರಿಸ್ಥಿತಿ ಎದುರಾಗಿರುವುದರಿಂದ ನೆರೆ ಹಾವಳಿಯ ಕಾರಣಕ್ಕೆ ಸ್ಥಳಾಂತರ ಗೊಂಡವರ ಸ್ಥಿತಿ 'ಅಲ್ಲಿದೆ ನಮ್ಮನೆ, ಇಲ್ಲಿ ಬಂದೆ ಸುಮ್ಮನೆ' ಎನ್ನುವಂತಾಗಿದೆ.

ರಾಜ್ಯದ ಪ್ರಮುಖ ನದಿಗಳಾದ ಕೃಷ್ಣಾ, ತುಂಗಭದ್ರಾ, ಭೀಮಾ, ಮಲಪ್ರಭಾ, ಘಟಪ್ರಭಾ ನದಿಗಳು ಹರಿಯುವ ಬೆಳಗಾವಿ, ಧಾರವಾಡ, ಬಾಗಲಕೋಟೆ, ವಿಜಯಪುರ, ರಾಯಚೂರು, ಕಲಬುರಗಿ, ಯಾದಗಿರಿ, ಗದಗ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ನೆರೆ ಹಾವಳಿಗೆ ತುತ್ತಾಗುವ ಬಹುತೇಕ ಗ್ರಾಮಗಳಲ್ಲಿನ ಪುನರ್ವಸತಿ ಕೇಂದ್ರಗಳ ಸ್ಥಿತಿ ಇದಕ್ಕಿಂತ ಭಿನ್ನವೇನಿಲ್ಲ.

ಹಿನ್ನೀರಿನಿಂದ ಆವೃತವಾಗುವ ಪ್ರದೇಶಗಳಲ್ಲಿ ಇಡೀ ಗ್ರಾಮಗಳನ್ನು ಸ್ಥಳಾಂತರಿಸಿದ್ದು ಸಮಸ್ಯೆಯಾಗಿಲ್ಲ. ಆದರೆ, ನದಿಯಂಚಿನ ಬಡಾವಣೆಗಳ ಜನರಿಗೆ ಮಾತ್ರ ಪುನರ್ವಸತಿ ಕಲ್ಪಿಸಿದ್ದರಿಂದ ಅವರು ಅಲ್ಲಿ ಇರಲೂ ಆಗದೇ ಇಲ್ಲಿಗೆ ಬರಲೂ ಆಗದೇ ಪರಿತಪಿಸುತ್ತಿದ್ದಾರೆ. ರಾಯಚೂರು ಜಿಲ್ಲೆಯ ಕೆಲವು ನಡುಗಡ್ಡೆಗಳಲ್ಲಿನ ಜನರನ್ನು ಅಲ್ಲಿಂದ ಸ್ಥಳಾಂತರಿಸುವ ಜಿಲ್ಲಾಡಳಿತದ ಯತ್ನವೂ ಕೈಗೂಡಿಲ್ಲ. ಇತ್ತೀಚೆಗೆ ನಾರಾಯಣಪುರದ ಬಸವಸಾಗರ ಜಲಾಶಯದಿಂದ ಭಾರಿ ಪ್ರಮಾಣದಲ್ಲಿ ನೀರನ್ನು ನದಿಗೆ ಹರಿಸಿದ ಪರಿಣಾಮ ಲಿಂಗಸುಗೂರು ತಾಲ್ಲೂಕಿನ ಕರಕಲಗಡ್ಡಿಯ ಸುತ್ತ ಕೃಷ್ಣಾ ನದಿಯ ನೀರು ಸುತ್ತುವರಿದಿದ್ದರಿಂದ ಅಲ್ಲಿನ ಜನರು ಸಂಪರ್ಕ ಕಳೆದುಕೊಂಡಿದ್ದರು.

4

ಒಳನೋಟ

ಯೋಜನೆ ರದ್ದು

2019ರ ಪ್ರವಾಹದಲ್ಲಿ ಮನೆ ಕಳೆದುಕೊಂಡವರು ನಿಗದಿತ ಅವಧಿಯಲ್ಲೇ ಹೊಸ ಮನೆ ಕಟ್ಟಿಕೊಳ್ಳಬೇಕಿತ್ತು. ತಡ ಮಾಡಿದ್ದರಿಂದ ಹೆಚ್ಚಿನವರಿಗೆ ಪೂರ್ತಿ ₹ 5 ಲಕ್ಷ ಪರಿಹಾರ ಬಂದಿಲ್ಲ. ಈಗಿನ ಸರ್ಕಾರ ಹಿಂದಿನ ಸರ್ಕಾರದ ಯೋಜನೆ ರದ್ದುಪಡಿಸಿದೆ. ಹಾಗಾಗಿ ಮನೆ ಕಾಮಗಾರಿ ಪೂರ್ಣಗೊಳಿಸದವರು ಈಗ ಬೇರೆ ವಸತಿ ಯೋಜನೆಗಳ ಸದ್ಬಳಕೆ ಮಾಡಿಕೊಂಡು ಕಾಮಗಾರಿ ಮುಗಿಸಬೇಕು.

ಮೊಹಮ್ಮದ್ ರೋಷನ್, ಬೆಳಗಾವಿ ಜಿಲ್ಲಾಧಿಕಾರಿ

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಶಿವಪೇಟೆಯಲ್ಲಿ ತಗಡಿನ ಶೆಡ್‌ನಲ್ಲಿ ವಾಸವಿರುವ ಸಂತ್ರಸ್ತೆ ಫಾತಿಮಾ ಮುಲ್ಲಾ

ಪ್ರಜಾವಾಣಿ ಚಿತ್ರ: ಇಮಾಮ್ ಹುಸೇನ್ ಗೂಡುನವರ

ಮಳೆ ಹಾನಿ: ಪರಿಹಾರಕ್ಕೂ ನಾನಾ ಕಾಟ

2021ರಿಂದ 2025ರ ಜುಲೈವರೆಗೆ ರಾಜ್ಯದಾದ್ಯಂತ ಮಳೆ ಸಂಬಂಧಿ ಅವಘಡಗಳಲ್ಲಿ 522 ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಮಳೆಯಿಂದ ಮನೆ ಕುಸಿದು, ಮರಬಿದ್ದು, ಸಿಡಿಲು ಬಡಿದು, ಪ್ರವಾಹದ ನೀರಿನಲ್ಲಿ ಕೊಚ್ಚಿಹೋಗಿ ಮೃತಪಟ್ಟವರನ್ನು ಈ ದತ್ತಾಂಶ ಒಳಗೊಂಡಿದೆ.

ಮೃತರಿಗೆ ₹5 ಲಕ್ಷ, ದೊಡ್ಡ ಜಾನುವಾರುಗಳಿಗೆ ₹30 ಸಾವಿರ ಮತ್ತು ಕುರಿ–ಮೇಕೆಗಳಿಗೆ ₹5 ಸಾವಿರ ಪರಿಹಾರ ನಿಗದಿ ಮಾಡಲಾಗಿದೆ. ಮಳೆ ಸಂಬಂಧಿ ಅವಘಡದಲ್ಲಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದ್ದರೂ, ಪರಿಶೀಲನೆ ನಂತರ ಅನ್ಯ ಕಾರಣಗಳಿಂದ ಸಾವು ಸಂಭವಿಸಿದೆ ಎಂಬುದು ಪತ್ತೆಯಾಗಿದೆ. ಅಂತಹ ಪ್ರಕರಣಗಳಲ್ಲಿ ಪರಿಹಾರ ರದ್ದಾಗಿದೆ. ಇಲ್ಲವೇ ಪರಿಹಾರ ವಿತರಣೆ ವಿಳಂಬವಾಗಿದೆ.

ಮಳೆ ಸಂಬಂಧಿ ಸಾವಿನ ವಿವರ



ಜೈಲಿನಲ್ಲಿ ಪ್ರಜ್ವಲ್ ಕ್ಲರ್ಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಇರುವ ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ (ಕೈದಿ ನಂ. 15528) ಜೈಲಿನ ಅಧಿಕಾರಿಗಳು ಕೆಲಸ ಹಂಚಿಕೆ ಮಾಡಿದ್ದಾರೆ. ಕಾರಾಗೃಹದಲ್ಲಿರುವ ಗ್ರಂಥಾಲಯದಲ್ಲಿ ಆತನಿಗೆ ಕ್ಲರ್ಕ್ ಕೆಲಸ ನೀಡಲಾಗಿದೆ.

ವಿಚಾರಣಾಧೀನ ಕೈದಿಗಳು ಹಾಗೂ ಸಜಾಬಂದಿಗಳಿಗೆ ಜೈಲಿನ ಗ್ರಂಥಾಲಯದಿಂದ ಪುಸ್ತಕ ವಿತರಣೆ ಮಾಡುವುದು, ಯಾವ ಕೈದಿಗೆ ಯಾವ ಪುಸ್ತಕ ನೀಡಲಾಗಿದೆ ಎಂಬುದನ್ನು ಪುಸ್ತಕದಲ್ಲಿ ನೋಂದಣಿ ಮಾಡಿಕೊಳ್ಳುವ ಕೆಲಸವನ್ನು ಪ್ರಜ್ವಲ್‌ಗೆ ನೀಡಲಾಗಿದೆ. ಕ್ಲರ್ಕ್ ಕೆಲಸಕ್ಕೆ ಪ್ರತಿದಿನಕ್ಕೆ ₹524 ಕೂಲಿ ನಿಗದಿಪಡಿಸಲಾಗಿದೆ.

'ಎಂಜಿನಿಯರಿಂಗ್ ಪದವೀಧರನಾಗಿರುವ ಪ್ರಜ್ವಲ್ ಕೃಷಿ ಕೆಲಸ ಮಾಡುವುದಾಗಿ ಹೇಳಿದ್ದ' ಎಂದು ಮೂಲಗಳು ತಿಳಿಸಿವೆ.

ಪ್ರಜ್ವಲ್ ರೇವಣ್ಣ

'ನೋಂದಣಿ ಮಾಡಿಕೊಂಡು ಕೆಲಸ ಮಾಡಿದ ದಿನದಂದು ಕೂಲಿ ಬರಲಿದೆ. ನ್ಯಾಯಾಲಯಕ್ಕೆ ಹಾಜರಾಗಬೇಕಾದ ದಿನಗಳಂದು ಹಣ ನೀಡಲಾಗುವುದಿಲ್ಲ' ಎಂದು ಜೈಲಿನ ಮೂಲಗಳು ತಿಳಿಸಿವೆ.

ರಾಜ್ಯದ ಕಾರಾಗೃಹಗಳಲ್ಲಿ ಕೌಶಲರಹಿತ ಕೈದಿಗಳಿಗೆ ದಿನಕ್ಕೆ ಒಟ್ಟು ₹524 ಸಂಬಳ ನಿಗದಿ ಮಾಡಲಾಗಿದೆ. ಒಂದು ವರ್ಷದ ನಂತರ, ಅವರು ನುರಿತ ಬಳಿಕ ದಿನಕ್ಕೆ ₹548 ಸಂಬಳ ನೀಡಲಾಗುತ್ತದೆ. ಎರಡು ವರ್ಷಗಳ ಅನುಭವದ ನಂತರ, ಕೌಶಲಪೂರ್ಣ ವರ್ಗಕ್ಕೆ ಬಡ್ತಿ ನೀಡಲಾಗುತ್ತದೆ.

5

ದರ ಇಳಿಸಿದ ವಾಹನ ಕಂಪನಿಗಳು

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು/ನವದೆಹಲಿ: ವಾಹನ ತಯಾರಿಕಾ ಕಂಪನಿಗಳಾದ ಮಹೀಂದ್ರ ಆ್ಯಂಡ್ ಮಹೀಂದ್ರ, ಮರ್ಸಿಡೀಸ್ ಬೆಂಜ್, ರೆನೊ ಮತ್ತು ಟೊಯೊಟ ಕಿರ್ಲೋಸ್ಕರ್ ಮೋಟರ್ ತಮ್ಮ ವಾಹನಗಳ ಬೆಲೆ ಕಡಿತಗೊಳಿಸಿವೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 3ರಂದು ನಡೆದ ಜಿಎಸ್‌ಟಿ ಮಂಡಳಿ ಸಭೆಯು ವಾಹನಗಳ ಮೇಲಿನ ತೆರಿಗೆಯನ್ನು ತಗ್ಗಿಸಿದೆ. ಈ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಲು ಕಂಪನಿಗಳು ವಾಹನಗಳ ಬೆಲೆಯನ್ನು ಕಡಿಮೆ ಮಾಡಿವೆ.

ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ತನ್ನ ಪ್ರಯಾಣಿಕ ವಾಹನಗಳ ಬೆಲೆಯನ್ನು ₹1.56 ಲಕ್ಷದವರೆಗೆ ಕಡಿಮೆ ಮಾಡಿದೆ. ಪರಿಷ್ಕೃತ ದರವನ್ನು ತನ್ನ ಡೀಲರ್‌ಗಳು ಮತ್ತು ಡಿಜಿಟಲ್ ವೇದಿಕೆಗಳಲ್ಲಿ ನವೀಕರಿಸಿದೆ. ಹೊಸ ದರವು ಸೆಪ್ಟೆಂಬರ್ 6ರಿಂದಲೇ ಜಾರಿಗೆ ಬಂದಿದೆ ಎಂದು ಕಂಪನಿ ಶನಿವಾರ ತಿಳಿಸಿದೆ.

ಕಂಪನಿಯು ತನ್ನ ಬೊಲೆರೊ/ನಿಯೊ ಶ್ರೇಣಿಯ ವಾಹನಗಳ ಬೆಲೆಯನ್ನು ₹1.27 ಲಕ್ಷದಷ್ಟು ಕಡಿಮೆ ಮಾಡಿದೆ. ಎಕ್ಸ್‌ಯುವಿ3ಎಕ್ಸ್‌ಒ (ಪೆಟ್ರೋಲ್) ₹1.4 ಲಕ್ಷ, ಎಕ್ಸ್‌ಯುವಿ3ಎಕ್ಸ್‌ಒ (ಡೀಸೆಲ್) ₹1.56 ಲಕ್ಷ, ಥಾರ್ 2 ಡಬ್ಲ್ಯುಡಿ (ಡೀಸೆಲ್) ₹1.35 ಲಕ್ಷ, ಥಾರ್ 4 ಡಬ್ಲ್ಯುಡಿ (ಡೀಸೆಲ್) ₹1.01 ಲಕ್ಷ ಮತ್ತು ಸ್ಕಾರ್ಪಿಯೊ ಕ್ಲಾಸಿಕ್ ವಾಹನದ ದರವನ್ನು ₹1.01 ಲಕ್ಷದಷ್ಟು ಕಡಿಮೆ ಮಾಡಿದೆ.

ಸ್ಕಾರ್ಪಿಯೊ–ಎನ್ ₹1.45 ಲಕ್ಷ, ಥಾರ್ ರಾಕ್ಸ್ ₹1.33 ಲಕ್ಷ ಮತ್ತು ಎಕ್ಸ್‌ಯುವಿ700 ವಾಹನದ ಬೆಲೆ ₹1.43 ಲಕ್ಷದಷ್ಟು ಇಳಿಕೆ ಮಾಡಲಾಗಿದೆ ಎಂದು ಕಂಪನಿ ತಿಳಿಸಿದೆ.

ರೆನೊ ದರ ಇಳಿಕೆ: ಫ್ರಾನ್ಸ್ ಮೂಲದ ಕಾರು ತಯಾರಿಕಾ ಕಂಪನಿ ರೆನೊ ಇಂಡಿಯಾ ತನ್ನ ವಾಹನಗಳ ಬೆಲೆಯನ್ನು ₹96,395ರವರೆಗೆ ಇಳಿಕೆ ಮಾಡಿದೆ. ಹೊಸ ದರ ಸೆ.22ರಿಂದ ಜಾರಿಗೆ ಬರಲಿದೆ ಎಂದು ಕಂಪನಿ ತಿಳಿಸಿದೆ.

ಗ್ರಾಹಕರು ಹೊಸ ದರದ ಪ್ರಕಾರ ಕಾರುಗಳನ್ನು ಕಂಪನಿಯ ಎಲ್ಲ ಡೀಲರ್‌ಗಳ ಬಳಿ ಈಗಿನಿಂದಲೇ ಬುಕಿಂಗ್ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದೆ. ಕ್ವಿಡ್ ಮಾದರಿಯ ವಾಹನದ ದರವನ್ನು ಕಂಪನಿಯು ₹55,095ರಷ್ಟು ಕಡಿಮೆ ಮಾಡಿದೆ. ಟ್ರೈಬರ್ ₹80,195 ಮತ್ತು ಕೈಗರ್ ವಾಹನ ಬೆಲೆ ₹96,395ರವರೆಗೆ ಇಳಿಕೆ ಆಗಿದೆ.

6

ಆಲಮಟ್ಟಿ ಜಲಾಶಯಕ್ಕೆ ಬಾಗಿನ ಅರ್ಪಿಸಿದ ಸಿ.ಎಂ ಭರವಸೆ

ಭೂಸಂತ್ರಸ್ತರಿಗೆ 'ಒಪ್ಪಿತ ದರ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ಮೂರನೇ ಹಂತದಲ್ಲಿ ಮುಳುಗಡೆಯಾಗುವ ರೈತರ ಭೂಮಿಗೆ ಒಪ್ಪಿತ ದರ (ಕನ್ಸೆಂಟ್ ಅವಾರ್ಡ್) ನೀಡಲು ಸರ್ಕಾರ ನಿರ್ಧರಿಸಿದೆ. ಇನ್ನೊಂದು ವಾರದಲ್ಲಿ ಭೂ ಪರಿಹಾರ ಮೊತ್ತ ನಿಗದಿಪಡಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ತಿಳಿಸಿದರು.

ಆಲಮಟ್ಟಿಯ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯಕ್ಕೆ ಶನಿವಾರ ಗಂಗಾಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಎಲ್ಲಾ ಪ್ರಕ್ರಿಯೆ ಪೂರ್ಣಗೊಂಡ ನಂತರವೂ ಪರಿಹಾರ ಕೋರಿ ರೈತರು ಭವಿಷ್ಯದಲ್ಲಿ ನ್ಯಾಯಾಲಯಕ್ಕೆ ಹೋಗಬಾರದು. ಇದರಿಂದ ಯೋಜನೆ ಅನುಷ್ಠಾನಕ್ಕೆ ಹಿನ್ನಡೆಯಾಗುತ್ತದೆ' ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದಲ್ಲಿ 519 ಮೀಟರ್‌ನಿಂದ 524 ಮೀಟರ್‌ಗೆ ಎತ್ತರಿಸಲು ಅನುಕೂಲ ಆಗುವಂತೆ ಗೆಜೆಟ್ ಅಧಿಸೂಚನೆ ಹೊರಡಿಸುವುದಕ್ಕೆ ಸಂಬಂಧಿಸಿದಂತೆ ಪ್ರಧಾನಿ ಮತ್ತು ಕೇಂದ್ರ ಸಚಿವರನ್ನು ಮೂರು ಬಾರಿ ಭೇಟಿ ಮಾಡಲಾಗಿದೆ. ಉಪಮುಖ್ಯಮಂತ್ರಿ ಐದು ಬಾರಿ ಭೇಟಿಯಾಗಿದ್ದಾರೆ. ನೀರಾವರಿ ನಮ್ಮ ಆದ್ಯತಾ ವಲಯವಾಗಿದೆ' ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಶಿವಾನಂದ ಪಾಟೀಲ, ಎಂ.ಬಿ. ಪಾಟೀಲ, ಆರ್.ಬಿ. ತಿಮ್ಮಾಪುರ, ಶಾಸಕರಾದ ಯಶವಂತರಾಯಗೌಡ ಪಾಟೀಲ, ಎಚ್.ವೈ. ಮೇಟಿ, ಜೆ.ಟಿ.ಪಾಟೀಲ, ವಿಜಯಾನಂದ ಕಾಶಪ್ಪನವರ, ಭೀಮಸೇನ ಚಿಮ್ಮನಕಟ್ಟಿ, ಅಶೋಕ ಮನಗೂಳಿ, ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಇದ್ದರು.

ವಿಜಯಪುರ ಜಿಲ್ಲೆಯ ಆಲಮಟ್ಟಿಯ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ಬಾಗಿನ ಅರ್ಪಿಸಿದರು. ಸಚಿವ ಎಂ.ಬಿ.ಪಾಟೀಲ ಮತ್ತಿತರರು ಪಾಲ್ಗೊಂಡಿದ್ದರು.

'ಆಪ್ತ ಸ್ನೇಹಿತ'ರ ಬಾಂಧವ್ಯ ಜಪ

'ವಿಶೇಷ ಸಂಬಂಧ' ನೆನೆದ ಟ್ರಂಪ್ • ಹೇಳಿಕೆ ಪ್ರಶಂಸಿಸಿದ ಮೋದಿ

ನವದೆಹಲಿ/ ವಾಷಿಂಗ್ಟನ್ (ಪಿಟಿಐ): 'ಭಾರತ– ಅಮೆರಿಕ ಸಂಬಂಧದ ಬಗ್ಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿರುವ ಸಕಾರಾತ್ಮಕ ಹೇಳಿಕೆಯನ್ನು ಶ್ಲಾಘಿಸುತ್ತೇನೆ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

ಭಾರತ–ಅಮೆರಿಕ ನಡುವೆ 'ವಿಶೇಷ ಸಂಬಂಧ' ಇದೆ ಎಂದು ಟ್ರಂಪ್ ಹೇಳಿದ್ದಕ್ಕೆ, ಮೋದಿ ಈ ಪ್ರತಿಕ್ರಿಯೆ ನೀಡಿದ್ದಾರೆ. ಭಾರತದ ಸರಕುಗಳ ಮೇಲೆ ಹೆಚ್ಚಿನ ಸುಂಕ ವಿಧಿಸುವ ಟ್ರಂಪ್ ನಿರ್ಧಾರ ಉಭಯ ದೇಶಗಳ ನಡುವಣ ಸಂಬಂಧಕ್ಕೆ ಧಕ್ಕೆ ಉಂಟು ಮಾಡಿತ್ತು. ಇದೀಗ ಇಬ್ಬರೂ ನಾಯಕರು ನೀಡಿರುವ ಹೇಳಿಕೆಗಳು ಸಂಬಂಧವನ್ನು ಮರುಸ್ಥಾಪಿಸುವ ನಿಟ್ಟಿನಲ್ಲಿ ನಡೆದಿರುವ ಪ್ರಯತ್ನ ಎಂದು ವಿಶ್ಲೇಷಿಸಲಾಗಿದೆ.

ಭಾರತ ಮತ್ತು ಅಮೆರಿಕವು ಅತ್ಯಂತ ಸಕಾರಾತ್ಮಕ, ಭವಿಷ್ಯಕ್ಕೆ ಒಳ್ಳೆಯದಾಗುವ ಹಾಗೂ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯನ್ನು ಹೊಂದಿವೆ ಎಂದು ಪ್ರಧಾನಿ ಅವರು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ನಾನು ಯಾವಾಗಲೂ ಮೋದಿ ಅವರ ಸ್ನೇಹಿತನಾಗಿಯೇ ಇರುತ್ತೇನೆ. ಅವರೊಬ್ಬ ಗೌರವಾನ್ವಿತ ವ್ಯಕ್ತಿ ಮತ್ತು ಶ್ರೇಷ್ಠ ಪ್ರಧಾನಿ. ಆದರೆ, ಈ ನಿರ್ದಿಷ್ಟ ಕ್ಷಣದಲ್ಲಿ ಅವರು ತೆಗೆದುಕೊಳ್ಳುತ್ತಿರುವ ನಿರ್ಧಾರಗಳು ನನಗೆ ಇಷ್ಟವಾಗುತ್ತಿಲ್ಲ. ಈಗ ತಲೆದೋರಿರುವ ಬಿಕ್ಕಟ್ಟು ಶೀಘ್ರದಲ್ಲೇ ಸರಿ ಹೋಗಲಿದೆ' ಎಂದು ಟ್ರಂಪ್ ಅವರು ಶುಕ್ರವಾರ ಓವಲ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

6

ಭಾರತ ಮತ್ತು ಅಮೆರಿಕ ನಡುವಣ ಸಂಬಂಧ ತುಂಬಾ ವಿಶೇಷವಾದುದು. ನಮ್ಮಿಬ್ಬರ ಬಾಂಧವ್ಯ ಹದಗೆಟ್ಟಿರುವುದರ ಬಗ್ಗೆ ಚಿಂತೆ ಮಾಡುವಂತದ್ದು ಏನೂ ಇಲ್ಲ

ಡೊನಾಲ್ಡ್ ಟ್ರಂಪ್, ಅಮೆರಿಕದ ಅಧ್ಯಕ್ಷ

ಟ್ರಂಪ್ ಅವರ ಭಾವನೆಗಳು ಮತ್ತು ಭಾರತದ ಜತೆಗಿನ ಬಾಂಧವ್ಯದ ಕುರಿತು ನೀಡಿರುವ ಸಕಾರಾತ್ಮಕ ಹೇಳಿಕೆಯನ್ನು ಪ್ರಶಂಸಿಸುತ್ತೇನೆ

ನರೇಂದ್ರ ಮೋದಿ, ಪ್ರಧಾನಿ

ನಿರಾಸೆಯಾಗಿದೆ: ಟ್ರಂಪ್

'ಭಾರತವು ರಷ್ಯಾದಿಂದ ದೊಡ್ಡ ಪ್ರಮಾಣದಲ್ಲಿ ತೈಲ ಖರೀದಿಸುತ್ತಿರುವುದು ನನಗೆ ತುಂಬಾ ನಿರಾಸೆ ಉಂಟುಮಾಡಿದೆ. ಈ ವಿಚಾರವನ್ನು ಅವರಿಗೂ (ಭಾರತಕ್ಕೆ) ತಿಳಿಸಿದ್ದೇನೆ' ಎಂದು ಟ್ರಂಪ್ ಹೇಳಿದ್ದಾರೆ. 'ನಾವು ಭಾರತ ಮತ್ತು ರಷ್ಯಾವನ್ನು ಚೀನಾಕ್ಕೆ ಕಳೆದುಕೊಂಡಂತೆ ಭಾಸವಾಗುತ್ತಿದೆ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಮಾಡಿದ್ದ ಪೋಸ್ಟ್ ಕುರಿತ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದ್ದಾರೆ.

'ಭಾರತದ ಸರಕುಗಳ ಮೇಲೆ ಶೇಕಡ 50ರಷ್ಟು ಸುಂಕ ಹೇರಿದ್ದೇವೆ. ಆದರೆ, ಪ್ರಧಾನಿ ಮೋದಿ ಅವರೊಂದಿಗೆ ನಾನು ಒಳ್ಳೆಯ ಸಂಬಂಧ ಹೊಂದಿದ್ದೇನೆ. ಕೆಲ ತಿಂಗಳ ಹಿಂದೆ ಅವರು ಅಮೆರಿಕಕ್ಕೆ ಭೇಟಿ ನೀಡಿದ್ದರು. ರೋಸ್ ಗಾರ್ಡನ್‌ನಲ್ಲಿ ಇಬ್ಬರೂ ಸುದ್ದಿಗೋಷ್ಠಿ ನಡೆಸಿದ್ದೆವು' ಎಂದು ತಿಳಿಸಿದ್ದಾರೆ.

REMEMBRANCE

K.V. VENKATESH

Left for heavenly abode on 07-09-2024

On this day last year, you left us forever, leaving behind countless memories.

We cherish those moments of love, joy and guidance, as we continue your legacy and uphold the values imbibed by you.

You are loved and remembered forever

Sorrowing family members

ನೇಮಕಾತಿ ವಯೋಮಿತಿ ಎರಡು ವರ್ಷ ಸಡಿಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ' ವೃಂದದ ಹುದ್ದೆಗಳ ನೇರ ನೇಮಕಾತಿಗಳಲ್ಲಿ ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ ಎರಡು ವರ್ಷ ಸಡಿಲಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸೆಪ್ಟೆಂಬರ್ 6ರಿಂದ 2027ರ ಡಿ. 31ರವರೆಗೆ ಅರ್ಜಿ ಆಹ್ವಾನಿಸಿ ಹೊರಡಿಸುವ ಎಲ್ಲ ನೇರ ನೇಮಕಾತಿ ಅಧಿಸೂಚನೆಗಳಿಗೆ ಈ ಆದೇಶ ಅನ್ವಯ ಆಗಲಿದೆ. ಇಂತಹ ಅವಕಾಶ ಒಂದು ಬಾರಿಗೆ ಸೀಮಿತವಾಗಿರಲಿದೆ. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲ ಪ್ರವರ್ಗಗಳ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಆಯಾ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ ಅವಕಾಶ ಸಿಗಲಿದೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಗೆ ಬರುವವರೆಗೆ, ಮೀಸಲಾತಿ ಅನ್ವಯವಾಗುವ ವೃಂದಗಳ ಹುದ್ದೆಗಳಿಗೆ ನೇಮಕಾತಿ ಅಥವಾ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಹೊಸತಾಗಿ ಯಾವುದೇ ಅಧಿಸೂಚನೆ ಹೊರಡಿಸದಂತೆ 2024ರ ಅ. 28ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿತ್ತು.

ಒಳ ಮೀಸಲಾತಿಯನ್ನು ಮರುವಿಂಗಡಿಸಿರುವ ಸರ್ಕಾರ, ತಕ್ಷಣದಿಂದ ಜಾರಿಗೆ ಬರುವಂತೆ ಆಗಸ್ಟ್ 28ರಂದು ಆದೇಶ ಹೊರಡಿಸಿತ್ತು. ಗರಿಷ್ಠ ವಯೋಮಿತಿಯಲ್ಲಿ ಒಂದು ಬಾರಿಯ ಕ್ರಮವಾಗಿ ವಯೋಮಿತಿ ಸಡಿಲಿಸಲು ಕೂಡಾ ಸಂಪುಟ ಸಭೆ ನಿರ್ಧರಿಸಿತ್ತು.

ಒಳ ಮೀಸಲಾತಿ ಜಾರಿಗೆ ಬಂದಿರುವ ಕಾರಣ ನೇರ ನೇಮಕಾತಿಯ ವೇಳೆ ಅನುಸರಿಸಬೇಕಾದ 'ಪರಿಷ್ಕೃತ ಮೀಸಲಾತಿ ರೋಸ್ಟರ್' ನಿಗದಿಪಡಿಸಿ ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ. ಒಳ ಮೀಸಲಾತಿ ಹಂಚಿಕೆ ಆದೇಶಕ್ಕೆ ಅನುಗುಣವಾಗಿ ಒಟ್ಟು 100 ರೋಸ್ಟರ್ ಬಿಂದುಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಗುರುತಿಸಿದ 17 ಬಿಂದುಗಳನ್ನು 'ಪ್ರವರ್ಗವಾರು' ಎ, ಬಿ ಮತ್ತು ಸಿ ಬಿಂದುಗಳೆಂದು ನಿಗದಿಪಡಿಸಲಾಗಿದೆ.

ಪರಿಷ್ಕೃತ ಮೀಸಲಾತಿ ರೋಸ್ಟರ್ ಮತ್ತು ಗರಿಷ್ಠ ವಯೋಮಿತಿ ಸಡಿಲಿಸಿ ಆದೇಶ ಹೊರಡಿಸಿರುವ ಕಾರಣ ನೇರ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಡಿಪಿಎಆರ್ ಕ್ರಮ ವಹಿಸಲು ಮತ್ತು ನೇಮಕಾತಿ ಪ್ರಾಧಿಕಾರಗಳು ಹೊಸತಾಗಿ ಅಧಿಸೂಚನೆ ಹೊರಡಿಸಲು ಅವಕಾಶ ಆಗಲಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಸಾಕ್ಷಿ ದೂರುದಾರ ಶಿವಮೊಗ್ಗ ಜೈಲಿಗೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿವೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ಸಾಕ್ಷಿ ದೂರುದಾರನಿಗೆ ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯವು ನ್ಯಾಯಾಂಗ ಬಂಧನ ವಿಧಿಸಿದೆ. ಆತನನ್ನು ಬಿಗಿ ಪೊಲೀಸ್ ಭದ್ರತೆಯೊಂದಿಗೆ ಶಿವಮೊಗ್ಗ ಜೈಲಿಗೆ ಶನಿವಾರ ಕಳುಹಿಸಲಾಯಿತು.

ವಿವರ ಪುಟ 5

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ 'ಅಂತರಿಕ್ಷ ಹೊಂಗಿರಣ' ಕಾರ್ಯಕ್ರಮದಲ್ಲಿ ವಾಸುಕಿ ಆಚಾರ್ಯ ಮತ್ತು ಶುಭಾ ವಾಸುಕಿ ದಂಪತಿ ಶಾಲಾ ಮಕ್ಕಳಿಗೆ ಆರ್ಥಿಕ ನೆರವು ನೀಡಿದರು. ವಾಸುಕಿ ದಂಪತಿಯ ಮಗ ಅಂತರಿಕ್ಷ ಅವರು ಕುಂಭಮೇಳಕ್ಕೆ ತೆರಳಿದ್ದ ವೇಳೆ ಅಕಾಲಿಕವಾಗಿ ಮೃತಪಟ್ಟಿದ್ದರು

ನಗರ ಪಾಲಿಕೆಗಳಿಂದ ಸಾಮೂಹಿಕ ಸ್ವಚ್ಛತೆ

ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ

- ಎಂಪೈರ್ ಹೋಟೆಲ್‌ಗೆ ₹10 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಶನಿವಾರ ಸಾಮೂಹಿಕ ಸ್ವಚ್ಛತಾ ಕಾರ್ಯವನ್ನು ನಡೆಸಲಾಯಿತು. ಪಾದಚಾರಿ ಮಾರ್ಗಗಳ ಒತ್ತುವರಿಯನ್ನು ತೆರವು ಮಾಡಿ, ಒತ್ತುವರಿದಾರರಿಗೆ ದಂಡ ವಿಧಿಸಲಾಯಿತು.

ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಶಿವಾಜಿನಗರ ವ್ಯಾಪ್ತಿಯಲ್ಲಿ ಅನಧಿಕೃತ ಒಎಫ್‌ಸಿ ತೆರವುಗೊಳಿಸಿ, ಟ್ರ್ಯಾಕ್ಟರ್ ಬಳಸಿ ರಸ್ತೆ ಬದಿ ಸಂಗ್ರಹವಾಗಿದ್ದ ಹೂಳು, ತ್ಯಾಜ್ಯ ಸೇರಿದಂತೆ ಕಟ್ಟಡಗಳ ಭಗ್ನಾವಶೇಷಗಳನ್ನು ತೆರವುಗೊಳಿಸಲಾಯಿತು. ವಿ.ವಿ. ಪುರದ ಸಜ್ಜನ್ ರಾವ್ ವೃತ್ತದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲಾಯಿತು. ಸಿ.ವಿ. ರಾಮನ್ ನಗರದ 80 ಅಡಿ ರಸ್ತೆಯಲ್ಲಿ ತೀವ್ರ ಸ್ವಚ್ಛತಾ ಕಾರ್ಯ ನಡೆಸಿ, ಎಂಪೈರ್ ಹೋಟೆಲ್‌ನವರು ಪಾದಚಾರಿ ಮಾರ್ಗ ಒತ್ತುವರಿ ಮಾಡಿದ್ದರಿಂದ ₹10 ಸಾವಿರ ದಂಡ ವಿಧಿಸಿ, ಮತ್ತೆ ಒತ್ತುವರಿ ಮಾಡದಂತೆ ಪಾಲಿಕೆ ಸಿಬ್ಬಂದಿ ಎಚ್ಚರಿಕೆ ನೀಡಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆಯ ಸರ್ಜಾಪುರ ರಸ್ತೆಯ ಬೃಹತ್ ನೀರುಗಾಲುವೆ ಹಾಗೂ ಸೈಡ್ ಡ್ರೈನ್‌ಗಳ ಹೂಳೆತ್ತಿ ನೀರು ಸರಾಗವಾಗಿ ಹರಿಯುವಂತೆ ಮಾಡಲಾಯಿತು. ಎಇಸಿಎಸ್ ಲೇಔಟ್ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿ ಇರಿಸಲಾಗಿದ್ದ ಪೆಟ್ಟಿಗೆ ಅಂಗಡಿ, ಅಂಗಡಿ ಸಾಮಗ್ರಿ ತೆರವುಗೊಳಿಸಿ, ಒತ್ತುವರಿ ಮಾಡದಂತೆ ಎಚ್ಚರಿಕೆ ನೀಡಲಾಯಿತು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಮಲ್ಲತಹಳ್ಳಿ ವಾರ್ಡ್‌ನ ಶ್ರೀಗಂಧಕಾವಲ್ ಉಪವಿಭಾಗ, ಕೆಂಗೇರಿ ವಿಭಾಗದ ಸುಭಾಷ್ ನಗರ, ಮಾರುತಿ ಮಂದಿರ ವಾರ್ಡ್, ಮಹಾಲಕ್ಷ್ಮೀಪುರ ವಾರ್ಡ್, ಕೆಂಗೇರಿ ವಿಭಾಗ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಾಗೂ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಯಿತು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಸಾರಕ್ಕಿ ಮುಖ್ಯರಸ್ತೆ ಹಾಗೂ ಜೆ.ಪಿ.ನಗರ ಮೊದಲನೇ ಹಂತದ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲಾಯಿತು. ಸಾರಕ್ಕಿ ಮಾರುಕಟ್ಟೆಯ ಮುಂಭಾಗದ ಪಾದಚಾರಿ ಮಾರ್ಗದಲ್ಲಿ ನಿರ್ಮಿಸಿದ್ದ ಅಂಗಡಿಗಳು, ನಾಮಫಲಕಗಳನ್ನು ತೆರವುಗೊಳಿಸಿ, ಒತ್ತುವರಿ ಮಾಡದಂತೆ ಎಚ್ಚರಿಕೆ ನೀಡಲಾಯಿತು.

ನಗರದ ಹಲವು ಭಾಗಗಳಲ್ಲಿ ನಗರ ಪಾಲಿಕೆಗಳ ಸಿಬ್ಬಂದಿ ಸ್ವಚ್ಛತಾ ಕಾರ್ಯ ನಡೆಸಿದರು

ಮೆಜೆಸ್ಟಿಕ್ ಬಳಿ ಮೊಬೈಲ್ ಶೌಚಾಲಯ

'ಮೆಜೆಸ್ಟಿಕ್ ಬಳಿ ಪಾದಚಾರಿ ಮಾರ್ಗಗಳಲ್ಲಿ ಸಾರ್ವಜನಿಕರು ಮೂತ್ರ ವಿಸರ್ಜನೆ ಮಾಡುವುದನ್ನು ನಿಯಂತ್ರಿಸಲು ಮೊಬೈಲ್ ಶೌಚಾಲಯಗಳ ವ್ಯವಸ್ಥೆ ಮಾಡಬೇಕು' ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕೊಳಗೇರಿ ಅಭಿವೃದ್ಧಿ ಮಂಡಳಿ ಮುಂಭಾಗದ ಆಟೊ ಟಿಪ್ಪರ್ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, 'ಮೆಜೆಸ್ಟಿಕ್ ಪ್ರದೇಶದಲ್ಲಿ ಪಾದಚಾರಿಗಳ ಸಂಚಾರ ಹೆಚ್ಚು ಇರುವುದರಿಂದ ಮೊಬೈಲ್ ಶೌಚಾಲಯ ವ್ಯವಸ್ಥೆ ಮಾಡಬೇಕು. ಇದರಿಂದ ಪಾದಚಾರಿ ಮಾರ್ಗದ ಬದಿಗಳಲ್ಲಿ ಮೂತ್ರ ವಿಸರ್ಜನೆ ಮಾಡುವವರ ಸಂಖ್ಯೆ ಕಡಿಮೆಯಾಗಿ ಸ್ವಚ್ಛತೆ ಕಾಪಾಡಬಹುದಾಗಿದೆ' ಎಂದು ತಿಳಿಸಿದರು.

ಓಕಳಿಪುರಂನಂತಹ ಪ್ರಮುಖ ಜಂಕ್ಷನ್‌ಗಳಲ್ಲಿ ತೀವ್ರ ಸ್ವಚ್ಛತೆ ಮಾಡಬೇಕು. ಧನ್ವಂತರಿ ರಸ್ತೆಯಲ್ಲಿ ಹಾಕಲಾಗಿರುವ (ರೈಲ್ವೆ ಜಾಗದ ಎದುರು) ಕಟ್ಟಡಗಳ ಅವಶೇಷಗಳನ್ನು ತೆರವುಗೊಳಿಸಬೇಕು. ಪಾದಚಾರಿ ಮಾರ್ಗದಲ್ಲಿ ಹಾಳಾಗಿರುವ ಕರ್ಬ್ ಸ್ಟೋನ್‌ಗಳು, ಸ್ಲ್ಯಾಬ್‌ಗಳನ್ನು ಬದಲಾಯಿಸಬೇಕೆಂದು ಸೂಚನೆ ನೀಡಿದರು.

ಮೆಜೆಸ್ಟಿಕ್ ಸುತ್ತಮುತ್ತಲಿನ ಪ್ರದೇಶಗಳ ಹೋಟೆಲ್‌ಗಳು ಹಾಗೂ ವಾಣಿಜ್ಯ ಮಳಿಗೆಗಳ ಬಳಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಈ ಸಂಬಂಧ ಎಲ್ಲಾ ಮಳಿಗೆಗಳ ಮುಂಭಾಗ ವಿಶೇಷ ಡಸ್ಟ್ ಬಿನ್‌ಗಳನ್ನು ಅಳವಡಿಸಿಕೊಳ್ಳಲು ಅವರಿಗೆ ಸೂಚನೆ ನೀಡಬೇಕು. ಅದನ್ನು ಪಾಲಿಸದಿರುವವರಿಗೆ ದಂಡ ವಿಧಿಸುವ ಕೆಲಸ ಮಾಡಬೇಕು.

ಜಂಕ್ಷನ್‌ಗಳಲ್ಲಿ ತೋಟಗಾರಿಕಾ ವಿಭಾಗದ ವತಿಯಿಂದ ಸಸಿಗಳನ್ನು ನೆಟ್ಟು, ಸಂರಕ್ಷಿಸುವ ಕೆಲಸ ಮಾಡಬೇಕು. ಜೊತೆಗೆ ಪಾದಚಾರಿ ಮಾರ್ಗಗಳಲ್ಲಿ ನೆಟ್ಟಿರುವ ಸಸಿಗಳನ್ನು ಸರಿಯಾಗಿ ಪೋಷಣೆ ಮಾಡಬೇಕು ಹಾಗೂ ಸಸಿಗಳ ಸುತ್ತಲು ಗ್ರಿಲ್ ಅಳವಡಿಸಬೇಕೆಂದು ಸೂಚನೆ ನೀಡಿದರು.

'ನಾಗರಿಕರಿಗೆ ಆದ್ಯತೆ ಇರಲಿ, ಅಧಿಕಾರಿಗಳಿಗಲ್ಲ'

ಬೆಂಗಳೂರು ಉತ್ತರ ನಗರ ಪಾಲಿಕೆಯ ಸಮಗ್ರ ಬೆಳವಣಿಗೆಗಾಗಿ ಕರ್ತವ್ಯ ನಿರ್ವಹಿಸಲು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು ಅಧಿಕಾರಿಗಳಿಗೆ ಕರೆ ನೀಡಿದರು.

ಯಲಹಂಕ ಎನ್.ಇ.ಎಸ್ ವೃತ್ತದ ಬಳಿಯ ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಅಧಿಕಾರಿ/ನೌಕರರ ಪರಿಚಯ ಹಾಗೂ ವಿಚಾರ ವಿನಿಮಯ ಸಭೆಯಲ್ಲಿ ಅವರು ಮಾತನಾಡಿದರು.

'ಅಧಿಕಾರಿಗಳಿಗೆ ಸೌಲಭ್ಯಗಳಿರಲಿ, ಇಲ್ಲದಿದಲಿ ನಾಗರಿಕಗೆ ಮೊದಲ ಆದ್ಯತೆ ನೀಡಿ ಅವರ ಸಮಸ್ಯೆಗಳನ್ನು ಆಲಿಸಿ ಅದನ್ನು ಬಗೆಹರಿಸುವ ಕೆಲಸವನ್ನು ಎಲ್ಲರೂ ಮಾಡಬೇಕು. ಅದರ ಜೊತೆಗೆ ಅಧಿಕಾರಿ/ಸಿಬ್ಬಂದಿಯ ಸಮಸ್ಯೆಗಳಿಗೆ ಕಾನೂನಿನ ಚೌಕಟ್ಟಿನಲ್ಲಿ ಪರಿಹಾರ ಹುಡುಕಿ ಬಗೆಹರಿಸುವ ಕೆಲಸ ಮಾಡಬೇಕು' ಎಂದು ತಿಳಿಸಿದರು.

'ಅಧಿಕಾರಿಗಳು ಸ್ಥಳೀಯವಾಗಿರುವ ಸಮಸ್ಯೆಗಳನ್ನು ಅರ್ಥೈಸಿಕೊಂಡು ಬಗೆಹರಿಸುವ ಕೆಲಸ ಮಾಡಬೇಕು. ಕರ್ತವ್ಯ ನಿರ್ಲಕ್ಷಿಸುವವರ ವಿರುದ್ಧ ಕ್ರಮಕೈಗೊಳ್ಳಲಾಗುವುದು' ಎಂದು ಅವರು ಹೇಳಿದರು.

ವಿದ್ಯುತ್ ವಿಭಾಗದ ಎಂಜಿನಿಯರ್ ಹಾಗೂ ಸಿಬ್ಬಂದಿ ಮೂರು ದಿನಗಳಲ್ಲಿ ಎಲ್ಲ ಪ್ರದೇಶಗಳ ತಪಾಸಣೆ ನಡೆಸಿ, ಬೀದಿಗಳಲ್ಲಿ ಹಾಗೂ ಉದ್ಯಾನಗಳಲ್ಲಿ ದೀಪಗಳನ್ನು ಸರಿಪಡಿಸಿ, ವರದಿ ಸಲ್ಲಿಸಲು ಸೂಚನೆ ನೀಡಿದರು.

ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿ.,
ನಂ.14, ಸೌತ್ ಎಂಡ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020.
ಫೋನ್ ನಂ. 23562229 ; 23460051 ; 23461344

ಸರ್ವಸದಸ್ಯರ ಸಭಾ ನೋಟೀಸು

ಬ್ಯಾಂಕಿನ 2024–25ನೇ ಸಾಲಿನ, 47 ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ದಿನಾಂಕ **14.09.2025** ರ ಭಾನುವಾರ ಬೆಳಿಗ್ಗೆ **10.00** ಘಂಟೆಗೆ **ವೈ. ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ ವೃತ್ತ, ಯಶವಂತಪುರ, ಬೆಂಗಳೂರು – 560022** ಇಲ್ಲಿ ನಡೆಸಲು ಏರ್ಪಾಟು ಮಾಡಲಾಗಿದೆ. ಈಗಾಗಲೇ ಮಾನ್ಯ ಸದಸ್ಯರುಗಳ ವಿಳಾಸಕ್ಕೆ ಸಭೆಯ ಸೂಚನಾ ಪತ್ರವನ್ನು ಅಂಚೆ ಮೂಲಕ ಸಕಾಲದಲ್ಲಿ ಕಳುಹಿಸಲಾಗಿದೆ. ಒಂದು ವೇಳೆ ಸೂಚನಾ ಪತ್ರ ತಲುಪದೇ ಇದ್ದಲ್ಲಿ ಇದನ್ನೇ ಸೂಚನಾ ಪತ್ರ ಎಂದು ಪರಿಗಣಿಸಿ ಮಾನ್ಯ ನಿಯತ ಸದಸ್ಯರು **(Regular Members)** ಮಾತ್ರ ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.
ಸಭೆಯಲ್ಲಿ ಭಾಗವಹಿಸಲು ಗುರುತಿನ ಚೀಟಿಯು ಕಡ್ಡಾಯವಾಗಿರುತ್ತದೆ. ಇದನ್ನು ಪಡೆಯದಿರುವ ಸದಸ್ಯರು ತಮ್ಮ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ನೀಡಿ ಗುರುತಿನ ಚೀಟಿಯನ್ನು ಪಡೆದುಕೊಳ್ಳಬೇಕೆಂದು ಕೋರಲಾಗಿದೆ.

ಸ್ಥಳ: ಬೆಂಗಳೂರು
ದಿನಾಂಕ: 06.09.2025

ಸಹಿ
(ಯಮುನ ಪಿ.)
ಪ್ರಧಾನ ವ್ಯವಸ್ಥಾಪಕರು

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಶೇಷ ವಿಭಾಗ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 05/2025–26 ದಿನಾಂಕ : 04–09–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2025–26 ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ **31 ಸಂಖ್ಯೆಯ ಅಂದಾಜು ಮೊತ್ತ ರೂ. 6.00 ಲಕ್ಷದಿಂದ 45.59 ಲಕ್ಷಗಳವರೆಗಿನ ಕಾಮಗಾರಿಗಳಿಗೆ** ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ : 08–09–2025 ರಿಂದ 17–09–2025 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 17–09–2025 ರ ಸಂಜೆ 4.00 ಗಂಟೆಯೊಳಗೆ ಸಲ್ಲಿಸುವುದು. 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 18–09–2025 ರ ಸಂಜೆ 4.30 ಗಂಟೆ (ಸಾಧ್ಯವಾದಲ್ಲಿ).

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ,
ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

ಡಿಐಪಿಆರ್/ರಾಮನಗರ/321/ಮಣಿಪಾಲ್/2025–26

ಶಾಲೆಗೆ ₹ 1ಲಕ್ಷ ದೇಣಿಗೆ ನೀಡಿದ ನಿವೃತ್ತ ಶಿಕ್ಷಕ

ಕನಕಗಿರಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಹುಲಿಹೈದರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಸೇವೆ ಸಲ್ಲಿಸಿದ್ದ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಶಾಂತಾರಾಮ ಜೋಗಳೇಕರ್ ಅವರು ಶುಕ್ರವಾರ ಶಾಲೆಗೆ ₹1 ಲಕ್ಷ ದೇಣಿಗೆ ನೀಡಿದರು. ಈ ಶಾಲೆಯಲ್ಲಿದ್ದಾಗ ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದಿದ್ದರು. ಬೆಳಗಾವಿಯಲ್ಲಿ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದ ಅವರು ಈಚೆಗೆ ನಿವೃತ್ತರಾಗಿದ್ದಾರೆ.

ನಿರ್ದಿಷ್ಟ ಧರ್ಮದವರ ಪೌರತ್ವ ನಿರಾಕರಿಸುವ ಹುನ್ನಾರ: ಹೆಗ್ಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶ ವಿಭಜನೆಯ ಸಂದರ್ಭದಲ್ಲಿ ಈ ನೆಲದಲ್ಲೇ ಉಳಿಯುತ್ತೇವೆ ಎಂದು ಇಲ್ಲೇ ನೆಲೆ ನಿಂತ ಧಾರ್ಮಿಕ ಅಲ್ಪಸಂಖ್ಯಾತರ ಪೌರತ್ವವನ್ನು ನಿರಾಕರಿಸುವ ಹುನ್ನಾರಗಳು ನಡೆಯುತ್ತಿವೆ' ಎಂದು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಸಂಜಯ್ ಹೆಗ್ಡೆ ಕಳವಳ ವ್ಯಕ್ತಪಡಿಸಿದರು.

ನಾನು ಗೌರಿ ಸ್ಮಾರಕ ಟ್ರಸ್ಟ್ ಶನಿವಾರ ಆಯೋಜಿಸಿದ್ದ, 'ಅಪಾಯದ ಸುಳಿಯಲ್ಲಿ ಪ್ರಜಾತಂತ್ರ' ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ದೇಶ ವಿಭಜನೆಯ ಸಂದರ್ಭದಲ್ಲಿ ಮುಸ್ಲಿಮರನ್ನು ಪಾಕಿಸ್ತಾನ ಮತ್ತು ಪೂರ್ವ ಪಾಕಿಸ್ತಾನಕ್ಕೆ ಹೋಗಲು ಹೇಳಲಾಯಿತು. ಆದರೆ ಹಲವರು ಇಲ್ಲೇ ಉಳಿದರು. ಸಂವಿಧಾನವನ್ನು ಅಂಗೀಕರಿಸಿದ ದಿನದಿಂದ 65 ವರ್ಷಗಳವರೆಗೆ ದೇಶವು ಸಮಾನತೆ, ಏಕತೆಯೆಡೆಗೆ ಸಾಗುತ್ತಿತ್ತು. 65 ವರ್ಷಗಳ ನಂತರ ಹಿಮ್ಮುಖವಾಗಿ ಚಲಿಸಲು ಆರಂಭಿಸಿತು' ಎಂದರು.

'ನಮ್ಮವರು ಎಂದು ಒಪ್ಪಿಕೊಳ್ಳಲಾಗಿದ್ದ, ನಮ್ಮವರೇ ಆಗಿದ್ದ ಒಂದು ಧಾರ್ಮಿಕ ಸಮುದಾಯದ ಜನರ ದೇಶಪ್ರೇಮವನ್ನು ಮೊದಲು ಪ್ರಶ್ನಿಸಲಾಗುತ್ತಿತ್ತು. ಈಗ ಅವರ ಪೌರತ್ವವನ್ನು ಪ್ರಶ್ನಿಸಲಾಗುತ್ತಿದೆ. ಅದರ ಭಾಗವಾಗಿಯೇ ಬಿಹಾರದಲ್ಲಿ ಚುನಾವಣಾ ಆಯೋಗವು ಮತದಾರರ ಚೀಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸುತ್ತಿದೆ. ಆಡಳಿತ ಪಕ್ಷಕ್ಕೆ ಮತ ಹಾಕದೇ ಇರುವ ಧರ್ಮ ಮತ್ತು ಜಾತಿ ಸಮುದಾಯಗಳ ಜನರ ಪೌರತ್ವವನ್ನು ರದ್ದುಪಡಿಸಲು ವ್ಯವಸ್ಥಿತ ಸಂಚು ನಡೆಯುತ್ತಿದೆ' ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಸಂಜಯ್ ಹೆಗ್ಡೆ ಮತ್ತು ತೀಸ್ತಾ ಸೆಟಲ್‌ವಾಡ್ ಮಾತುಕತೆಯಲ್ಲಿ ತೊಡಗಿದ್ದರು. ದಿನೇಶ್ ಅಮಿನ್ ಮಟ್ಟು, ತಾರಾ ರಾವ್ ಉಪಸ್ಥಿತರಿದ್ದರು

'ಮತದಾನದ ಹಕ್ಕು ಕಸಿಯುವ ಯತ್ನ'

'ಪ್ರತಿ ಚುನಾವಣೆಯಲ್ಲೂ ಬಿಜೆಪಿ ಒಂದು ಹೊಸ ತಂತ್ರ ರೂಪಿಸಿ ಗೆಲ್ಲುತ್ತಿದೆ. 2014ರಲ್ಲಿ ಸಾಮಾಜಿಕ ಜಾಲತಾಣ, 2019ರಲ್ಲಿ ಇವಿಎಂ ಮತ್ತು 2024ರಲ್ಲಿ ಎರಡನ್ನೂ ಬಳಸಿಕೊಂಡು ಚುನಾವಣೆ ಗೆದ್ದಿತು. ಈಗ ಮತದಾರರ ಚೀಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು ಪ್ರಯೋಗಿಸುತ್ತಿದೆ' ಎಂದು ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಹೇಳಿದರು.

'ನಾವು ಈ ತಂತ್ರಗಳತ್ತ ಗಮನ ಹರಿಸಿದ್ದರೆ, ಬಿಜೆಪಿ ಹೊಸ ತಂತ್ರ ಬಳಸುತ್ತಿರುತ್ತದೆ. ಪ್ರತಿ ಮತದಾರನ ವಿವರವನ್ನು ಬಿಜೆಪಿ ಸಂಗ್ರಹಿಸಿದೆ. ಯಾರು ತಮಗೆ ಮತ ಹಾಕುತ್ತಾರೆ, ಯಾರು ತಮಗೆ ಮತ ನೀಡುವುದಿಲ್ಲ ಎಂಬುದು ಆ ಪಕ್ಷದ ಅಭ್ಯರ್ಥಿಗಳಿಗೆ ಸರಿಯಾಗಿ ಗೊತ್ತಿದೆ. ಅವರಿಗೆ ಮತ ಹಾಕದವರನ್ನು ಮತದಾರರ ಚೀಟಿಯನ್ನು ಕಸಿದುಕೊಳ್ಳುವ ಕೆಲಸ ಮಾಡುತ್ತಿದೆ' ಎಂದು ಅವರು ತಿಳಿಸಿದರು.

ನ. 14ರಂದು 'ಮಹಾ ಪಂಚಾಯತ್ ಸಮ್ಮೇಳನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧೀಜಿ ಅವರ ಗ್ರಾಮ ಸ್ವರಾಜ್ ಪರಿಕಲ್ಪನೆಯಡಿ ನವೆಂಬರ್ 14ರಂದು 'ಮಹಾ ಪಂಚಾಯತ್ ಸಮ್ಮೇಳನ' ಆಯೋಜಿಸಲು 'ಗಾಂಧಿ ಭಾರತ ಶತಮಾನೋತ್ಸವ' ಸಮಿತಿ ನಿರ್ಧರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಸಮಿತಿಯ ಸಭೆ ಶನಿವಾರ ನಡೆಯಿತು. ಈ ಸಮ್ಮೇಳನಕ್ಕೆ ಗ್ರಾಮ ಪಂಚಾಯಿತಿಗಳ ಮಾಜಿ ಹಾಗೂ ಹಾಲಿ ಸದಸ್ಯರನ್ನು ಆಹ್ವಾನಿಸಲು ಕೂಡಾ ಸಭೆಯಲ್ಲಿ ತೀರ್ಮಾನಿಸಲಾಯಿತು.

ಅಲ್ಲದೆ, ಪಂಚಾಯತ್ ರಾಜ್ ಕಾಯ್ದೆ ಮತ್ತು ಗ್ರಾಮ ಸ್ವರಾಜ್ ಕುರಿತು ಡಿಸೆಂಬರ್ ತಿಂಗಳಲ್ಲಿ ಎರಡು ದಿನಗಳ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು. ಗಾಂಧಿ ಭಾರತ ಶತಮಾನೋತ್ಸವ ಕಾರ್ಯಕ್ರಮಗಳಿಗೆ 2024ರ ಡಿ.26 ರಂದು ಚಾಲನೆ ನೀಡಲಾಗಿದ್ದು, 2025ರ ಡಿಸೆಂಬರ್ 26ರವರೆಗೆ ನಡೆಯಲಿವೆ. ಈ ಅವಧಿಯಲ್ಲಿ ರಾಜ್ಯದಾದ್ಯಂತ ನಿರಂತರ ಅರ್ಥಪೂರ್ಣ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸೂಚನೆ ನೀಡಿದರು.

ರಾಜ್ಯದ 120 ಸ್ಥಳಗಳಲ್ಲಿ ಗಾಂಧೀಜಿ ಭೇಟಿ ನೀಡಿರುವ ನೆನಪಿಗಾಗಿ ಸ್ತಂಭಗಳನ್ನು ನವೆಂಬರ್ ತಿಂಗಳ ಒಳಗೆ ನಿರ್ಮಿಸಬೇಕು. ರಾಜ್ಯದಾದ್ಯಂತ 'ಜ್ಯೋತಿ ಯಾತ್ರೆ'ಗಳನ್ನು ಆಯೋಜಿಸಬೇಕು. ಗಾಂಧೀಜಿಯ ಧ್ಯಾನಸ್ಥ ಭಂಗಿಯ ಭಾವಚಿತ್ರ ಹಾಗೂ ಅವರು ಹೇಳಿದ ಸಪ್ತ ಸಾಮಾಜಿಕ ಪಾತಕಗಳನ್ನು ಎಲ್ಲ ಶಾಲೆಗಳಲ್ಲಿ ಅಳವಡಿಸಬೇಕು ಎಂದೂ ಸೂಚನೆ ನೀಡಿದರು.

'ಗಾಂಧಿ ವರ್ಸಸ್ ಗಾಂಧಿ', 'ಪಾಪು-ಬಾಪು' ಹಾಗೂ 'ಮಹಾತ್ಮರ ಬರುವಿಗಾಗಿ' ಎಂಬ ಮೂರು ನಾಟಕಗಳನ್ನು ರಂಗಾಯಣದ ವತಿಯಿಂದ ನಿರ್ಮಿಸಿ ರಾಜ್ಯದಾದ್ಯಂತ ಪ್ರದರ್ಶಿಸಲು ಕ್ರಮ ಕೈಗೊಳ್ಳಬೇಕು. ಈಗಾಗಲೇ 16 ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಪೂರ್ಣಗೊಂಡಿದ್ದು, ನಿವೇಶನ ಸಿಗದ ಜಿಲ್ಲೆಗಳಲ್ಲಿ ಆಯಾ ಜಿಲ್ಲಾಧಿಕಾರಿ ಮುತುವರ್ಜಿ ವಹಿಸಿ ಸ್ಥಳ ಗುರುತಿಸಿ ಕಾಮಗಾರಿ ಆರಂಭಿಸಬೇಕು. ಎಲ್ಲ ಜಿಲ್ಲೆಗಳಲ್ಲಿ ನಿರ್ಮಾಣ ಪೂರ್ಣಗೊಳಿಸಿ ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದೂ ಮುಖ್ಯಮಂತ್ರಿ ಸಲಹೆ ನೀಡಿದರು.

ಸಚಿವರಾದ ಎಚ್.ಕೆ. ಪಾಟೀಲ, ಪ್ರಿಯಾಂಕ್ ಖರ್ಗೆ, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಶಾಸಕ ಆರ್.ವಿ. ದೇಶಪಾಂಡೆ, ಮುಖ್ಯಮಂತ್ರಿಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಶತಮಾನೋತ್ಸವ ಸಮಿತಿಯ ಸದಸ್ಯರು ಹಾಗೂ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಇದ್ದರು.

ಕೆಐಒಸಿಎಲ್ ಲಿಮಿಟೆಡ್
KIOCL LIMITED
(A Government of India Enterprise)
CIN: L13100KA1976GOI002974
Regd. Office: II Block, Koramangala, Bengaluru – 560034
Tele-fax- 080-25531525, Web- www.kioclltd.in, E-mail- cs@kioclltd.in
KUDREMUKH

49ನೇ ವಾರ್ಷಿಕ ಸಾಮಾನ್ಯ ಸಭೆ (ಎ.ಜಿ.ಎಂ), ಇ–ಮತದಾನ ಮತ್ತು ಪುಸ್ತಕ ಮುಚ್ಚುವಿಕೆ ಕುರಿತು ಅಧಿಸೂಚನೆ

ಕಂಪನಿಯ ಸದಸ್ಯರ 49ನೇ ವಾರ್ಷಿಕ ಸಾಮಾನ್ಯ ಸಭೆ (ಎ.ಜಿ.ಎಂ) KIOCL Limited ("ಕಂಪನಿ")ಯದು, ಸೋಮವಾರ, 29 ಸೆಪ್ಟೆಂಬರ್ 2025 ರಂದು ಬೆಳಿಗ್ಗೆ 11.00 ಗಂಟೆಗೆ ವೀಡಿಯೊ ಕಾನ್ಫರೆನ್ಸ್ / ಇತರೆ ಆಡಿಯೋ–ವಿಜುವಲ್ ಸಾಧನಗಳು (ವಿ.ಸಿ / ಓಎವಿಎಂ) ಮೂಲಕ ನಡೆಯುವುದಾಗಿ ತಿಳಿಸಲಾಗುತ್ತಿದೆ. ಈ ಸಭೆಯಲ್ಲಿ ಎ.ಜಿ.ಎಂ ಅಧಿಸೂಚನೆಯಲ್ಲಿ ನೀಡಿರುವ ವ್ಯವಹಾರಗಳನ್ನು ನಿರ್ವಹಿಸಲಾಗುತ್ತದೆ.

ಎ.ಜಿ.ಎಂ ಸಂಬಂಧಿಸಿದ ವಿವರಗಳು:

ಕ್ರ.ಸಂ.	ವಿಷಯ	ವೇಳಾಪಟ್ಟಿ
1.	ವಾರ್ಷಿಕ ವರದಿ ಹಾಗೂ ಎ.ಜಿ.ಎಂ ಅಧಿಸೂಚನೆಯನ್ನು ಕಳುಹಿಸಲು ಸದಸ್ಯರನ್ನು ಗುರುತಿಸಲು ದಿನಾಂಕ	ಶುಕ್ರವಾರ, 29.08.2025
2.	ಲಾಭಾಂಶ ಪಾವತಿ ಹಾಗೂ ಎ.ಜಿ.ಎಂ ಇ–ಮತದಾನ ಹಕ್ಕುಗಳನ್ನು ಗುರುತಿಸಲು ದಾಖಲೆ ದಿನಾಂಕ	ಸೋಮವಾರ, 22.09.2025
3.	ಪುಸ್ತಕ ಮುಚ್ಚುವಿಕೆ	ಮಂಗಳವಾರ, 23.09.2025 ರಿಂದ ಸೋಮವಾರ, 29.09.2025 ರವರೆಗೆ (ಎರಡೂ ದಿನಗಳನ್ನು ಒಳಗೊಂಡಂತೆ)
4.	ದೂರಸ್ಥ ಇ–ಮತದಾನ ಪ್ರಾರಂಭ ದಿನಾಂಕ ಮತ್ತು ಸಮಯ	ಶುಕ್ರವಾರ, 26.09.2025 (ಬೆಳಿಗ್ಗೆ 09:00 ಗಂಟೆಗೆ)
5.	ದೂರಸ್ಥ ಇ–ಮತದಾನ ಅಂತ್ಯ ದಿನಾಂಕ ಮತ್ತು ಸಮಯ	ಭಾನುವಾರ, 28.09.2025 (ಸಂಜೆ 05:00 ಗಂಟೆಗೆ)
6.	ಇ–ಮತದಾನ ಸೌಲಭ್ಯ ಒದಗಿಸುವ ಏಜೆನ್ಸಿ	ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ("CDSL")
7.	ಎ.ಜಿ.ಎಂ ಅಧಿಸೂಚನೆ ಲಭ್ಯವಿರುವ ಜಾಲತಾಣಗಳು	1. www.kioclltd.in 2. www.evotingindia.com 3. www.bseindia.com 4. www.nseindia.com 5. www.msei.in
8.	ಇ–ಮತದಾನ ಪ್ರಕ್ರಿಯೆ (ದೂರಸ್ಥ ಮತ್ತು ಸ್ಥಳೀಯ) ನಡೆಸುವ ಹಾಗೂ ವರದಿ ಸಲ್ಲಿಸುವ ಸ್ಕ್ರೂಟಿನೈಜರ್	ಶ್ರೀ J.K. ದಾಸ್ (FCS: 7268) ಮೆಸರ್ಸ್ ಜೆ ಕೆ ದಾಸ್ ಅಂಡ್ ಅಸೋಸಿಯೇಟ್ಸ್ ವೃತ್ತಿಪರ ಕಂಪನಿ ಕಾರ್ಯದರ್ಶಿ
9.	ಇ–ಮತದಾನ ಸಂಬಂಧಿತ ಅಸಮಾಧಾನಗಳಿಗೆ ಸಂಪರ್ಕಿಸಲು ಅಧಿಕಾರಿಯ ವಿವರಗಳು	ಹೆಸರು: ಶ್ರೀ. ರಾಕೇಶ್ ದಾಲ್ವಿ ಹುದ್ದೆ: ಹಿರಿಯ ವ್ಯವಸ್ಥಾಪಕ, CDSL ವಿಳಾಸ: ಎ ವಿಂಗ್, 25ನೇ ಮಹಡಿ, ಮ್ಯಾರಥಾನ್ ಫ್ಯೂಚರ್ಸ್, ಮಫತ್‌ಲಾಲ್ ಮಿಲ್ ಕಾಂಪೌಂಡ್ಸ್, ಎನ್ ಎಂ ಜೋಶಿ ಮಾರ್ಗ, ಲೋವರ್ ಪರೇಲ್ (ಪೂರ್ವ), ಮುಂಬೈ – 400013 ಇಮೇಲ್: helpdesk.evoting@cdslindia.com ಫೋನ್: 1800–22–55–33

ಸದಸ್ಯರಿಗೆ ತಿಳಿಸಲಾಗುವುದು:

1. ಅನ್ವಯವಾಗುವ MCA ಮತ್ತು SEBI ಸುತ್ತೋಲೆಗಳಿಗೆ ಅನುಸಾರವಾಗಿ, ಕಂಪನಿಯು 06–09–2025 ರಂದು 49 ನೇ ವಾರ್ಷಿಕ ಮಹಾಸಭೆಯ ಸೂಚನೆಯೊಂದಿಗೆ ವಾರ್ಷಿಕ ವರದಿ 2024–25 ರ ರವಾನೆಯನ್ನು ಪೂರ್ಣಗೊಳಿಸಿದೆ, ಅವರ ಇ-ಮೇಲ್ ವಿಳಾಸಗಳು ಕಂಪನಿ/ RTA/ ಠೇವಣಿದಾರರು/ ಠೇವಣಿ ಭಾಗವಹಿಸುವವರೊಂದಿಗೆ ನೋಂದಾಯಿಸಲ್ಪಟ್ಟಿವೆ ಮತ್ತು 29–08–2025 ರಂದು ಸದಸ್ಯರು/ ಫಲಾನುಭವಿ ಮಾಲೀಕರ ನೋಂದಣಿಯಲ್ಲಿ ಹೆಸರುಗಳು ಕಾಣಿಸಿಕೊಂಡಿವೆ. ವಾರ್ಷಿಕ ಮಹಾಸಭೆಯ ಸೂಚನೆಯನ್ನು ರವಾನಿಸಿದ ನಂತರ ಕಂಪನಿಯ ಸದಸ್ಯರಾಗುವ ಆದರೆ **22–09–2025 ರ ಕಟ್–ಆಫ್ ದಿನಾಂಕದಂದು** ಷೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿ ಮತ್ತು ತಮ್ಮ ಬಳಕೆದಾರ ID ಮತ್ತು ಪಾಸ್‌ವರ್ಡ್ ಅನ್ನು ಮರೆತಿರುವ ಸದಸ್ಯರು ವಾರ್ಷಿಕ ಮಹಾಸಭೆಯ ಸೂಚನೆಯಲ್ಲಿ ಒಳಗೊಂಡಿರುವಂತೆ ದೂರಸ್ಥ ಇ–ಮತದಾನ ಮತ್ತು ಇ–ಮತದಾನದ ಸೂಚನೆಗಳನ್ನು ಅನುಸರಿಸುವ ಮೂಲಕ ಬಳಕೆದಾರ ID ಮತ್ತು ಪಾಸ್‌ವರ್ಡ್ ಅನ್ನು ಪಡೆಯಬಹುದು / ರಚಿಸಬಹುದು. **ಇದಲ್ಲದೆ, 22–09–2025 ರ ಕಟ್–ಆಫ್ ದಿನಾಂಕದ** ನಂತರ ಕಂಪನಿಯ ಸದಸ್ಯರಾದ ಯಾವುದೇ ವ್ಯಕ್ತಿ ಸೂಚನೆಯನ್ನು ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸಬೇಕು.
2. ಎ.ಜಿ.ಎಂ ಅನ್ನು ವಿ. ಸಿ / ಓಎವಿಎಂ ಮೂಲಕ ನಡೆಸಲು ಹಾಗೂ ದೂರಸ್ಥ ಇ–ಮತದಾನ ಮತ್ತು ಸಭೆಯ ಸಮಯದಲ್ಲಿ ಇ–ಮತದಾನ ಸೌಲಭ್ಯ ಒದಗಿಸಲು ಕಂಪನಿಯು **CDSL ಸೇವೆಗಳನ್ನು ಬಳಸಿಕೊಂಡಿದೆ.** ದೂರಸ್ಥ ಇ–ಮತದಾನ 26–09–2025ರಂದು ಬೆಳಿಗ್ಗೆ 9:00ಕ್ಕೆ ಪ್ರಾರಂಭವಾಗಿ 28–09–2025ರಂದು ಸಂಜೆ 5:00ಕ್ಕೆ ಅಂತ್ಯಗೊಳ್ಳುತ್ತದೆ. ನಂತರ CDSL ಮತದಾನ ಸೌಲಭ್ಯವನ್ನು ನಿಷ್ಕ್ರಿಯಗೊಳಿಸುತ್ತದೆ. ಎ.ಜಿ.ಎಂ ಅಧಿಸೂಚನೆಯಲ್ಲಿ ವಿವರಿಸಿರುವಂತೆ ಭೌತಿಕ ಹಾಗೂ ಡಿಮ್ಯಾಟ್ ಹಂಚಿಕೆದಾರರಿಗೆ ಮತದಾನ ಮಾರ್ಗಸೂಚಿಗಳನ್ನು ಒದಗಿಸಲಾಗಿದೆ.
3. ಎ.ಜಿ.ಎಂ ಅನ್ನು MCA/SEBI ಸರ್ಕ್ಯುಲರ್‌ನನ್ವಯ ವಿ. ಸಿ/ ಓಎವಿಎಂ ಮೂಲಕ ನಡೆಸಲಾಗುತ್ತಿರುವುದರಿಂದ ಸದಸ್ಯರ **ಭೌತಿಕ ಹಾಜರಾತಿಯನ್ನು ಕೈಬಿಡಲಾಗಿದೆ.** ಹೀಗಾಗಿ, ಪ್ರಾಕ್ಸಿ ನೇಮಕಾತಿ ಸೌಲಭ್ಯ ಈ AGMಗೆ ಲಭ್ಯವಿರುವುದಿಲ್ಲ. AGMಗೆ ಹಾಜರಾಗುವ ಆದರೆ ದೂರಸ್ಥ ಇ–ಮತದಾನ ಮಾಡದ ಸದಸ್ಯರು ಸಭೆಯ ಸಮಯದಲ್ಲಿ ಮಾತ್ರ ಇ–ಮತದಾನ ಮಾಡಬಹುದು.
4. **ಇ–ಮೇಲ್ ಐಡಿ/ಮೊಬೈಲ್ ಸಂಖ್ಯೆ ನೋಂದಣಿ / ನವೀಕರಣ ವಿಧಾನ:**

ಭೌತಿಕ ಹಂಚಿಕೆದಾರರು:	ತಮ್ಮ ಹೆಸರು, ಫೋಲಿಯೋ ನಂ., ಮೊಬೈಲ್ ನಂ., ಇ–ಮೇಲ್ ಐಡಿ, ಹಂಚಿಕೆ ಪ್ರಮಾಣಪತ್ರದ (ಮುಂಭಾಗ ಮತ್ತು ಹಿಂಭಾಗ) ಸ್ಕ್ಯಾನ್ ಪ್ರತಿಗಳು, ಪಾನ್ (ಸ್ವ–ಅಟೆಸ್ಟ್ ಸ್ಕ್ಯಾನ್ ಪ್ರತಿಗಳು), ಆಧಾರ್ (ಸ್ವ–ಅಟೆಸ್ಟ್ ಸ್ಕ್ಯಾನ್ ಪ್ರತಿಗಳು)ಗಳನ್ನು ಕಂಪನಿಗೆ cs@kioclltd.in ಅಥವಾ ಆರ್.ಟಿ.ಎ ಗೆ irg@integratedindia.in ಗೆ ಇ–ಮೇಲ್ ಮಾಡಬೇಕು.
ಡಿಮ್ಯಾಟ್ ಹಂಚಿಕೆದಾರರು:	ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ (ಡಿ.ಪಿ.) ಮೂಲಕ ಡಿಮ್ಯಾಟ್ ಖಾತೆಯಲ್ಲಿ ಇ–ಮೇಲ್ ಐಡಿ/ಮೊಬೈಲ್ ನಂ. ನವೀಕರಿಸಬೇಕು.

ಕೆ.ಐ.ಒ.ಸಿ.ಎಲ್. ಲಿಮಿಟೆಡ್ ಪರವಾಗಿ
ಸಹಿ/–
(ಕ್ಲಾಫ್ಟನ್ ಸಿದ್ಧಾರ್ಥ್)
ಕಂಪನಿ ಕಾರ್ಯದರ್ಶಿ

ದಿನಾಂಕ: 07–09–2025
ಸ್ಥಳ: ಬೆಂಗಳೂರು

2,736 ಹುದ್ದೆ ಭರ್ತಿಗೆ ಪ್ರಸ್ತಾವ: ಸಚಿವ

ಪ್ರಜಾವಾಣಿ ವಾರ್ತೆ

ಆಳಂದ: 'ನಾಲ್ಕು ಸಾರಿಗೆ ನಿಗಮಗಳಲ್ಲಿ ಖಾಲಿ ಇರುವ 2,736 ಅಧಿಕಾರಿ, ನೌಕರರ ಹುದ್ದೆಗಳ ಭರ್ತಿಗೆ ಅನುಮತಿ ನೀಡುವಂತೆ ಕೋರಿ ಹಣಕಾಸು ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ (ಕೆಕೆಆರ್) ₹5 ಕೋಟಿ ವೆಚ್ಚದಲ್ಲಿ ಪಟ್ಟಣದಲ್ಲಿ ನಿರ್ಮಿಸಲಿರುವ ಬಸ್ ನಿಲ್ದಾಣದ ಕಾಮಗಾರಿಗೆ ಶನಿವಾರ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. 'ನಮ್ಮ ಸರ್ಕಾರ ಸಂಸ್ಥೆಯಲ್ಲಿ ಒಂದು ಸಾವಿರ ಅನುಕಂಪದ ಹುದ್ದೆ ಸೇರಿ ಇದುವರೆಗೆ 10 ಸಾವಿರ ನೌಕರರನ್ನು ನೇಮಕಾತಿ ಮಾಡಿಕೊಂಡಿದೆ. ಕೆಕೆಆರ್ ಉತ್ತಮ ಹಣಕಾಸಿನ ಪರಿಸ್ಥಿತಿ ಹೊಂದಿದೆ. ಹೆಚ್ಚಿನ ಬಸ್ ಖರೀದಿಗೆ ಆರ್ಥಿಕ ನೆರವು ನೀಡುವಂತೆ ಕೆಕೆಆರ್ ಮಂಡಳಿಗೆ ಕೋರಿಕೆ ಸಲ್ಲಿಸುತ್ತೇವೆ' ಎಂದರು.

ನೆರಳೂರಿನಲ್ಲಿ 500ನೇ ಜಯಂತ್ಯುತ್ಸವ ಪ್ರಯುಕ್ತ ರಥಯಾತ್ರೆಗೆ ಚಾಲನೆ

'ರಾಣಿ ಅಬ್ಬಕ್ಕ ಶೌರ್ಯ ಮಹಿಳೆಯರಿಗೆ ಸ್ಫೂರ್ತಿ'

ಪ್ರಜಾವಾಣಿ ವಾರ್ತೆ

ಆನೇಕಲ್: ರಾಣಿ ಅಬ್ಬಕ್ಕ 500ನೇ ಜಯಂತ್ಯುತ್ಸವ ಪ್ರಯುಕ್ತ ಎಬಿವಿಪಿ ಆಯೋಜಿಸಿರುವ ರಾಣಿ ಅಬ್ಬಕ್ಕ ರಥಯಾತ್ರೆಗೆ ತಾಲ್ಲೂಕಿನ ನೆರಳೂರು ಸಮೀಪದ ಸ್ವಾಮಿ ವಿವೇಕಾನಂದ ವಿದ್ಯಾನಿಕೇತನ ಪಿಯು ಕಾಲೇಜಿನಲ್ಲಿ ಶನಿವಾರ ಚಾಲನೆ ನೀಡಲಾಯಿತು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ರಥಯಾತ್ರೆಗೆ ಚಾಲನೆ ನೀಡಿದರು. ಸೆ.6ರಿಂದ 17ರವರೆಗೆ ಯಾತ್ರೆ ರಾಜ್ಯದಾದ್ಯಂತ ಸಂಚರಿಸಲಿದ್ದು, ರಾಣಿ ಅಬ್ಬಕ್ಕ ಸೇರಿದಂತೆ ನಾಡಿನ ವೀರನಾರಿಯರ ಪರಿಚಯವನ್ನು ಇಂದಿನ ತಲೆಮಾರಿಗೆ ಮಾಡಿಕೊಡಲಿದೆ.

'ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸಿದ್ದರು. ಪೋರ್ಚುಗೀಸರಿಗೆ ಸಿಂಹಸ್ವಪ್ನವಾಗಿದ್ದ ಉಲ್ಲಾಳದ ರಾಣಿ ಅಬ್ಬಕ್ಕ ಅವರ ಜೀವನ, ಶೌರ್ಯ, ಸಾಹಸ ಇಂದಿನ ಮಹಿಳೆಯರಿಗೆ ಸ್ಫೂರ್ತಿ. ಅಬ್ಬಕ್ಕಳ ಸ್ವಾಭಿಮಾನ, ಧೈರ್ಯ ಇಂದಿನ ಮಹಿಳೆಯರಲ್ಲಿ ಇರಬೇಕು' ಎಂದು ನಟಿ ತಾರಾ ಅನುರಾಧ ಆಶಿಸಿದರು.

ರಾಣಿ ಅಬ್ಬಕ್ಕ 500ನೇ ಜಯಂತ್ಯುತ್ಸವ ಪ್ರಯುಕ್ತ ಎಬಿವಿಪಿ ಆಯೋಜಿಸಿದ್ದ 'ರಾಣಿ ಅಬ್ಬಕ್ಕ ರಥಯಾತ್ರೆ'ಗೆ ಆನೇಕಲ್ ತಾಲ್ಲೂಕಿನ ನೆರಳೂರು ಸಮೀಪ ಶನಿವಾರ ಚಾಲನೆ ನೀಡಲಾಯಿತು. ಚಿತ್ರನಟಿ ತಾರಾ, ಎಬಿವಿಪಿ ರಾಷ್ಟ್ರೀಯ ಕಾರ್ಯದರ್ಶಿ ಶ್ರವಣ್ ಕುಮಾರ್ ಭಾಗವಹಿಸಿದ್ದರು

'ರಾಣಿ ಅಬ್ಬಕ್ಕ ನಡೆಸಿದ ಕೆಚ್ಚೆದೆಯ ಹೋರಾಟದಿಂದ ಉಲ್ಲಾಳಕ್ಕೆ ಜಯ ದೊರೆತಿತ್ತು. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಮಹಿಳೆಯರಿಗೆ ಅಧಿಕಾರ, ಗೌರವ ನೀಡಲಾಗುತ್ತಿದೆ. ರಾಣಿ ಅಬ್ಬಕ್ಕ, ಕಿತ್ತೂರು ರಾಣಿ ಚನ್ನಮ್ಮ, ಒನಕೆ ಓಬವ್ವ ಅವರಂತಹ ಶಕ್ತಿಶಾಲಿ ಮಹಿಳೆಯರು ಅದಕ್ಕೆ ಸಾಕ್ಷಿ' ಎಂದು ಕಿಯೋನಿಕ್ಸ್ ಮಾಜಿ ಅಧ್ಯಕ್ಷ ಎಂ.ಯಂಗಾರೆಡ್ಡಿ ಹೇಳಿದರು.

'ಅಬ್ಬಕ್ಕ ಕೇವಲ ರಾಣಿಯಲ್ಲ; ಇತಿಹಾಸ ಬದಲಿಸಿದ ವೀರನಾರಿ. ಅವರ ಜೀವನ ಸಾಧನೆಯನ್ನು ರಾಜ್ಯದ ಪ್ರತಿಯೊಬ್ಬರಿಗೂ ಈ ರಥಯಾತ್ರೆ ತಲುಪಿಸಲಿದೆ' ಎಂದು ಎಬಿವಿಪಿಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯ ಮಣಿಕಂಠ ಕಳಸ ತಿಳಿಸಿದರು.

ಎಸ್‌ವಿವಿಎನ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ.ನಾಗರಾಜು, ಎಬಿವಿಪಿ ರಾಷ್ಟ್ರೀಯ ಕಾರ್ಯದರ್ಶಿ ಶ್ರವಣ್ ಕುಮಾರ್, ಜ್ಞಾನ ಆರ್. ಗೌಡ, ರವಿ ಮಂಡ್ಯ, ಪ್ರವೀಣ್, ಕೇಶವ ಬಂಗೇರ, ಯಶವಂತ್, ಸುಮಿತ್ ಶೆಟ್ಟಿ, ಮಂದಾರ, ಮೋನಿಶ್ ಪಿ.ಗೌಡ, ಆಕಾಶ್ ಜೈನ್, ಗಗನ್ ವೇದಿಕೆಯಲ್ಲಿದ್ದರು.

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾವೇರಿ ಭವನ, 9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕೆ.ಜಿ.ರಸ್ತೆ,
ಬೆಂಗಳೂರು–09. ದೂರವಾಣಿ ನಂ.: 080-23118888.
Website: https://ashraya.karnataka.gov.in e-mail: rgrhclgmtech@gmail.com

No. RGHCL/10/AMR/01/2025 ದಿನಾಂಕ: 06.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ರಾಜೀವ್ ಗಾಂಧಿ ವಸತಿ ನಿಗಮದ **ಅಧಿಕಾರಿ/ಸಿಬ್ಬಂದಿಗಳ ಮತ್ತು ಅವಲಂಬಿತರಿಗೆ ಗ್ರೂಪ್ ಮೆಡಿಕ್ಲೈಮ್ ಸೌಲಭ್ಯವನ್ನು ಕಲ್ಪಿಸಲು** ಕರ್ನಾಟಕದಲ್ಲಿ ನೊಂದಾಯಿತ ಸಾರ್ವಜನಿಕ ವಿಮಾ ಕಂಪನಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.
ಆಸಕ್ತರು ಖಾಲಿ ಟೆಂಡರ್ ಪ್ರಸ್ತಾವನೆಗಳನ್ನು **ದಿನಾಂಕ: 06.09.2025 ರಿಂದ** ಕೆಪಿಪಿ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸಲ್ಲಿಸಲು **ದಿನಾಂಕ: 16.09.2025 ರಂದು ಸಾಯಂಕಾಲ: 04.30 ಗಂಟೆಯುವರೆಗೆ** ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ಲಾಗಿನ್ ಆಗಿ ಮಾಹಿತಿ ಪಡೆದುಕೊಳ್ಳಬಹುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಕಾ.ಅ)

DIPR/CP/AAPL/RO2685/25-26

9, 10ರಂದು ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬಾಣಸವಾಡಿ 66/11 ಕೆ.ವಿ. ಉಪ ಕೇಂದ್ರದಲ್ಲಿ ತುರ್ತು ನಿರ್ವಹಣೆ ಕೈಗೊಳ್ಳುವ ಕಾರಣ ಇದೇ 9 ಮತ್ತು 10ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ನಗರದ ಕೆಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಹೊರಮಾವು ಪಿ ಆ್ಯಂಡ್ ಟಿ ಲೇಔಟ್, ನಿಸರ್ಗ ಕಾಲೊನಿ, ನಂದನಂ ಕಾಲೊನಿ, ಆಶೀರ್ವಾದ್ ಕಾಲೊನಿ, ಜ್ಯೋತಿನಗರ, ಆಗರ, ಬಾಲಾಜಿ ಲೇಔಟ್, ಚಿನ್ನಸ್ವಾಮಪ್ಪ ಲೇಔಟ್, ಕೋಕೋನಟ್‌ಗ್ರೋವ್, ದೇವ ಮತ ಶಾಲೆ, ಅಮರ್ ರೀಜೆನ್ಸಿ, ವಿಜಯ ಬ್ಯಾಂಕ್ ಕಾಲೊನಿ, ಎಚ್‌ಆರ್‌ಬಿಆರ್ ಲೇಔಟ್, ಕಮ್ಮನಹಳ್ಳಿ ಮುಖ್ಯರಸ್ತೆ, ಕಲ್ಯಾಣನಗರ, ಹೆಣ್ಣೂರು ಗ್ರಾಮ, ಚೆಳ್ಳಿಕೆರೆ, ಮೇಘನ ಪಾಳ್ಯ, ಗೆದ್ದಲಹಳ್ಳಿ, ಕೊತ್ತನೂರು, ವಡ್ಡರ ಪಾಳ್ಯ, ಜಾನಕೀರಾಮ್ ಲೇಔಟ್, ಬಿಡಿಎಸ್ ಗಾರ್ಡನ್, ಸತ್ಯ ಎನ್‌ಕ್ಲೇವ್, ಪ್ರಕೃತಿ ಲೇಔಟ್ ಹೊಯ್ಸಳ ನಗರ, ಬೃಂದಾವನ ಲೇಔಟ್, ವಿನಾ ಯಕ ಲೇಔಟ್, ವಿವೇಕಾನಂದ ಲೇಔಟ್, ಮಂಜುನಾಥನಗರ ರಸ್ತೆ, ಯಾಸಿನ್‌ನಗರ, ಎನ್‌ಆರ್‌ಐ ಲೇಔಟ್, ಪುಣ್ಯಭೂಮಿ ಲೇಔಟ್, ಸಮದ್ ಲೇಔಟ್, ಕುಳ್ಳಪ್ಪ ಸರ್ಕಲ್, ರಾಜ್ ಕುಮಾರ್ ಪಾರ್ಕ್, ಸಂಗೊಳ್ಳಿ ರಾಯಣ್ಣ ರಸ್ತೆ, ರಾಮಯ್ಯ ಲೇಔಟ್, ದೊಡ್ಡ ಬಾಣಸವಾಡಿ, ರಾಮಮೂರ್ತಿ ನಗರ ಮುಖ್ಯರಸ್ತೆ, ಕೃಷ್ಣಾರೆಡ್ಡಿ ಲೇಔಟ್, ಗೋಪಾಲರೆಡ್ಡಿ ಲೇಔಟ್, ಚಿಕ್ಕ ಬಾಣಸವಾಡಿ, ಸುಬ್ಬಯ್ಯನ ಪಾಳ್ಯ, ಗ್ರೀನ್ ಪಾರ್ಕ್ ಲೇಔಟ್, ಫ್ಲವರ್ ಗಾರ್ಡನ್, ದಿವ್ಯ ಉನ್ನತಿ ಲೇಔಟ್, ಪ್ರಕೃತಿ ಟೌನ್‌ಶಿಪ್, ಬೈರತಿ, ಕ್ಯಾಲಸನಹಳ್ಳಿ ಗ್ರಾಮ, ನಕ್ಷತ್ರ ಲೇಔಟ್, ಬೈರತಿ ಬಂಡೆ, ಸಂಗಂ ಎನ್‌ಕ್ಲೇವ್, ಅಥಂ ವಿದ್ಯಾನಗರ, ಬೈರತಿಹಳ್ಳಿ, ಕನಕಶ್ರೀ ಲೇಔಟ್, ಗುಬ್ಬಿ ಕ್ರಾಸ್, ಬಾಬೂಸಾ ಪಾಳ್ಯ, ಬ್ಯಾಂಕ್ ಅವೆನ್ಯೂ ಲೇಔಟ್, ನಂಜಪ್ಪ ಗಾರ್ಡನ್, ಸಿಎನ್‌ಆರ್ ಲೇಔಟ್, ಆರ್.ಎಸ್. ಪಾಳ್ಯ, ಮುನಿಕಲ್ಲಪ್ಪ ಗಾರ್ಡನ್, ಹನುಮಂತಪ್ಪ ರಸ್ತೆ, ಕಲ್ಕೆರೆ, ಮುನೇಗೌಡರಸ್ತೆ, ಬಂಜಾರ ಲೇಔಟ್, ಸಮೃದ್ಧಿ ಲೇಔಟ್, ಜಯಂತಿ ನಗರ ಸುತ್ತಮುತ್ತಲ ಪ್ರದೇಶಗಳು.

ಚಿಟಿಕೆ ಸುದ್ದಿ

ಅ.3ರಿಂದ ಬಿಡಿಎ ಕ್ರಯಪತ್ರ ಮೇಳ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ವತಿಯಿಂದ ನಿರ್ಮಿಸಿರುವ 1, 2 ಹಾಗೂ 3 ಬಿ.ಎಚ್‌.ಕೆ. ಫ್ಲ್ಯಾಟ್ ಮತ್ತು ವಿಲ್ಲಾ ಕ್ರಯಪತ್ರದ ಮೇಳವನ್ನು ಅಕ್ಟೋಬರ್ 3ರಿಂದ 16ರವರೆಗೆ ಆಯೋಜಿಸಲಾಗಿದೆ.

ಸುಮಾರು 400 ಫ್ಲ್ಯಾಟ್‌ಗಳಿಗೆ ಕ್ರಯಪತ್ರ ನೋಂದಣಿ ಬಾಕಿ ಇದೆ. ಪ್ರಾಧಿಕಾರ ಆಯೋಜಿಸಿದ್ದ ಮೇಳ, ಆನ್ ಲೈನ್ ಮತ್ತು ಆಫ್‌ಲೈನ್ ಮೂಲಕ ಫ್ಲ್ಯಾಟ್‌ಗಳನ್ನು ಖರೀದಿಸಿ, ಹಂಚಿಕೆ ಪತ್ರ ಪಡೆದಿರುವ ಖರೀದಿದಾರರು ಸೆಪ್ಟೆಂಬರ್ 30ರೊಳಗೆ ತಮ್ಮ ಫ್ಲ್ಯಾಟ್, ವಿಲ್ಲಾಗಳಿಗೆ ಸಂಬಂಧಿಸಿದಂತೆ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಸ್ವಯಂ ದೃಢೀಕರಣ, ಬ್ಯಾಂಕ್ ಎನ್‌ಒಸಿ, ಪಾಸ್‌ಪೋರ್ಟ್ ಚಿತ್ರ ಹಾಗೂ ಹಣ ಪಾವತಿಸಿರುವ ದಾಖಲೆಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಮೇಳವನ್ನು ಪ್ರಾಧಿಕಾರದ ಕೇಂದ್ರ ಕಚೇರಿಯಲ್ಲಿ ಕ್ರಯಪತ್ರ ನೋಂದಾಯಿಸಿ ಕೊಡಲಾಗುವುದು ಎಂದು ಬಿಡಿಎ ತಿಳಿಸಿದೆ.

‘ಮತಪತ್ರ ಬಳಕೆ: ಹೊರೆಯಾಗದು’

ಕೆಜಿಎಫ್: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಎಲೆಕ್ಟ್ರಾನಿಕ್ ಮತಯಂತ್ರದ (ಇವಿಎಂ) ಬದಲು ಮತಪತ್ರ (ಬ್ಯಾಲೆಟ್ ಪೇಪರ್) ಬಳಸಿದರೆ ಹೆಚ್ಚಿನ ಆರ್ಥಿಕ ಹೊರೆಯಾಗುವುದಿಲ್ಲ. ವಿದ್ಯುನ್ಮಾನ ಮತಯಂತ್ರಕ್ಕೆ ತಗುಲುವ ವೆಚ್ಚವೇ ತಗಲುತ್ತದೆ ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ ತಿಳಿಸಿದರು.

ಜಿ.ಎಸ್‌.ಸಂಗ್ರೇಶಿ

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರ ಬಳಸುವಂತೆ ಸರ್ಕಾರ ಸೂಚನೆ ನೀಡಿದರೆ ಅದನ್ನು ಪಾಲಿಸಲಾಗುವುದು. ಯಾವ ರೀತಿ ಚುನಾವಣೆ ನಡೆಸಬೇಕು ಎಂಬುದನ್ನು ಸರ್ಕಾರ ನಿರ್ಧಾರ ಮಾಡುತ್ತದೆ ಎಂದರು.

ಇದೇ ವೇಳೆ, ಬರುವ ಜನವರಿ ಅಥವಾ ಫೆಬ್ರುವರಿಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಬಹುದು ಎಂದರು.

‘ಕನ್ನಡ ಚಿತ್ರರಂಗ ಉಳಿಸಿ’ ಪ್ರತಿಭಟನೆ

ರಾಮನಗರ: ಪರಭಾಷಾ ಸಿನಿಮಾಗಳಿಗೆ ಕಡಿವಾಣ ಹಾಕಿ. ಕನ್ನಡ ಚಿತ್ರರಂಗವನ್ನು ಉಳಿಸಿ ಎಂದು ಒತ್ತಾಯಿಸಿ ನಗರದ ಬಸ್ ನಿಲ್ದಾಣದ ಬಳಿ ಐಜೂರು ವೃತ್ತದಲ್ಲಿ ಹಿರಿಯ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಶನಿವಾರ ಪ್ರತಿಭಟನೆ ನಡೆಸಿದರು.

ವಾಟಾಳ್ ನಾಗರಾಜ್ ಮಾತನಾಡಿ, ಪರಭಾಷಾ ಚಿತ್ರಗಳಿಂದ ಕನ್ನಡ ಚಿತ್ರಗಳು ನೆಲಕಚ್ಚುತ್ತಿವೆ. ಪರಭಾಷಾ ಸಿನಿಮಾಗಳ ಹಾವಳಿಯಿಂದ ಕನ್ನಡ ಸಿನಿಮಾಗಳಿಗೆ ಥಿಯೇಟರ್ ಸಮಸ್ಯೆ ಉಂಟಾಗುತ್ತಿದೆ. ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳಿಗೆ ಪ್ರದರ್ಶನದ ವ್ಯವಸ್ಥೆ ಇಲ್ಲ. ಇಂದು ಕನ್ನಡ ಚಿತ್ರರಂಗ ಉಳಿಸಲು ಹೋರಾಟ ನಡೆಸುವ ಅಗತ್ಯ ಇದೆ ಎಂದರು.

ಮೈಸೂರಿನ ಪ್ರೀಮಿಯರ್ ಸ್ಟುಡಿಯೊ ಮುಚ್ಚಿದೆ. ಕಂಠೀರವ ಸ್ಟುಡಿಯೊ ಮುಚ್ಚುವ ಹಂತದಲ್ಲಿದೆ. ಕಂಠೀರವ ಸ್ಟುಡಿಯೊದ ಬೆಳವಣಿಗೆಗೆ ಸರ್ಕಾರ ಕ್ರಮ ವಹಿಸಬೇಕು. ಹೆಚ್ಚಿನ ಚಿತ್ರಗಳು ಅಲ್ಲಿ ಚಿತ್ರೀಕರಣ ಆಗುವಂತೆ ಸೌಲಭ್ಯ ಒದಗಿಸಬೇಕು. ಎಂದು ವಾಟಾಳ್ ನಾಗರಾಜ್ ಒತ್ತಾಯಿಸಿದರು.

ನಗರದ ಚರ್ಚ್ ರಸ್ತೆಯಲ್ಲಿ ಮಳೆಯಿಂದ ರಕ್ಷಣೆ ಪಡೆಯಲು ಛತ್ರಿಗಳ ಮೊರೆಹೋದ ಜನರು (ಎಡಚಿತ್ರ). ಮಳೆಯಿಂದ ಬೀದಿಬದಿ ವ್ಯಾಪಾರಿಗಳು ಸಂಕಷ್ಟ ಎದುರಿಸಿದರು ಚಿತ್ರಗಳು: ಎಂ.ಎಸ್‌. ಮಂಜುನಾಥ್

ಹಲವೆಡೆ ಭಾರಿ ಮಳೆ: ವಾಹನ ದಟ್ಟಣೆ

ರಸ್ತೆಗಳಲ್ಲಿ ನೀರು ನಿಂತು ಸಂಚಾರಕ್ಕೆ ತೊಂದರೆ • ಸಂಜೆ ಜೋರು ಮಳೆ

• ಮಧ್ಯಾಹ್ನದಿಂದ ಮೋಡ ಕವಿದ ವಾತಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಶನಿವಾರ ಸಂಜೆಯಿಂದ ರಾತ್ರಿಯವರೆಗೆ ಭಾರಿ ಮಳೆಯಾಯಿತು. ಪ್ರಮುಖ ರಸ್ತೆಗಳಲ್ಲಿ ನೀರು ಹರಿದು ಹೋಗಲು ಸಾಧ್ಯವಾಗದೆ, ವಾಹನಗಳ ಸವಾರರು ಪರದಾಡಿದರು.

ಶನಿವಾರ ಮಧ್ಯಾಹ್ನದಿಂದ ಮೋಡ ಕವಿದ ವಾತಾವರಣ ಸೃಷ್ಟಿಯಾಗಿ, ಸಂಜೆ ಮಳೆ ಸುರಿಯಿತು. ರಸ್ತೆಗಳು ಜಲಾವೃತವಾಗಿದ್ದರಿಂದ ವಾಹನ ದಟ್ಟಣೆ ಉಂಟಾಗಿತ್ತು. ಜಂಕ್ಷನ್‌ಗಳಲ್ಲಿ ನೀರಿನ ಸಂಗ್ರಹ ಹೆಚ್ಚಾಗಿ, ಸಿಗ್ನಲ್‌ಗಳ ಬಳಿ ವಾಹನಗಳ ದಟ್ಟಣೆ ಹೆಚ್ಚಾಗಿತ್ತು.

ಸಿಕ್ಯೂಎಎಲ್ ಕ್ರಾಸ್, ಮೇಖ್ರಿ ವೃತ್ತ, ಗಾರೆಬಾವಿಪಾಳ್ಯ ಜಂಕ್ಷನ್, ನಾಗವಾರ ಜಂಕ್ಷನ್, ವೀರಣ್ಣಪಾಳ್ಯ ಸರ್ವೀಸ್ ರಸ್ತೆ, ಕ್ವೀನ್ಸ್ ರಸ್ತೆ, ಅನಿಲ್ ಕುಂಬ್ಳೆ ಜಂಕ್ಷನ್, ಹುಣಸೆಮರ ಜಂಕ್ಷನ್, ಬಿನ್ನಿಮಿಲ್ ರೈಲ್ವೆ ಕೆಳಸೇತುವೆ, ಖೋಡೆ ಜಂಕ್ಷನ್, ಮೆಜೆಸ್ಟಿಕ್, ಹಳೆಯ ಉದಯ ಟಿವಿ ಜಂಕ್ಷನ್, ಜಯಮಹಲ್ ರಸ್ತೆ, ಚೊಕ್ಕಸಂದ್ರ, ದಾಸರಹಳ್ಳಿ, ದೊಮ್ಮಸಂದ್ರ, ಮುತ್ತನಲ್ಲೂರು ಕ್ರಾಸ್, ಬಿಳೇಕಹಳ್ಳಿ, ಸಾರಕ್ಕಿ ಸಿಗ್ನಲ್, ಜೆ.ಪಿ.ನಗರ, ಡೇರಿ ವೃತ್ತ, ಆಸ್ಟ್ರಾ ಆಸ್ಪತ್ರೆ ಬನ್ನೇರುಘಟ್ಟ ರಸ್ತೆ, ಸಿಲ್ಕ್ ಬೋರ್ಡ್, ಹೆಬ್ಬಾಳ ಮುಖ್ಯ ರಸ್ತೆ ಕಡೆಗೆ ಸಾಗುವ ರಸ್ತೆಗಳು ನೀರಿನಿಂದ ಆವೃತವಾದವು.

ರೂಪೇನ ಅಗ್ರಹಾರ ಜಂಕ್ಷನ್, ಬೊಮ್ಮನಹಳ್ಳಿ, ಜರಗನಹಳ್ಳಿ, ಮೈಸೂರು ರಸ್ತೆ ಟೋಲ್ ಗೇಟ್, ಹಳೆ ಗುಡ್ಡದಹಳ್ಳಿ, ಬೊಮ್ಮನಹಳ್ಳಿ ಜಂಕ್ಷನ್, ಹೆಬ್ಬಾಳ ಪೊಲೀಸ್ ಠಾಣೆ ಬಳಿ, ಕಸ್ತೂರಿ ನಗರ ಮುಖ್ಯರಸ್ತೆ, ರಾಮಮೂರ್ತಿ ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು.

ಹೆಬ್ಬಾಳ ಜಂಕ್ಷನ್‌ನಲ್ಲಿ ನಿಂತಿದ್ದ ಮಳೆ ನೀರನ್ನು ಕಾಲುವೆಗೆ ಹರಿಸಲು ಪಾಲಿಕೆ ಸಿಬ್ಬಂದಿ ಶನಿವಾರ ರಾತ್ರಿ ಪ್ರಯಾಸಪಟ್ಟರು

ಎಲ್ಲೆಲ್ಲಿ ಹೆಚ್ಚು ಮಳೆ? (ಸೆಂ.ಮೀ.ನಲ್ಲಿ)

ಪ್ರದೇಶ	ಪ್ರಮಾಣ
ರಾಜರಾಜೇಶ್ವರಿ ನಗರ, ಕೆಂಗೇರಿ, ವಿದ್ಯಾಪೀಠ	5.2
ಹೆಮ್ಮಿಗೆಪುರ, ಬೊಮ್ಮನಹಳ್ಳಿ, ನಾಯಂಡಹಳ್ಳಿ	4.5
ಬಿಟಿಎಂ ಲೇಔಟ್, ವಿ.ನಾಗೇನಹಳ್ಳಿ, ಬಿಳೇಕಹಳ್ಳಿ, ಪೀಣ್ಯ ಕೈಗಾರಿಕೆ ಪ್ರದೇಶ, ಎಚ್.ಗೊಲ್ಲಹಳ್ಳಿ, ದೊರೆಸಾನಿಪಾಳ್ಯ, ಕೋರಮಂಗಲ	3.5
ಹಂಪಿ ನಗರ, ಪುಲಿಕೇಶಿನಗರ, ಎಚ್‌ಎಸ್‌ಆರ್ ಲೇಔಟ್, ಪೂರ್ವ ಬಾಣಸವಾಡಿ	2.5
ಬಸವೇಶ್ವರನಗರ, ನಾಗಪುರ, ಪೂರ್ವ ಮನೋರಾಯನಪಾಳ್ಯ, ಪಟ್ಟಾಭಿರಾಮನಗರ, ಶೆಟ್ಟಿಹಳ್ಳಿ, ಬಾಗಲಕುಂಟೆ, ಕೋಣನಕುಂಟೆ, ಚೊಕ್ಕಸಂದ್ರ	2
ಚೊಕ್ಕಸಂದ್ರ, ನಂದಿನಿ ಲೇಔಟ್, ಹೇರೋಹಳ್ಳಿ, ವನ್ನಾರಪೇಟೆ, ಬೆಳ್ಳಂದೂರು, ರಾಜಮಹಲ್ ಗುಟ್ಟಹಳ್ಳಿ, ಕುಶಾಲನಗರ	1.5
ವಿಶ್ವೇಶ್ವರಪುರ, ಹೊರಮಾವು, ಅಂಜನಾಪುರ, ಎಚ್‌ಎಎಲ್ ವಿಮಾನ ನಿಲ್ದಾಣ, ಅರಕೆರೆ, ರಾಮಮೂರ್ತಿ ನಗರ, ಗೊಟ್ಟಿಗೆರೆ, ಕೊಡಿಗೇಹಳ್ಳಿ, ದೊಡ್ಡಬಿದಿರಕಲ್ಲು, ಚಾಮರಾಜಪೇಟೆ, ಕೆ.ಆರ್. ಪುರ	1

‘ಜಂಗಮ ಸಂಬಂಧಿಸಿದ ಜಾತಿಗಳಿಗೆ ಒಂದೇ ಕ್ರಮ ಸಂಖ್ಯೆ ನೀಡಿ’

ಪ್ರಜಾವಾಣಿ ವಾರ್ತೆ

ಜಾತಿ ಗಣತಿ

ಬೆಂಗಳೂರು: ಹಿಂದುಳಿದ ವರ್ಗಗಳ ಜಾತಿ ಜನಗಣತಿ ಸಮೀಕ್ಷೆಯಲ್ಲಿ ಜಂಗಮ, ವೀರಶೈವ ಜಂಗಮ ಹಾಗೂ ವೀರಶೈವ ಆರಾಧ್ಯ, ಹಾಗೂ ವೀರಶೈವ ಲಿಂಗಾಯತ ಜಂಗಮ ಜಾತಿಗಳಿಗೆ ಒಂದೇ ಕ್ರಮ ಸಂಖ್ಯೆ ನೀಡಬೇಕು ಎಂದು ಭಾರತೀಯ ವೀರಶೈವ ಲಿಂಗಾಯತ ಜಂಗಮ ಪರಿಷತ್ ಆಗ್ರಹಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್‌ನ ಅಧ್ಯಕ್ಷ ಕೆ.ಎಂ. ಮಹೇಶ್ವರಸ್ವಾಮಿ, ‘ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ, ಆರ್ಥಿಕ ಸಮೀಕ್ಷೆ ನಡೆಸುವ ಉದ್ದೇಶದಿಂದ 1,400 ಜಾತಿಗಳ ಪಟ್ಟಿಯನ್ನು ಪ್ರಕಟಿಸಿದೆ. ಈ ಪಟ್ಟಿಯಲ್ಲಿ ನಮ್ಮ ಜಾತಿಗಳನ್ನು ಬಿಟ್ಟು, ಬೇಡುವ ಜಂಗಮ, ಬೇಡುವ ಜಂಗಮ ಲಿಂಗಾಯತ, ಶಿರಿಯ ಜಂಗಮ, ಕ್ರಿಶ್ಚಿಯನ್ ಜಂಗಮ ಎಂಬ ಇಲ್ಲದ ಜಾತಿಗಳನ್ನು ಸೇರಿಸಲಾಗಿದೆ’ ಎಂದು ಆರೋಪಿಸಿದರು.

‘ರಾಜ್ಯದಲ್ಲಿ ನಮ್ಮ ಜಾತಿಗೆ ಸೇರಿದ 20 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇದೆ. ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕದಲ್ಲಿ ಜಂಗಮರು, ಸ್ವಾಮಿಗಳು, ಅಯ್ಯನವರು, ಗುರುಗಳು ವೀರಶೈವ ಜಂಗಮರು, ವೀರಶೈವ ಲಿಂಗಾಯತ ಜಂಗಮರು ಎಂದರೆ, ಮೈಸೂರು ಭಾಗದಲ್ಲಿ ವೀರಶೈವ ಆರಾಧ್ಯರು ಎಂಬ ಹೆಸರಿನಿಂದ ಗುರುತಿಸಲಾಗುತ್ತದೆ’ ಎಂದು ವಿವರಿಸಿದರು.

‘ಹಿಂದೂ ವರ್ಗಗಳ ಜಾತಿಗಳ ಪಟ್ಟಿಯಲ್ಲಿ ನಮ್ಮ ಜಾತಿಗಳನ್ನು ಸೇರಿಸುವಂತೆ ಹಿಂದುಳಿದ ವರ್ಗಗಳ ಆಯೋಗದ ಕಾರ್ಯದರ್ಶಿ ಅವರಿಗೆ ಮನವಿ ಸಲ್ಲಿಸಲಾಗಿದೆ. ನಮ್ಮನ್ನು ಪಟ್ಟಿಯಿಂದ ಹೊರಗಡೆ ಇಟ್ಟರೆ ನಾವು ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಅವಕಾಶ ಸಿಗುವುದಿಲ್ಲ’ ಎಂದು ಹೇಳಿದರು.

ಪರಿಷತ್‌ನ ಕಾರ್ಯದರ್ಶಿ ಎಚ್.ಎಂ. ಹಿಮಾಚಲ, ಸದಸ್ಯರಾದ ಎ.ಸಿ. ಹಿರೇಮಠ, ಸತೀಶ್ ಸಿ. ಹಡಗಲಿಮಠ, ಕಾಶಿನಾಥ ಪತ್ರಿಮಠ, ಕೆ.ಎಂ. ಚೆನ್ನಮಲ್ಲಯ್ಯ, ಬಸವರಾಜ ಸಂಗಮೇಶಮಠ ಸುದ್ದಿಗೋಷ್ಠಿಯಲ್ಲಿದ್ದರು.

ಹೆಬ್ಬಾಳದ ಸಂಜನಯನಗರ ವಾರ್ಡ್‌ನ ಸೆಂಟ್ರಲ್ ಎಕ್ಸೈಸ್ ಬಡಾವಣೆಯಲ್ಲಿ ನವೀಕರಿಸಲಾದ ಉದ್ಯಾನವನ್ನು ಉದ್ಘಾಟಿಸಿದ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಮಕ್ಕಳೊಂದಿಗೆ ಮಾತುಕತೆ ನಡೆಸಿದರು. ಸ್ಥಳೀಯ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು

ಬಸವೇಶ್ವರ ಮೂರ್ತಿ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವಣ್ಣನ ತತ್ವಗಳಾದ ಸ್ವಾತಂತ್ರ್ಯ, ಸಮಾನತೆ, ಕಾಯಕ, ದಾಸೋಹ, ಸಹೋದರತ್ವ, ಸಹಬಾಳ್ವೆ ಪಾಲನೆಯಿಂದ ಸುಂದರ ಸಮಾಜದ ನಿರ್ಮಾಣ ಸಾಧ್ಯ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅಭಿಪ್ರಾಯಪಟ್ಟರು.

ಬಸವ ಪುತ್ಥಳಿ ಪ್ರತಿಷ್ಠಾಪನಾ ಸಮಿತಿ ರಾಜಾಜಿನಗರದ ವೆಸ್ಟ್ ಆಫ್ ಕಾರ್ಡ್ ರೋಡ್ ಜಂಕ್ಷನ್ ಬಳಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮ ದಲ್ಲಿ ಜಗಜ್ಯೋತಿ ಬಸವೇಶ್ವರ ಮೂರ್ತಿ ಅನಾವರಣ ಸಮಾರಂಭದಲ್ಲಿ ಮಾತನಾಡಿದರು.

‘ಅಸಮಾನತೆ, ಕಂದಾಚಾರ, ಅಸ್ಪೃಶ್ಯತೆ, ಮೌಢ್ಯತೆ ಇದ್ದ 850 ವರ್ಷಗಳ ಹಿಂದೆ ಬಸವಣ್ಣ ಅವರು ಶ್ರೇಣಿರಹಿತ ಸಮ ಸಮಾಜದ ಕನಸು ಕಂಡಿದ್ದರು. ಮಹಿಳೆಯರಿಗೂ ಸಮಾನ ಸ್ಥಾನಮಾನ ನೀಡಬೇಕೆಂದು ಪ್ರತಿಪಾದಿಸಿದ್ದರು. ಸಮ ಸಮಾಜದ ಅವರ ಕನಸನ್ನು ನನಸಾಗಿಸಬೇಕು’ ಎಂದು ಹೇಳಿದರು.

ಮುಂದಿನ ವರ್ಷ ಅನುಭವ ಮಂಟಪ: ‘ಬಸವಕಲ್ಯಾಣದಲ್ಲಿ ₹750 ಕೋಟಿ ವೆಚ್ಚದಲ್ಲಿ ಆಧುನಿಕ ಅನುಭವ ಮಂಟಪ ನಿರ್ಮಾಣವಾಗುತ್ತಿದ್ದು, ಇಲ್ಲಿ 770 ಅಮರಗಣಂಗಳ ವಚನಗಳನ್ನು ಕೆತ್ತಲಾಗಿದೆ. ಮುಂದಿನ ವರ್ಷದೊಳಗೆ ಅದನ್ನು ಪೂರ್ಣಗೊಳಿಸಲಾಗುವುದು’ ಎಂದು ಈಶ್ವರ ಖಂಡ್ರೆ ಅವರು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಬಸವಣ್ಣ ಅವರನ್ನು ಒಂದೇ ಸಮಾಜಕ್ಕೆ ಸೀಮಿತ ಮಾಡಬಾರದು. ಸರ್ವ ಸಮುದಾಯದ ನಾಯಕ. ಜ್ಞಾನಿಗಳು, ವಿಜ್ಞಾನಿಗಳು, ಚಿಂತಕರು, ಸಾಹಿತಿಗಳು ಪುಟಗಟ್ಟಲೆ ಹೇಳುವುದನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ನಾಲ್ಕೈದು ಸಾಲಿನಲ್ಲಿ ತಿಳಿಸಿದ ಮಹಾನ್ ನಾಯಕ ಬಸವಣ್ಣ’ ಎಂದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ‘ಬಸವೇಶ್ವರ ನಗರದಲ್ಲಿ ಬಸವೇಶ್ವರ ಮೂರ್ತಿ ಸ್ಥಾಪನೆ ಆಗಿರುವುದು ಅರ್ಥಪೂರ್ಣವಾಗಿದೆ. ಬಸವಣ್ಣನ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು’ ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾತನಾಡಿ, ‘ಬಸವಣ್ಣ, ಸಮಾಜಕ್ಕೆ ನಿರಂತರ ಸ್ಫೂರ್ತಿಯಾಗಿದ್ದಾರೆ. ಯುವ ಪೀಳಿಗೆಗೆ ಬಸವೇಶ್ವರ ಸಿದ್ಧಾಂತಗಳು ದಾರಿದೀಪವಾಗಲಿ ಎಂದು ಹೇಳಿದರು.

ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಗಂಗಾ ಮಠದ ಕಿರಿಯ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ, ಕೂಡಲಸಂಗಮದ ಬಸವಧರ್ಮ ಪೀಠದ ಅಧ್ಯಕ್ಷೆ ಮಾತೆ ಗಂಗಾದೇವಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಶಾಸಕ ಎಸ್.ಸುರೇಶ್ ಕುಮಾರ್, ಸಮಿತಿ ಪ್ರಧಾನ ಸಂಚಾಲಕ ಎಚ್.ಆರ್.ಮಲ್ಲಿಕಾರ್ಜುನಯ್ಯ, ಯುವ ಮುಖಂಡ ನವೀನ್ ಕುಮಾರ್ ಬಿಡದಿ ಹಾಜರಿದ್ದರು.

ಸಮಿತಿ ಅಧ್ಯಕ್ಷ ಸಿ.ಸೋಮಶೇಖರ್ ಅವರ ‘ಮಾತೆಂಬುದು ಜ್ಯೋತಿರ್ಲಿಂಗ’ ಕೃತಿಯನ್ನು ಶಾಸಕ ಗೋಪಾಲಯ್ಯ ಬಿಡುಗಡೆ ಮಾಡಿದರು.

ಮಾಜಿ ಮೇಯರ್ ಗಂಗಾಂಬಿಕಾ ಮಲ್ಲಿಕಾರ್ಜುನ, ಶಿಲ್ಪಿ ಜಗದೀಶ್ ಅವರನ್ನು ಸನ್ಮಾನಿಸಲಾಯಿತು.

ರಾಜಾಜಿನಗರದ ವೆಸ್ಟ್ ಆಫ್ ಕಾರ್ಡ್ ರಸ್ತೆ ಜಂಕ್ಷನ್‌ನಲ್ಲಿ ಜಗಜ್ಯೋತಿ ಬಸವೇಶ್ವರ ಮೂರ್ತಿಯನ್ನು ಶನಿವಾರ ಅನಾವರಣಗೊಳಿಸಲಾಯಿತು

‘ಮೆಟ್ರೊ ನಿಲ್ದಾಣಕ್ಕೆ ಸಾಹಿತಿಗಳ ಹೆಸರಿಡಿ’

ಗೊರೂರು ಸಂಸ್ಮರಣೆ: ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮುಕುಂದರಾಜ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೆಟ್ರೊ ನಿಲ್ದಾಣಗಳಿಗೆ ಸಾಹಿತಿಗಳು ಹಾಗೂ ಕನ್ನಡ ಪರ ಹೋರಾಟಗಾರರ ಹೆಸರಿಡಬೇಕು’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅವರು ಸರ್ಕಾರಕ್ಕೆ ಆಗ್ರಹಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಡಾ.ಗೊರೂರು ಸಾಹಿತ್ಯ ಪ್ರತಿಷ್ಠಾನ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಗೊರೂರು ಸ್ಮರಣೆ ಸಮಾರಂಭದಲ್ಲಿ ಸಾಹಿತಿ ಹಂಪ ನಾಗರಾಜಯ್ಯ ಹಾಗೂ ಮರಣೋತ್ತರವಾಗಿ ಆಯ್ಕೆಯಾಗಿದ್ದ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರ ಪರವಾಗಿ ಪುತ್ರ ಸುಧೀರ್ ಅವರಿಗೆ ‘ಗೊರೂರು ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಈ ವೇಳೆ ಮಾತನಾಡಿದ ಮುಕುಂದರಾಜ್, ‘ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಎಲ್ಲ ಕಾಲಕ್ಕೂ ಸಲ್ಲುವ ಲೇಖಕರು. ಗೊರೂರು ಅವರ ಹೆಸರನ್ನು ಮೆಟ್ರೊ ನಿಲ್ದಾಣಕ್ಕೆ ಇಡುವಂತೆ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಮಾಡಲಾಗಿದೆ. ಮೆಟ್ರೊ ನಿಲ್ದಾಣಗಳಿಗೆ ಪ್ರಮುಖ ಸಾಹಿತಿಗಳು ಹಾಗೂ ಕನ್ನಡ ಪರ ಹೋರಾಟಗಾರರ ಹೆಸರಿಡಲು ಸರ್ಕಾರ ಕ್ರಮಕೈಗೊಳ್ಳಬೇಕು’ ಎಂದರು.

ಸಾಹಿತಿ ಹಂಪ ನಾಗರಾಜಯ್ಯ, ‘ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಸೊಬಗು, ಸೊಗಡು ತಂದುಕೊಟ್ಟವರು ಗೊರೂರು. ಗ್ರಾಮೀಣ ಜೀವನದ ಸೊಗಡು ತಿಳಿಯಲು ಅವರ ಪುಸ್ತಕ ಸಹಕಾರಿ’ ಎಂದರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಪುತ್ರಿ ವಾಸಂತಿ ಮೂರ್ತಿ ಗೊರೂರು, ‘ಸಂಪ್ರದಾಯಸ್ಥರಾಗಿದ್ದ ತಂದೆ ಅವರ ಸಾಮಾಜಿಕ ಪ್ರಜ್ಞೆ ತೀಕ್ಷ್ಣವಾಗಿತ್ತು. ಗಾಂಧೀಜಿ ಜತೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಅವರು, 15 ತಿಂಗಳು ಸೆರೆವಾಸ ಅನುಭವಿಸಿದ್ದರು. ಅವರು ಗೊರೂರನ್ನು ತೊರೆಯುವಾಗ ಹಳ್ಳಿ ಜನರು ಕಣ್ಣೀರು ಹಾಕಿದ್ದರು. ಬಳಿಕ ರಾಜಾಜಿನಗರದಲ್ಲಿ ವಾಸವಿದ್ದರು. ಅವರ ಹೆಸರನ್ನು ರಾಜಾಜಿನಗರ ಮೆಟ್ರೊ ನಿಲ್ದಾಣಕ್ಕೆ ಇಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ’ ಎಂದು ತಿಳಿಸಿದರು.

ಸಮಾರಂಭದಲ್ಲಿ ಹಂಪ ನಾಗರಾಜಯ್ಯ ಅವರಿಗೆ ‘ಗೊರೂರು ಪ್ರಶಸ್ತಿ’ ನೀಡಿ ಗೌರವಿಸಲಾಯಿತು. (ಎಡದಿಂದ) ಸುಧೀರ್ ವೆಂಕಟೇಶಮೂರ್ತಿ, ಗಾಂಧಿ ಸ್ಮಾರಕ ನಿಧಿ ಕೋಶಾಧ್ಯಕ್ಷ ಎಚ್.ಬಿ. ದಿನೇಶ್, ವಾಸಂತಿ ಮೂರ್ತಿ ಗೊರೂರು, ಎಲ್.ಎನ್. ಮುಕುಂದರಾಜ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಜಿ.ಎನ್. ಶ್ರೀನಿವಾಸನ್ ಗೊರೂರು ಮತ್ತು ಶಿಕ್ಷಣ ತಜ್ಞ ಎನ್. ಸತ್ಯಪ್ರಕಾಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಮೀನುಗಳ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಕಲ್ಲುಬಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೈಸೂರಮ್ಮನ ದೊಡ್ಡಿ ಕೆರೆಯಲ್ಲಿ ಶನಿವಾರ ಮೀನುಗಳ ಮಾರಣಹೋಮವಾಗಿದ್ದು, ತ್ಯಾಜ್ಯ ಮತ್ತು ಕಲುಷಿತ ನೀರಿನಿಂದಾಗಿ ಮೀನುಗಳು ಮೃತಪಟ್ಟಿವೆ ಎಂದು ಶಂಕಿಸಲಾಗಿದೆ.

ನಗರದಲ್ಲಿ ಇಂದು

‘ರೈಡ್ ಫಾರ್ ಸೈಟ್’ ಸೈಕ್ಲೋಥಾನ್: ಅತಿಥಿಗಳು: ಸಾಹಿಲ್ ಬಾಗ್ಲಾ, ಕೆ. ಪರುಶುರಾಮ, ಆಯೋಜನೆ: ನಾರಾಯಣ ನೇತ್ರಾಲಯ, ಸ್ಥಳ: ನಾರಾಯಣ ನೇತ್ರಾಲಯ, ವೈಟ್‌ಫೀಲ್ಡ್ ಶಾಖೆ, ಸೀತಾರಾಮಪಾಳ್ಯ ಮೆಟ್ರೊ ನಿಲ್ದಾಣದ ಪಕ್ಕ, ಬೆಳಿಗ್ಗೆ 6.30ರಿಂದ

ಪರಿಸರಕ್ಕಾಗಿ ಅಕ್ಷರ ಸೇವೆ: ಸಂಪನ್ಮೂಲ ವ್ಯಕ್ತಿಗಳು: ವಿನಾಯಕ ಭಟ್ಟ, ರೂಪಾ ಗುರುರಾಜ್, ಆಯೋಜನೆ: ಪರ್ಯಾವರಣ ಸಂರಕ್ಷಣ–ಜನಸಂವಾದ ವಿಭಾಗ ಕರ್ನಾಟಕ ದಕ್ಷಿಣ ಪ್ರಾಂತ, ಸ್ಥಳ: ಬಿಎನ್‌ಎಂಐಟಿ ಆವರಣ, ಬೆಳಿಗ್ಗೆ 9.30

ಮಕ್ಕಳ ಜಾತ್ರೆ: ಉದ್ಘಾಟನೆ: ಅರುಣ್ ಸಾಗರ್, ಮೀರಾ ಅರುಣ್, ಅತಿಥಿಗಳು: ಕೆ.ವಿ. ಪ್ರಭಾಕರ್, ಬಿ.ಆರ್. ನಾಯ್ಡು, ಅಧ್ಯಕ್ಷತೆ: ಆರ್. ಶ್ರೀಧರ್, ಉಪಸ್ಥಿತಿ: ಶಿವಕುಮಾರ್ ಬೆಳ್ಳಿತಟ್ಟೆ, ಆಯೋಜನೆ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಜವಾಹರ ಬಾಲಭವನ, ಸ್ಥಳ: ಪ್ರೆಸ್‌ಕ್ಲಬ್ ಆವರಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 10

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸೌಮ್ಯಾ ಶ್ರೀ, ಉಪಸ್ಥಿತಿ: ವಿದ್ಯಾ ರಾವ್, ಸೌಂದರ್ಯ ಶ್ರೀವತ್ಸಾ, ಆಯೋಜನೆ: ದಿ ಸ್ಟ್ರಕ್ಚರಲ್ ಸ್ಕೂಲ್ ಆಫ್ ಫೈನ್ ಆರ್ಟ್ಸ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಶಿಕ್ಷಕರ ದಿನಾಚರಣೆ: ಅತಿಥಿಗಳು: ಸುಭಾಷ್ ಎಂ. ಹರಾಳು, ಚಂದ್ರಶೇಖರ್ ಹಡಪದ್, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಬೆಳಿಗ್ಗೆ 10.30

‘ಪ್ರೊ.ವಿ.ಕೃ. ಗೋಕಾಕ್’ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಸ್ವೀಕರಿಸುವವರು: ಆನಂದ ವಿ. ಪಾಟೀಲ, ಅತಿಥಿಗಳು: ಎಚ್.ಎನ್. ಸುರೇಶ್, ನರಹಳ್ಳಿ ಬಾಲಸುಬ್ರಹ್ಮಣ್ಯ, ಶಿವಾನಂದ ಕೆಳಗಿನಮನಿ, ಶ್ರೀದೇವಿ ಕೆರೆಮನೆ, ಕೆ.ಜಿ. ರಾಘವನ್, ಅನಿಲ್ ಗೋಕಾಕ್, ಆಯೋಜನೆ: ಭಾರತೀಯ ವಿದ್ಯಾ ಭವನ, ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ವಿ.ಕೃ.ಗೋಕಾಕ್

ಜೋಗಿ ಅವರ ‘ನೀಲಿಹೂವು ಖಾಲಿ ಹೃದಯ’, ಹರೀಶ್ ಕೇರ ಅವರ ‘ನಿಲ್ಲು ನಿಲ್ಲೇ ಪತಂಗ’, ವಿಕಾಸ ನೇಗಿಲೋಣಿ ‘ರುಕುಮಣಿ ರುಕುಮಣಿ’ ಪುಸ್ತಕಗಳ ಬಿಡುಗಡೆ: ರವಿ ಹೆಗಡೆ, ಅತಿಥಿ: ಶ್ರದ್ಧಾ ಜೈನ್, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

‘ಅವಧಾನ ಕಲೆ’ ಕುರಿತು ಸಂವಾದ: ಗಣೇಶಭಟ್ಟ ಕೊಪ್ಪಲ ತೋಟ, ಆಯೋಜನೆ: ಮಾಸದ ಮಂಥನ, ಸ್ಥಳ: ನಂ.17, ಸಾನ್ನಿಧ್ಯ, ಒಂದನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

‘ಚಂದ್ರಗ್ರಹಣ’ ಮೂಢನಂಬಿಕೆಗಳ ಕುರಿತು ಜಾಗೃತಿ: ಆಯೋಜನೆ: ಮೂಢನಂಬಿಕೆ ವಿರೋಧಿ ಒಕ್ಕೂಟ, ಸ್ಥಳ: ಪುರಭವನದ ಹತ್ತಿರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಸ್ಪರ್ಶ್ ಹಾಸ್ಪಿಟಲ್ ಅವರ ‘ಒಂಬತ್ತನೇ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ’ ಉದ್ಘಾಟನೆ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅತಿಥಿಗಳು: ಎಸ್.ಎಸ್. ಮಲ್ಲಿಕಾರ್ಜುನ್, ಶಿವರಾಜ್ ವಿ. ಪಾಟೀಲ, ಬಸವಪ್ರಭು ಎಸ್. ಪಾಟೀಲ್, ಆಯೋಜನೆ: ಸ್ಪರ್ಶ್ ಹಾಸ್ಪಿಟಲ್, ಸ್ಥಳ: ಸರ್ಜಾಪುರ ಮುಖ್ಯರಸ್ತೆ, ಬೆಳಿಗ್ಗೆ 11

ವಿದ್ಯಾರ್ಥಿಗಳ ನೃತ್ಯೋತ್ಸವ, 15ನೇ ವಾರ್ಷಿಕೋತ್ಸವ: ಅತಿಥಿಗಳು: ಜಯಶ್ರೀ ಅರವಿಂದ್, ಭ್ರಮರಿ ಶಿವಪ್ರಕಾಶ್, ಎಚ್.ಎನ್. ಶ್ರೀನಿವಾಸ್, ವಿ. ಮನೋಹರ್, ಭಾನುಮತಿ ಡಿ. ಶೆಟ್ಟಿಗರ್, ಶಿವಾನಂದಪ್ಪ, ಆಯೋಜನೆ: ನೃತ್ಯ ಸಂಗಮ, ಸ್ಥಳ: ಸಿಎಂಆರ್‌ಐಟಿ ಆ್ಯಂಪಿ ಥಿಯೇಟರ್ ಪರ್ಫಾರ್ಮಿಂಗ್ ಆರ್ಟ್ ಸಭಾಂಗಣ, ಸಿಎಂಆರ್‌ಐಟಿ ಕಾಲೇಜಿನ ಆವರಣ, ಎಇಸಿಎಸ್ ಲೇಔಟ್, ಮಧ್ಯಾಹ್ನ 2

‘ಇಂದ್ರಜಿತು ಕಾಳಗ, ನರಕಾಸುರ ಮೋಕ್ಷ, ರಕ್ತರಾತ್ರಿ’ ಪೌರಾಣಿಕ ಯಕ್ಷಗಾನ ಪ್ರದರ್ಶನ: ಆಯೋಜನೆ: ಬಿಇಎಲ್ ದಕ್ಷಿಣ ಕನ್ನಡಿಗರ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ, ಮಧ್ಯಾಹ್ನ 2

ಜನಭಾವ ನವಗಾನ–6: ಅತಿಥಿ: ಬೈರಮಂಗಲ ರಾಮೇಗೌಡ, ಗಾಯನ: ಪ್ರಭಾ ಇನಾಂದಾರ್, ಸಿ.ಎಂ. ನರಸಿಂಹಮೂರ್ತಿ, ಜೋಗಿಲ ಸಿದ್ಧರಾಜು, ಕದಂಬ ರತ್ನಾಕರ, ದಿವ್ಯಾ ಶೇಟ್, ಅರುಣ್ ಕುಮಾರ್, ಆಯೋಜನೆ: ಮಂದಾರ ಗಾಯನ ಚೇತನ ಟ್ರಸ್ಟ್, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ಯಕ್ಷ ಮಲ್ಲರಿ–2 ‘ಬ್ರಹ್ಮಕಪಾಲ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಯಕ್ಷರಥ, ಸ್ಥಳ: ಉತ್ತರ ಕನ್ನಡ ಸಂಘ, ನಂದಿನಿ ಬಡಾವಣೆ, ಸಂಜೆ 4

ಸಾಮೂಹಿಕ ಕ್ಷಮಾವಳಿ ಸಮಾರಂಭ: ಸಾನ್ನಿಧ್ಯ: ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮೀಜಿ, ಉದ್ಘಾಟನೆ: ಸುರೇಂದ್ರ ಕುಮಾರ್, ‘ಕ್ಷಮಾವಳಿ’ ಧಾರ್ಮಿಕ ಉಪನ್ಯಾಸ: ಪದ್ಮರಾಜ ದಂಡಾವತಿ: ಅಧ್ಯಕ್ಷತೆ: ಎಸ್. ಜಿತೇಂದ್ರ ಕುಮಾರ್, ಅತಿಥಿ: ವಿಪಿನ್ ಕುಮಾರ್ ಜೈನ್ ಸರಾಫ್, ಆಯೋಜನೆ: ಕರ್ನಾಟಕ ಜೈನ ಅಸೋಸಿಯೇಷನ್, ಸ್ಥಳ: ಕರ್ನಾಟಕ ಜೈನ ಭವನ, ಸಂಜೆ 4

ಸಂಗೀತ ಸಂಭ್ರಮ: ಗಾಯನ: ಸಾಜನ್ ಮಿಶ್ರಾ, ಸ್ವರಾಂಶ ಮಿಶ್ರಾ, ತಬಲಾ: ರವೀಂದ್ರ ಯಾವಗಲ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ಸಿತಾರ್: ನಯನ ಘೋಷ್, ತಬಲಾ: ಇಶಾನ್ ಘೋಷ್, ಆಯೋಜನೆ: ಸಪ್ತಕ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ವಯ್ಯಾಲಿ ಕಾವಲ್, ಮಲ್ಲೇಶ್ವರ, ಸಂಜೆ 5.30

ಬ್ರಹ್ಮಶ್ರೀ ನಾರಾಯಣಗುರು ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ವಿಖ್ಯಾತನಂದ ಸ್ವಾಮೀಜಿ, ರೇಣುಕಾನಂದ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ (ವೇದಿಕೆ ಕಾರ್ಯಕ್ರಮ ಸಂಜೆ 6ಕ್ಕೆ)

ಹುಣ್ಣಿಮೆ ಹಾಡು 217ನೇ ಸಂಚಿಕೆ: ಭಕ್ತಿ ಗೀತೆಗಳ ಗಾಯನ: ಅನಂತ ಕುಲಕರ್ಣಿ ಮತ್ತು ತಂಡ, ಅತಿಥಿಗಳು: ಮಂಜುಳಾ ಶ್ರೀಧರ್, ಬಿ.ಕೆ. ಶಿವರಾಂ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡು ಮಲ್ಲೇಶ್ವರ ದೇವಸ್ಥಾನದ ಆವರಣ, ಮಲ್ಲೇಶ್ವರ, ಸಂಜೆ 6.30

ಹಿರಿಯ ನಾಗರಿಕರ ಉದ್ಯೋಗ ಮೇಳ: ಉದ್ಘಾಟನೆ: ಪೀಟರ್ ಮಚಾಡೊ, ಅತಿಥಿ: ಯು.ಎಸ್ ಮಹೇಂದರ್, ಆಯೋಜನೆ: ನೈಟಿಂಗಲ್ಸ್ ಮೆಡಿಕಲ್ಸ್ ಟ್ರಸ್ಟ್, ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ಮುಖ್ಯರಸ್ತೆ, ಲ್ಯಾಂಗ್‌ಫೋರ್ಡ್ ರಸ್ತೆ, ಬೆಳಿಗ್ಗೆ 9ರಿಂದ, ವೇದಿಕೆ ಕಾರ್ಯಕ್ರಮ ಬೆಳಿಗ್ಗೆ 11ಕ್ಕೆ

ಪೀಟರ್ ಮಚಾಡೊ

ಎಚ್.ಎಸ್. ಗೋಪಾಲ ರಾವ್ ಅವರು ಸಂಗ್ರಹಿಸಿರುವ ‘ಬಾ.ರಾ. ಗೋಪಾಲ–ಲೇಖ’ ಪುಸ್ತಕ ಬಿಡುಗಡೆ: ಪುರುಷೋತ್ತಮ ಬಿಳಿಮಲೆ, ಪುಸ್ತಕದ ಕುರಿತು: ಶ್ರೀನಿವಾಸ ವಿ. ಪಾಡಿಗಾರ್, ಬಾ.ರಾ. ಗೋಪಾಲ್ ಅವರ ಕುರಿತು: ದೇವರಕೊಂಡಾರೆಡ್ಡಿ, ಬಾ.ರಾ. ಗೋಪಾಲ್ ಅವರ ಪುಸ್ತಕಗಳ ಕುರಿತು: ಡಿ.ವಿ. ಪರಮಶಿವಮೂರ್ತಿ, ಅಧ್ಯಕ್ಷತೆ: ಆರ್. ಶೇಷಶಾಸ್ತ್ರಿ, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10.30


ಪುರುಷೋತ್ತಮ ಬಿಳಿಮಲೆ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ.. nagaradalli_indu@prajavani.co.in

ನೆರೆ ಸಂತ್ರಸ್ತರ ತೀರದ ಬವಣೆ

ಒಂದನೇ ಪುಟದಿಂದ..

ವೈದ್ಯರು ನೀರಿನ ರಭಸ ಕಡಿಮೆಯಾದ ಬಳಿಕ ಬೋಟ್ ಮೂಲಕ ತೆರಳಿ ಅಲ್ಲಿನ ಜನರಿಗೆ ಆಹಾರ, ಔಷಧಗಳನ್ನು ವಿತರಿಸಿ ಬಂದರು. ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ನೀಲಕಂಠರಾಯನ ಗಡ್ಡಿಯನ್ನು ಕೃಷ್ಣೆ ಸುತ್ತುವರಿದ ಪರಿಣಾಮ ಹೊರಜಗತ್ತಿನ ಸಂಪರ್ಕ ಕಡಿದುಕೊಂಡಿತ್ತು. ಕೆಲ ವರ್ಷಗಳ ಹಿಂದೆ ಗರ್ಭಿಣಿಯೊಬ್ಬರು ಅಪಾಯಕಾರಿ ನೀರಿನ ಸೆಳೆತದಲ್ಲಿಯೇ ಈಜಿಕೊಂಡು ಗಡ್ಡಿಯಿಂದ ಹೊರಭಾಗಕ್ಕೆ ಬಂದಿದ್ದು ದೊಡ್ಡ ಸುದ್ದಿಯಾಗಿತ್ತು.

ಸಪ್ತ ನದಿಗಳನ್ನು ಹೊಂದಿರುವ ಬೆಳಗಾವಿ ಜಿಲ್ಲೆಯ ಜನರಿಗೆ ಪ್ರತಿವರ್ಷ ಪ್ರವಾಹದ ಆತಂಕ ತಪ್ಪಿಲ್ಲ. ಒಂದೆಡೆ ಬಿದ್ದ ಮನೆಗಳ ಪುನರ್ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿಲ್ಲ. ಮತ್ತೊಂದೆಡೆ ಪುನರ್ವಸತಿ ಕೇಂದ್ರಗಳಲ್ಲಿ ಮೂಲಸೌಕರ್ಯವಿಲ್ಲ. ಪ್ರತಿವರ್ಷ ನದಿ ಪ್ರವಾಹದಿಂದ ಅಥಣಿ ತಾಲ್ಲೂಕಿನ ಜನವಾಡ, ಮಹಿಷವಾಡಗಿ, ನಂದೇಶ್ವರ, ದೊಡವಾಡ, ನಾಗನೂರ ಪಿ.ಕೆ., ಖವಟೊಪ್ಪ, ಶೇಗುಣಸಿ, ಅವರಖೋಡ, ಹಲ್ಯಾಳ, ದರೂರ, ನದಿಇಂಗಳಗಾಂವ ಸೇರಿದಂತೆ 17 ಗ್ರಾಮಗಳು ಮುಳುಗಡೆಯಾಗುತ್ತವೆ. ತಮ್ಮೂರನ್ನು ಕೃಷ್ಣೆ ಪ್ರವೇಶಿಸುತ್ತಿದ್ದಂತೆ, ಗ್ರಾಮಸ್ಥರು ಕಾಳಜಿ ಕೇಂದ್ರಗಳತ್ತ ಮುಖಮಾಡುತ್ತಾರೆ. ನದಿಯಲ್ಲಿ ನೀರು ಇಳಿದ ನಂತರ ಮತ್ತೆ ಊರಿಗೆ ಬರುತ್ತಾರೆ.

ಪ್ರವಾಹ ಸಂತ್ರಸ್ತರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಅಥಣಿ ತಾಲ್ಲೂಕಿನ ಆರು ಗ್ರಾಮಗಳ ಸಂತ್ರಸ್ತರಿಗೆ ಸತ್ತಿ ಬಳಿ ಇರುವ ಝೀರೋ ಪಾಯಿಂಟ್ ಹಾಗೂ ರಡ್ಡೇರಹಟ್ಟಿಯಲ್ಲಿ ಪುನರ್ವಸತಿ ಕೇಂದ್ರ ನಿರ್ಮಿಸಲಾಗಿದೆ. ಆದರೆ, ಅಲ್ಲಿಗೆ ಹೋಗಿ ವಾಸವಿರಲು ಜನರು ಸಿದ್ಧರಿಲ್ಲ.

ತಗಡಿನ ಶೆಡ್‌ನಲ್ಲೇ ವಾಸ: 2019ರಲ್ಲಿ ಭೀಕರ ಪ್ರವಾಹದಿಂದ ಬೆಳಗಾವಿ ಜಿಲ್ಲೆ ತತ್ತರಿಸಿತ್ತು. ಸಾವಿರಾರು ಮನೆ ಬಿದ್ದಿದ್ದವು. ಈ ಪೈಕಿ 21,452 ಮನೆಗಳಿಗೆ 'ಎ' ಗ್ರೇಡ್‌ನಡಿ ತಲಾ ₹ 5 ಲಕ್ಷ ಪರಿಹಾರ ನೀಡುವುದಾಗಿ ಸರ್ಕಾರ ಘೋಷಿಸಿತ್ತು. ಆದರೆ, ಹಲವರಿಗೆ ಆರು ವರ್ಷಗಳಾದರೂ ಇನ್ನೂ ಪೂರ್ಣ ಪರಿಹಾರ ಸಿಕ್ಕಿಲ್ಲ. ಇಂದೋ, ನಾಳೆಯೋ ಪರಿಹಾರ ಬರುತ್ತದೆ ಎಂಬ ನಿರೀಕ್ಷೆಯಲ್ಲೇ ಹಲವರು ಮನೆ ನಿರ್ಮಾಣ ಕಾಮಗಾರಿ ಅರ್ಧಕ್ಕೆ ನಿಲ್ಲಿಸಿ ಕಾಯುತ್ತಿದ್ದಾರೆ.

ರಾಮದುರ್ಗ ತಾಲ್ಲೂಕಿನ ಅವರಾದಿ, ಹಂಪಿಹೊಳಿ ಗ್ರಾಮಸ್ಥರು, ಶಿವಪೇಟೆಯ (ಹಳೇ ಊರು) ಸರ್ಕಾರಿ ಜಾಗದ ತಾತ್ಕಾಲಿಕ ಶೆಡ್‌ನಲ್ಲೇ ಐದು ವರ್ಷಗಳಿಂದ ವಾಸವಿದ್ದಾರೆ.

'ನಾವಿದ್ದ ಮನಿ ಮಹಾಪೂರದಾಗ ಬಿತ್ತು. ಸರ್ಕಾರ ₹ 5 ಲಕ್ಷ ಕೊಡ್ತೇತಿ ಅನ್ನೋ ಆಸೇಕ್ ಇಡೀ ಮನಿ ನೆಲಸಮ ಮಾಡಿ ಕಟ್ಟಾಕ ಆರಂಭಿಸಿದ್ವಿ. ಆದ್ರ ಇನ್ನೂಮಟಾ ₹ 3 ಲಕ್ಷ ಅಷ್ಟ ಬಂದೇತ್ರಿ. ನಮ್ಮ ಕಡೆನೂ ರೊಕ್ಕ ಇಲ್ಲ. ಹಂಗಾಗಿ ಅರ್ಧಕ್ಕ ಮನೆ ಕಟ್ಟೋದು ನಿಲ್ಲಿಸಿ ತಗಡಿನ ಶೆಡ್‌ನ್ಯಾಗ ಬದುಕಾತೇವ್ರಿ' ಎಂದು ಅವರಾದಿಯ ಮಕ್ತುಮ್‌ಸಾಬ್–ಫಾತಿಮಾ ಮುಲ್ಲಾ ದಂಪತಿ ಹೇಳುತ್ತ ಕಣ್ಣೀರಾದರು.

ಶೆಡ್‌ಗಳಿರುವ ಸ್ಥಳದಲ್ಲಿ ಶೌಚಗೃಹ ವ್ಯವಸ್ಥೆ ಇಲ್ಲ. ಹಾಗಾಗಿ ಸಂತ್ರಸ್ತರಿಗೆ ಶೌಚಕ್ಕಾಗಿ ಬಯಲೇ ಆಸರೆ. ಒಡೆದ ಸಿಮೆಂಟ್ ಶೀಟು, ತೆಂಗಿನ ಗರಿ, ಕಟ್ಟಿಗೆ ಮತ್ತು ಹಳೇ ಸೀರೆ ಬಳಸಿ ಮಾಡಿಕೊಂಡಿರುವ ಜಾಗವೇ ಸ್ನಾನಕ್ಕೆ ಆಧಾರ. ಸಂಜೆಯಷ್ಟೇ ವಿದ್ಯುತ್ ಸೌಕರ್ಯ. ವಿಷಜಂತುಗಳ ಹಾವಳಿ ಬೇರೆ.

ವಿಜಯಪುರ ಜಿಲ್ಲೆಯ ಆಲಮೇಲ ತಾಲ್ಲೂಕಿನ ತಾವರಖೇಡ ಪುನರ್ವಸತಿ ಕೇಂದ್ರದಲ್ಲಿ ಶಾಲಾ ಕಟ್ಟಡವಿದೆ, ಕಲಿಯಲು ಮಕ್ಕಳಿಲ್ಲ. ದೇವಸ್ಥಾನದ ಕಟ್ಟಲಾಗಿದೆ. ಆದರೆ, ಗಂಟೆ– ಜಾಗಟೆಗಳ ನಾದವಿಲ್ಲ. ಸಮುದಾಯ ಭವನಗಳಿವೆ, ಸದ್ದುಗದ್ದಲವಿಲ್ಲ. ಡಾಂಬರು ಬಳಿದ ರಸ್ತೆಗಳು ಇವೆ, ಒಂದೂ ವಾಹನ ಸಂಚರಿಸುವುದಿಲ್ಲ. ಅದೊಂದು ಹಾಳುಕೊಂಪೆ ತರಹ ಭಾಸವಾಗುತ್ತಿದೆ...

ಸೊನ್ನ ಹತ್ತಿರ ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಿದ ಬ್ಯಾರೇಜು ನೀರು ಸಂಗ್ರಹದಿಂದಾಗಿ ಹಿನ್ನೀರು ಈ ಗ್ರಾಮಕ್ಕೆ ಸುತ್ತುವರಿಯುತ್ತದೆ. ಇದರಿಂದಾಗುವ ತೊಂದರೆಯನ್ನು ಗಮನಿಸಿದ ಭೀಮಾ ಏತನೀರಾವರಿ ನಿಗಮವು ಕಡಣಿ ಸಮೀಪ 54 ಎಕರೆ ಭೂಮಿಯನ್ನು ಖರೀದಿಸಿ ಪುನರ್ವಸತಿ ಕೇಂದ್ರ ನಿರ್ಮಿಸಿದೆ. ಮೂಲಸೌಕರ್ಯಗಳನ್ನು, ಶಾಲೆ, ದೇಗುಲ, ರಸ್ತೆ ಇತ್ಯಾದಿಗಳನ್ನು ಮಾಡಿ ಎಲ್ಲರಿಗೂ ನಿವೇಶನ ಹಂಚಿಕೆ ಮಾಡಿತ್ತು. ಕಳೆದ ಎರಡು ವರ್ಷಗಳ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರು ದೊಡ್ಡ ಕಾರ್ಯಕ್ರಮ ಮಾಡಿ, ಎಲ್ಲರಿಗೂ ಹಕ್ಕುಪತ್ರಗಳನ್ನು ನೀಡಿ ಎಲ್ಲರೂ ಇಲ್ಲಿ ಬಂದು ನೆಲೆಸುವಂತೆ ಹೇಳಿದ್ದರು. ಹಂಚಿಕೆಯಾದ 500ಕ್ಕೂ ಹೆಚ್ಚು ನಿವೇಶನಗಳಲ್ಲಿ ಇದುವರೆಗೆ ಯಾರೂ ಮನೆ ಕಟ್ಟಿಸಿಲ್ಲ. ಅಲ್ಲಿಗೆ ಬಂದು ತಳವೂ ಊರಿಲ್ಲ, ಎಲ್ಲರೂ ಹಳೆ ತಾವರಖೇಡದಲ್ಲಿ ಹಾಗೂ ತೋಟದ ವಸ್ತಿಗಳಲ್ಲಿ ನೆಲೆಯೂರಿದ್ದಾರೆ.

> **ಅವೈಜ್ಞಾನಿಕವಾಗಿ ನಿರ್ಮಿಸಿದ ಪುನರ್ವಸತಿ ಕೇಂದ್ರಗಳಲ್ಲಿ ಕನಿಷ್ಠ ಮೂಲಸೌಕರ್ಯವಿಲ್ಲ. ಹಾಗಾಗಿ ಅಲ್ಲಿ ಹೋಗಿ ಸಂತ್ರಸ್ತರು ವಾಸಿಸುತ್ತಿಲ್ಲ. ಅಥಣಿ ತಾಲ್ಲೂಕಿನ 17 ಪ್ರವಾಹಪೀಡಿತ ಗ್ರಾಮಗಳ ಪುನರ್ವಸತಿಗೂ ಕ್ರಮ ವಹಿಸಬೇಕು**
>
> **ರಮೇಶ ಪಾಟೀಲ,** ಹಿಪ್ಪರಗಿ ಆಣೆಕಟ್ಟೆಯ ಸಂತ್ರಸ್ತರ ಹಿತರಕ್ಷಣಾ ಸಮಿತಿ ಅಧ್ಯಕ್ಷ

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಗಂಜಿಹಾಳದಲ್ಲಿ ಮನೆ ಖಾಲಿ ಬಿದ್ದಿರುವುದರಿಂದ ಸುತ್ತಲೂ ಜಾಲಿ ಗಿಡಗಳು ಬೆಳೆದಿರುವುದು

ಮನೆಹಾನಿಗೆ ಪರಿಹಾರ

ಅತಿವೃಷ್ಟಿಯಿಂದ ಮನೆಗಳಿಗೆ ಹಾನಿಯಾದರೆ, ಕೇಂದ್ರ ಸರ್ಕಾರವು ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್‌ಎಫ್) ಅಡಿ ನಿಗದಿ ಮಾಡಿರುವ ಪರಿಹಾರದ ಮೊತ್ತದ ಜತೆಗೆ ರಾಜ್ಯ ಸರ್ಕಾರದಿಂದಲೂ ಹೆಚ್ಚುವರಿ ಪರಿಹಾರ ನೀಡುತ್ತಿದೆ. ರಾಜ್ಯ ವಿಪತ್ತು ನಿರ್ವಹಣಾ ನಿಧಿಯಲ್ಲಿ, ಈ ಸಾಲಿನಲ್ಲಿ ₹1,000 ಕೋಟಿ ತೆಗೆದಿರಿಸಲಾಗಿದೆ.

ಪರಿಹಾರದ ಮೊತ್ತ ಯಾವುದಕ್ಕೆ ಎಷ್ಟು?

₹6,500 ಹಂಚು, ಶೀಟು, ಕಿಟಕಿ, ಬಾಗಿಲುಗಳಿಗೆ ಹಾನಿ

₹30,000 ಮನೆಯ ಗೋಡೆಗಳಲ್ಲಿ ಬಿರುಕು, ಕುಸಿತ ಮತ್ತು ಇತರೆ ಹಾನಿ

₹50,000 ಗೋಡೆ ಕುಸಿತ ಮತ್ತು ಚಾವಣಿಗೆ ಹಾನಿ

ಗೋಡೆ ಮತ್ತು ಚಾವಣಿ ಕುಸಿತ

₹1.20 ಲಕ್ಷ ಸಾಮಾನ್ಯ ವರ್ಗಕ್ಕೆ

₹1.50 ಲಕ್ಷ ಪರಿಶಿಷ್ಟ ಜಾತಿ ಮತ್ತು ಪ. ವರ್ಗಗಳಿಗೆ

₹1.00 ಲಕ್ಷ ಅನಧಿಕೃತ ಜಮೀನಿನಲ್ಲಿ ಇದ್ದು, ಪೂರ್ಣ ಹಾನಿ

'ಎಲ್ಲ ಕಡೆಗೂ ಮುಳ್ಳಿನ ಗಿಡಗಳು ಆವರಿಸಿಕೊಂಡು ಬೆಳೆಯುತ್ತಿವೆ. ಸರ್ಕಾರಿ ಕಟ್ಟಡಗಳಲ್ಲಿ ಜನರಿಲ್ಲದೆ ಬಿಕೋ ಎನ್ನುತ್ತಿವೆ. ಈ ಹೊಸ ಪ್ರದೇಶಕ್ಕೆ ತಾವರಖೇಡದ ಎಲ್ಲಾ ಕುಟುಂಬಗಳು ಬಂದು ನೆಲೆಸಿದರೆ ಮಾತ್ರ ಸರ್ಕಾರದ ಪುನರ್ವಸತಿ ಯೋಜನೆ ಸಾರ್ಥಕತೆ ಸಿಗುತ್ತದೆ' ಎನ್ನುತ್ತಾರೆ ಕಡಣಿಯ ಉಮೇಶ ಕ್ಷತ್ರಿ.

ಈ ಕುರಿತು ಕಡಣಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸಲಿಂಗಪ್ಪ ಕತ್ತಿ ಅವರನ್ನು ವಿಚಾರಿಸಿದರೆ, 'ಪಂಚಾಯಿತಿಯಿಂದ ಎಲ್ಲ ರೀತಿಯ ಸೌಲಭ್ಯಗಳನ್ನು ನಾವು ನೀಡಲು ಸಿದ್ಧರಿದ್ದೇವೆ. ಅಲ್ಲಿ ಒಂದಷ್ಟು ಕುಟುಂಬಗಳು ಬಂದು ನೆಲೆಸಲಿ, ಅವರಿಗೆ ತೊಂದರೆಯಾಗದಂತೆ ನಾವು ಎಲ್ಲ ರೀತಿಯ ಸಹಕಾರ ನೀಡುತ್ತೇವೆ' ಎನ್ನುತ್ತಾರೆ.

ಬಾಗಲಕೋಟೆ ಜಿಲ್ಲೆಯ ಕೃಷ್ಣಾ, ಮಲಪ್ರಭಾ, ಘಟಪ್ರಭಾ ನದಿಗಳು 2009ರಲ್ಲಿ ಉಕ್ಕಿ ಗ್ರಾಮಗಳಿಗೆ ನುಗ್ಗಿದಾಗ ಜಿಲ್ಲೆಯ 50 ಗ್ರಾಮಗಳ ಜನರನ್ನು ಸ್ಥಳಾಂತರಿಸಲು ನಿರ್ಧರಿಸಲಾಯಿತು. ಬಾದಾಮಿ ತಾಲ್ಲೂಕಿನ 27, ಹುನಗುಂದ ತಾಲ್ಲೂಕಿನ 12, ಮುಧೋಳ ತಾಲ್ಲೂಕಿನ 9, ಜಮಖಂಡಿ ತಾಲ್ಲೂಕಿನ ಎರಡು ಗ್ರಾಮಗಳ ಜನರಿಗಾಗಿ 12 ಸಾವಿರಕ್ಕೂ ಹೆಚ್ಚು ಮನೆಗಳನ್ನು ನಿರ್ಮಿಸಲಾಗಿದೆ.

ಆಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರವು ದಾನಿಗಳ ನೆರವಿನಿಂದ ಮನೆಗಳ ನಿರ್ಮಾಣಕ್ಕೆ ಮುಂದಾಗಿತ್ತು. ಮನೆಗಳು ನಿರ್ಮಾಣವಾಗುವ ಹೊತ್ತಿಗೆ ಎರಡು ವರ್ಷಗಳು ಕಳೆದಿದ್ದವು. ಮತ್ತೆ ಪ್ರವಾಹ ಬಾರದ್ದರಿಂದ ಜನರು ಹೊಸ ಮನೆಗಳತ್ತ ಹೊರಳಿ ನೋಡಲಿಲ್ಲ.

'ಇಲ್ಲಿ ಶಾಲೆ, ಆಸ್ಪತ್ರೆ, ಬಸ್ ಸಂಚಾರವಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕೆ, ರೋಗಿಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಎರಡು ಕಿ.ಮೀ ನಡೆದುಕೊಂಡೇ ಬರಬೇಕು. ಮೂಲಸೌಲಭ್ಯಗಳು ಇಲ್ಲದ್ದರಿಂದ ಜೀವನ ನಡೆಸುವುದೇ ಕಷ್ಟವಾಗಿದೆ' ಎಂಬುದು ಮಲಪ್ರಭಾ ನದಿ ತೀರದ ಹುನಗುಂದ ತಾಲ್ಲೂಕಿನ ಗಂಜಿಹಾಳ ಗ್ರಾಮದ ರಮೇಶ ಜಹಗೀರದಾರ ನೋವಿನ ನುಡಿ. ಈ ಗ್ರಾಮದವರಿಗಾಗಿ 500 ಮನೆಗಳನ್ನು ನಿರ್ಮಿಸಲಾಗಿದೆ. 200 ಮನೆಗಳಿಗೆ ಜನರು ಹೋಗಿದ್ದಾರೆ. ಉಳಿದ ಮನೆಗಳು ಪಾಳು ಬಿದ್ದಿವೆ.

'ಜಾನುವಾರುಗಳಿಲ್ಲದ ರೈತ ಕುಟುಂಬ ಹೇಗಿರುತ್ತದೆ. ಕೊಟ್ಟಿಗೆ ನಿರ್ಮಾಣವಾಗಿಲ್ಲ. ಚಿಕ್ಕದಾದ ಅಡುಗೆ ಕೋಣೆ, ಹಾಲ್, ಸಣ್ಣದಾದ ಬೆಡ್ ರೂಂ ನಿರ್ಮಿಸಲಾಗಿದೆ. ಕೂಡುಕುಟುಂಬದ ರೈತರಿಗೆ ಸಾಲುತ್ತದೆಯೇ? ಕೋಳಿ ಗೂಡಿನಂತಹ ಮನೆಗೆ ಜನರು ಹೋಗಲಿಲ್ಲ. ಹಳ್ಳಿಯವರ ಮನೆ ಹೇಗಿರುತ್ತದೆ ಎಂದು ಗೊತ್ತಿಲ್ಲದೆ ಈ ತರ ಕಟ್ಟಿದ್ದಾರೆ' ಎನ್ನುತ್ತಾರೆ ಅವರು.

2007 ಮತ್ತು 2009ರಲ್ಲಿ ರಾಜ್ಯದಲ್ಲಿ ಸುರಿದ ಕುಂಭದ್ರೋಣ ಮಳೆಗೆ ಮಲಪ್ರಭೆ ರೌದ್ರಾವತಾರ ತಾಳಿ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಹೊಳೆಆಲೂರು, ಹೊಳೆಮಣ್ಣೂರು, ಗಾಡಗೋಳಿ, ಅಮರಗೋಳ, ಬಿ.ಎಸ್. ಬೇಲೇರಿ, ಮೆಣಸಗಿ, ಬಸರಕೋಡ, ಕುರುವಿನಕೊಪ್ಪ, ಮಾಳವಾಡ, ಯಾ.ಸ.ಹಡಗಲಿ ಸೇರಿದಂತೆ ಹಲವು ಗ್ರಾಮಗಳು ಜಲಾವೃತವಾಗಿ ತೀವ್ರ ಸಂಕಷ್ಟ ಎದುರಿಸಿದ್ದವು.

ಪ್ರವಾಹ ಪೀಡಿತ ಗ್ರಾಮಗಳನ್ನು ಸ್ಥಳಾಂತರಗೊಳಿಸಲು ಅಂದಿನ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರ ಕ್ರಮ ಕೈಗೊಂಡು ಪ್ರವಾಹಬಾಧಿತವಾಗದ ಸ್ಥಳಗಳನ್ನು ಗುರುತಿಸಿ ಅಲ್ಲಿಗೆ ಹಳ್ಳಿಗಳನ್ನು ಸ್ಥಳಾಂತರಗೊಳಿಸಲು ಕ್ರಮವಹಿಸಿದ್ದರು.

ಸೇವಾ ಭಾರತಿಯ ಸಹಯೋಗದಲ್ಲಿ ಹೊಳೆಆಲೂರು ನವಗ್ರಾಮ ನಿರ್ಮಾಣ ಮಾಡಿದ್ದು, ಸೌಲಭ್ಯಗಳ ಕೊರತೆಯಿಂದಾಗಿ ಗ್ರಾಮಸ್ಥರು ಹಳೆಯ ಗ್ರಾಮ ಬಿಟ್ಟು ಹೊಸ ಗ್ರಾಮಕ್ಕೆ ತೆರಳುತ್ತಿಲ್ಲ. ಇದರಿಂದಾಗಿ ನವಗ್ರಾಮದಾದ್ಯಂತ ಮುಳ್ಳು ಕಂಟಿಗಳು ಬೆಳೆದು ನಿರ್ಮಿಸಿದ ಮನೆಗಳು ಶಿಥಿಲಾವಸ್ಥೆ ತಲುಪಿವೆ.

2009ರಲ್ಲಿ ಸುರಿದ ಭಾರಿ ಮಳೆಯಿಂದ ಉಕ್ಕಿ ಹರಿದ ಬೆಣ್ಣೆಹಳ್ಳದ ಪ್ರವಾಹಕ್ಕೆ ನರಗುಂದ ತಾಲ್ಲೂಕಿನ ಕುರ್ಲಗೇರಿ, ಸುರಕೋಡ ಗ್ರಾಮಗಳು ಹಾಗೂ ಮಲಪ್ರಭಾ ಪ್ರವಾಹಕ್ಕೆ ಬೂದಿಹಾಳ, ಲಕಮಾಪುರ ಗ್ರಾಮಗಳು ತೀವ್ರ ತೊಂದರೆಗೆ ಒಳಗಾಗಿದ್ದವು. ಇದನ್ನು ಅರಿತ ಅಂದಿನ ಬಿಜೆಪಿ ಸರ್ಕಾರ ತಾಲ್ಲೂಕಿನ ಸುರಕೋಡ, ಕುರ್ಲಗೇರಿ, ಬೂದಿಹಾಳ ಗ್ರಾಮಗಳನ್ನು ಸ್ಥಳಾಂತರ ಮಾಡುವ ನಿರ್ಣಯಕ್ಕೆ ಬಂದು, ನವಗ್ರಾಮ ನಿರ್ಣಯಕ್ಕೆ ಮುಂದಾಯಿತು.

ಬೆಣ್ಣೆ ಹಳ್ಳದ ಪ್ರವಾಹ ಸಮಸ್ಯೆಗೆ ಮುಕ್ತಿ ಕೊಡಿಸುವ ನಿಟ್ಟಿನಲ್ಲಿ ಧಾರವಾಡ ಜಿಲ್ಲೆಯ ನವಲಗುಂದ ಮತ್ತು ಅಣ್ಣಿಗೇರಿ ತಾಲ್ಲೂಕಿನ ಆರು ಗ್ರಾಮಗಳ ಕುಟುಂಬಗಳನ್ನು (ಮೂರು ಗ್ರಾಮಗಳ ಭಾಗಶಃ) 14 ವರ್ಷಗಳ ಹಿಂದೆ ಸ್ಥಳಾಂತರಿಸಲಾಗಿದೆ. 'ಸ್ಥಳಾಂತರಿಸುವ ಎಲ್ಲ ಕುಟುಂಬಗಳಿಗೂ ಮನೆ ಕಲ್ಪಿಸಲಾಗಿದೆ. ಹಕ್ಕುಪತ್ರಗಳನ್ನೂ ವಿತರಿಸಲಾಗಿದೆ' ಎಂದು ನವಲಗುಂದ ತಹಶೀಲ್ದಾರ್ ಸುಧೀರ್ ಸಾಹುಕಾರ 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ಕಾರದವರು ನೀಡಿರುವ ಮನೆಯಲ್ಲಿ 14 ವರ್ಷಗಳಿಂದ ವಾಸವಿದ್ದೇವೆ. ಆದರೆ ಈವರೆಗೆ ಹಕ್ಕುಪತ್ರ ನೀಡಿಲ್ಲ' ಎಂದು ಗುಡಿಸಾಗರ ಗ್ರಾಮದ ಶಿವಯೋಗಿ ಸಿದ್ದಪ್ಪ ಪೂಜಾರ ಆರೋಪಿಸಿದರು.

ಬಿಡುಗಡೆಯಾಗದ ಹಣ: ಹಾವೇರಿ ತಾಲ್ಲೂಕಿನ ಹಂದಿಗನೂರು ಹಾಗೂ ಮೇಲ್ಮುರಿ ಗ್ರಾಮಗಳಲ್ಲಿ 2021ರಲ್ಲಿ ಎದುರಾದ ನೆರೆಯಿಂದಾಗಿ 90ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿದ್ದವು. ನೆರೆ ಕಡಿಮೆಯಾದ ನಂತರ ಮನೆಗಳ ಮರು ನಿರ್ಮಾಣಕ್ಕಾಗಿ ಸರ್ಕಾರ ₹ 5 ಲಕ್ಷ ಯೋಜನೆ ಘೋಷಿಸಿತ್ತು.

ಮೊದಲ ಕಂತಿನಲ್ಲಿ ₹ 1.20 ಲಕ್ಷವನ್ನೂ ನೀಡಲಾಗಿತ್ತು. ಅದೇ ಹಣದಲ್ಲಿ ನೆರೆ ಸಂತ್ರಸ್ತರು ಮನೆಗೆ ಪಾಯ ಹಾಕಿದ್ದರು. ಇದಾದ ನಂತರ, ಸರ್ಕಾರ ಅನುದಾನವನ್ನು ಕಡಿತಗೊಳಿಸಿದೆ. ಇದರಿಂದಾಗಿ ಮನೆಗಳ ನಿರ್ಮಾಣ, ಪಾಯದ ಹಂತದಲ್ಲೇ ಉಳಿದುಕೊಂಡಿದೆ.

ಪೂರಕ ಮಾಹಿತಿ: ಚಂದ್ರಕಾಂತ ಮಸಾನಿ, ಬಸವರಾಜ ಹವಾಲ್ದಾರ್, ಬಸವರಾಜ್ ಸಂಪಳ್ಳಿ, ಜಯಸಿಂಹ ಆರ್., ಇಮಾಮ್ ಹುಸೇನ್ ಗೂಡುನವರ, ಕೆ.ಎಂ.ಸತೀಶ್ ಬೆಳ್ಳಕ್ಕಿ, ಬಿ.ಜೆ.ಧನ್ಯಪ್ರಸಾದ್, ಸಂತೋಷ ಜಿಗಳಿಕೊಪ್ಪ

ಮನೆಯೂ ಇಲ್ಲ, ಹಣವೂ ಉಳಿದಿಲ್ಲ!

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿ ಕೃಷ್ಣಾ, ಮಲಪ್ರಭಾ ತೀರದ ಇದ್ದಲಗಿ, ಬಿಸನಾಳ, ಬಿಸನಾಳ ಕೊಪ್ಪ, ಕಮದತ್ತ, ಅಡಿಹಾಳ, ಎಮ್ಮೆಟ್ಟಿ, ಅನಪಕಟ್ಟಿ ಸೇರಿದಂತೆ 12 ಗ್ರಾಮಗಳು 2012ರಲ್ಲಿಯೇ ಮುಳುಗಡೆಯಾಗಿದ್ದು, ಕೆಲ ಗ್ರಾಮಗಳಲ್ಲಿ ಪುನರ್ವಸತಿಯೂ ಆಗಿದೆ. ಎಮ್ಮೆಟ್ಟಿ ಗ್ರಾಮದ ಪುನರ್ವಸತಿ ಕೇಂದ್ರಕ್ಕಾಗಿ ಸರ್ಕಾರ 70 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡು ರೈತರಿಗೆ ಪರಿಹಾರವನ್ನೂ ನೀಡಿದೆ. ಆದರೆ ಜಮೀನು ಕಳೆದುಕೊಂಡ ಕೆಲವರು ಪರಿಹಾರ ಕಡಿಮೆಯಾಗಿದೆ ಎಂದು ಕೋರ್ಟ್ ಮೊರೆಹೋಗಿದ್ದರಿಂದ ಪುನರ್ವಸತಿ ಪ್ರಕ್ರಿಯೆ ದಶಕದಿಂದ ನನೆಗುದಿಗೆ ಬಿದ್ದಿದೆ.

'ಇದೀಗ ಮುಳುಗಡೆ ಸಂತ್ರಸ್ತರ ಕೈಯಲ್ಲಿ ಪರಿಹಾರದ ಬಿಡಿಗಾಸೂ ಇಲ್ಲ, ಆಕಡೆ ಮನೆಯೂ ಇಲ್ಲದಂತಾಗಿ ಬೀದಿಗೆ ಬೀಳುವಂತಾಗಿದೆ' ಎಂದು ಗ್ರಾಮದ ಮುಖಂಡ ಭೀಮಪ್ಪ ಅಡಿವೆಪ್ಪ ಗೌಡರ ಮಾಹಿತಿ ನೀಡಿದರು.

ಶೋಷಿತರಿಗೆ ದೇವರನ್ನು 'ಕಾಣಿಸಿದ' ಗುರುದೇವ

• ಸ್ವಾಮಿ ವಿಖ್ಯಾತಾನಂದ



ನಾರಾಯಣ ಗುರು

ಇಂದಿನ ಜಾಗತಿಕ ವ್ಯವಸ್ಥೆಯನ್ನು ಅವಲೋಕಿಸಿದಾಗ, ಮನುಷ್ಯನಲ್ಲಿ ಮನುಷ್ಯತ್ವವೇ ಮಾಯವಾಗಿರುವಂತೆ ಕಾಣುತ್ತಿದೆ. ಇದು ಹೀಗೆ ಮುಂದುವರಿಯುತ್ತಾ ಸಾಗಿದರೆ, ಜಗತ್ತಿನ ಅಂತ್ಯಕ್ಕೆ ಯಾವ ಅಣುಬಾಂಬ್‌ನ ಅವಶ್ಯಕತೆಯೂ ಇಲ್ಲ. ಮನುಷ್ಯನಲ್ಲಿನ ಸಂಕುಚಿತ ಮನೋಭಾವ, ಸ್ವಾರ್ಥ, ನಾನು ಮಾತ್ರವೇ ಬದುಕಬೇಕೆಂಬ ದುರಾಸೆ... ಈ ಎಲ್ಲವೂ ಎಲ್ಲಿಯವರೆಗೆ ಇರುತ್ತವೆಯೋ ಅಲ್ಲಿಯವರೆಗೂ ಗಾಂಧೀಜಿ ಅವರ ರಾಮರಾಜ್ಯದ ಕನಸು ಕನಸಾಗಿಯೇ ಉಳಿಯುತ್ತದೆ. ತಾನಷ್ಟೇ ಬದುಕದೆಯೇ ಇತರರಿಗೂ ಬದುಕುವ ರೀತಿಯನ್ನು ತೋರಿಸಿದ ಮಹಾ ಸಂತರ ತತ್ವಾದರ್ಶಗಳು ಇಂದಿಗೂ ಪ್ರಸ್ತುತವಾಗಿವೆ. ಇಂಥ ಮಹಾನ್ ಸಂತರಲ್ಲಿ ಕೇರಳದ ನಾರಾಯಣಗುರುಗಳೂ ಒಬ್ಬರು.

'ಒಂದೇ ಜಾತಿ, ಒಂದೇ ಮತ, ಒಂದೇ ದೇವರು' ಎಂದು ಇಡೀ ಮನುಕುಲಕ್ಕೇ ಸಾರಿದವರು ಸಂತಶ್ರೇಷ್ಠ ನಾರಾಯಣಗುರುಗಳು. ಇಂದಿನ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ಜಾತೀಯ ವಿಷ ಭಾವನೆಗಳನ್ನು ಬಿತ್ತಿ, 'ನಮ್ಮ ಧರ್ಮ', 'ನಮ್ಮ ಸಿದ್ಧಾಂತ' ಎನ್ನುತ್ತಾ ಮತಭ್ರಾಂತಿಯಿಂದ ಪರಸ್ಪರ ಹೊಡೆದಾಡಿಕೊಳ್ಳುತ್ತಿದ್ದಾರೆ. ಇಂಥ ಕಾಲಘಟ್ಟದಲ್ಲಿ, 'ಅವನವನ ಆತ್ಮಸುಖಕ್ಕಾಗಿ ಗೈಯುವ ಕರ್ಮಗಳೆಲ್ಲವೂ ಮತ್ತೊಬ್ಬರ ಹಿತವನ್ನು ಕಾಪಾಡಲಿ' ಎಂಬ ನಾರಾಯಣಗುರುಗಳ ಸಂದೇಶವು ಅತ್ಯಂತ ಪ್ರಸ್ತುತವಾಗಿದೆ. ತಾನು ಮಾಡುವ ಪ್ರತಿಯೊಂದು ಕರ್ಮದಿಂದ ಇತರರಿಗೆ ಯಾವುದೇ ತೊಂದರೆ ಉಂಟಾಗಬಾರದು ಎಂಬುದೇ ಗುರುಗಳ ಲಕ್ಷ್ಯ.

ಗುರುಗಳು ಸಮಾಜದ ಉದ್ಧಾರದ ಕಾರ್ಯವನ್ನು ಆರಂಭಿಸಿದ್ದು, ಅರವಿಪುರಂನಲ್ಲಿ ಶಿವನ ಮೂರ್ತಿ ಪ್ರತಿಷ್ಠಾಪನೆಯ ಮೂಲಕ. ಮನುಷ್ಯರಾಗಿ ಹುಟ್ಟಿದರೂ ಮನುಷ್ಯರಾಗಿ ಬಾಳುವ ಅವಕಾಶದಿಂದ ವಂಚಿತರಾದ ಶೋಷಿತ ಸಮುದಾಯಗಳ ಏಳಿಗೆಗಾಗಿ ಗುರುಗಳು ಶಿವನ ಮೂರ್ತಿ ಪ್ರತಿಷ್ಠಾಪನೆಯೊಂದಿಗೆ ದಿಟ್ಟ ಹೆಜ್ಜೆ ಇಟ್ಟರು. ಸಾಂಪ್ರದಾಯಿಕ ಪದ್ಧತಿಗಳಿಗೆ ಸವಾಲಾಗಿ, ಸತತ ಮೂರು ಗಂಟೆಗಳವರೆಗೆ ಕಣ್ಣೀರಿನ ಅಭಿಷೇಕದಲ್ಲಿ ಶಿವನ ಪ್ರತಿಷ್ಠಾಪನೆ ಮಾಡಿದರು. ಭಾರತೀಯ ಸಂಸ್ಕೃತಿಯಲ್ಲಿ ಕ್ಷೇತ್ರಾರಾಧನೆ ಮುಖ್ಯವಾದುದು. ಜಾತೀಯ ಶ್ರೇಣೀಕೃತ ವ್ಯವಸ್ಥೆಯ ವಿರುದ್ಧ ಹೋರಾಡಿದ ಭಾರತದಲ್ಲಿ ಹುಟ್ಟಿದ ಹಲವು ಪಂಥಗಳು ಅಷ್ಟೊಂದು ಪರಿಣಾಮಕಾರಿ ಪ್ರಭಾವ ಬೀರಲಿಲ್ಲ. ಯಾಕೆಂದರೆ, ಭಾರತೀಯರು ಕ್ಷೇತ್ರಾರಾಧನೆಯಲ್ಲಿ ಅಷ್ಟು ನಂಬಿಕೆ ಇಟ್ಟುಕೊಂಡಿದ್ದಾರೆ. ಇದನ್ನು ಅರಿತ ನಾರಾಯಣಗುರುಗಳು, ಕ್ಷೇತ್ರಾರಾಧನೆಯ ಮೂಲಕವೇ ಜನರಲ್ಲಿ ವಿಶ್ವಾಸ ಮೂಡಿಸಿದರು.

ಧರ್ಮದ ಹೆಸರಿನಲ್ಲಿ ದೇವಾಲಯ ಪ್ರವೇಶವನ್ನು ಯಾರಿಗೆಲ್ಲಾ ನಿರಾಕರಿಸಲಾಗಿದೆಯೋ ಅವರಿಗಾಗಿಯೇ ಶಿವನ ಮೂರ್ತಿ ಪ್ರತಿಷ್ಠಾಪನೆ ಮಾಡಿರುವುದಾಗಿ ಗುರುಗಳು ಹೇಳಿದರು. ದೇವರನ್ನು ಪೂಜಿಸುವುದಕ್ಕೆ ಎಲ್ಲರಿಗೂ ಅವಕಾಶವಿದೆ. ಇದಕ್ಕಾಗಿ ಮಧ್ಯವರ್ತಿಗಳ ಸಹಾಯಬೇಕಿಲ್ಲ. ದೇವರನ್ನು ನಾವು ನೇರವಾಗಿಯೇ ಪೂಜಿಸಬಹುದು ಎಂದವರು ಗುರುಗಳು. ಗುರುಗಳು ಇದೇ ರೀತಿ ಹಲವು ದೇವಸ್ಥಾನಗಳನ್ನು ಪ್ರತಿಷ್ಠಾಪಿಸಿದ್ದಾರೆ. ಆ ಮೂಲಕ ಜನರಲ್ಲಿ ಆತ್ಮವಿಶ್ವಾಸ ತುಂಬಿದ್ದಾರೆ.

ನಾರಾಯಣ ಗುರುಗಳ ಜಯಂತಿ ಇಂದು

'ಇನ್ನು ದೇವಾಲಯ ಪ್ರತಿಷ್ಠಾಪನೆ ಸಾಕು. ಸರಸ್ವತಿಯ ಆಲಯಗಳನ್ನು ಪ್ರತಿಷ್ಠಾಪನೆ ಮಾಡುವ' ಎನ್ನುತ್ತಾ 1912ರಲ್ಲಿ ಶಿವಗಿರಿಯಲ್ಲಿ ಶಾರದೆಯನ್ನು ಗುರುಗಳು ಪ್ರತಿಷ್ಠಾಪಿಸಿದರು. 'ಇನ್ನುಮುಂದೆ ಬರುವುದು ಸ್ಪರ್ಧಾತ್ಮಕ ಯುಗ. ಆದ್ದರಿಂದ ಮುಂದಿನ ಪೀಳಿಗೆಗೆ ಇಂಗ್ಲಿಷ್ ಶಿಕ್ಷಣ ನೀಡಿ' ಎಂದು ಗುರುಗಳು ಉಪದೇಶಿಸಿದರು. 'ದೇವಾಲಯದ ಪ್ರಾಂಗಣ ಸರಸ್ವತಿಯ ಮಂದಿರವಾಗಲಿ' ಎನ್ನುವುದು ನಾರಾಯಣಗುರುಗಳ ಚಿಂತನೆಯಾಗಿತ್ತು.

ನಾರಾಯಣಗುರುಗಳು ಒಮ್ಮೆ ಶ್ರೀಲಂಕಾಕ್ಕೆ ಹೋಗಿದ್ದರು. 'ನಮ್ಮ ಜನರು ತುಂಬಾ ಬಡತನದಲ್ಲಿ ಇದ್ದಾರೆ' ಎಂದು ಆ ಸಂದರ್ಭದಲ್ಲಿ ಅಲ್ಲಿನ ಮುಖಂಡರು ಗುರುಗಳಿಗೆ ಹೇಳಿದರು. ಆಗ ಗುರುಗಳು ಒಂದು ಕ್ಷಣ ಯೋಚಿಸಿ, 'ಇಲ್ಲಿ ರಾತ್ರಿ ಶಾಲೆ ತೆರೆಯಿರಿ' ಎಂದರು. ಗುರುಗಳ ಮಾತಿಗೆ ಬೆಲೆಕೊಟ್ಟು, ಸುಮಾರು 30ಕ್ಕೂ ಹೆಚ್ಚು ರಾತ್ರಿ ಶಾಲೆಗಳನ್ನು ತೆರೆಯಲಾಯಿತು. ತಮ್ಮ ತಮ್ಮ ಹೆಸರು ಬರೆಯುವುದು, ಸಹಿ ಹಾಕುವಷ್ಟು ಶಿಕ್ಷಣವನ್ನು ಈ ಶಾಲೆಗಳಲ್ಲಿ ನೀಡಲಾಯಿತು. ಬಳಿಕ ಇಲ್ಲಿ ವಿದ್ಯಾಭ್ಯಾಸಪಡೆದ ಸುಮಾರು 2 ಸಾವಿರ ಜನರನ್ನು ಬ್ರಿಟಿಷರು ಕೆಲಸಕ್ಕೆ ಸೇರಿಸಿಕೊಂಡರು. ಇದು ನಾರಾಯಣಗುರುಗಳ ದೂರದರ್ಶಿತ್ವಕ್ಕೆ ಹಿಡಿದ ಕನ್ನಡಿ.

ಆಡಂಬರ, ಗಲಾಟೆಗಳಿಲ್ಲದೆಯೇ ಶೋಷಿತ ಸಮುದಾಯವನ್ನು ಸನ್ಮಾರ್ಗಕ್ಕೆ ತಂದವರು ನಾರಾಯಣಗುರುಗಳು. ವಿದ್ಯೆ ಮತ್ತು ಸಂಘಟನೆಯೇ ಶೋಷಿತ ಸಮುದಾಯಗಳ ವಿಮೋಚನೆಗೆ ತಾರಕ ಎಂಬುದನ್ನು ಗುರುಗಳು ತಮ್ಮ ಬದುಕಿನ ಮೂಲಕ ತೋರಿಸಿಕೊಟ್ಟಿದ್ದಾರೆ. ಮೌಢ್ಯವನ್ನು ತಿರಸ್ಕರಿಸಿ ವೈಚಾರಿಕತೆಗೆ ಒತ್ತು ನೀಡಿದವರು ಗುರುಗಳು. ಈ ಮೂಲಕ ಜಗತ್ತಿನ ಯಾವ ಸಂತರೂ ಸಾಧಿಸಲಾಗದ ಸಾಮಾಜಿಕ ಪರಿವರ್ತನೆಯನ್ನು ಮೌನಕ್ರಾಂತಿಯಿಂದ ಮಾಡಿದವರು.

ನಾರಾಯಣಗುರುಗಳು ತಮ್ಮ ಜೀವಿತದ ಉದ್ದಕ್ಕೂ ಎಲ್ಲ ಧರ್ಮಗಳನ್ನೂ ಅತ್ಯಂತ ಗೌರವದಿಂದ ಕಂಡವರು. ಮನುಕುಲದ ಒಳಿತಿಗಾಗಿ ಸದಾ ಯತ್ನಿಸಿದ ಮಹಾಸಂತ ಇವರು. 'ವಸುಧೈವ ಕುಟುಂಬಕಂ' ಮಾತಿಗೆ ಅನ್ವರ್ಥವಾಗಿ ಬದುಕಿದವರು ನಾರಾಯಣಗುರುಗಳು. ಈ ಮಹಾನ್ ಸಂತನ ಉಪದೇಶಗಳನ್ನು ಜನರು ಸ್ವೀಕರಿಸಬೇಕು. ಆ ಮೂಲಕ ಲೋಕದಲ್ಲಿ ಶಾಂತಿ, ಸಮಾಧಾನ, ಸಮೃದ್ಧಿಯು ನೆಲೆಗೊಳ್ಳುವಂತಾಗಬೇಕು.

ಲೇಖಕ: ಪೀಠಾಧಿಪತಿ, ಆರ್ಯ ಈಡಿಗ ಮಹಾಸಂಸ್ಥಾನ, ಸೋಲೂರು

ಗುಂಡಣ್ಣ



25 ವರ್ಷಗಳ ಹಿಂದೆ
ಗುರುವಾರ, 7-9-2000

• ಜನಮೆಚ್ಚುವ ಶಿಕ್ಷಕರಿಗೆ ಮುಂದಿನ ಬಾರಿ ಪ್ರಶಸ್ತಿ

ಕಲ್ಬುರ್ಗಿ, ಸೆ. 6– ಮುಂದಿನ ವರ್ಷದಿಂದ ಉತ್ತಮ ಶಿಕ್ಷಕರಿಗಾಗಿ ಸರಕಾರ ನೀಡುವ ರಾಜ್ಯ ಪ್ರಶಸ್ತಿಯನ್ನು 'ಜನ ಮೆಚ್ಚಿದ ಶಿಕ್ಷಕರಿಗೆ' ನೀಡಲಾಗುವುದೆಂದು ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಚ್.ವಿಶ್ವನಾಥ್ ಅವರು ಇಂದು ಇಲ್ಲಿ ಪ್ರಕಟಿಸಿದರು. ಇಲ್ಲಿ ನಡೆದ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಪ್ರಶಸ್ತಿ ಪ್ರದಾನ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಶ್ರೇಷ್ಠ ಶಿಕ್ಷಕ ಪ್ರಶಸ್ತಿಗಾಗಿ ಶಿಕ್ಷಕರು ತಮ್ಮ ಆಯ್ಕೆಗಾಗಿ ತಾವೇ ಅರ್ಜಿಯನ್ನು ಹಿಡಿದುಕೊಂಡು ಹೋಗಬಾರದು. ಅರ್ಜಿ ಕೊಟ್ಟು ಸನ್ಮಾನಿಸಿಕೊಳ್ಳುವುದು ಸನ್ಮಾನವಾಗಲಾರದು ಎಂದು ಅವರು ಹೇಳಿದರು.

75 ವರ್ಷಗಳ ಹಿಂದೆ
ಗುರುವಾರ, 7-9-1950

• ಕೆ.ಪಿ.ಸಿ.ಸಿ ಕಾರ್ಯಕಾರಿ ಮಂಡಳಿ ಘೋಷಣೆ

ಹುಬ್ಬಳ್ಳಿ, ಸೆ. 6– ಕೆ.ಪಿ.ಸಿ.ಸಿ ಅಧ್ಯಕ್ಷ ಎಸ್.ನಿಜಲಿಂಗಪ್ಪ ಅವರು ತಮ್ಮ ಕಾರ್ಯಕಾರಿ ಮಂಡಳಿಯ ಸದಸ್ಯರ ಹೆಸರುಗಳನ್ನು ಘೋಷಿಸಿದರು. ಮಂಡಳಿಯು ಇಬ್ಬರು ಉಪಾಧ್ಯಕ್ಷರು ಮತ್ತು ಇಬ್ಬರು ಪ್ರಧಾನ ಕಾರ್ಯದರ್ಶಿಗಳನ್ನು ಒಳಗೊಂಡಿದೆ.

'ನವಯುಗ' ಪತ್ರಿಕೆಯ ಸಂಪಾದಕ ಟಿ.ಟಿ.ನೆಸ್ವಿ ಮತ್ತು ಮಂಗಳೂರಿನ ಸಂಸದ ಯು.ಶ್ರೀನಿವಾಸ್ ಮಲ್ಯ ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಟಿ.ಟಿ.ನೆಸ್ವಿ ಅವರು ಮಂಡಳಿಯ ಖಜಾಂಚಿ ಸಹ ಆಗಿದ್ದಾರೆ. ಜಿ.ವಿ.ಹಳ್ಳಿಕೇರಿ ಮತ್ತು ವಿ.ಟಿ ಮಾಗಡಿ ಅವರು ಪ್ರಧಾನ ಕಾರ್ಯದರ್ಶಿಯಾಗಿ ನೇಮಕವಾಗಿದ್ದಾರೆ. ಉಳಿದಂತೆ ಮಂಡಳಿಯಲ್ಲಿ 10 ಮಂದಿ ಸದಸ್ಯರಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

07 ಸೆಪ್ಟೆಂಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಪೂರ್ಣಿಮಾ ಗಂ. 23-39 **ನಕ್ಷತ್ರ:** ಶತಭಿಷ ಗಂ. 21-42 **ಯೋಗ:** ಸುಕರ್ಮಾ ಗಂ. 9-23 **ಕರಣ:** ವಿಷ್ಟಿ ಗಂ. 12-44 ಸಿಂಹ ಮಾಸದ 21 ನೇ ದಿನ. **ಮಳೆ ನಕ್ಷತ್ರ:** ಹುಬ್ಬಾ 3 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 06-00, **ಸೂರ್ಯೋದಯ:** 06-23 **ಸೂರ್ಯಾಸ್ತ:** 06-34, **ಮುಸ್ಲಿಂ ದಿನಾಂಕ:** 14 ರಬಿಉಲ್ಲಾವಲ್, **ದಿನ ವಿಶೇಷ:** ಸಂಪೂರ್ಣ ಚಂದ್ರಗ್ರಹಣ (ಭಾರತದಲ್ಲಿ ಗೋಚರಿಸುತ್ತದೆ) **ಅದೃಷ್ಟ ಸಂಖ್ಯೆ:** 2, 11

ಮೇಷ: ಕೆಲಸಕ್ಕಾಗಿ ಬೇರೆ ಸ್ಥಳದಲ್ಲಿ ವಾಸಿಸಬೇಕಾಗುವುದು. ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಒದಗಿಬರಲಿದೆ. ಯೋಗಾಭ್ಯಾಸ ಮನೋಲ್ಲಾಸವನ್ನು ಹೆಚ್ಚಿಸುತ್ತದೆ, ಚೈತನ್ಯವು ಮೂಡಿಬರಲಿದೆ.

ವೃಷಭ: ಮದುವೆಯ ವಿಷಯಕ್ಕೆ ಸಂಬಂಧಿಸಿದಂತೆ ತಾಯಿ ಮತ್ತು ಅಣ್ಣಂದಿರ ಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗುವಿರಿ. ಸಗಟು ವ್ಯಾಪಾರಿಗಳಿಗೆ ವ್ಯಾಪಾರ ಇರುವುದು. ದೀರ್ಘಕಾಲೀನ ಯೋಜನೆಗಳು ಫಲದಾಯಕವೆನಿಸಲಿವೆ.

ಮಿಥುನ: ತಾವು ಬಯಸಿದ ಕ್ಷೇತ್ರದಲ್ಲಿ ಹೊಸ ತಿರುವನ್ನು ಪಡೆಯುವಲ್ಲಿ ಯಶಸ್ವಿಯಾಗುವಿರಿ. ಶತ್ರು ಬಾಧೆ ಈ ದಿನದಿಂದ ಹಂತ ಹಂತವಾಗಿ ನಿವಾರಣೆ ಆಗಲಿದೆ. ಆರೋಗ್ಯದಲ್ಲಿ ವಾಯು ಸಂಬಂಧವಾಗಿ ತೊಂದರೆಗಳು ಕಾಣಿಸಿಕೊಳ್ಳಬಹುದು.

ಕರ್ಕಾಟಕ: ಸಾಲಗಳು ತೀರಿದ್ದರಿಂದ ಮನೆಯಲ್ಲಿ ನೆಮ್ಮದಿಯ ವಾತಾವರಣ ಇರಲಿದೆ. ನಿಮ್ಮ ಮುಂದಿನ ಹಾದಿ ಏನೆಂಬುದು ನಿಮಗೆ ಈದಿನ ಸ್ಪಷ್ಟವಾಗಿರಲಿ. ಕುಟುಂಬದ ಜವಾಬ್ದಾರಿ ವಹಿಸಿಕೊಳ್ಳಬೇಕಾಗುವುದು.

ಸಿಂಹ: ಉದ್ಯೋಗದಲ್ಲಿನ ಸಮಸ್ಯೆಯಿಂದಾಗಿ ಬದಲಾವಣೆಯ ಮನಸ್ಸು ಬರಲಿದೆ. ಬಹಳ ದಿನಗಳ ನಂತರ ಇಂದು ಹಣದ ಹರಿವು ನಿಧಾನವಾಗಿ ಅನುಭವಕ್ಕೆ ಬರಲಿದೆ. ದುರ್ಗಾ ದೇವಿಯನ್ನು ಆರಾಧಿಸಿ ಶುಭ ಪ್ರಾಪ್ತಿ.

ಕನ್ಯಾ: ಹೂಡಿಕೆ ವಿಚಾರದಲ್ಲಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಬಂದಿರುವ ಸಲಹೆ ಸರಿಯಾಗಿದೆ. ಈ ದಿನ ಕೊಟ್ಟ ಹಣ ಹಿಂದಿರುಗುವುದು ಕಷ್ಟಸಾಧ್ಯ. ಆದ್ದರಿಂದ ಯಾರಿಗೂ ಸಾಲ ಕೊಡದಿರುವುದು ಉತ್ತಮ.

ತುಲಾ: ನಿಮ್ಮ ಅತಿಯಾದ ಪರಿಶ್ರಮದ ದುಡಿಮೆ ದೃಷ್ಟಿದೋಷಕ್ಕೆ ಗುರಿಯಾಗುವುದು. ಕುಶಲಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯ. ನವ ವಿವಾಹಿತರಿಗೆ ಸಂತಾನ ಭಾಗ್ಯ ಲಭ್ಯವಾಗಲಿದೆ.

ವೃಶ್ಚಿಕ: ಒಂಟಿತನ ಹೋಗಲಾಡಿಸಿಕೊಳ್ಳಲು ಕೆಲಸಗಳತ್ತ ಮನಸ್ಸು ಹರಿಸುವಿರಿ. ಸಂಸಾರದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗುವುದು ಅನಿವಾರ್ಯವಾಗುತ್ತದೆ. ಕುಟುಂಬದಲ್ಲಿ ನೆಮ್ಮದಿ ಮೂಡುವುದು.

ಧನು: ನೀವು ತೆಗೆದುಕೊಂಡಿರುವ ನಿರ್ಧಾರ ಸರಿಯಾದುದೆಂದು ಈ ದಿನ ನಿಮಗೆ ಮನವರಿಕೆಯಾಗುವುದು. ಕೃಷಿಕರಿಗೆ ಹವಾಮಾನದ ವೈಪರೀತ್ಯದಂತಹ ಸಮಸ್ಯೆ ಎದುರಾಗಬಹುದು. ವಸ್ತ್ರಾಭರಣ ಖರೀದಿ ಯೋಗವಿದೆ.

ಮಕರ: ಕೆಲಸದ ಪ್ರದೇಶಗಳು ನಿಮ್ಮ ಅಭಿವೃದ್ಧಿಗೆ ಪೂರಕವಾಗಿರುತ್ತವೆ. ಕಬ್ಬಿಣ ಅಥವಾ ಗ್ಲಾಸ್‌ಗಳಿಂದ ಗಾಯಗಳಾಗುವ ಲಕ್ಷಣಗಳಿವೆ. ಗಮನವಿರಲಿ. ಕ್ರೀಡಾಪಟುಗಳಿಗೆ ಸಂತಸ ಸುದ್ದಿ ಕೇಳಿ ಬರಲಿದೆ.

ಕುಂಭ: ಹಾಲಿನ ಪದಾರ್ಥ ಮಾರಾಟಗಾರರಿಗೆ ಲಾಭವಾಗುವುದು. ಚರ್ಚೆ ಹಾಗೂ ವ್ಯಾಪಾರ ವ್ಯವಹಾರಗಳಲ್ಲಿ ಬಹಳ ಜಾಗರೂಕತೆಯನ್ನು ವಹಿಸಿರಿ. ಇಂದು ನಿಮ್ಮ ವಿರುದ್ಧವಾಗಿ ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುವು.

ಮೀನ: ವೈದ್ಯರ ತಪಾಸಣೆಯಿಂದ ಬಂದ ಫಲಿತಾಂಶ ಆತಂಕವನ್ನು ಸೃಷ್ಟಿ ಮಾಡಲಿದೆ. ಇನ್ನೊಬ್ಬರ ಅಭಿಪ್ರಾಯ ಪಡೆದು ಚಿಕಿತ್ಸೆ ತೆಗೆದುಕೊಳ್ಳಿ. ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿ ಮನಸ್ಸಿಗೆ ನಿರಾಳವಾಗುವುದು.

ಪದಬಂಧ 6157
ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಲಿಯುತ್ತಿರುವ ರಾಷ್ಟ್ರ ಪಕ್ಷಿ (3)
3.ದೊಡ್ಡ ಅಲೆ ಇಲ್ಲಿ ಕಾಣುತ್ತಿದೆ (3)
5.ಕುಂಬಾರ ಚಕ್ರವಿದು (3)
6.ತಾಟಕಿ ಮನೆಯ ವಾತಾಯನ! (3)
7.ಹಗ್ಗ ಅಥವಾ ಕುಣಿಕೆ (2)
8.ಬ್ಯಾಡಗಿ ಕೆಂಪು ಮೆಣಸಿನ ಕಾಯಿ ಖ್ಯಾತಿಯ ಜಿಲ್ಲೆ (3)
10.ಕನ್ನಡಿಗನ ಅಡ್ರೆಸ್ ಇದು! (3)
11.ಮಾತಿನ ಅಧಿದೇವತೆ ಸರಸ್ವತಿಯ ಇನ್ನೊಂದು ಹೆಸರು (3)
13.ಮುಸಲ್ಮಾನರ ದೇವತಾ ಪ್ರಾರ್ಥನೆ (3)
15.ಪ್ರಜಾಪತಿಯಲ್ಲಿರುವ ನಕಲು! (2)
16.ಸೀತಾಮಾತೆಯ ತಂದೆ (3)
17.ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿ ಮುಖ್ಯ ಸಲಹೆಗಾರನಾಗಿದ್ದ ಅರ್ಥಶಾಸ್ತ್ರಜ್ಞ (3)
18.ಈತ ಚರ್ಮದ ಕೆಲಸಗಾರ (3)
19.ಮಧುರವಾಗಿರುವ ತುಟಿ (3)

ಮೇಲಿಂದ ಕೆಳಕ್ಕೆ
2.ತೆನಾಲಿರಾಮನಿಗಿದ್ದ ಬಿರುದು (5)
3.ಕಮರಿಯಲ್ಲಿರುವ ಆನೆ (2)
4.ಜೈಮಿನಿ ಭಾರತವನ್ನು ರಚಿಸಿದ ಕವಿ (3)
5.ವೇದಾಂತದಲ್ಲಿನ ಆಧ್ಯಾತ್ಮ ತತ್ವಗಳನ್ನು ಅನುಸರಿಸುವವನು ತಿರುಗಿದ್ದಾನಲ್ಲಾ ?(3)
8.ಹಾಸನಾಂಬೆ ದೇವತೆಯಿರುವ ಜಿಲ್ಲೆ (3)
9.ರೀತಿಯೊಡಗೂಡುವ ಜೋಡು ನುಡಿ (3)
12.ಕೆಂಗಲ್ ಹನುಮಂತಯ್ಯನವರು ಕಟ್ಟಿಸಿದ ಭವ್ಯವಾದ ಸರ್ಕಾರಿ ಸೌಧ (5)
14.ಕೆಂಪು ಬಣ್ಣದ ನವರತ್ನ (3)
15.ಪಂಚರು ತೋರಿಸಿದ ಜಗತ್ತು! (3)
17.ಚಾರಣ ಕೈಗೊಂಡಿರುವ ಆಳು! (2)



6156ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹಳವಂಡ 3.ಉಪೋದ್ಘಾತ 5.ತರಾತುರಿ 7.ದುಮ್ಮಾನ 9.ಪಶಾ 10.ಮತ್ಸರ 11.ದಡಿ 12.ನಮಾವಿ 13.ಅಧೋಗತಿ 16.ರವಿವಾರ 17.ಗಡಿಯಾರ

ಮೇಲಿಂದ ಕೆಳಕ್ಕೆ: 1.ಹರಿತ 2.ಡಬರಿ 3.ಉಮೇದುವಾರ 4.ತಟ್ಟಿ 6.ರಾಜಶಾಸನ 8.ನರೆದಲೆಗ 10.ಮನೋವಿಕಾರ 13.ಅಣುಗ 14.ತಿಮಿರ 15.ಸ್ವರ

ಸುಡೊಕು 6541

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2					8		7
4		8		2				
	9					6		4
	5		7				6	
				9			5	
2		3			4		7	
7								6
	1		2		9		4	
6		2				9	8	5

6540 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಬ್ಯಾಲಟ್ ಎಂದರೆ ಬಿಜೆಪಿಗೆ ಭಯ’

ಮತಪತ್ರ ಬಳಸುವ ದೇಶಗಳು ಶಿಲಾಯುಗಕ್ಕೆ ಹೋಗಿವೆಯೇ: ಸಿದ್ದರಾಮಯ್ಯ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ಪ್ರಪಂಚದ ಅನೇಕ ರಾಷ್ಟ್ರಗಳು ತಾಂತ್ರಿಕವಾಗಿ ಬಹಳಷ್ಟು ಮುಂದುವರಿದಿದ್ದರೂ ಮತಪತ್ರಗಳ ಮೂಲಕ ಚುನಾವಣೆ ನಡೆಸುವ ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ. ಹಾಗಾದರೆ ಆ ದೇಶಗಳು ಮರಳಿ ಶಿಲಾಯುಗಕ್ಕೆ ಹೋಗಿವೆಯೇ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

‘ಮತಪತ್ರಗಳ ಮೂಲಕ ಚುನಾವಣೆ ನಡೆಸುವುದರಿಂದ ಮತ್ತೆ ಶಿಲಾಯುಗಕ್ಕೆ ಹೋದಂತಾಗುತ್ತದೆ’ ಎಂದು ಬಿಜೆಪಿಯವರು ಮಾಡಿದ ಆರೋಪಕ್ಕೆ ಇಲ್ಲಿನ ಬಸಾಪುರ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರಿಗೆ ಈ ರೀತಿ ಪ್ರತಿಕ್ರಿಯಿಸಿದರು.

‘ಬ್ಯಾಲಟ್ ಪೇಪರ್ ಮೂಲಕ ಚುನಾವಣೆ ಎಂದರೆ ಬಿಜೆಪಿಯವರಿಗೆ ಭಯ ಇದ್ದಂತಿದೆ. ಇವಿಎಂ ಮೂಲಕ ನಡೆದ ಚುನಾವಣೆಯಲ್ಲಿ ಅನ್ಯಾಯವಾಗಿದೆ ಎಂಬುದು ನಮ್ಮ ಅನುಭವಕ್ಕೆ ಬಂದಿದೆ. ಈ ಕಾರಣಕ್ಕಾಗಿಯೇ ಹೋರಾಟಕ್ಕೆ ಮುಂದಾಗಿರುವ ರಾಹುಲ್ ಗಾಂಧಿ ಅವರು ಮಹದೇವಪುರದಲ್ಲಿ ಕಾಂಗ್ರೆಸ್ ಸೋತಿದ್ದು ಹೇಗೆ ಎಂಬುದನ್ನೂ ವಿವರಿಸಿದ್ದಾರೆ’ ಎಂದರು.

ಹಿಂದೆ ತಾವು ಸ್ಪರ್ಧಿಸಿದ್ದ ಕೊಪ್ಪಳ ಲೋಕಸಭೆ ಚುನಾವಣೆ ಫಲಿತಾಂಶವನ್ನು ಪ್ರಸ್ತಾಪಿಸಿದ ಸಿದ್ದರಾಮಯ್ಯ, ‘ಕೊಪ್ಪಳದಲ್ಲಿ ಅನ್ಯಾಯವಾಗಿ ಸೋತಿದ್ದೇನೆ ಎಂದಿದ್ದು ಮತ ಎಣಿಕೆ ಸಂದರ್ಭದಲ್ಲಿ ಮತ ಎಣಿಕೆ ಏಜೆಂಟರು ಸರಿಯಾಗಿ ಕೆಲಸ ಮಾಡಿರಲಿಲ್ಲ ಎಂಬ ಕಾರಣಕ್ಕೆ. ಆಗ ನ್ಯಾಯಾಲಯದ ಮೊರೆ ಹೋಗಿದ್ದೆ. ಆದರೆ, ಮತಪತ್ರಗಳಿಂದ ಸೋಲಾಯಿತು ಎಂದು ಹೇಳಿಲ್ಲ’ ಎಂದರು.

‘ಕೊಪ್ಪಳ ಬಳಿ ಬಲ್ದೋಟಾ ಕಾರ್ಖಾನೆ ಸ್ಥಾಪನೆಗೆ ಸಂಬಂಧಿಸಿದಂತೆ ಜನರ ವಿರೋಧವಿದ್ದು, ಅವರ ಆಶಯಕ್ಕೆ ಅನುಗುಣವಾಗಿ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಈ ಬಗೆಗಿನ ವಾಸ್ತವತೆಯನ್ನು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲರು ಸದನದಲ್ಲಿ ವಿವರಿಸಿದ್ದಾರೆ. ಕೇಂದ್ರ ಸರ್ಕಾರದ ಪರಿಸರ ಇಲಾಖೆಯೇ ಅನುಮತಿ ನೀಡಿದ್ದು, ನೀವು ಕೇಂದ್ರದವರನ್ನೂ ಪ್ರಶ್ನಿಸಬೇಕು’ ಎಂದು ಹೇಳಿದರು.

> ಬ್ಯಾಲಟ್ ಪೇಪರ್‌ಗಳೆಂದರೆ ಬಿಜೆಪಿಗೆ ಭಯ. ಬ್ಯಾಲಟ್ ಬುಲೆಟ್‌ಗಿಂತಲೂ ಶಕ್ತಿಶಾಲಿಯಾಗಿರುವುದರಿಂದಲೇ ಬಿಜೆಪಿಯವರಿಗೆ ಚಿಂತೆ ಕಾಡುತ್ತಿದೆ
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

‘ತುಂಗಭದ್ರಾ: ಗೇಟ್ ದುರಸ್ತಿ ಮುಖ್ಯ’

‘ಮಳೆ ಪರಿಸ್ಥಿತಿ ನೋಡಿಕೊಂಡು ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್‌ಗಳ ದುರಸ್ತಿ ನಡೆಸಬೇಕಿದೆ. ಜಲಾಶಯದಲ್ಲಿ ಸಾಕಷ್ಟು ಹೂಳು ಸಹ ತುಂಬಿದ್ದು, ಇತರೆ ದುರಸ್ತಿ ಕೆಲಸಗಳನ್ನೂ ನಿರ್ವಹಿಸಬೇಕಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

‘19ನೇ ಗೇಟ್ ಕಿತ್ತು ಹೋದ ನಂತರ ಸ್ಟಾಪ್‌ಲಾಗ್ ಗೇಟ್ ಕೂಡಿಸುವ ಕೆಲಸ ಯಶಸ್ವಿಯಾಗಿದ್ದರಿಂದ ಎರಡು ಬೆಳೆಗಳಿಗೆ ನೀರು ಹರಿಸಲು ಸಾಧ್ಯವಾಯಿತು. ಇದೇ ರೀತಿ ಇತರೆ ಕ್ರಸ್ಟ್‌ಗೇಟ್‌ಗಳೂ ಕಿತ್ತುಹೋದರೆ ಮಾಡುವುದೇನು? ಬೆಳೆಯೂ ಹಾಳಾಗುತ್ತದೆ. ರೈತರೂ ತೊಂದರೆ ಅನುಭವಿಸಬೇಕಾಗುತ್ತದೆ. ಈ ಕಾರಣಕ್ಕೆ ಎರಡನೇ ಬೆಳೆಗೂ ನೀರು ಕೊಟ್ಟರೆ ಒಂದು ಬೆಳೆ ಮಾತ್ರ ನಷ್ಟವಾಗಬಹುದು. ಹಾಗಾಗಿ ಎಲ್ಲ ಗೇಟ್‌ಗಳ ಸುರಕ್ಷತೆ ಕಾರಣಕ್ಕೆ ದುರಸ್ತಿ ನಡೆಸುವುದಕ್ಕೆ ಆದ್ಯತೆ ನೀಡಬೇಕು ಎಂಬುದು ಸರ್ಕಾರದ ದೂರದೃಷ್ಟಿಯಾಗಿದೆ’ ಎಂದರು.

ಚಿಟಿಕೆ ಸುದ್ದಿ

‘ವೈದ್ಯಕೀಯ ಕಾಲೇಜು’

ವಿಜಯಪುರ: ‘ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ವಿಜಯಪುರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜು ನಿರ್ಮಿಸಲು ನಿರ್ಧರಿಸಲಾಗಿದೆ. ಸರ್ಕಾರಿ ದರದಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗುವುದು. ನೀಟ್ ಪರೀಕ್ಷೆಯಲ್ಲಿ ಆಯ್ಕೆಯಾದವರಿಗೆ ಮಾತ್ರ ವೈದ್ಯಕೀಯ ಸೀಟು ಸಿಗಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

‘ರಾಜ್ಯದ ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಸ್ಥಾಪಿಸುವ ಗುರಿಯಿದೆ. ಹಂತಹಂತವಾಗಿ ಈ ಕಾರ್ಯ ನೆರವೇರಲಿದೆ. 2025-26 ನೇ ಸಾಲಿನ ಬಜೆಟ್‌ನಲ್ಲಿ ಬಾಗಲಕೋಟೆ, ಮಂಗಳೂರು, ಕೋಲಾರ ನಂತರ ವಿಜಯಪುರದಲ್ಲಿಯೂ ವೈದ್ಯಕೀಯ ಕಾಲೇಜು ಸ್ಥಾಪಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ’ ಎಂದರು.

ಇದಕ್ಕೂ ಮುನ್ನ ವಿವಿಧ ಸಂಘಸಂಸ್ಥೆಗಳ ಪ್ರಮುಖರು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರನ್ನು ಭೇಟಿಯಾಗಿ, ‘ಸರ್ಕಾರವೇ ವೈದ್ಯಕೀಯ ಕಾಲೇಜು ನಿರ್ಮಿಸಲು ಆದ್ಯತೆ ನೀಡಬೇಕು’ ಎಂದು ಮನವಿಪತ್ರ ಸಲ್ಲಿಸಿದರು.

ದಸರಾ ‘ಗೋಲ್ಡ್ ಕಾರ್ಡ್’ ಬಿಡುಗಡೆ

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿ ಹಾಗೂ ಪಂಜಿನ ಕವಾಯತು ಕಾರ್ಯಕ್ರಮಗಳ ವೀಕ್ಷಣೆಗೆ ಟಿಕೆಟ್ ಹಾಗೂ ‘ಗೋಲ್ಡ್ ಕಾರ್ಡ್’ಗಳ ಮಾರಾಟಕ್ಕೆ ಜಿಲ್ಲಾಡಳಿತ ಚಾಲನೆ ನೀಡಿದೆ.

https://mysoredasara.gov.in/ ಅಧಿಕೃತ ಜಾಲತಾಣದಲ್ಲಿ ಶನಿವಾರ ಮಧ್ಯಾಹ್ನ 3ರಿಂದಲೇ ಆನ್‌ಲೈನ್‌ನಲ್ಲಿ ಖರೀದಿಗೆ ಲಭ್ಯ ಇವೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಬಾರಿಯ ದಸರಾ ಸೆ.22ರಿಂದ ಅ.2ರವರೆಗೆ ನಡೆಯಲಿದೆ.

ಗೋಲ್ಡ್ ಕಾರ್ಡ್ ಖರೀದಿಸಿದವರಿಗೆ (ಒಂದಕ್ಕೆ ₹ 6,500) ಚಾಮರಾಜೇಂದ್ರ ಮೃಗಾಲಯ, ಚಾಮುಂಡಿಬೆಟ್ಟ (ವಿಶೇಷ ದರ್ಶನಕ್ಕೆ), ಮೈಸೂರು ಅರಮನೆಗೆ ಒಂದು ಬಾರಿ ಉಚಿತವಾಗಿ ಪ್ರವೇಶ ದೊರೆಯಲಿದೆ. ಡ್ರೋನ್ ಶೋ, ಜಂಬೂಸವಾರಿ ಹಾಗೂ ಪಂಜಿನ ಕವಾಯತು ವೀಕ್ಷಣೆಗೆ ಪ್ರತ್ಯೇಕವಾಗಿ ಆಸನಗಳನ್ನು ವ್ಯವಸ್ಥೆ ಮಾಡಲಾಗುವುದು. ₹3,500ರ ಟಿಕೆಟ್‌ಗೆ ಜಂಬೂಸವಾರಿಗೆ ಹಾಗೂ ₹ 1,500ರ ಟಿಕೆಟ್‌ಗೆ ಪಂಜಿನ ಕವಾಯತುಗೆ ಪ್ರವೇಶ ನೀಡಲಾಗುವುದು ಎಂದು ಜಿಲ್ಲಾಡಳಿತ ತಿಳಿಸಿದೆ.

ನೀರಾಟ

ಪ್ರಜಾವಾಣಿ ಚಿತ್ರ
ಫಕ್ರುದ್ದೀನ್ ಎಚ್.

ಮಳೆ ಕ್ಷೀಣವಾಗಿ ಸೂರ್ಯನ ಕಿರಣ ಪ್ರಖರವಾಗುತ್ತಿದೆ. ಛತ್ರಿ ಹಿಡಿದು ಕಡಲಿಗಿಳಿದ ಮಹಿಳೆಯರಿಬ್ಬರು ಮಗುವಿನೊಂದಿಗೆ ನೀರಾಟವಾಡಿದ ದೃಶ್ಯ ಮಂಗಳೂರಿನ ಚಿತ್ರಾಪುರದ ಕಡಲತೀರದಲ್ಲಿ ಕಂಡು ಬಂತು

‘ಪರಿಶಿಷ್ಟರ ಮೀಸಲು ಹೆಚ್ಚಿಸುವಿರಾ?’

ಸರ್ಕಾರಕ್ಕೆ ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಳ ಮೀಸಲಾತಿ ಹಂಚಿಕೆಯಲ್ಲಿ ತಳ ಸಮುದಾಯಗಳಿಗೆ ಆಗಿರುವ ಅನ್ಯಾಯ ಸರಿಪಡಿಸಲು ರಾಜ್ಯ ಸರ್ಕಾರ ಪರಿಶಿಷ್ಟರಿಗೆ ಇರುವ ಶೇ 17ರಷ್ಟು ಮೀಸಲಾತಿಯನ್ನು ಶೇ 18ಕ್ಕೆ ಹೆಚ್ಚಿಸಿ, ನ್ಯಾಯಕೊಡುವ ಪ್ರಯತ್ನ ಮಾಡುತ್ತದೆಯೇ’ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಒಳ ಮೀಸಲಾತಿಯಲ್ಲೂ ರಾಜ್ಯ ಸರ್ಕಾರ ರಾಜಕೀಯ ಮಾಡುತ್ತಿದೆ. ಪರಿಶಿಷ್ಟರ ಮಧ್ಯೆಯೇ ಒಳಜಗಳ ಸೃಷ್ಟಿಸಿದೆ. ರಾಜಕೀಯ ಪಂಚಾಯಿತಿ ಮೂಲಕ 6-6-5 ಹಂಚಿಕೆ ಸೂತ್ರ ಸಿದ್ಧಪಡಿಸಿದೆ. ನ್ಯಾಯಮೂರ್ತಿ ನಾಗಮೋಹನದಾಸ್, ನ್ಯಾಯಮೂರ್ತಿ ಸದಾಶಿವ ಆಯೋಗ ಹಾಗೂ ಮಾಧುಸ್ವಾಮಿ ಅವರ ವರದಿಗಳನ್ನು ಕಡೆಗಣಿಸಿ, ರಾಜಕೀಯ ನಿರ್ಣಯದ ಮೂಲಕ ಮೀಸಲಾತಿ ನಿಗದಿ ಮಾಡುವುದಾದರೆ ಆಯೋಗಗಳನ್ನು ಏಕೆ ನೇಮಿಸಬೇಕಿತ್ತು’ ಎಂದು ಅವರು ಕೇಳಿದರು.

‘ಹಿಂದೆ ತಮ್ಮ ನೇತೃತ್ವದ ಬಿಜೆಪಿ ಅಧಿಕಾರದಲ್ಲಿ ಇದ್ದ ಅವಧಿಯಲ್ಲಿ ಪರಿಶಿಷ್ಟರ ಮೀಸಲಾತಿ ಪ್ರಮಾಣವನ್ನು ಶೇ 17ಕ್ಕೆ ಹೆಚ್ಚಿಸಿ, ಒಳ ಮೀಸಲು ಘೋಷಣೆ ಮಾಡಿದ್ದೆವು. ಆಗ, ಇದೇ ಕಾಂಗ್ರೆಸ್ ನಾಯಕರು ಟೀಕೆ ಮಾಡಿದ್ದರು. ನಮ್ಮ ನಿರ್ಧಾರವನ್ನು ಈಗ ಅವರೇ ಒಪ್ಪಿಕೊಂಡಂತೆ ಆಗಿದೆ. ಅದಕ್ಕಾಗಿ ಅವರು ಕ್ಷಮೆ ಕೇಳಬೇಕು’ ಎಂದು ಒತ್ತಾಯಿಸಿದರು.

‘ಒಂದೆಡೆ ನೆಲೆ ನಿಂತು ಬದುಕನ್ನೇ ಕಟ್ಟಿಕೊಳ್ಳದ ಅಲೆಮಾರಿಗಳಿಗೆ ಯಾವುದೇ ಮೀಸಲಾತಿ ಕೊಟ್ಟಿಲ್ಲ. ಆದಿ ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಸಮುದಾಯವನ್ನು ಯಾವ ಗುಂಪಿಗೂ ಸೇರಿಸದೆ ಅತಂತ್ರ ಮಾಡಲಾಗಿದೆ. ಲಂಬಾಣಿ, ಭೋವಿ ಸಮುದಾಯಕ್ಕೆ ಶೇ 0.5 ಹೆಚ್ಚಿಸಿ, ಆ ಗುಂಪಿಗೆ 59 ಜಾತಿಗಳನ್ನು ಸೇರಿಸಿದ್ದಾರೆ. ಸರ್ಕಾರದ ತೀರ್ಮಾನವು ಸುಪ್ರೀಂಕೋರ್ಟ್ ಸೂಚನೆ, ಸಾಮಾಜಿಕ ನ್ಯಾಯಕ್ಕೂ ವಿರುದ್ಧವಾಗಿದೆ. ಕೇವಲ ರಾಜಕೀಯ ಲಾಭಕ್ಕಾಗಿ, ಮತಬ್ಯಾಂಕ್ ಸುರಕ್ಷತೆಗಾಗಿ ಮೀಸಲು ವಿಷಯ ಬಳಸಿಕೊಂಡಿದ್ದಾರೆ’ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಸಂಸದ ಗೋವಿಂದ ಕಾರಜೋಳ, ಮಾಜಿ ಕೇಂದ್ರ ಸಚಿವ ಎ. ನಾರಾಯಣಸ್ವಾಮಿ, ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಉಪಸ್ಥಿತರಿದ್ದರು.

ಸೆ.10ರಿಂದ ಬಿಜೆಪಿ ಹೋರಾಟ

ರಾಜ್ಯ ಸರ್ಕಾರದ ಒಳಮೀಸಲಾತಿ ನೀತಿಯಿಂದ ಪರಿಶಿಷ್ಟರ ಎಲ್ಲ ಒಳಪಂಗಡಗಳಿಗೂ ಅನ್ಯಾಯವಾಗಿದೆ. ಇದರ ವಿರುದ್ಧ ಸೆ.10ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಹೋರಾಟ ಹಮ್ಮಿಕೊಳ್ಳಲಾಗುತ್ತಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ಹೇಳಿದರು. ‘ಅಲೆಮಾರಿ ಸಮುದಾಯ ಹಾಗೂ ಇತರೆ ಜಾತಿಗಳಿಗೆ ಆಗಿರುವ ಅನ್ಯಾಯ ಸರಿಪಡಿಸಬೇಕು. ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಸುತ್ತೇವೆ’ ಎಂದರು.

ಕರ್ತವ್ಯಲೋಪ: ಸ್ತ್ರೀರೋಗ ತಜ್ಞೆ ಅಮಾನತು

ಬೀದರ್: ಕರ್ತವ್ಯಲೋಪ ಆರೋಪದಡಿ ಜಿಲ್ಲೆಯ ಬಸವಕಲ್ಯಾಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಇರ್ಷಾನಾ ಅವರನ್ನು ಅಮಾನತುಗೊಳಿಸಲಾಗಿದೆ. ‘ಇತ್ತೀಚೆಗೆ ಆಸ್ಪತ್ರೆಯಲ್ಲಿ ಮಗು ಜನನದ ನಂತರ ತಾಯಿ ತೀವ್ರ ರಕ್ತಸ್ರಾವದಿಂದ ಮೃತಪಟ್ಟರು. ಬಾಣಂತಿಗೆ ಸೂಕ್ತ ಚಿಕಿತ್ಸೆ ನೀಡದೇ ನಿರ್ಲಕ್ಷ್ಯ ತೋರಿದ್ದಾರೆ ಎಂಬ ಆರೋಪ ಮೇಲ್ನೋಟಕ್ಕೆ ಸಾಬೀತಾದ ಕಾರಣ ಅಮಾನತುಗೊಳಿಸಲಾಗಿದೆ’ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಶಿಸ್ತು ಪ್ರಾಧಿಕಾರ ಮತ್ತು ಆಯುಕ್ತ ಶಿವಕುಮಾರ ಕೆ.ಬಿ. ಆದೇಶದಲ್ಲಿ ತಿಳಿಸಿದ್ದಾರೆ.

‘ಇರ್ಷಾನಾ ಅವರ ಲೀನ್ ಅನ್ನು ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲಸಂಗಮ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಖಾಲಿಯಿರುವ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಹುದ್ದೆಗೆ ಸ್ಥಳಾಂತರಿಸಲಾಗಿದೆ. ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೇ ಕೇಂದ್ರ ಸ್ಥಾನ ಬಿಡುವಂತಿಲ್ಲ’ ಎಂದು ತಿಳಿಸಿದ್ದಾರೆ.

ನಾಡಹಬ್ಬ ದಸರಾ ಉದ್ಘಾಟನೆಗೆ ಲೇಖಕಿ ಬಾನು ಮುಷ್ತಾಕ್ ಆಯ್ಕೆ

ಪರ– ವಿರೋಧ: ಪಾದಯಾತ್ರೆ 9ರಂದು

ಪ್ರಜಾವಾಣಿ ವಾರ್ತೆ

ಮೈಸೂರು: ‘ನಮ್ಮ ಧರ್ಮ, ಸಂಸ್ಕೃತಿಯನ್ನು ಟೀಕಿಸಿರುವ ಬಾನು ಮುಷ್ತಾಕ್ ಅವರಿಗೆ ದಸರಾ ಉದ್ಘಾಟಿಸಲು ಅವಕಾಶ ನೀಡಿದ್ದನ್ನು ವಿರೋಧಿಸಿ ಹಿಂದೂ ಜಾಗರಣ ವೇದಿಕೆಯಿಂದ ಸೆ.9ರಂದು ಬೆಳಿಗ್ಗೆ 7.30ಕ್ಕೆ ಇಲ್ಲಿನ ಕುರುಬಾರಹಳ್ಳಿಯ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಚಾಮುಂಡಿ-ಬೆಟ್ಟಕ್ಕೆ ಜನಜಾಗೃತಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ’ ಎಂದು ವೇದಿಕೆಯ ಪ್ರಾಂತೀಯ ಸಂಚಾಲಕ ಕೇಶವಮೂರ್ತಿ ತಿಳಿಸಿದರು.

‘ಸಾವಿರ ಮಂದಿ ಪಾಲ್ಗೊಳ್ಳುವರು. ಬೆಟ್ಟದ ಮೇಲೆ ಪ್ರತಿಭಟನಾ ಸಭೆಯೂ ನಡೆಯಲಿದೆ’ ಎಂದು ಅವರು ಶನಿವಾರ ಹೇಳಿದರು.

‘ಭುವನೇಶ್ವರಿಯ ಅರಿಸಿನ, ಕುಂಕುಮದ ಬಗ್ಗೆ ಬಾನು ಅವಹೇಳನಕಾರಿ ಮಾತನ್ನಾಡಿದ್ದಾರೆ. ಅವರ ಆಯ್ಕೆ ವಿರುದ್ಧ ಸಂಘ ಸಂಸ್ಥೆಗಳು,ಧಾರ್ಮಿಕ ಮುಖಂಡರು ಮಾತನಾಡಿದ್ದರೂ ಸರ್ಕಾರ ನಿರ್ಧಾರದಿಂದ ಹಿಂದೆ ಸರಿಯದಿರುವುದು ಸರಿಯಲ್ಲ’ ಎಂದರು.

ದಲಿತ ಮಹಾಸಭಾದಿಂದ ‘ಚಾಮುಂಡಿ ನಡಿಗೆ’

ಮೈಸೂರು: ‘ಚಾಮುಂಡಿ ತಾಯಿಯನ್ನು ರಾಜಕೀಯಗೊಳಿಸದಿರಿ ಹಾಗೂ ಕೋಮುಗಲಭೆ ಸೃಷ್ಟಿಸದಿರಿ’ ಎಂಬ ಘೋಷವಾಕ್ಯದಡಿ ಇದೇ 9ರಂದು ಬೆಳಿಗ್ಗೆ 7.30ಕ್ಕೆ ಕುರುಬಾರಹಳ್ಳಿ ವೃತ್ತದಿಂದ ಚಾಮುಂಡಿ ಬೆಟ್ಟಕ್ಕೆ ‘ಚಾಮುಂಡಿ ನಡಿಗೆ’ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಮಹಾಸಭಾ ತಿಳಿಸಿದೆ. ಇದಕ್ಕೆ ಅನುಮತಿ ನೀಡುವಂತೆ ದಲಿತ ಮಹಾಸಭಾ ಅಧ್ಯಕ್ಷ ಎಸ್.ರಾಜೇಶ್ ಪೊಲೀಸ್ ಆಯಕ್ತರ ಕಚೇರಿಗೆ ಮನವಿ ಸಲ್ಲಿಸಿದ್ದಾರೆ.

‘ಪ್ರೊ.ಕೆ.ಎಸ್.ನಿಸಾರ್ ಅಹಮದ್ ಹಾಗೂ ಜೈನ ಧರ್ಮದ ಪ್ರೊ.ಹಂ.ಪ. ನಾಗರಾಜಯ್ಯ ಅವರನ್ನು ಆಯ್ಕೆ ಮಾಡಿದ್ದಾಗ ಬಿಜೆಪಿ ಮತ್ತು ಹಿಂದೂ ಸಂಘಟನೆಗಳು ಚಕಾರ ಎತ್ತಿರಲಿಲ್ಲ. ಈ ಬಾರಿ ಬಾನು ಅವರಿಗೆ ಆಹ್ವಾನ ನೀಡಿರುವುದನ್ನು ಕೆಲ ಸಂಘಟನೆಗಳು ವಿರೋಧಿಸಿ ಕೋಮು ಗಲಭೆಗೆ ಪ್ರಯತ್ನಿಸುತ್ತಿವೆ’ ಎಂದಿದ್ದಾರೆ.

ಬಾನುಗೆ ಆಹ್ವಾನ: ಪಿಐಎಲ್

ಬೆಂಗಳೂರು: ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಮಾಜಿ ಸಂಸದ ಪ್ರತಾಪ್ ಸಿಂಹ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ.

‘ಬಾನು ಅವರಿಗೆ ನೀಡಿರುವ ಆಹ್ವಾನವನ್ನು ಹಿಂಪಡೆಯಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿರುವ ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

ಅರ್ಜಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿಯನ್ನು ಪ್ರತಿವಾದಿಯನ್ನಾಗಿ ಮಾಡಲಾಗಿದೆ.

ರಾಜಕೀಯಪ್ರೇರಿತ ವಿರೋಧ’

ವಿಜಯಪುರ: ‘ಬಾನು ಮುಷ್ತಾಕ್ ಅವರ ಆಯ್ಕೆಯನ್ನು ವಿರೋಧಿಸಿ ಪ್ರತಾಪ್ ಸಿಂಹ ಹೈಕೋರ್ಟ್ ಮೆಟ್ಟಿಲೇರಿದ್ದರೆ, ಈ ವಿಷಯ ಅಲ್ಲಿಯೇ ತೀರ್ಮಾನವಾಗಲಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

‘ಈ ಹಿಂದೆ ಸಾಹಿತಿ ನಿಸಾರ್ ಅಹಮದ್ ಅವರು ದಸರಾ ಉದ್ಘಾಟಿಸಿದಾಗ, ಯಾರೂ ವಿರೋಧಿಸಲಿಲ್ಲ. ಟಿಪ್ಪು ಸುಲ್ತಾನ್, ಮಿರ್ಜಾ ಇಸ್ಮಾಯಿಲ್ ಈ ಹಿಂದೆ ದಸರಾ ಮೆರವಣಿಗೆ ಮಾಡಿದಾಗ ವಿರೋಧ ಇರಲಿಲ್ಲ. ಬಿಜೆಪಿಯು ರಾಜಕೀಯ ದುರುದ್ದೇಶದಿಂದ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸುವುದನ್ನು ವಿರೋಧಿಸುತ್ತಿದೆ. ಇದಕ್ಕೆ ಸರ್ಕಾರವು ರಾಜಕೀಯವಾಗಿಯೇ ಪ್ರತ್ಯುತ್ತರ ನೀಡಲಿದೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಆಯ್ಕೆ ದಾಖಲೆಗೆ ನಾಳೆ ಕೊನೇ ದಿನ

ನೀಟ್, ಸಿಇಟಿ: ಎರಡು ಮತ್ತು ಮೂರನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಎರಡನೇ ಮುಂದುವರಿದ ಸುತ್ತು ಹಾಗೂ ಎಂಜಿನಿಯರಿಂಗ್ ಸೇರಿದಂತೆ ಇತರೆ ವೃತ್ತಿ ಶಿಕ್ಷಣ ಕೋರ್ಸ್‌ಗಳ ಮೂರನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆರಂಭವಾಗಿದೆ. ಖಾತ್ರಿ ಠೇವಣಿ ಪಾವತಿಸಿ, ಆಯ್ಕೆಗಳನ್ನು ಬದಲು ಮಾಡಿಕೊಳ್ಳಲು ಹಾಗೂ ಹೊಸದಾಗಿ ಸೇರಿಸಲು ಸೆ.8ರವರೆಗೆ ಅವಕಾಶ ನೀಡಲಾಗಿದೆ.

ಸೀಟು ಲಭ್ಯತಾ ಪಟ್ಟಿಗೆ ಹೊಸದಾಗಿ ಬೆಳಗಾವಿಯ ಜೆಎನ್‌ಎಂಸಿ ಕಾಲೇಜಿನ 12 ವೈದ್ಯಕೀಯ ಸೀಟು ಹಾಗೂ ಮೈಸೂರಿನ ಫರೂಕಿ ದಂತ ವೈದ್ಯಕೀಯ ಕಾಲೇಜಿನ 40 ಸೀಟು ಹಾಗೂ ಬಿಜಿಎಸ್ ಗ್ಲೋಬಲ್ ದಂತ ವೈದ್ಯಕೀಯ ಕಾಲೇಜಿನ 50 ಸೀಟುಗಳು ಸೇರ್ಪಡೆಯಾಗಿವೆ. ಆಸಕ್ತರು ಬದಲಾವಣೆ ವೇಳೆ ಈ ಸೀಟುಗಳನ್ನು ಆಯ್ಕೆ ಮಾಡಿಕೊಳ್ಳ-ಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಎಂಟು ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿಯಾಗಿ ಸೇರ್ಪಡೆ ಆಗಿರುವ 400 ವೈದ್ಯಕೀಯ ಸೀಟುಗಳನ್ನು ಈ ಸುತ್ತಿಗೆ ಪರಿಗಣಿಸಲಾಗುತ್ತದೆ. ಅಲ್ಲದೆ, ಈ ಸರ್ಕಾರಿ ಕಾಲೇಜುಗಳಲ್ಲಿ ತಲಾ ಒಂದು ಸೀಟಿಗೆ ₹25 ಲಕ್ಷದಂತೆ ಎನ್‌ಆರ್‌ಐ ಸೀಟುಗಳನ್ನು ಸರ್ಕಾರ ಕೊಟ್ಟಿದ್ದು, ಅರ್ಹ ಎನ್‌ಆರ್‌ಐ ಅಭ್ಯರ್ಥಿಗಳು ಹೊಸದಾಗಿ ಸದರಿ ಕಾಲೇಜುಗಳ ಸೀಟುಗಳಿಗೆ ಆಯ್ಕೆಗಳನ್ನು ನಮೂದಿಸಬಹುದು. ಎನ್‌ಆರ್‌ಐ ಅಲ್ಲದ ಅಭ್ಯರ್ಥಿಗಳು ಕೂಡ ಈ ಕಾಲೇಜುಗಳಲ್ಲಿ 'ಕ್ಯೂ' ಸೀಟುಗಳಿಗೆ ಆಯ್ಕೆಗಳನ್ನು ದಾಖಲಿಸಬಹುದು. ಭರ್ತಿಯಾಗದೆ ಉಳಿಯುವ ಎನ್‌ಆರ್‌ಐ ಸೀಟುಗಳನ್ನು 'ಕ್ಯೂ' ಸೀಟುಗಳನ್ನಾಗಿ ಪರಿವರ್ತಿಸಿ, ಹಂಚಿಕೆ ಮಾಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಸಿಇಟಿ ಕೋರ್ಸ್‌ಗಳ ಪ್ರವೇಶಕ್ಕೆ ಮೂರನೇ ಸುತ್ತಿನಲ್ಲಿ ಭಾಗವಹಿಸುವ ಎಲ್ಲ ವರ್ಗದ ಅರ್ಹ ಅಭ್ಯರ್ಥಿಗಳು ₹10 ಸಾವಿರ ಖಾತ್ರಿ ಠೇವಣಿ ಪಾವತಿಸಬೇಕು. ಬಳಿಕ ಆಯ್ಕೆ, ಹೊಸದಾಗಿಯೂ ಕೋರ್ಸ್‌ಗಳನ್ನು ದಾಖಲಿಸಲು ಅವಕಾಶ ಇರುತ್ತದೆ. ಮೊದಲ ಮತ್ತು ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆ ಯಾಗದವರು, 2ನೇ ಸುತ್ತಿನಲ್ಲಿ ಆಯ್ಕೆ-1 ಅಥವಾ ಆಯ್ಕೆ-2 ಆಯ್ಕೆ ಮಾಡಿ ಶುಲ್ಕ ಪಾವತಿ ಮಾಡದವರು, ಆಯ್ಕೆ-3 ದಾಖಲಿಸಿ, ಖಾತ್ರಿ ಠೇವಣಿ ಪಾವತಿಸದೆ ಇರುವ ಅಭ್ಯರ್ಥಿಗಳಿಗೆ ಮೂರನೇ ಸುತ್ತಿನಲ್ಲಿ ಆಪ್ಷನ್ ದಾಖಲಿಸಲು ಅವಕಾಶ ನೀಡಲಾಗಿದೆ ಎಂದಿದ್ದಾರೆ.

ಸೀಟು ರದ್ದತಿಗೆ ಸೆ.8 ಕೊನೆ ದಿನ

ಸೀಟು ಹಂಚಿಕೆಯಾದ ಕಾಲೇಜುಗಳಿಗೆ ಪ್ರವೇಶ ಪಡೆದು ನಂತರ ಸೀಟು ಬೇಡ ಎನ್ನುವವರೂ ಸೆ.8ರ ಒಳಗೆ ಕೆಇಎಗೆ ಭೇಟಿ ನೀಡಿ ಸೀಟು ರದ್ದುಪಡಿಸಿಕೊಳ್ಳಬಹುದು.

ಮೂರನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದ ನಂತರ ಕಾಲೇಜಿಗೆ ಸೇರುವುದು ಕಡ್ಡಾಯವಾಗಿದ್ದು, ಅಭ್ಯರ್ಥಿಗಳು ಎಚ್ಚರವಹಿಸಿ, ಕೋರ್ಸ್, ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಒಂದು ವೇಳೆ ಈ ಸುತ್ತಿನಲ್ಲಿ ಹಂಚಿಕೆಯಾದ ಕಾಲೇಜಿಗೆ ಪ್ರವೇಶ ಪಡೆಯದೇ ಇದ್ದಲ್ಲಿ ಪೂರ್ಣ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಕಾನೂನು ಕ್ರಮ ಕೂಡ ಜರುಗಿಸಲಾಗುತ್ತದೆ ಎಂದು ಪ್ರಸನ್ನ ಹೇಳಿದ್ದಾರೆ.

ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲೂ ಎನ್‌ಆರ್‌ಐ ಕೋಟಾ



ಶರಣ ಪ್ರಕಾಶ ಪಾಟೀಲ

ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲೂ ಇನ್ನು ಮುಂದೆ ಅನಿವಾಸಿ ಭಾರತೀಯರಿಗೆ (ಎನ್‌ಆರ್‌ಐ) ಶೇ 15ರಷ್ಟು ಸೀಟುಗಳನ್ನು ಮೀಸಲಿಡಲಾಗುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, 2025-26ನೇ ಸಾಲಿನಿಂದಲೇ ರಾಜ್ಯಕ್ಕೆ 450 ವೈದ್ಯಕೀಯ ಸೀಟುಗಳನ್ನು ಹೆಚ್ಚಳ ಮಾಡಿ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಆದೇಶ ಹೊರಡಿಸಿದೆ. 400 ಸರ್ಕಾರಿ ಕಾಲೇಜುಗಳಿಗೆ ಸಿಕ್ಕಿವೆ. ಈ ವರ್ಷ ಹೊಸ 400 ಸೀಟುಗಳಲ್ಲಿ ಎನ್‌ಆರ್‌ಐ ಕೋಟಾ ನಿಗದಿಪಡಿಸಲಾಗಿದೆ. ₹25 ಲಕ್ಷ ಶುಲ್ಕ ನಿಗದಿಮಾಡಲಾಗಿದೆ. ಇದರಿಂದ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಸರ್ಕಾರದ ಅನುದಾನದ ಮೇಲೆ ಹೆಚ್ಚು ಅವಲಂಬಿತವಾಗದೆ ಸ್ವಾವಲಂಬನೆ ಸಾಧಿಸಲು ನೆರವಾಗಲಿದೆ ಎಂದರು.

ಕರ್ನಾಟಕದಲ್ಲಿ ಪ್ರತಿ ವರ್ಷ ವೈದ್ಯಕೀಯ ಶಿಕ್ಷಣಕ್ಕೆ ದಾಖಲಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕೆಲವು ಪ್ರತಿಭಾವಂತ ವಿದ್ಯಾರ್ಥಿಗಳು ಖಾಸಗಿ ಕಾಲೇಜುಗಳಿಗೆ ಅಧಿಕ ಶುಲ್ಕ ಕಟ್ಟಿ ಪ್ರವೇಶ ಪಡೆಯಲು ಸಾಧ್ಯವಾಗುತ್ತಿಲ್ಲ. ಹೆಚ್ಚುವರಿಯಾಗಿ ವೈದ್ಯಕೀಯ ಸೀಟುಗಳಿಂದಾಗಿ ಪ್ರತಿಭಾವಂತರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ನ.4ರಿಂದ ಕೌಶಲ ಶೃಂಗಸಭೆ

ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ ಮಾದರಿಯಲ್ಲಿ ಇದೇ ನವೆಂಬರ್ 4, 5 ಮತ್ತು 6ರಂದು ಕೌಶಲ ಶೃಂಗಸಭೆ ಆಯೋಜಿಸಲಾಗುತ್ತದೆ. ದಸರಾ ಬಳಿಕ ಮೈಸೂರಿನಲ್ಲಿ ಉದ್ಯೋಗ ಮೇಳ ಆಯೋಜಿಸಲಾಗುತ್ತಿದೆ ಎಂದು ಶರಣ ಪ್ರಕಾಶ ಪಾಟೀಲ ಹೇಳಿದರು.

'ನೋಂದಣಿ ಕಾರ್ಯ ಶೀಘ್ರ ಆರಂಭವಾಗಲಿದೆ. ಪೋಸ್ಟರ್ ಬಿಡುಗಡೆ ಮಾಡಿದ್ದೇವೆ. ಅಕ್ಟೋಬರ್‌ನಲ್ಲಿ ನರ್ಸಿಂಗ್ ಶೃಂಗಸಭೆಯನ್ನೂ ಆಯೋಜಿಸುತ್ತಿದ್ದೇವೆ. ನಂತರ ವಿದೇಶದಲ್ಲಿ ರೋಡ್ ಶೋ ಮಾಡುವ ಮೂಲಕ ಉದ್ಯೋಗ ಮೇಳಕ್ಕೆ ಆದ್ಯತೆ ನೀಡುತ್ತೇವೆ' ಎಂದು ಮಾಹಿತಿ ನೀಡಿದರು.

ಸ್ಕೂಟರ್ ಚಾಲನೆ ವೇಳೆ ಅಪಘಾತ ಮೂವರು ಬಾಲಕರ ಸಾವು

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ನಾಲ್ವರು ಬಾಲಕರಿದ್ದ ಸ್ಕೂಟರ್, ಲಾರಿ ಹಾಗೂ ಕಾರು ನಡುವೆ ನಡೆದ ಅಪಘಾತದಲ್ಲಿ, ಸ್ಕೂಟರ್‌ನಲ್ಲಿದ್ದ ಗಾಳಪುರ ಬಡಾವಣೆಯ ಮೆಹರಾನ್ (13), ಅದಾನ್ ಪಾಷಾ (9) ಹಾಗೂ ಕೆಪಿ ಮೊಹಲ್ಲದ ರಯಾನ್ (8) ಮೃತಪಟ್ಟಿದ್ದು, ಫೈಜಲ್ (11) ಎಂಬಾತನ ಸ್ಥಿತಿ ಗಂಭೀರವಾಗಿದೆ.

ನಗರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಕರಿವರದಾಜನ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ಸ್ಥಳದಲ್ಲಿ ಸ್ಕೂಟರ್‌ನಲ್ಲಿ ಬಾಲಕರು ಬರುವಾಗ ಅಪಘಾತ ನಡೆದಿದ್ದು, ಕಾರಿನಲ್ಲಿದ್ದ ಇಬ್ಬರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ.

'ತಮಿಳುನಾಡಿನ ಕಡೆಗೆ ಹೋಗುತ್ತಿದ್ದ ಕಾರು ಹಾಗೂ ಚಾಮರಾಜ ನಗರ ಕಡೆಗೆ ಬರುತ್ತಿದ್ದ ಲಾರಿಯ ನಡುವೆ ಸಿಲುಕಿದ ಸ್ಕೂಟರ್ ಸಂಪೂರ್ಣ ನಜ್ಜುಗುಜ್ಜಾಗಿದೆ. ಕಾರು, ಲಾರಿ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಣತಾರ್ತಿಹರನ್‌ಗೆ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಪ್ರಣತಾರ್ತಿಹರನ್

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ ವಿದ್ವತ್ ದತ್ತಿ ಪ್ರಶಸ್ತಿ'ಗೆ ಸಂಶೋಧಕರಾದ ಮೈಸೂರಿನ ಬಿ.ಎಸ್. ಪ್ರಣತಾರ್ತಿಹರನ್ ಅವರು ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದ್ದು, ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ. ವಿದ್ವಾಂಸರಾದ ಟಿ.ವಿ. ವೆಂಕಟಾಚಲ ಶಾಸ್ತ್ರಿ ಅವರ ಅಭಿಮಾನಿಗಳು ಮತ್ತು ಬಂಧುಗಳು ಈ ದತ್ತಿ ನಿಧಿ ಸ್ಥಾಪಿಸಿದ್ದಾರೆ. ಹಳಗನ್ನಡ ಸಾಹಿತ್ಯ, ಛಂದಸ್ಸು, ನಿಘಂಟು ರಚನೆ, ಗ್ರಂಥ ಸಂಪಾದನೆ, ಅನುವಾದ, ಭಾಷಾಶಾಸ್ತ್ರ ಮೊದಲಾದ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಈ ಪುರಸ್ಕಾರವನ್ನು ನೀಡಲಾಗುತ್ತದೆ.

ಪ್ರಣತಾರ್ತಿಹರನ್ ಅವರು ಬಾನುಲಿ ಕೇಂದ್ರದಲ್ಲಿ ಎಂಟು ವರ್ಷ, ಬಳಿಕ ಪ್ರಾಧ್ಯಾಪಕರಾಗಿ 25 ವರ್ಷ ಕಾರ್ಯ ನಿರ್ವಹಿಸಿದ್ದಾರೆ. ಸಂಕೇತಿ ಸಮುದಾಯದ ಅಧ್ಯಯನಕ್ಕೆ ಪಿಎಚ್.ಡಿ ಪಡೆದಿದ್ದಾರೆ. ಸಂಕೇತಿ ಸಮುದಾಯವನ್ನೇ ಕೇಂದ್ರವಾಗಿಸಿಕೊಂಡು ಕೃತಿಗಳನ್ನೂ ರಚಿಸಿದ್ದಾರೆ. ಅವರ ಸಂಶೋಧನೆ ಮತ್ತು ಸಂಪಾದನೆಯ 40 ಕೃತಿಗಳು 10 ಸಂಪುಟಗಳಲ್ಲಿ ಪ್ರಕಟಗೊಂಡಿವೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕುಶಲೋಪರಿ

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ಶನಿವಾರ 'ಹಿಂದೂ ಮಹಾಗಣಪತಿ' ವಿಸರ್ಜನೆ ವೇಳೆ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದ ಮರಗಾಲು ಕುಣಿತದ ಕಲಾವಿದರು ಬಿಡುವಿನ ವೇಳೆಯಲ್ಲಿ ಪರಸ್ಪರ ಕುಶಲೋಪರಿ ವಿಚಾರಿಸಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.90	15,479	16,065
ಹಾರಂಗಿ	2,859	2,858.48	4,678	4,458
ಕಬಿನಿ	2,284.00	2,283.92	17,319	17,192
ಹೇಮಾವತಿ	2,922	2,921.85	7,735	7,460
ಲಿಂಗನಮಕ್ಕಿ	1,819	1,817.75	11,596	8,910
ಸೂಪಾ (ಮೀ)	564	560.21	7,761.03	4,022.71
ಮಾಣಿ	595	594.19	2,653	652
ತುಂಗಭದ್ರಾ	1,633	1,625.96	50,122	45,772
ಮಲಪ್ರಭಾ	2,079.5	2,079.50	4,094	4,094
ಘಟಪ್ರಭಾ	2,175	2,174.80	6,726	5,440
ಭದ್ರಾ *	186	184.4	15,342	14,139
ಆಲಮಟ್ಟಿ (ಮೀ)	519.6	519.60	81,135	81,135
ನಾರಾಯಣಪುರ (ಮೀ)	492.25	492.08	85,000	86,320

* ನೆಲಮಟ್ಟದಿಂದ

ಉಲ್ಲಂಘನೆ: ಬಿವೈವಿ ಕಾರಿಗೆ ದಂಡ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಬಳಸುವ ಕಾರು 10 ಬಾರಿ ಸಂಚಾರ ನಿಯಮಗಳನ್ನು ಉಲ್ಲಂಘಿಸಿರುವುದು ನಗರದ ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಇಂಟಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂನಲ್ಲಿ (ಐಟಿಎಂಎಸ್) ಸೆರೆಯಾಗಿದೆ.

ವಿಜಯೇಂದ್ರ ಅವರು ಬಳಸುವ ಕೆಎ03ಎಂವೈ4545 ಸಂಖ್ಯೆ ಕಾರಿನ ಮೇಲೆ ಸಂಚಾರ ನಿಮಯ ಉಲ್ಲಂಘಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗಿದ್ದವು.

ಸೀಟ್ ಬೆಲ್ಟ್ ಧರಿಸದೆ ಪ್ರಯಾಣ, ಅತಿವೇಗದ ಚಾಲನೆ, ಜಂಕ್ಷನ್‌ಗಳಲ್ಲಿ ಸಿಗ್ನಲ್ ಇದ್ದರೂ ಮುಂದಕ್ಕೆ ಸಾಗಿರುವುದು, ಜೀಬ್ರಾ ಕ್ರಾಸಿಂಗ್ ಮೇಲೆ ನಿಲ್ಲಿವ ಮೂಲಕ ನಿಯಮ ಉಲ್ಲಂಘಿಸ-ಲಾಗಿದೆ. ಶೇ 50 ರಿಯಾಯಿತಿ ಆಧರಿಸಿ ₹3,250 ದಂಡವಿತ್ತು. 2020ರಿಂದಲೂ ಬಾಕಿಯಿದ್ದ ದಂಡವನ್ನು ಪಾವತಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ನಾಲ್ಕು ದಿನಗಳಲ್ಲಿ ₹72.5 ಲಕ್ಷ ವಿತರಣೆಗೆ ಮುಖ್ಯ ಕಾರ್ಯದರ್ಶಿ ಸೂಚನೆ

'ನಕ್ಸಲ್ ಪ್ಯಾಕೇಜ್: ತ್ವರಿತ ಅನುಷ್ಠಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶರಣಾಗುವ ನಕ್ಸಲರಿಗೆ ಘೋಷಣೆ ಮಾಡಿದ್ದ ಪ್ಯಾಕೇಜ್‌ಗೆ ಅನುಗುಣವಾಗಿ ಬಾಕಿ ಇದ್ದ ಮೊತ್ತದಲ್ಲಿ ₹72.5 ಲಕ್ಷ ಮೊತ್ತವನ್ನು ನಾಲ್ಕು ದಿನಗಳ ಒಳಗೆ ವಿತರಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚಿಸಿದರು.

ವಿಧಾನಸೌಧದಲ್ಲಿ ಶನಿವಾರ ನಡೆದ ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರ 2015ರಲ್ಲಿ ಘೋಷಿಸಿದ್ದ ವಿಶೇಷ ಪ್ಯಾಕೇಜ್‌ನಲ್ಲಿ ನೀಡಿದ್ದ ಭರವಸೆಗಳನ್ನು ತ್ವರಿತವಾಗಿ ಈಡೇರಿಸಲು ಅಗತ್ಯ ಕ್ರಮಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಶರಣಾದವರಿಗೆ ಘೋಷಣೆ ಮಾಡಿದ್ದ ಪ್ಯಾಕೇಜ್ ತ್ವರಿತವಾಗಿ ತಲುಪುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ವಹಿಸಲಾಗಿದೆ

ಶಾಲಿನಿ ರಜನೀಶ್, ಸರ್ಕಾರದ ಮುಖ್ಯಕಾರ್ಯದರ್ಶಿ



ನಕ್ಸಲರ ಮೇಲೆ ದಾಖಲಾಗಿರುವ ಪ್ರಕರಣಗಳ ತ್ವರಿತ ವಿಚಾರಣೆಗೆ ವಿಶೇಷ ನ್ಯಾಯಾಲಯ ಶೀಘ್ರ ಆರಂಭವಾಗಲಿದೆ. ಈ ಕುರಿತ ಕಡತ ಈಗಾಗಲೇ ಹೈಕೋರ್ಟ್‌ನಲ್ಲಿದೆ

ಕೆ.ಪಿ.ಶ್ರೀಪಾಲ್, ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ರಾಜ್ಯ ಸಮಿತಿ ಸದಸ್ಯ

'ಚಟುವಟಿಕೆ, ಮೊಕದ್ದಮೆಗಳ ಆಧಾರದಲ್ಲಿ ನಕ್ಸಲರನ್ನು ಎರಡು ವರ್ಗಗಳಾಗಿ ವಿಂಗಡಿಸಿದ್ದು, ₹4 ಲಕ್ಷದಿಂದ ₹7.5 ಲಕ್ಷದವರೆಗೆ ನಗದು, ಕೃಷಿ ಮಾಡಲು ಬಯಸುವವರಿಗೆ ತಲಾ ಎರಡು ಎಕರೆ ಜಮೀನು, ವಿವಿಧ ವೃತ್ತಿಪರ ತರಬೇತಿ ಪಡೆಯಲು ಬಯಸುವವರಿಗೆ ಒಂದು ವರ್ಷದವರೆಗೆ ಪ್ರತಿ ತಿಂಗಳು ತಲಾ ₹5,000 ನೆರವು ಸಿಕ್ಕಿದೆಯೇ ಎನ್ನುವುದನ್ನು ಖಾತ್ರಿಪಡಿಸಿಕೊಳ್ಳಬೇಕು' ಎಂದು ಅವರು ಹೇಳಿದರು.

ನಕ್ಸಲ್ ಪೀಡಿತ ಪ್ರದೇಶ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ₹10 ಕೋಟಿ ಮೊತ್ತವನ್ನು ಮಾರ್ಗಸೂಚಿಗೆ ಅನುಗುಣವಾಗಿ ಬಳಸಿಕೊಂಡು ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಬೇಕು. ರಸ್ತೆ, ನೀರು, ಶಾಲೆ, ಅಂಗನವಾಡಿ, ವಿದ್ಯುತ್ ಸಂಪರ್ಕ ಮತ್ತಿತರ ಮೂಲ ಸೌಕರ್ಯಕ್ಕೆ ಆದ್ಯತೆ ನೀಡಬೇಕು. ಶಿವಮೊಗ್ಗ, ಉಡುಪಿ ಜಿಲ್ಲೆಯ ಎಸ್‌ಪಿಗಳ ಸಮನ್ವಯದಲ್ಲಿ ಮೇಲ್ವಿಚಾರಣೆ ನಡೆಸಬೇಕು ಎಂದು ಸೂಚನೆ ನೀಡಿದರು.

ಧರ್ಮಸ್ಥಳ: ಸಾಕ್ಷಿ ದೂರುದಾರ ಜೈಲಿಗೆ

ನ್ಯಾಯಾಂಗ ಬಂಧನ: ಪೊಲೀಸ್ ಬಿಗಿ ಭದ್ರತೆಯಲ್ಲಿ ರವಾನೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿವೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ಸಾಕ್ಷಿ ದೂರುದಾರನಿಗೆ ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯವು ನ್ಯಾಯಾಂಗ ಬಂಧನ ವಿಧಿಸಿದೆ. ಆತನನ್ನು ಬಿಗಿ ಪೊಲೀಸ್ ಭದ್ರತೆಯೊಂದಿಗೆ ಶಿವಮೊಗ್ಗ ಜೈಲಿಗೆ ಶನಿವಾರ ಕಳುಹಿಸಲಾಯಿತು.

ಪ್ರಕರಣದ ಸಾಕ್ಷಿ ದೂರುದಾರ 'ತಾನು ಹೂತುಹಾಕಿದ್ದ ಮೃತದೇಹವೊಂದರ ಬುರುಡೆ' ಎಂದು ಹೇಳಿಕೊಂಡು ಮನುಷ್ಯನ ತಲೆಬುರುಡೆಯೊಂದನ್ನು ಒಪ್ಪಿಸಿದ್ದ. ವಿಚಾರಣೆ ವೇಳೆ, 'ಆ ತಲೆಬುರುಡೆ ನಾನು ಹೂತು ಹಾಕಿದ್ದ ಮೃತದೇಹದ್ದಲ್ಲ' ಎಂದು ಒಪ್ಪಿಕೊಂಡಿದ್ದ. ಆತನನ್ನು ಎಸ್‌ಐಟಿ ಅಧಿಕಾರಿಗಳು ಬಂಧಿಸಿ, ಆ.23ರಂದು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಆತನನ್ನು ಸೆ.3ರವರೆಗೆ ಎಸ್‌ಐಟಿ ವಶಕ್ಕೆ ಒಪ್ಪಿಸಿದ್ದ ನ್ಯಾಯಾಲಯ, ನಂತರ ಎಸ್‌ಐಟಿ ಕಸ್ಟಡಿಯ ಅವಧಿಯನ್ನು ಸೆ. 6ರವರೆಗೆ ವಿಸ್ತರಿಸಿತ್ತು.

ಎಸ್‌ಐಟಿ ಅಧಿಕಾರಿಗಳು ಸಾಕ್ಷಿ ದೂರುದಾರನನ್ನು ಶನಿವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

'ಸಾಕ್ಷಿ ದೂರುದಾರನಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಈ ಪ್ರಕರಣದ ತನಿಖೆ ಮುಂದುವರಿಯಲಿದೆ. ಆತ ಈಗಾಗಲೇ ನೀಡಿರುವ ಹೇಳಿಕೆಗಳನ್ನು ಆಧರಿಸಿ ಕೆಲವರಿಂದ ಹೇಳಿಕೆ ದಾಖಲಿಸುವ ಪ್ರಕ್ರಿಯೆ ಮುಂದುವರಿಯಲಿದೆ' ಎಂದು ಮೂಲಗಳು ಹೇಳಿವೆ.

ಸಾಕ್ಷಿ ದೂರುದಾರನಿಗೆ ಆಶ್ರಯ ಒದಗಿಸಿದ್ದ ಜಯಂತ್ ಟಿ., ಆತನ ವಿಡಿಯೊ ಚಿತ್ರೀಕರಿಸಿದ್ದ ಯೂಟ್ಯೂಬರ್ ಅಭಿಷೇಕ್ ಹಾಗೂ ಗಿರೀಶ ಮಟ್ಟೆಣ್ಣವರ ಶನಿವಾರವೂ ಬೆಳ್ತಂಗಡಿಯ ಎಸ್‌ಐಟಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಧರ್ಮಸ್ಥಳದಲ್ಲಿ ಕೊಲೆಯಾಗಿದ್ದ ಸೌಜನ್ಯಾ ಅವರ ಮಾವ ವಿಠಲ ಗೌಡ ಅವರನ್ನೂ ಬೆಳ್ತಂಗಡಿ ಕಚೇರಿಗೆ ಕರೆಸಿಕೊಂಡ ಎಸ್‌ಐಟಿ ಅಧಿಕಾರಿಗಳು, ಅವರಿಂದ ಶುಕ್ರವಾರ ರಾತ್ರಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ತಲೆ ಬುರುಡೆ ತೆಗೆದ ಜಾಗ ಮಹಜರು

ಸಾಕ್ಷಿ ದೂರುದಾರ ತಂದೊಪ್ಪಿಸಿದ್ದ ಮನುಷ್ಯನ ತಲೆಬುರುಡೆಯನ್ನು ನೇತ್ರಾವತಿ ಸ್ನಾನಘಟ್ಟದ ಸಮೀಪದ ಕಾಡಿನಿಂದಲೇ ತೆಗೆಯಲಾಗಿತ್ತು ಎಂದು ಗೊತ್ತಾಗಿದೆ.

'ಆ ಬುರುಡೆ ಇದ್ದ ಜಾಗವನ್ನು ಕೊಲೆಯಾದ ಸೌಜನ್ಯಾ ಅವರ ಮಾವ ವಿಠಲ ಗೌಡ ಅವರೇ ಸಾಕ್ಷಿದೂರುದಾರನಿಗೆ ತೋರಿಸಿದ್ದರು. ಅಲ್ಲಿಂದ ತೆಗೆದ ಬುರುಡೆಯನ್ನೇ ಸಾಕ್ಷಿ ದೂರುದಾರ ವಕೀಲರ ತಂಡಕ್ಕೆ ತೋರಿಸಿದ್ದ. ಧರ್ಮಸ್ಥಳ ಠಾಣೆಗೆ ದೂರು ನೀಡಿದ್ದ ಆತ, ಆ ಬುರುಡೆಯನ್ನು ಪೊಲೀಸರ ವಶಕ್ಕೆ ಒಪ್ಪಿಸಿದ್ದ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ತಲೆ ಬುರುಡೆಯನ್ನು ಹೊರತೆಗೆಯಲಾಗಿದೆ ಎನ್ನಲಾದ ಜಾಗವು ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಸಮೀಪ ಉಜಿರೆ–ಧರ್ಮಸ್ಥಳ ರಸ್ತೆಯ ಪಕ್ಕದಲ್ಲಿ ಬಂಗ್ಲೆಗುಡ್ಡೆಯಲ್ಲಿರುವ ಕಾಡಿನ ಒಳಗಿದೆ. ವಿಠಲ ಗೌಡ ಅವರನ್ನು ಎಸ್‌ಐಟಿ ಅಧಿಕಾರಿಗಳು ಸ್ಥಳಕ್ಕೆ ಕರೆದೊಯ್ದು ಶನಿವಾರ ಮಹಜರು ನಡೆಸಿದರು. ಈ ವೇಳೆ ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಜಯಂತ ಟಿ. ಅವರೂ ಇದ್ದರು. ಸಾಕ್ಷಿ ದೂರುದಾರನನ್ನು ಬೆಳ್ತಂಗಡಿ ಜೆಎಂಎಂಸಿ ನ್ಯಾಯಾಲಯದಿಂದ ಶಿವಮೊಗ್ಗ ಜೈಲಿಗೆ ಕಳುಹಿಸಿಕೊಟ್ಟ ಬಳಿಕವೇ ಈ ಮಹಜರು ನಡೆದಿದ್ದು, ಈ ವೇಳೆ ಸಾಕ್ಷಿ ದೂರುದಾರ ಅಲ್ಲಿ ಇರಲಿಲ್ಲ.

ಸಾಕ್ಷಿ ದೂರುದಾರ ಶವ ಹೂತಿರುವುದಾಗಿ ನೇತ್ರಾವತಿ ಸ್ನಾನಘಟ್ಟದ ಸಮೀಪದಲ್ಲಿ ತೋರಿಸಿದ್ದ 11ನೇ ಜಾಗಕ್ಕಿಂತ 100 ಮೀ ದೂರದಲ್ಲಿ ನೆಲದ ಮೇಲೆ ಮೃತದೇಹದ ಮೂಳೆಗಳು ಪತ್ತೆಯಾಗಿದ್ದವು. ಈ ಜಾಗಗಳು ಉಜಿರೆ– ಧರ್ಮಸ್ಥಳ ರಸ್ತೆ ಪಕ್ಕದ ಈ ದಟ್ಟ ಕಾಡಿನಲ್ಲೇ ಇವೆ.

ಈ ಬುರುಡೆಯನ್ನು ಸಾಕ್ಷಿ ದೂರುದಾರನೇ ಹೊರ ತೆಗೆದಿದ್ದನೇ ಅಥವಾ ಬೇರೆಯವರು ಅದನ್ನು ತಂದು ಆತನಿಗೆ ಒಪ್ಪಿಸಿದ್ದರೆ ಎಂಬ ಬಗ್ಗೆ ಎಸ್‌ಐಟಿ ಅಧಿಕಾರಿಗಳು ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಿಲ್ಲ.

ದೂರುದಾರನಿಗೆ ರಕ್ಷಣೆ ಮುಂದುವರಿಕೆ?

ಸಾಕ್ಷಿದಾರರ ರಕ್ಷಣಾ ಯೋಜನೆ 2018ರ ಅಡಿ ಸಾಕ್ಷಿ ದೂರುದಾರನಿಗೆ ಒದಗಿಸಲಾಗಿರುವ ರಕ್ಷಣೆಯ ಅವಧಿ ಇದೇ 9ರಂದು ಕೊನೆಗೊಳ್ಳಲಿದೆ. 'ಇದೊಂದು ಪ್ರಮುಖ ಪ್ರಕರಣವಾಗಿರುವ ಕಾರಣ ಸಾಕ್ಷಿ ದೂರುದಾರನಿಗೆ ಸಾಕ್ಷಿದಾರರ ಸಂರಕ್ಷಣಾ ಯೋಜನೆಯಡಿ ಒದಗಿಸಿರುವ ರಕ್ಷಣೆಯನ್ನು ಮುಂದುವರಿಸುವ ಅಗತ್ಯ ಬೀಳಬಹುದು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಸಾಕ್ಷಿ ದೂರುದಾರನಿಗೆ ರಕ್ಷಣೆ ಒದಗಿಸುವ ಕುರಿತ ಆದೇಶದಲ್ಲಿ ಮಾರ್ಪಾಡು ಮಾಡುವ ಬಗ್ಗೆ ಸಕ್ಷಮ ಪ್ರಾಧಿಕಾರವೇ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಸಾಕ್ಷಿ ದೂರುದಾರನಿಗೆ ಬೆದರಿಕೆ ಇದೆಯೇ ಎಂಬ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಉಪವಿಭಾಗದ ಡಿವೈಎಸ್‌ಪಿ ಅವರಿಂದ ವರದಿ ಪಡೆದು ಸಕ್ಷಮ ಪ್ರಾಧಿಕಾರವು ಈ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ.

ಮೂರ್ತಿ ವಿಸರ್ಜನೆ: ವ್ಯಕ್ತಿ ಸಾವು

ಬೆಳಗಾವಿ: ಬೆಳಗಾವಿ ನಗರ ಮತ್ತು ಖಾನಾಪುರ ತಾಲ್ಲೂಕಿನ ನಂದಗಡ ಗ್ರಾಮದಲ್ಲಿ ಶನಿವಾರ ಗಣೇಶ ಮೂರ್ತಿಗಳ ವಿಸರ್ಜನೆ ವೇಳೆ ಇಬ್ಬರು ನೀರಿನಲ್ಲಿ ಮುಳುಗಿದ್ದು ಒಬ್ಬರು ಶವವಾಗಿ ಪತ್ತೆಯಾಗಿದ್ದಾರೆ. ಇನ್ನೊಬ್ಬ ಯುವಕನಿಗಾಗಿ ಹುಡುಕಾಟ ನಡೆದಿದೆ.

'ಬೆಳಗಾವಿಯ ಜಕ್ಕೇರಿ ಹೊಂಡದಲ್ಲಿ ಗಣೇಶಮೂರ್ತಿಯ ಜೊತೆಗೆ ವಡ್ಡರವಾಡಿ ನಿವಾಸಿ ರಾಹುಲ್ ಬ್ಯಾಕವಾಡಕರ್ (33) ಬಿದ್ದರು. ಅವರನ್ನು ಹೊಂಡದಿಂದ ಮೇಲೆತ್ತಲಾಯಿತು. ಆಸ್ಪತ್ರೆ ಕರೆದೊಯ್ಯುವ ಮಾರ್ಗದಲ್ಲಿ ಅವರು ಮೃತಪಟ್ಟರು' ಎಂದು ಪೊಲೀಸರು ತಿಳಿಸಿದ್ದಾರೆ.

'ನಂದಗಡ ಗ್ರಾಮದಲ್ಲಿ ಮೂರ್ತಿ ವಿಸರ್ಜನೆಗೆ ತೆರಳಿದ್ದ ಖಾನಾಪುರ ತಾಲ್ಲೂಕಿನ ಯಡೋಗ ಗ್ರಾಮದ ಶುಭಂ ಕುಪ್ಪಟಗೇರಿ (22) ಮಲಪ್ರಭಾ ನದಿಯಲ್ಲಿ ಕೊಚ್ಚಿಕೊಂಡು ಹೋಗಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಜೈಲಿನಲ್ಲಿ ಪ್ರಜ್ವಲ್ ಕ್ಲರ್ಕ್

ಒಂದನೇ ಪುಟದಿಂದ...

ಆಗ ಕೈದಿಗೆ ಸಿಗುವ ಸಂಬಳ ದಿನಕ್ಕೆ ₹615 ಮೂರು ವರ್ಷಗಳ ನಂತರ, ಅವರನ್ನು ಹೆಚ್ಚು ನುರಿತ ಅಥವಾ ತರಬೇತಿ ಕೆಲಸಗಾರರು ಎಂದು ಪರಿಗಣಿಸಿ ದಿನಕ್ಕೆ ₹663 ಸಂಬಳ ನೀಡಲಾಗುವುದು' ಎಂದು ಮೂಲಗಳು ಹೇಳಿವೆ. ಪ್ರಜ್ವಲ್ ವಿರುದ್ಧ ಸಿಐಡಿ ಹಾಗೂ ಹಾಸನ ಜಿಲ್ಲೆಯ ಹೊಳೆನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಒಟ್ಟು ಪ್ರಕರಣಗಳು ದಾಖಲಾಗಿದ್ದವು. ಆ ಪೈಕಿ ಒಂದು ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಆ. 2ರಂದು ಜೀವಾವಧಿ ಶಿಕ್ಷೆ ಪ್ರಕಟಿಸಿತ್ತು.

ಜನಾರ್ದನ ರೆಡ್ಡಿ ವಿರುದ್ಧ ಮೊಕದ್ದಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳಕ್ಕೆ ಕಳಂಕ ತರುವ ಪಿತೂರಿಯ ಹಿಂದಿನ ರೂವಾರಿ ಸಸಿಕಾಂತ್ ಸೆಂಥಿಲ್' ಎಂದು ಆರೋಪಿಸಿದ್ದ ಗಂಗಾವತಿ ಕ್ಷೇತ್ರದ ಶಾಸಕ ಗಾಲಿ ಜನಾರ್ದನ ರೆಡ್ಡಿ ವಿರುದ್ಧ ತಮಿಳುನಾಡಿನ ತಿರುವಳ್ಳೂರು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಸಂಸದ ಸಸಿಕಾಂತ್ ಸೆಂಥಿಲ್ ಬೆಂಗಳೂರಿನಲ್ಲಿ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

ಈ ಸಂಬಂಧ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಬೆಳಿಗ್ಗೆ ಖುದ್ದು ಹಾಜರಾಗಿದ್ದರು.

ಸಸಿಕಾಂತ್ ಸೆಂಥಿಲ್ ಪರ ಹಾಜರಾಗಿದ್ದ ಹೈಕೋರ್ಟ್ ವಕೀಲರಾದ ಸೂರ್ಯ ಮುಕುಂದರಾಜ್ ಮತ್ತು ಸಂಜಯ ಯಾದವ್, ದೂರನ್ನು ದಾಖಲು ಮಾಡಿಕೊಳ್ಳುವಂತೆ ಮ್ಯಾಜಿಸ್ಟ್ರೇಟ್ ಕೆ.ಎನ್.ಶಿವಕುಮಾರ್ ಅವರಿಗೆ ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು ಇದೇ 11ಕ್ಕೆ ದೂರಿನ ವಿಚಾರಣೆ ನಡೆಸಲು ಮುದ್ದತು ನಿಗದಿಪಡಿಸಿ ಮುಂದೂಡಿದರು.

ಆಧಾರರಹಿತ ಆರೋಪ: ದೂರನ್ನು ನೀಡಿ ನ್ಯಾಯಾಲಯದಿಂದ ಹೊರಬಂದ ಸೆಂಥಿಲ್ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, 'ಜನಾರ್ದನ ರೆಡ್ಡಿ ಅವರು ರಾಜಕೀಯ ದುರುದ್ದೇಶದಿಂದ ನನ್ನ ಹೆಸರನ್ನು ಉಲ್ಲೇಖಿಸಿ ಆಧಾರಹಿತ ಸುಳ್ಳು ಆರೋಪಗಳನ್ನು ಮಾಡಿದ್ದಾರೆ' ಎಂದರು.

'ಈ ಪ್ರಕರಣದಲ್ಲಿ ನನ್ನ ಹೆಸರನ್ನು ಪ್ರತಿನಿತ್ಯವೂ ಎಳೆದು ತರಲಾಗುತ್ತಿದೆ. ಇದರ ಹಿಂದೆ ರಾಜಕೀಯ ದುರುದ್ದೇಶ ಅಡಗಿದೆ. ನಾನು ಬಲಪಂಥೀಯ ಚಟುವಟಿಕೆಗಳ ಬಗ್ಗೆ ಹೊಂದಿರುವ ನಿಲುವಿನಿಂದಾಗಿಯೇ ಕೆಲವರು ಇಂತಹ ಗುಲ್ಲೆಬ್ಬಿಸುತ್ತಿದ್ದಾರೆ. ಕರ್ನಾಟಕದ ಜನತೆಗೆ ಟೋಪಿ ಹಾಕುತ್ತಿದ್ದಾರೆ. ಜನಾರ್ದನ ರೆಡ್ಡಿ ಗಣಿ ಲೂಟಿ ಹೊಡೆದ ವ್ಯಕ್ತಿ. ಆತ ನ್ಯಾಯಮೂರ್ತಿಗಳನ್ನೇ ಬಿಟ್ಟಿಲ್ಲ' ಎಂದು ದೂರಿದರು.

'ಸುಬ್ರಹ್ಮಣ್ಯನ ಮತ್ತೊಂದು ಹೆಸರು ಸೆಂಥಿಲ್'

ಸಸಿಕಾಂತ್ ಸೆಂಥಿಲ್

'ನನ್ನನ್ನು ಕ್ರಿಶ್ಚಿಯನ್ ಎಂದು ಪ್ರಚಾರ ಮಾಡಲಾಗುತ್ತಿದೆ. ಅಸಲಿಗೆ ಸುಬ್ರಹ್ಮಣ್ಯನ ಮತ್ತೊಂದು ಹೆಸರೇ ಸೆಂಥಿಲ್ ಎಂಬುದು ಅವರಿಗೆ ಗೊತ್ತಿಲ್ಲ' ಎಂದು ಸಸಿಕಾಂತ್ ಸೆಂಥಿಲ್ ಹೇಳಿದರು.

'ಧರ್ಮಸ್ಥಳದಲ್ಲಿ ಶವಗಳನ್ನು ದಫನ್ ಮಾಡಲಾಗಿದೆ ಎಂದು ಆರೋಪಿಸುತ್ತಿರುವವರು ದೆಹಲಿಯ ನಿಮ್ಮ ಮನೆಗೆ ಬಂದಿದ್ದರಂತಲ್ಲಾ' ಎಂಬ ಪ್ರಶ್ನೆಗೆ ಉತ್ತರಿಸಿದ ಸೆಂಥಿಲ್, 'ಈತನಕ ನನಗೆ ದೆಹಲಿಯಲ್ಲಿ ಮನೆಯೇ ಇಲ್ಲ. ನಾನಿನ್ನೂ ತಮಿಳುನಾಡು ಭವನದಲ್ಲೇ ಇದ್ದೇನೆ' ಎಂದರು.

'ನನ್ನ ವಿರುದ್ಧ ಯಾರೇ ಆಗಲಿ ಯಾವುದೇ ರೀತಿ ಇಲ್ಲಸಲ್ಲದ ಆರೋಪಗಳನ್ನು ಮಾಡಿದರೆ ಅಂಥವರ ವಿರುದ್ಧ ಖಂಡಿತವಾಗಿಯೂ ಸೂಕ್ತ ಕಾನೂನು ಕ್ರಮ ಕೈಗೊಳ್ಳುತ್ತೇನೆ' ಎಂದು ಅವರು ಎಚ್ಚರಿಸಿದರು.

'ಎನ್‌ಐಎ ಅಥವಾ ಸಿಬಿಐ ತನಿಖೆ ಆಗಲಿ'

ಬಳ್ಳಾರಿ: 'ಧರ್ಮಸ್ಥಳಕ್ಕೆ ಅಪಖ್ಯಾತಿ ತರುವಲ್ಲಿ ಸಂಸದ ಸಸಿಕಾಂತ್ ಸೆಂಥಿಲ್, ನಗರ ನಕ್ಸಲರು, ಉಗ್ರ ಸಂಘಟನೆಗಳ ಕೈವಾಡವಿದೆ. ಇದೆಲ್ಲವನ್ನೂ ಬಯಲಿಗೆಳೆಯಲು ರಾಷ್ಟ್ರೀಯ ತನಿಖಾ ತಂಡ (ಎನ್‌ಐಎ) ಅಥವಾ ಕೇಂದ್ರ ತನಿಖಾ ದಳ (ಸಿಬಿಐ) ಅಧಿಕಾರಿಗಳಿಂದ ತನಿಖೆ ನಡೆಸಬೇಕು' ಎಂದು ಶಾಸಕ ಗಾಲಿ ಜನಾರ್ದನ ರೆಡ್ಡಿ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಎಸ್‌ಐಟಿ ಮೇಲೆ ರಾಜಕೀಯ ಒತ್ತಡ ಇಲ್ಲ: ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಸತೀಶ ಜಾರಕಿಹೊಳಿ

ಬೆಳಗಾವಿ: ಸತೀಶ ಜಾರಕಿಹೊಳಿ ಮಾತನಾಡಿ, 'ಧರ್ಮಸ್ಥಳದ ವಿಷಯದಲ್ಲಿ ಎಸ್‌ಐಟಿ ಮೇಲೆ ರಾಜಕೀಯ ಒತ್ತಡ ಇಲ್ಲ. ತನಿಖೆ ಪೂರ್ಣಗೊಳಿಸಿ ಎಸ್‌ಐಟಿ ಅಧಿಕಾರಿಗಳು ನ್ಯಾಯಾಲಯಕ್ಕೆ ವರದಿ ಸಲ್ಲಿಸುವರು' ಎಂದರು.

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರಿಗೆ ಮಹಿಳಾ ಸಂಘಟನೆಗಳು ಪತ್ರ ಬರೆದ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಯಾರು ಪತ್ರ ಬರೆದರೂ ಪ್ರಯೋಜನವಿಲ್ಲ. ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಪ್ರಕರಣದ ಸತ್ಯಾಸತ್ಯತೆ ಅರಿಯಲು ತನಿಖೆ ಮುಗಿಯುವವರೆಗೆ ಕಾಯಬೇಕು' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

COMMERCIAL SITE FOR SALE Site no.685 Anjanapura 8th block , north facing 50*80. call: 6362874644.

ANJANAPURA BDA Site for Sale at 5th G Block 30x40sft, North facing.Contact: 9686094278

Banashankari

"BANASHANKARI 2ND-STAGE 40x60`West SemiCommercial, BSK-1st Stage 40x60`North SemiCommercial, BSK-3rd Stage SemiCommercial 40x50,Girinagar Commercial`50x80. "Sri.Ganesh Estate" 9845286505"

SITE FOR SALE IN BANASHANKARI 6TH Stage 2nd Block 20x30 E/F, 10th Block-40x60 W/F, 4thBlock-20x30 W/F, 6th Block-20X30 W/F. Contact: 9535575774

AVAILABLE BANSHANKARI 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

BDA SITES Available @`Banashankari 6th Stage all Blocks 20x30, 30x40, 40x60 50x80 In Good Location Contact: 99722-06988

AVAILABLE BANASHANKARI 6th Stage, 6th Block 30x40, W/F,Near 100" Road Budget Friendly Call Lingaraju: 9663393533

BDA BANASHANKARI 5th Stage 30x40 East Pattalamma Temple Opp Very Good Location Contact: 9606922132/ 9448531837

BSK 6TH Stage 5th Block East Facing 30x40 on 60 ft Road Contact: 7022435107

BDA SITE SALE Banashankari 6th_Stage,4th B'Block 40x60,W/F,40" Road 1Km From Talaghattapura Metro Station:9945835569

Rajarajeshwari Nagar

SITE FOR Sale- 40x60 North Facing, JSS College,Durga Layout, Rajarajeshwarinagar, BangaloreCall: 8660275731, 8660800061

TOLET
Location Near Karumariyamma Temple, VI Block, Rajajinagar, Bangalore - 560010.
Behind Magadi Road, Metro Station - 50 meter distance
TWO B.H.K.
Second Floor - East Facing
Advance Rs. 50,000/- Monthly Rent Rs.12,000/-
ONE B.H.K.
First Floor - West Facing
Advance Rs. 40,000/- Monthly Rent Rs.8,000/-
Contact : 9731860063

ಬಾಡಿಗೆಗೆ
ವಾಣಿಜ್ಯ ಮಳಿಗೆಗಳಿಗೆ ಮತ್ತು ಆಫೀಸ್ ಕಛೇರಿಗೆ ಬಾಡಿಗೆಗೆ ದೊರೆಯುತ್ತದೆ
ನೆಲಮಹಡಿ – 1550 ಚದರ ಅಡಿ
ಎ.ಎಸ್.ವಿ.ಎನ್.ವಿ. ಭವನ, ಕೆ.ಜಿ.ರಸ್ತೆ, ಬೆಂಗಳೂರು–560009
Ph : 080-22263642, 9482913642

Hennur

BYRATHI KANAKASHREE layout excellent location 1385 Sft site S/F opposite park for sale 12,500/ Sft. Call: 98451-84220

Jigani

KHB Sites in Surya City Near Jigani
STRRA & BMRDA Approved Plots
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Jakkur

MCECHS LAYOUT excellent location wide road 700 Sft S/F Site for sale 15,000/ Sft. Call: 98451-84220

J P Nagar

"J.P.NAGAR, SRINIDHI_LAYOUT 30x51 Residential Site, East Facing, BBMP A_Katha, Full White. Owner: 9845088449/ 9845249799"

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Nagarabhavi

RESIDENTIAL SITE FOR SALE 30x40 at 2nd-Block Nagadevanahalli, Gnanabharthi Layout, Bangalore East facing contact:- 9845666872/ 9845099221

"NAGARABHAVI NEAR Deepa Complex 40x60 East & Vishveshwaraiah 6th Block 40x60 South 40 feet Road. 9448432633"

40X60 BDA SITE SALE Nagarbhavi Health Layout, Opposite Park, South Facing Semi Commercial Contact: 9980409820

Nelamangala

***SITE FOR** SALE* 30x50 WEST FACING, NELMANGALA near RAILWAY STATION, "CMC" KATHA. Contact:9900265678

Outer Ring Road

ORR(MAGADI RD-TUMKUR Rd) facing corner commercial site 2,800 Sqft near Pipeline/Chowdeshwarinagar Rs. 22,000 call: 9980555558

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

SALE 60X40 Chandra Layout East facing Residential, 60x90 Vijaynagar West facing Commercial Site. Contact. 9845720810.

Vishweshwariah Layout

BDA SITE SALE VISHWESHWARAIAH LAYOUT 1ST BLOCK 30X40 EAST FACE 13000/- NEGOTIABLE DIRECT OWNER MEETING CONTACT: 8892901567

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

SMV 6TH BLOCK Attach, Commercial 30x50 BBMP A Khatha Site Sale 10500/- Per Sqft: 9964971895

DIRECT OWNER Near Metro Station, Vishweshwaraiah Layout, Kempegowda Layout 30x40, 40x60, 50x80 Commercial: 9620696913/ 9880781399

Mangaluru

SALE: 24 ACRE OPEN LAND MANGALORE MOODBIDRI MAIN ROAD TOUCH. OPP ALVAS COLLEGE MOODBIDRI. 8767370656

Kengeri Satellite Town

***30X40 E/F** BBMP* 'A' Khata Site-Sale KENGERI SATELLITE TOWN, Arunachalam Layout,Clear Title.₹.10000/-. 9742681666/ 9886634578

Bannerghatta Road

AKSHAYANAGARA 3562 SQFT A KATHA 12000/- CLASSIC ORCHID LAYOUT 35x45 4.3CR NEGOTIABLE. BANNERAGATTA ROAD: 9449655947

NISARGA LAYOUT 50x80, 35x60 EF 5000/- NANDANAVANA 20x30 NEC 50x80 WF A KATHA 40x60: 9449655947

BTM Layout

SITE FOR SALE BTM 2ND STAGE, 40*60, SOUTH EAST CORNER: CONTACT VICTORY PROPERTIES. 7411692219/8618576685

ANYONE CAN LEARN AI TOOLS & SKILLS.
IT'S SIMPLER THAN YOU THINK.

Learn Artificial Intelligence
FOR BUSINESS GROWTH, CAREER SUCCESS & FREELANCE INCOME
Not Online. Hands-On Classroom Coaching

ATTEND FREE 2 HOUR SEMINAR TODAY
ENROLL NOW. LIMITED SEATS.

LEARN TO MASTER
AI Skills & Tools – Fast & Easy
Whether you run a business or work in a professional role, AI can help you work smarter and earn more.

- Create websites, product catalogues, YouTube videos, Facebook and Instagram posts, reels, and more—in just minutes.
- Start your own AI Marketing Agency or Sell AI Tools & Services and earn full-time or part-time income
- Build custom AI Assistants and Chatbots, and offer them to clients or use them to streamline your own work.
- Set up time-saving automations and workflows in just 30 minutes.

You will Learn How to

- Use 26+ AI Tools like ChatGPT, Gemini, Leonardo, n8n, make..
- Build and Sell AI Tools & AI Agents for Marketing & Sales, HR, Finance.
- Earn by offering No-code Automations for Businesses.
- Work on Freelance AI Projects for Clients Globally.

People will either work for AI... or make AI work for them. WHICH SIDE WILL YOU BE ON?

WHO SHOULD ATTEND
Business Owners & Solopreneurs, Employees, Freelancers & Digital Marketers, Students & Homemakers.
Anyone ready to earn from home. by working smarter, not harder!

REGISTER TO ATTEND THE FREE 2 HOUR SEMINAR
Today 10.25 am or 2.15 pm or 6.20 pm
Tomorrow 6.20 pm
Hotel Paraag, Raj Bhavan Rd, opp GPO, Bengaluru-01
Attend Any One Session | Pre Registration Compulsory
Call to Register: 9403893162 | www.bootcampsindia.com
SCAN TO REGISTER

Basavanagudi

BASAVANAGUDI SALE FLAT BRAND NEW 2050 SFT NEAR KR PARK OC-CC 3.4 Crore NEGO. SHIVU 9880004149

Jayanagar

SALE FLAT 3BHK 2600sft all Attached Bath and Toilet 2 Carparking Jayanagar 8th Block ct: 9844134068 8073859758

Kanakapura Road

SALE OF FLATS Close to Silk Institute Metro & Nice Road Flats with Feel of A Villa 3 BHK starts from 1.25Cr. Private Varanda Space, RERA APPROVED, 100%Vastu Compliant Homes, Balinese Theme Land Space, with 60+Amenities. Call: 9743859000.

Flat

Banashankari

"BANASHANKARI 2ND-STAGE 2BHK Flat 1310`Sqft high`rise building with`occupancy certificate`& E-katha Rs.1.31`Crore East`Door`Vastu only`for`direct registration "Sri.Ganesh Estate" 9845286505"

J P Nagar

FLRWISE _3BHK Flats 2150/2200sft,1.65cr,1.90cr/ 770sft,3bhkDplx1.70cr/ 20x30_1BHK3Units90L.1175 Sft 2BHK Flat Metro70L_ks lyt 20x40,14k/-8904210201

Uttarahalli

3 BHK FLAT FOR SALE 1350 Sqft. North_Facing, Nearby_Arehalli Arch, UTTARAHALLI Kengeri Main Road. Call_7760019494

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

House

Basavanagudi

SHASHTRINAGAR OFF K.R.Road, BDA 20x30 North Facing, Old House (Site value) sale 1,30,00,000/-, 9980659543 /9845154365

Basaweshwaranagar

3000 SQFT BUILDING SALE BBMP NEW EASTHI KHATHA VACANT POSITION READY REGISTRATION 2 CRORES 9035883017

Jayanagar

SALE 40X60 Jayanagar 5th Block North Facing With old House Excellent Location ct: 9844134068 8073859758

Shivajinagar And Around

800 SQFT DUPLEX HOUSE SALE VACANT POSITION LOCATED GANGENAHALLI WITH EASTHI KHATHA 56 LAKHS 9035883017

Moodalpalya

15X40 SOUTH G+2 Building 5 Houses, East Door, SVG Nagar, Moodalapalya, E-Katha 83L Owner 9739957911

Agricultural Land Converted

Kanakapura Road

KANAKAPURA ROAD 5acare Suitable For Layout, MALAVALLI 20acare Suitable For Farmland development Call:9741040748

Commercial Land

Mysore

For Sale NEAR MYSORE
LAND 2.5 ACRES
FRONTAGE OVER 300 FT.
On Main Road, Mallinathapura, Bilikere - Hobli, Hunsur Taluka.
CONTACT: 9383007171 9383007373
Send your offers to dugartc@dugar.in

Commerical

Kempegowda Layout

50×80 Commercial Site 80 feet Road attached **and 30×40** Residential Site 30 feet Road attached @ Nadaprabhu Kempegowda Layout in Kommagatta 9000/ sqft fixed. **Call: 9900040218**

Farm House/ Land/ Resorts

Kanakapura Road

SALE KANAKAPURA TOWN Near City Bus-Stand 2 Acre Land Sufficient Water and Electricity Contact: 9945928994

Villas/Bunglows

Double Road

FOR SALE INDEPENDENT Bunglow 40x60 East Facing E Khata Road Hitting Brokers Excuse Call: 9242795350

Industrial & Factory

Bommasandra

PRIME NE corner Bommasandra facing Biocon Techpark. KIADB 23000 sft with 6500 RCC building, borewell, sump, 45hp, 7 feet compound all around. Expected 7250/ sft. Contact 9845040377

General

SALE-AT KUNIGAL 22,000sqft KIADB Industrial Corner Site, Opposite'to Johnson factory, 250mtrs from Highway.'Clear titles. Owner 9900276199.

Residential/ Commercial

Devanahalli

NANDIHILLS BENGALURUNORTH 19602 Sqft converted eKhata gated 15furnished rooms rental income 6L Sale 10Cr Ph:9900106706

Multiple Locations

REAL ESTATE- We undertake Property Maintenance, Civil, Painting, Electrical, Plumbing. Carpentry. Farm-house. Houses. Offices. Industrial shed's etc- Invest on Small Agricultural plots around Bangalore South, Harohalli, Jigani, Maralwadi etc.and get Good returns in Resale Business- Property Monitoring- Property Management- Rental/ Buying/Selling of All kinds of properties. Contact- Victory Properties: Mobile: 7411692219/ 8618576685/ 9686894972 info@victoryproperties.in www.victoryproperties.in

Agricultural Land

Davangere

HARIHARA, BANNIKODU Village 4-05 ACRES and 0-27 GUNTAS Agricultural Lands for Sale, Contact 7795494932

REAL ESTATE BUYING

Flat

Banashankari

WANTED 4BHK (3000sft) Flat Gated community, W/N facing, 2KM from Devegowda petrol bunk. 3.30CR. Immediate Registration. Mail: durga824@gmail.com

Sites

Multiple Locations

WANTED BDA SITES Anjanapura- Arkavathi Banashankari 6th.Stage, Visweswaraiah, Kempegowda, Dr.Shivaramkaranth Layout. Contact: SAPTHAGIRI. 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED VISHWESHWARAIAH Layout 30x40 & 40x60 BDA Property Contact: 7899570235

DH Classifieds DECCAN HERALD More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164
*Conditions apply

‘ಭೂಸ್ವಾಧೀನ ವಿರೋಧಿ ಹೋರಾಟ ನಿಲ್ಲದು’

ಅಧಿಕೃತ ಆದೇಶದವರೆಗೂ ಹೋರಾಟಕ್ಕೆ ರೈತರ ನಿರ್ಧಾರ • ಸರ್ಕಾರದ ವಿರುದ್ಧ ತಿರುಗಿಬಿದ್ದ ಹೋರಾಟಗಾರರು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ತಾಲ್ಲೂಕಿನ ಚನ್ನರಾಯ ಪಟ್ಟಣ ಹೋಬಳಿಯ 13 ಹಳ್ಳಿಗಳ 1,777 ಎಕರೆ ಭೂಮಿಯನ್ನು ಸ್ವಾಧೀನದಿಂದ ಕೈಬಿಟ್ಟಿರುವುದಾಗಿ ಸರ್ಕಾರದಿಂದ ಅಧಿಕೃತವಾಗಿ ಆದೇಶ ಹೊರ ಬೀಳುವವರೆಗೂ ಹೋರಾಟ ಮುಂದುವರಿಸಲು ರೈತರು ನಿರ್ಧರಿಸಿದ್ದಾರೆ.

ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ಧರಣಿ ಸ್ಥಳದಲ್ಲಿ ಶನಿವಾರ ನಡೆದ ಸಭೆಯಲ್ಲಿ ರೈತರು ಒಮ್ಮತದಿಂದ ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1,777 ಎಕರೆ ಜಮೀನನ್ನು ಭೂಸ್ವಾಧೀನದಿಂದ ಕೈಬಿಟ್ಟಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ15 ರಂದು ಅಧಿಕೃತವಾಗಿ ಘೋಷಿಸಿದ್ದಾರೆ. ಆದರೆ, ಇದುವರೆಗೂ ಯಾವುದೇ ಲಿಖಿತ ಆದೇಶ ಹೊರಡಿಸಿಲ್ಲ ಎಂದು ಹೋರಾಟಗಾರರು ಅಸಮಾಧಾನ ಹೊರ ಹಾಕಿದರು.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಅಧಿಕಾರಿಗಳು ಚನ್ನರಾಯಪಟ್ಟಣ ಹೋಬಳಿಯ ಎರಡು ಗ್ರಾಮಗಳ ರೈತರಿಗೆ ಭೂಮಿ ದರ ನಿಗದಿ ಸಭೆಗೆ ಹಾಜರಾಗುವಂತೆ ನೋಟಿಸ್ ಜಾರಿಗೊಳಿಸಿದ್ದಾರೆ ಎಂದು ಆಕ್ಷೇಪ ಎತ್ತಿದರು.

ಭೂಸ್ವಾಧೀನ ಹಿಂಪಡೆದಿರುವ ಕುರಿತು ವಾರದೊಳಗೆ ಲಿಖಿತ ಆದೇಶ ಹೊರಡಿಸಬೇಕು. ಎಲ್ಲಾ ರೀತಿಯ ಪಾರದರ್ಶಕ ಪ್ರಕ್ರಿಯೆ ಮುಗಿಸಿ, ಡಿನೋಟಿಫೈ ಆದೇಶ ಹೊರಡಿಸಬೇಕು. ಭೂಮಿ ಬೆಲೆ ನಿಗದಿ ಸೇರಿದಂತೆ ಯಾವುದೇ ರೀತಿಯ ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸಬಾರದು ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ ಆಶಯಕ್ಕೆ ವಿರುದ್ಧವಾಗಿ ಸ್ವಾಧೀನ ಪ್ರಕ್ರಿಯೆ ಮುಂದುವರಿಸುತ್ತಿರುವುದು ಅಘಾತಕಾರಿ ಬೆಳವಣಿಗೆ. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಮುಖ್ಯಮಂತ್ರಿ ಘೋಷಣೆಯ ವಿರುದ್ಧ ಮಾತನಾಡುತ್ತಿರುವುದು ಖಂಡನೀಯ ಎಂದು ಕಾರಹಳ್ಳಿ ಶ್ರೀನಿವಾಸ್ ತಿಳಿಸಿದರು.

ಭೂಮಿ ನೀಡಲು ಸಿದ್ಧರಿರುವವರಿಂದ ಭೂಮಿ ಪಡೆದು ನಂತರ ಉಳಿದ ಭೂಮಿಯನ್ನು ಡಿನೋಟಿಫೈ ಮಾಡುವುದಾಗಿ ಎಂ.ಬಿ. ಪಾಟೀಲ ಹೇಳಿದ್ದಾರೆ. 154 ರೈತರು ಕೆಐಎಡಿಬಿಗೆ ಭೂಮಿ ನೀಡಲು ಸಿದ್ಧ ಎಂದು ನೀಡಿರುವ ಪತ್ರ ನಕಲಿ. ರೈತರ ದಾಖಲೆ ನೀಡಿ ನಕಲಿ ಸಹಿ ಮಾಡಲಾಗಿದೆ ಎಂದು ಆರೋಪಿಸಿದರು.

ಹೋರಾಟ ತೀವ್ರಗೊಳಿಸುವ ಎಚ್ಚರಿಕೆ

‘ಡಿನೋಟಿಫಿಕೇಷನ್ ಆದೇಶ ಹೊರ ಬರುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ. ಬೇಡಿಕೆಗಳು ಈಡೇರದಿದ್ದರೆ, ಮುಂದಿನ ದಿನಗಳಲ್ಲಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವುದು ಅನಿವಾರ್ಯವಾಗುತ್ತದೆ’ ಎಂದು ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯ ಮುಖಂಡರು ಒಕ್ಕೊರಲಿನಿಂದ ಹೇಳಿದರು.

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ಭೂಸ್ವಾಧೀನ ಹಿಂಪಡೆದಿರುವ ಕುರಿತು ಅಧಿಕೃತ ಡಿನೋಟಿಫೈ ಆದೇಶ ಹೊರಡಿಸುವಂತೆ ಒತ್ತಾಯಿಸಿ ರೈತರು ಪ್ರತಿಭಟಿಸಿದರು

ಪುಷ್ಪ ಮಾರುಕಟ್ಟೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಆನೇಕಲ್: ಕೆ.ಆರ್. ಮಾರುಕಟ್ಟೆಯಲ್ಲಿರುವ ಹೂವಿನ ಮಾರುಕಟ್ಟೆಯನ್ನು ಹೆಬ್ಬಾಳದ ಜಿಕೆವಿಕೆ ಆವರಣಕ್ಕೆ ಸ್ಥಳಾಂತರಿಸುವ ನಿರ್ಧಾರ ಕೈಬಿಡುವಂತೆ ಪುಷ್ಪ ಕೃಷಿಕರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕೆ.ಆರ್. ಮಾರುಕಟ್ಟೆ ಆನೇಕಲ್‌ಗೆ ಹತ್ತಿರವಿದ್ದು, ರೈತರಿಗೆ ಹೆಚ್ಚು ಅನುಕೂಲವಾಗಲಿದೆ. ಜಿಕೆವಿಕೆ ಹೂವು ಮಾರುಕಟ್ಟೆಗೆ ಹೂ ತರುವುದರಿಂದ ಪ್ರಯಾಣ ಮತ್ತು ಸಾಗಾಟ ವೆಚ್ಚ ಏರಿಕೆಯಾಗಲಿದೆ ಎಂದು ರೈತರು ಆಕ್ಷೇಪ ಎತ್ತಿದ್ದಾರೆ. ಅತ್ತಿಬೆಲೆ ಸಮೀಪದ ಆರ್‌ಟಿಒ ಕಚೇರಿ ಬಳಿಯ ಸರ್ಕಾರಿ ಜಾಗದಲ್ಲಿ ಹೂವು ಮಾರುಕಟ್ಟೆ ಆರಂಭಿಸಬೇಕು ಎಂದು ತಾಲ್ಲೂಕು ಹಸಿರು ಮನೆ ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೂನಮಡಿವಾಳ ವೈ.ಸೋಮಣ್ಣ ಒತ್ತಾಯಿಸಿದ್ದಾರೆ.

ಬ್ಯಾಗಡದೇನಹಳ್ಳಿಯಲ್ಲಿ ಸಂಘ ಶನಿವಾರ ಪುಷ್ಪೋದ್ಯಮ ರೈತರೊಂದಿಗೆ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

ಸಾಗಾಟ ಖರ್ಚು ಜಾಸ್ತಿ: ಬೆಂಗಳೂರು ನಗರ, ಗ್ರಾಮಾಂತರ ಪ್ರದೇಶಗಳಲ್ಲಿ 1,500 ಎಕರೆಗೂ ಹೆಚ್ಚು ವ್ಯಾಪ್ತಿಯಲ್ಲಿ ರೈತರು ಪುಷ್ಪ ಕೃಷಿ ಮಾಡುತ್ತಾರೆ. ಕಳೆದ 20 ವರ್ಷಗಳಿಂದ ಹೂವುಗಳನ್ನು ಬೆಂಗಳೂರಿನ ಕೆ.ಆರ್. ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಇದೀಗ ಹೆಬ್ಬಾಳದ ಜಿಕೆವಿಕೆಯಲ್ಲಿ ಆರಂಭಿಸಲು ಸಿದ್ಧತೆ ನಡೆಸಲಾಗಿದೆ. ಇದರಿಂದ ಈ ಭಾಗದ ಜನರಿಗೆ ತೊಂದರೆಯಾಗಲಿದೆ. ಓಡಾಟ ಖರ್ಚು ಹೆಚ್ಚಾಗಿದೆ. ದಲ್ಲಾಳಿಗಳ ಕಾಟ ಹೆಚ್ಚಾಗಲಿದೆ. ಹಾಗಾಗಿ ಈ ಬಗ್ಗೆ ಮರುಪರಿಶೀಲನೆ ನಡೆಸಿ ಅತ್ತಿಬೆಲೆಯಲ್ಲೇ ಹೂವು ಮಾರುಕಟ್ಟೆಯನ್ನು ಸ್ಥಾಪಿಸಬೇಕು ಎಂದು ರೈತರು ಆಗ್ರಹಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಶನಿವಾರ ಭೇಟಿ ಮಾಡಿದ ನಟಿಯರಾದ ಮಾಳವಿಕಾ ಅವಿನಾಶ್, ಜಯಮಾಲಾ ಮತ್ತು ಶ್ರುತಿ ಅವರು, ನಟ ವಿಷ್ಣುವರ್ಧನ್ ಅವರಿಗೆ ಮರಣೋತ್ತರವಾಗಿ ‘ಕರ್ನಾಟಕ ರತ್ನ’ ಪ್ರಶಸ್ತಿ ನೀಡಬೇಕು ಹಾಗೂ ಅವರ ಸ್ಮಾರಕ ನಿರ್ಮಿಸಬೇಕು. ಇತ್ತೀಚೆಗೆ ನಿಧನರಾದ ನಟಿ ಬಿ. ಸರೋಜಾ ದೇವಿ ಅವರ ಹೆಸರನ್ನು ಅವರು ವಾಸವಿದ್ದ ಮಲ್ಲೇಶ್ವರದ ರಸ್ತೆಗೆ ನಾಮಕರಣ ಮಾಡಬೇಕೆಂದು ಮನವಿ ಮಾಡಿದರು

ಆಯುಧ ಹಿಡಿದು ಓಡಾಟ: ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳದಲ್ಲಿ ಆಯುಧ ಹಿಡಿದು ಓಡಾಡುತ್ತಾ ಸಾರ್ವಜನಿಕರಲ್ಲಿ ಭಯದ ವಾತಾವರಣ ಉಂಟು ಮಾಡಿದ್ದ ಆರೋಪಿಯನ್ನು ಪುಲಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನ್ಯೂ ಬಾಗಲೂರು ಲೇಔಟ್ ನಿವಾಸಿ ಶರತ್ (33) ಬಂಧಿತ ಆರೋಪಿ.

ಠಾಣಾ ವ್ಯಾಪ್ತಿಯ ರಸ್ತೆಗಳಲ್ಲಿ ಆರೋಪಿ, ಆಯುಧ ಹಿಡಿದು ಓಡಾಟ ನಡೆಸುತ್ತಿರುವ ದೃಶ್ಯವನ್ನು ಸಾರ್ವಜನಿಕರು ಮೊಬೈಲ್ ಕ್ಯಾಮೆರಾದಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು. ಆ ವಿಡಿಯೊ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಪ್ರಕರಣ ದಾಖಲಾದ ಮಾಹಿತಿ ಗೊತ್ತಾದ ಬಳಿಕ ಆರೋಪಿ ತಲೆಮರೆಸಿಕೊಂಡಿದ್ದ. ಮೊಬೈಲ್ ಲೊಕೇಶನ್ ಆಧರಿಸಿ ಆತನಿದ್ದ ಸ್ಥಳವನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಶರತ್

ಗ್ರಾಪಂ ಅಧ್ಯಕ್ಷೆ, ಸಿಬ್ಬಂದಿ ‘ಲೋಕಾ’ ಬಲೆಗೆ

ಪ್ರಜಾವಾಣಿ ವಾರ್ತೆ

ವಿಟ್ಲ (ದಕ್ಷಿಣ ಕನ್ನಡ): ಲಂಚ ಪ್ರಕರಣದಲ್ಲಿ ಬಂಟ್ವಾಳ ತಾಲ್ಲೂಕು ಪೆರುವಾಯಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಫೀಸಾ, ಬಿಲ್ ಕಲೆಕ್ಟರ್ ವಿಲಿಯಂ ಅವರನ್ನು ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

‘ನಮ್ಮ ಮಾವನಿಗೆ ಪೆರುವಾಯಿ ಗ್ರಾಮದಲ್ಲಿ ಒಂದು ಎಕರೆ ಕೃಷಿ ಜಮೀನು ಇದ್ದು, ಸರ್ಕಾರದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಕೊಳವೆ ಬಾವಿ ಮಂಜೂರು ಮಾಡಲು ಅರ್ಜಿ ಸಲ್ಲಿಸಿದ್ದರು. ಮಾವನಿಗೆ ವಯಸ್ಸಾಗಿದ್ದರಿಂದ ನಾನು ಗ್ರಾ.ಪಂ. ಕಚೇರಿಗೆ ಹೋಗಿ ವಿಚಾರಿಸಿದಾಗ ನಿಮಗೆ ಕೊಳವೆಬಾವಿ ಉಚಿತವಾಗಿ ಸಿಗುತ್ತದೆ. ಬೆಂಗಳೂರು ಆಫೀಸ್‌ಗೆ ಹತ್ತು ಸಾವಿರ ಕೊಡಲಿಕ್ಕೆ ಇದೆ. ಹಣ ಕೊಟ್ಟರೆ ಅವರು ಪಾಸ್ ಮಾಡುತ್ತಾರೆ, ಬೆಂಗಳೂರಿಗೆ ಹೋಗಿ ನಿಮ್ಮ ಕೆಲಸ ಮಾಡಿಸುತ್ತೇನೆ, ಹಣ ತನ್ನಿ ಎಂದು ಅಧ್ಯಕ್ಷೆ ಹೇಳಿದ್ದರು’ ಎಂದು ವ್ಯಕ್ತಿಯೊಬ್ಬರು ದೂರು ನೀಡಿದ್ದರು.

‘ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಫೀಸಾ ಅವರು ಬಿಲ್‌ಕಲೆಕ್ಟರ್ ವಿಲಿಯಂ ಅವರಿಗೆ ₹10 ಸಾವಿರ ಹಣ ಪಡೆಯಲು ಸೂಚಿಸಿದ್ದರು. ₹10 ಸಾವಿರ ಲಂಚದ ಹಣ ಪಡೆಯುವಾಗ ನಾವು ನಡೆಸಿದ ದಾಳಿಯಲ್ಲಿ ಸಿಕ್ಕಿಬಿದ್ದರು’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲು

ವಿಮೆ ನವೀಕರಣದ ಹೆಸರಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ವಿಮೆಯನ್ನು ನವೀಕರಣ ಮಾಡಿಕೊಡುವುದಾಗಿ ವ್ಯಕ್ತಿಯೊಬ್ಬರಿಗೆ ₹5.16 ಲಕ್ಷ ವಂಚಿಸಲಾಗಿದ್ದು, ಈ ಸಂಬಂಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಗ್ನೇಶ್ ರವೀಂದ್ರ ಭಾಯ್ ದೇಸಾಯಿ ಅವರು ನೀಡಿರುವ ದೂರು ಆಧರಿಸಿ ಮಾಹಿತಿ ತಂತ್ರಜ್ಞಾನ (ಐ.ಟಿ) ಕಾಯ್ದೆಯ ಸೆಕ್ಷನ್ 66ಸಿ, 66ಡಿ ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 318(4), 319(2)ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ರೋಹಿತ್ ಶಿಂಧೆ ಹಾಗೂ ರೋಷನ್ ಮುಖರ್ಜಿ ಅವರು ವಂಚಿಸಿದ್ದಾರೆ ಎಂದು ಜಿಗ್ನೇಶ್ ರವೀಂದ್ರ ಅವರು ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಜಿಗ್ನೇಶ್ ಅವರು ಆರೋಗ್ಯ ವಿಮೆ ಮಾಡಿಸಿದ್ದರು. ವಿಮೆಯ ಅವಧಿ ಮುಕ್ತಾಯ ಆಗಿದ್ದರಿಂದ ಗ್ರಾಹಕರ ಸೇವಾ ಕೇಂದ್ರಕ್ಕೆ ಕರೆ ಮಾಡಿ, ಮಾಹಿತಿ ನೀಡಿದ್ದರು. ನಂತರ, ಅಪರಿಚಿತರು ಕರೆ ಮಾಡಿ ರೋಹಿತ್ ಶಿಂಧೆ ಹಾಗೂ ರೋಷನ್ ಮುಖರ್ಜಿ ಎಂದು ಪರಿಚಯಿಸಿಕೊಂಡಿದ್ದರು. ಆರೋಗ್ಯ ವಿಮೆಯನ್ನು ನವೀಕರಣ ಮಾಡಿಕೊಡುವುದಾಗಿ ನಂಬಿಸಿದ್ದರು. ಐವಿಆರ್ ಅರ್ಜಿಯನ್ನು ಭರ್ತಿ ಮಾಡಿ ಕಳುಹಿಸುವಂತೆ ತಿಳಿಸಿದ್ದರು. ವಾಟ್ಸ್‌ಆ್ಯಪ್‌ನಲ್ಲಿ ವಂಚಕರು ಕಳುಹಿಸಿದ್ದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ್ದರು. ಅರ್ಜಿಯ ಜತೆಗೆ ಕ್ರೆಡಿಟ್ ಕಾರ್ಡ್‌ನಿಂದ ₹33 ಸಾವಿರ ಪ್ರೀಮಿಯಂ ಸಹ ಪಾವತಿಸಿದ್ದರು. ನಂತರ, ದೂರುದಾರರ ಗಮನಕ್ಕೆ ಬಾರದಂತೆ ವಂಚಕರು, ಕ್ರೆಡಿಟ್ ಕಾರ್ಡ್‌ನಿಂದ ಹಂತಹಂತವಾಗಿ ₹5.16 ಲಕ್ಷವನ್ನು ವರ್ಗಾವಣೆ ಮಾಡಿಕೊಂಡಿದ್ದರು’ ಎಂದು ಮೂಲಗಳು ಹೇಳಿವೆ.

ಖಾತೆಯಿಂದ ಹಣ ದೋಚಿದರು: ಇನ್ನೊಂದು ಪ್ರಕರಣದಲ್ಲಿ ಕೆ.ಆರ್.ಪುರದ ನಿವಾಸಿ ಶೋಭಾ ರಮೇಶ್ ಅವರ ಬ್ಯಾಂಕ್ ಖಾತೆಯಿಂದ ಸೈಬರ್ ವಂಚಕರು, ₹5 ಲಕ್ಷ ದೋಚಿದ್ದಾರೆ.

‘ಜನವರಿ 1ರಿಂದ ಆಗಸ್ಟ್ 27ರ ವರೆಗೆ ಹಂತಹಂತವಾಗಿ ವಂಚಕರು ಹಣ ದೋಚಿದ್ದಾರೆ. ಇತ್ತೀಚೆಗೆ ಬ್ಯಾಂಕ್‌ಗೆ ತೆರಳಿ, ಪಾಸ್ ಬುಕ್ ಅನ್ನು ಮುದ್ರಿಸಿದಾಗ ಹಣ ಡ್ರಾ ಮಾಡಿಕೊಂಡಿರುವುದು ಗೊತ್ತಾಯಿತು’ ಎಂದು ಶೋಭಾ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಅಪರಾಧ ಸುದ್ದಿ

ಆನ್‌ಲೈನ್ ಮೂಲಕ ₹2.44 ಲಕ್ಷ ವಂಚನೆ

ಆನ್‌ಲೈನ್‌ನಲ್ಲಿ ಪೌಷ್ಟಿಕಾಂಶ ಪುಡಿಯನ್ನು (ಪ್ರೊಟೀನ್‌ಯುಕ್ತ ಪೌಡರ್) ಬುಕ್ ಮಾಡಿದ್ದ ಪಟ್ಟಂದೂರು ಅಗ್ರಹಾರದ ನಿವಾಸಿ ಮಚ್ಚನಿ ಶ್ರೀಹರ್ಷ ಅವರಿಗೆ ₹2.44 ಲಕ್ಷ ವಂಚಿಸಲಾಗಿದ್ದು, ಈ ಸಂಬಂಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಚ್ಚನಿ ಶ್ರೀಹರ್ಷ ಅವರು ಆನ್‌ಲೈನ್‌ನಲ್ಲಿ ಪೌಷ್ಟಿಕಾಂಶ ಪುಡಿಯನ್ನು ಆರ್ಡರ್ ಮಾಡಿದ್ದರು. ಎರಡು ದಿನಗಳ ಬಳಿಕ ಅಪರಿಚಿತ ಸಂಖ್ಯೆಯಿಂದ ಕರೆ ಬಂದಿತ್ತು. ‘ನೀವು ಆರ್ಡರ್ ಮಾಡಿರುವ ಪೌಷ್ಟಿಕಾಂಶ ಪುಡಿ ಬರಲು ಇನ್ನೂ 30 ದಿನಗಳ ಬೇಕಿದೆ. ಇಂದೇ ಪುಡಿ ಬೇಕಾದರೆ ಮೊದಲು ಆರ್ಡರ್ ಮಾಡಿರುವುದನ್ನು ರದ್ದುಪಡಿಸಿ, ಹೊಸದಾಗಿ ಆರ್ಡರ್ ಮಾಡುವಂತೆ ವಂಚಕ ತಿಳಿಸಿದ್ದ. ಆತನ ಮಾತು ನಿಜವೆಂದು ನಂಬಿದ್ದ ದೂರುದಾರ, ₹2,825 ನೀಡಿ ಬುಕ್ ಮಾಡಿದ್ದರು. ಮತ್ತೆ ಕರೆ ಮಾಡಿದ್ದ ವಂಚಕ, ನೀವು ಹಾಕಿದ ಹಣಕ್ಕೆ ಪೌಷ್ಟಿಕಾಂಶ ಪುಡಿ ಬರುವುದಿಲ್ಲ. ಇನ್ನೂ ಹೆಚ್ಚಿನ ಹಣ ಹಾಕಬೇಕೆಂದು ತಿಳಿಸಿ ₹2.44 ಲಕ್ಷ ಹಣ ವರ್ಗಾವಣೆ ಮಾಡಿಸಿಕೊಂಡಿದ್ದ’ ಎಂದು ಮೂಲಗಳು ಹೇಳಿವೆ.

ಬಿಕ್ಲು ಶಿವ ಕೊಲೆ ಪ್ರಕರಣ: ಮತ್ತೆ ರೌಡಿಪಟ್ಟಿಗೆ ಜಗ್ಗ

ಬೆಂಗಳೂರು: ರೌಡಿ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಹತ್ಯೆ ಪ್ರಕರಣದ ಮೊದಲನೇ ಆರೋಪಿ ಜಗದೀಶ್ ಅಲಿಯಾಸ್ ಜಗ್ಗನ ಹೆಸರನ್ನು ಮತ್ತೆ ರೌಡಿಪಟ್ಟಿಗೆ ಸೇರಿಸಲಾಗಿದೆ.

ಈ ಹಿಂದೆಯೂ ಜಗ್ಗನ ಹೆಸರು ರೌಡಿ ಪಟ್ಟಿಯಲ್ಲಿತ್ತು. ಕೆಲವು ತಿಂಗಳ ಹಿಂದೆ ರೌಡಿಪಟ್ಟಿಯಿಂದ ಹೆಸರನ್ನು ಕೈಬಿಡಲಾಗಿತ್ತು. ಇದೀಗ ಜಗದೀಶ್ ವಿರುದ್ಧ ಮತ್ತೆ ಭಾರತಿನಗರ ಪೊಲೀಸ್ ಠಾಣೆಯಲ್ಲಿ ರೌಡಿಪಟ್ಟಿ ತೆರೆಯಲಾಗಿದೆ. ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಜಗದೀಶ್ ಸಿಐಡಿ ಕಸ್ಟಡಿಯಲ್ಲಿದ್ದಾನೆ.

ಜುಲೈ 15ರಂದು ಶಿವಪ್ರಕಾಶ್ ಅವರ ಕೊಲೆ ನಡೆದಿತ್ತು. ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರವು ಸಿಐಡಿಗೆ ವಹಿಸಿತ್ತು. ವಿದೇಶದಲ್ಲಿ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿ ಜಗದೀಶ್‌ನನ್ನು ಸಿಐಡಿ ಪೊಲೀಸರು ದೆಹಲಿಯಲ್ಲಿ ಬಂಧಿಸಿದ್ದರು. ಬಳಿಕ, ನಗರಕ್ಕೆ ಕರೆತಂದು ಕೋರ್ಟ್‌ಗೆ ಹಾಜರು ಪಡಿಸಿದ್ದರು.

ಪುಣೆ ರೇಸ್

ಟೈಮ್ ಅಂಡ್ ಟೈಡ್ ಗೆಲ್ಲುವ ನಿರೀಕ್ಷೆ

ಅಕ್ಕಸಾಹೇಬ್ ಮಹಾರಾಜ್ ಟ್ರೋಫಿ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟೈಮ್ ಅಂಡ್ ಟೈಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ದಿ ಅಥಬಸ್ಕ 1, ಸ್ಟಾರ್ ರೊಮ್ಯಾನ್ಸ್ 2, ಶಿ ಈಸ್ ಎ ಟೀಸರ್ 6
2ನೇ ರೇಸ್: ಒಡಿಸ್ಸಿಯಸ್ 5, ರೆಜಿನಾ ಮೆಮೋರಾಬಿಲಿಸ್ 4, ಎಕ್ಸುಮಾ 3
3ನೇ ರೇಸ್: ಈಗಲ್ ಐ 2, ಅಲೇಜ್ ಎಟಾಯ್ಲ್ 1, ಸಕನ 8
4ನೇ ರೇಸ್: ಓಪಸ್ ಡಿ 2, ಸ್ಪ್ಯಾನಿಶ್ ಐಸ್ 5, ಚಾರ್ಡಿಕಲ 7
5ನೇ ರೇಸ್: ಎಲ್ ಮೊರನ್ 1, ಸೆನೆಕ 3, ಟ್ರಯಲ್ ಬ್ಲೇಜರ್ 5
6ನೇ ರೇಸ್: ಟೈಮ್ ಅಂಡ್ ಟೈಡ್ 1, ಮ್ಯಾಗಿಲೆಟೊ 2, ಕ್ರೆಡೆನ್ಸ್ 6
7ನೇ ರೇಸ್: ಕೆರಡಾಕ್ 1, ಜುರಕಾನ್ 2, ಎನ್‌ಫೋರ್ಸರ್ 4
8ನೇ ರೇಸ್: ಟಾಬಿರ್ 7, ಗೋಲ್ಡಿವ 1, ರೆಡ್ ಡಸ್ಟ್ 2

ಉತ್ತಮ ಬೆಟ್: ಈಗಲ್ ಐ

ಜಾಕ್‌ಪಾಟ್‌ಗೆ	ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Commercial

COMMERCIAL AREA FOR RENT
3200 Square feet, Duplex Shop of LIC Office Opposite, Saradadevi Nagar, MYSORE
SUITABLE FOR ALL TYPE OF BUSINESS
Contact: 94480 43796

BBMP 'A' KHATHA Prime Property around 85,000 sqft. around 500 mts. from Kengeri Metro Available for Long LEASE. Built to Suit for Companies, School, College etc. 9483509169

SHOP SHOW Room 800 to1000 sq Feet For Rent in Sheshadripuram Main Road Contact: Srinivas: 9448463652, Arjun:8762687674

House

3 BHK Duplex (FF), Car Parking D Group Layout Annapurneshwari Nagar Rent 45K Negotiable: 9448505498

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PUBLIC NOTICE

PUBLIC NOTICE
Notice is hereby given that the immovable properties situated at M.G. Palya Village, Kylancha Hobli, Ramanagara Taluk, Bengaluru South District, Karnataka are proposed to be purchased by Mr. Sagar Patel L, Mrs. Shobha Vikram and Mrs. Indra Kumari.
Property Details & Boundaries: (1) Sy. No. 56/1 – 11 Guntas East: Road, West: Land of M.S. Vinod Kumar, North: Sy. No. 56/4, Jayabharathi Co. (Late P. Prabhakar), South: Sy. No. 56/2, Land of Suresh R. & Kumar R.(2) Sy. No. 55/4 - 1 Acre 6 Guntas East: Land of Shashikala, Suresh R. & Kumar R., West: Land of Sharadamma (Late Simpregowda), North: Sy. No. 56/3, Jayabharathi Co. (Late P. Prabhakar), South: Land of Jayamma Kom Maranna(3) Sy. No. 55/5 - 17 GuntasEast: Land of Suresh R. & Kumar R., West: Land of Sharadamma, Ramaiah, Eerappa & Puttabairappa, North: Land of M.S. Vinod Kumar, South: Land of M. Varija Kom Kesavamurthy(4) Sy. No. 55/6 - 10 Guntas East: Land of Suresh R. & Kumar R., West: Land of Ramaiah, Eerappa & Puttabairappa, North: Land of Jayamma Kom Maranna, South: Land of M. Shivakumar bin Late M. Maregowda Any person/ institution having claim, charge, lien or objection must notify the undersigned with documents within 15 days of this publication, failing which the transaction shall proceed and no claims will be entertained.
Sd/- Mr. Sagar Patel
Bengaluru.
Ph: 8088895855

MAHESHWARI SOUHARDA CREDIT CO-OPERATIVE SOCIETY LTD
#69, Sirsi Circle, Chamrajpet, Bangalore
Phone No : 080-48544445 / 26704425
E mail: mscctd2016@gmail.com
Regd. No. RSR/SOUKA/REG/100/4371/2015-2016
NOTICE OF AGM
Notice is hereby given that 9th Annual General Body Meeting of the Co-operative for the F.Y. 2024-25 will be held on Sunday, 21.09.2025 at 11.00 AM.
Venue: Maheshwari Bhavan, Okalipuram, Bangalore - 21
By The Order of Board of Directors
Sd/- Shobha. D, CEO

ಭಾರತದ ಸರ್ವೋಚ್ಚ ನ್ಯಾಯಾಲಯದ ಸಮ್ಮುಖದಲ್ಲಿ
ಎಕ್ಸ್ಟ್ರಾರ್ಡಿನರಿ ಅಪ್ಪೆಲ್ಲೇಟ್ ಜುರಿಸ್ಡಿಕ್ಷನ್
ಮಧ್ಯಂತರ ಪರಿಹಾರ ಕೋರಿಕೆಯ ಸ್ಪೆಷಲ್ ಲೀವ್ ಪಿಟಿಷನ್
(ಸಿವಿಲ್) ನಂ. 27351/2024
ರಾಜೇಂದ್ರ ಸೇಠಿಯಾ ... ಅರ್ಜಿದಾರರು / ಅಪ್ಪೆಲ್ಲೆಂಟ್
ವಿರುದ್ಧ
ಅಮ್ಮುಸಲಾಮ್ ಲುಬ್ನಾ ಅಖ್ತರ್ ...ಎದುರುದಾರರು
ಮತ್ತು ಇನ್ನಿತರರು
ಗೆ,
1. ಸೂದ್ ಅಹ್ಮದ್ ಬಿನ್ ಲೇಟ್ ಸೈಯದ್ ಅಬ್ದುಲ್ ಖಾದರ್, ವಯಸ್ಕ, ನಂ. 562, 8ನೇ ಮುಖ್ಯರಸ್ತೆ, 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು, ಕರ್ನಾಟಕ — ಪಿಐಡಿ: 199846/2025/R[9] IN ಎಸ್‌ಎಲ್‌ಪಿ(ಸಿ) ನಂ.27351/2024 (ಸೆಕ್ಷನ್ IV-ಎ)
2. ಪ್ರಸೂನ್ ಬ್ಯಾನರ್ಜಿ ಬಿನ್ ಎಂ. ಬ್ಯಾನರ್ಜಿ, ನಂ. 26/1ಎ, 1ನೇ ಅಡ್ಡರಸ್ತೆ, ಮಿಲ್ಲರ್ಸ್ ರಸ್ತೆ, ಬೆಂಗಳೂರು–16, ಕರ್ನಾಟಕ — ಪಿಐಡಿ: 199847/2025/R[10] IN ಎಸ್‌ಎಲ್‌ಪಿ(ಸಿ) ನಂ.27351/2024 (ಸೆಕ್ಷನ್ IV-ಎ)
ಅದಾಗ್ಯೂ, ಮೇಲ್ಕಂಡ ಅರ್ಜಿದಾರರ ಪರವಾಗಿ ವಕೀಲರಾದ ಶ್ರೀಮತಿ. ಬಿ. ವಿಜಯಲಕ್ಷ್ಮೀ ಮೆನನ್ ಎಂಬುವರು, ಮೇಲೆ ತಿಳಿಸಲಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಕೆಯಲ್ಲಿನ ವಿಳಂಬಕ್ಕೆ ಕ್ಷಮೆ ಕೋರಿಕೆ, ಪರವಾಣಿಗೆಗಾಗಿ ಒ.ಟಿ., ಅರ್ಜಿ ಸಲ್ಲಿಸಲು ವಿನಾಯತಿ ಕೋರಿ, ಪೂರಕ ಸೇವೆ ಬೇಡಿಕೆ ಅರ್ಜಿಯೊಂದಿಗೆ (ಪ್ರತಿ ಲಗತ್ತಿಸಲಾಗಿದೆ) ಮಧ್ಯಂತರ ಪರಿಹಾರ ಕೋರುತ್ತ ರಿಜಿಸ್ಟ್ರಿಯಲ್ಲಿ ಸ್ಪೆಷಲ್ ಲೀವ್ ಅಪೀಲ್ ಸಲ್ಲಿಸಿದ್ದರು ಮತ್ತು ಸದರಿ ಅರ್ಜಿಯು 14ನೇ ನವೆಂಬರ್, 2024 ರಂದು ಮಾನ್ಯ ನ್ಯಾಯಾಲಯದ ಸಮ್ಮುಖದಲ್ಲಿ ವಿಚಾರಣೆಗೆ ಬಂದಿತ್ತು, ಹಾಗೂ ಮಾನ್ಯ ನ್ಯಾಯಾಲಯವು ಕೆಳಗಿನಂತೆ ಆದೇಶ ಹೊರಡಿಸಿರುತ್ತದೆ:
1. ಅರ್ಜಿದಾರರ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲರ ಮಂಡನೆಯನ್ನು ಆಲಿಸಲಾಯಿತು ಮತ್ತು ದಾಖಲೆಯಲ್ಲಿದ್ದ ವಿಷಯಗಳನ್ನು ಅವಲೋಕಿಸಲಾಯಿತು.
2. ವಿಳಂಬವನ್ನು ಕ್ಷಮಿಸಲಾಗಿದೆ.
3. ನಾಲ್ಕು ವಾರಗಳ ನಂತರ ಹಿಂದಿರುಗಬಲ್ಲ ನೋಟಿಸ್ ಹೊರಡಿಸುವುದು.
4. ಹೆಚ್ಚುವರಿಯಾಗಿ ದಸ್ತಿ ಸೇವೆಗೆ ಪರವಾಣಿಗೆ ನೀಡಲಾಗಿದೆ.
5. ಸ್ಯೂಟ್ ಸ್ವತ್ತಿಗೆ ಸಂಬಂಧಿತ ಸ್ವರೂಪ, ಗುಣಲಕ್ಷಣ ಮತ್ತು ಸ್ವಾಧೀನತೆಯಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳಬೇಕೆಂದು ಪಕ್ಷಗಾರರಿಗೆ ನಿರ್ದೇಶನ ನೀಡಲಾಗಿದೆ.
ಮತ್ತು ಅದಾಗ್ಯೂ, ಮೇಲ್ಕಂಡ ವಿಷಯವು ಎಲ್‌ಡಿ. ರಿಜಿಸ್ಟ್ರಾರ್‌ರವರ ನ್ಯಾಯಲಯದ ಎದುರು 21ನೇ ಆಗಸ್ಟ್, 2025 ರಂದು ವಿಚಾರಣೆಗೆ ಬಂದಿತ್ತು ಮತ್ತು ವಿಚಾರಣೆಯ ಬಳಿಕ ಕೆಳಗಿನಂತೆ ಆದೇಶ ಹೊರಡಿಸಲಾಯಿತು:–
“ಎದುರುದಾರ ನಂ. 1 ರಿಂದ 8 ರವರಿಂದ ಈಗಾಗಲೇ ಕೌಂಟರ್ ಅಫಿಡವಿಟ್ ಸಲ್ಲಿಸಲಾಗಿದೆ ಜೊತೆಗೆ ಅಧಿಕೃತ ಅನುವಾದ ಸಲ್ಲಿಕೆಗೆ ವಿನಾಯಿತಿ ಕೋರುವ ಅರ್ಜಿ ಕೂಡ ಸಲ್ಲಿಕೆಯಾಗಿದೆ.
ಅರ್ಜಿದಾರರ ಎಲ್‌ಡಿ. ವಕೀಲರು, ಎದುರುದುದಾರ ನಂ. 9 ಮತ್ತು 10 ರವರಿಗೆ ಸರ್ವೀಸ್ ನೀಡುವ ಉದ್ದೇಶಕ್ಕಾಗಿ ಪ್ರಕಟಣೆಯ ಮೂಲಕ ಸೇವೆ ಸಲ್ಲಿಸಲು ಪೂರಕ ಸೇವೆಗಾಗಿ ಅರ್ಜಿ ಸಲ್ಲಿಸಿದ್ದರು. ಅವಕಾಶ ನೀಡಲಾಯಿತು. ಇದಕ್ಕೆ ಸಂಬಂಧಿತ ಪ್ರಕಟಣೆಯ ಪುರಾವೆಯನ್ನು ಸಲ್ಲಿಸಲು, ಅರ್ಜಿದಾರರ ಎಲ್‌ಡಿ. ವಕೀಲರಿಗೆ ನಾಲ್ಕು ವಾರಗಳ ಕಾಲಾವಕಾಶ ನೀಡಲಾಗಿದೆ.
ಪುನಃ 07.10.2025 ರಂದು ವಿಚಾರಣೆ.”
ಆದ್ದರಿಂದ, ಇದೀಗ ಗಮನಿಸಿ, ಮೇಲೆ ತಿಳಿಸಲಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಕೆಯಲ್ಲಿನ ವಿಳಂಬಕ್ಕೆ ಕ್ಷಮೆ ಕೋರಿಕೆ, ಪರವಾಣಿಗೆಗಾಗಿ ಒ.ಟಿ., ಅರ್ಜಿ ಸಲ್ಲಿಸಲು ವಿನಾಯತಿ ಕೋರಿಕೆಯುಳ್ಳ ಮತ್ತು ಮಧ್ಯಂತರ ಪರಿಹಾರ ಕೋರಿಕೆಯುಳ್ಳ ಅರ್ಜಿಯನ್ನು ಶೀಘ್ರದಲ್ಲಿಯೇ ಸದರಿ ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಕೈಗೆತ್ತಿಕೊಳ್ಳಲಾಗುತ್ತದೆ ಮತ್ತು ನೀವು ಖುದ್ದಾಗಿಯಾಗಲಿ ಅಥವಾ ಈ ನ್ಯಾಯಾಲಯದ ದಾಖಲೆಯಲ್ಲಿರುವ ನಿಮ್ಮ ವಕೀಲರ ಮೂಲಕವಾಗಲಿ, ನೋಟಿಸ್ ಪೂರ್ತಿಯಾದ ದಿನಾಂಕದಿಂದ 30 ದಿನಗಳೊಳಗೆ ಸದರಿ ನ್ಯಾಯಾಲಯಕ್ಕೆ ಹಾಜರಾಗಬೇಕು. ನಂತರ ಅದೇ ದಿನದಂದು ಎಸ್‌ಎಲ್‌ಪಿ ಸಲ್ಲಿಕೆಯಲ್ಲಿನ ವಿಳಂಬವನ್ನು ಏಕೆ ಕ್ಷಮಿಸಬಾರದು ಮತ್ತು ಕೋರಲಾಗಿರುವ ಸ್ಪೆಷಲ್ ಲೀವ್ ಪಿಟಿಷನ್ ಮತ್ತು ಮಧ್ಯಂತರ ಪರಿಹಾರವನ್ನು ಏಕೆ ಮಂಜೂರು ಮಾಡಬಾರದು ಹಾಗೂ ಮೇಲ್ಮನವಿಗೆ ಏಕೆ ಅವಕಾಶ ನೀಡಬಾರದು ಎಂಬುದಕ್ಕೆ ನಿಮ್ಮ ಶೋಕಾಸ್ ಸಲ್ಲಿಸಬಹುದು.
ನೋಟಿಸ್ ಸ್ವೀಕೃತ ದಿನಾಂಕದಿಂದ 30 ದಿನಗಳೊಳಗೆ ಅಥವಾ ವಿಚಾರಣೆಗೆ ನಿಗದಿತ ದಿನಾಂಕಕ್ಕೆ ಮುಂಚಿನ ಎರಡು ವಾರಗಳೊಳಗೆ, ಇದರಲ್ಲಿ ಯಾವ ಅವಧಿ ಮೊದಲೊ ಆ ಅವಧಿಯೊಳಗೆ, ಎಸ್.ಸಿ.ಆರ್. 2013 ಆದೇಶ 21ರ ರೂಲ್ 14(1)ರ ಅಡಿಯಲ್ಲಿ ಸಲ್ಲಿಕೆಯಾಗಿರುವ ಅರ್ಜಿಯನ್ನು ವಿರೋಧಿಸಿ ನೀವು ನಿಮ್ಮ ಅಫಿಡವಿಟ್ ಸಲ್ಲಿಸಬಹುದು, ಆದರೆ ಇದನ್ನು ಕಾನೂನಿನ ಪ್ರಶ್ನೆಗಳ ವಿರೋಧದಲ್ಲಿನ ಹಿನ್ನಲೆಗಳ ಅಥವಾ ಎಸ್‌ಎಲ್‌ಪಿ‘ಯಲ್ಲಿ ಉಲ್ಲೇಖಿತ ಹಿನ್ನಲೆಗಳ ಚೌಕಟ್ಟಿನಲ್ಲಿಯೆ ಸಲ್ಲಿಸತಕ್ಕದ್ದು ಮತ್ತು ಯಾವ ಆದೇಶದ ಎಸ್‌ಎಲ್‌ಪಿ ವಿರುದ್ಧ ಸಲ್ಲಿಕೆಯಾಗಿರುವ ನ್ಯಾಯಾಲಯ/ನ್ಯಾಯಾಧಿಕರಣದ ಎದುರು, ಅದೇ ಚೌಕಟ್ಟಿನಲ್ಲಿರುವ ಮಂಡನೆಗಳನ್ನು ಹಾಗೂ ದಾಖಲಾತಿಗಳನ್ನು ಸಲ್ಲಿಸುವುದು ಮತ್ತು ಮಧ್ಯಂತರ ಆದೇಶ ಮಂಜೂರು ಮಾಡಕೂಡದು ಎಂಬುದರ ಹಿನ್ನಲೆಗಳನ್ನು ಅಥವಾ ಈಗಾಗಲೇ ಮಧ್ಯಂತರ ಆದೇಶ ಹೊರಡಿಸಲಾಗಿದ್ದರೆ, ಅಂತಹುದನ್ನು ಕೈಬಿಡುವುದಕ್ಕೆ ಹಿನ್ನಲೆಗಳನ್ನು ಸಲ್ಲಿಸಬೇಕು.
ಮುಂದುವರಿದಂತೆ, ಮೇಲೆ ತಿಳಿಸಿರುವಂತೆ ನೀವು ನ್ಯಾಯಾಲಯಕ್ಕೆ ಹಾಜರಾಗದಿದ್ದಲ್ಲಿ, ಮನವಿದಾರರ ಮೇಲ್ಮನವಿಗೆ ಸಂಬಂಧಿತ ಸ್ಪೆಷಲ್ ಲೀವ್ ಮಂಜೂರು ಮಾಡಿದ ಬಳಿಕವೂ ನಿಮಗೆ ಹೆಚ್ಚಿನ ಸೂಚನೆಗಳನ್ನು ನೀಡಲಾಗುವುದಿಲ್ಲ ಮತ್ತು ಮೇಲ್ಕಂಡ ವಿಷಯವನ್ನು ನಿಮ್ಮ ಅನುಪಸ್ಥಿತಿಯಲ್ಲಿಯೇ ಇತ್ಯರ್ಥಪಡಿಸಲಾಗುತ್ತದೆ.
ಅರ್ಜಿದಾರರ ವಕೀಲರು — ಸಹಾಯಕ ರಿಜಿಸ್ಟ್ರಾರ್
ಶ್ರೀಮತಿ. ಬಿ. ವಿಜಯಲಕ್ಷ್ಮೀ ಮೆನನ್ (ವಕೀಲರು)
ನವದೆಹಲಿ
ದಿನಾಂಕ: 22ನೇ ಆಗಸ್ಟ್, 2025

ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ.,
(ನೊಂ. ಜೆ.ಆರ್.ಬಿ.ಎವಿಡಿ:14:2009–2010)
ನಂ.7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು– 560094. ಫೋ.ನಂ. 080–2351 1414 / 2341 1416
60ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನೆ
ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಯ 2024–25ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ದಿನಾಂಕ 14-09-2025ರ ಭಾನುವಾರ ಮಧ್ಯಾಹ್ನ 2-00 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ರವರ ಅಧ್ಯಕ್ಷತೆಯಲ್ಲಿ, ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್, ಪೋಸ್ಟ್ ಆಫೀಸ್ ರಸ್ತೆ, ಸಂಜಯನಗರ, ಬೆಂಗಳೂರು-560094 ಈ ಆವರಣದಲ್ಲಿ ನಡೆಸಲಾಗುವುದೆಂದು ಸಂಘದ ಸದಸ್ಯರೆಲ್ಲರಿಗೂ ಈಗಾಗಲೇ ಅಂಚೆ ಮೂಲಕ ಆಹ್ವಾನ ಪತ್ರಿಕೆಯನ್ನು ಕಳುಹಿಸಿದೆ, ಆಹ್ವಾನ ಪತ್ರ ತಲುಪದೇ ಇದ್ದ ಪಕ್ಷದಲ್ಲಿ ಇದೇ ಆಹ್ವಾನ ಪತ್ರ ಎಂದು ಸದಸ್ಯರು ತಿಳಿದು, ವಾರ್ಷಿಕ ಮಹಾ ಸಭೆಗೆ ಹಾಜರಾಗಲು ಕೋರಲಾಗಿದೆ. ಸಂಘದ ಉಪನಿಯಮದ ಸಂಖ್ಯೆ 7(6)ರ ಪ್ರಕಾರ ಸಹ ಸದಸ್ಯರು ಮತ್ತು ನಾಮಮಾತ್ರ ಸದಸ್ಯರು ಮಹಾ ಸಭೆಗೆ ಹಾಜರಾಗಲು ಅವಕಾಶವಿರುವುದಿಲ್ಲ.
ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– (ಮಹೇಶ್. ಎಂ.ಎನ್), ಕಾರ್ಯದರ್ಶಿ, K.P.T.E.H.C.S. LTD.,
ಸ್ಥಳ: ಬೆಂಗಳೂರು ದಿನಾಂಕ: 06–09–2025

JOB OPPORTUNITIES

General

WANTED TELE CALLERS Experienced female. Accommodation also available. Basaveshwaranagara Bangalore. 8217593354/ 9964617174

EXECUTIVE REQUIRED with 2 wheeler (Retired Person can also Apply)For Reputed Plywood and Laminated Board 25000/+Incentive Call: 9945826948

WANTED HELPERS BOYS for Automobile Company J.C. Road, Bangalore Contact: 9844008922/ 9611728254 (11am to 5pm)

Wanted

CUSTOMER SUPPORT Executives with Computer and Communication Skills Location Yeshwanthpur/ Mahalakshmi Layout 2-3 Years experience Email: chandrashekar@synergics.in / Mob: 9341856562

Manager

JAMES BOND Dry cleaners requires store Managers (Candidates with minimum 2 years experience in Dry cleaning only) Salary: 18,000 to 25,000 + incentives Location: Konankunte or Indiranagar or Gandhi Bazaar, Bangalore Timings: 9:30am to 9pm, Call: 8050666007

Teachers/ Professors

"MAITHRY VIDYANIKETHAN" NRI.Layout Ramamurthynagar Bengaluru. Required Trained, Experienced TEACHERS to teach English & Social Science for primary and Middle school, (Ladies preferred) Send Resume to: maithry2003@gmail.com or Call: 9900311166/ Walk-in Interview

APS COLLEGE OF ENGINEERING
(Affiliated to VTU, Belagavi, Approved by AICTE New Delhi Accredited by NAAC, Regd. by Government of Karnataka)
Somanahalli Kanakpura Road, Bengaluru- 560116.
Contact: 9448452508. Website: www.apsce.ac.in
REQUIRED
INVITES APPLICATIONS FOR
PRINCIPAL - 1 / PROFESSORS - 3
ASSOCIATE PROFESSORS - 5
ASSISTANT PROFESSORS - 10
PLACEMENT OFFICER - 1
(with MBA qualification)
AS PER AICTE NORMS
DEPARTMENT OF: COMPUTER SCEINCE & INFORMATION SCIENCE & ENGINEERING
APS COLLEGE OF ENGINEERING, Somanahalli, Kanakapura Road, B'lore.
Interested candidates are informed to send their resume within seven days from the date of this advertisement to the Principal, APS College of Engineering through Email: principal.apsce@gmail.com.
NOTE: Candidates with MCA qualification are not eligible to apply.
(CA Dr. Vishnu Bharath Alampalli) President — (Prof. A. Prakash) General Secretary

REQUIRED
OFFICE ADMIN with any Degree Preferably B.Com with Good Communication Skills & Computer Knowledge.
Walk-in Interview on Saturday at 9:00 am
JANANI VIDYA MANDIRA
3rd Block, Sir M V Layout, Ullal Road,Bengaluru-110
Call: 7337774350 9449832935

MATRIMONIAL

Matrimonial Bureaus

USHODHAYA MATRIMONIAL (Estd: 1998)
For Elite Profiles Both India/Abroad/ First/ Second/ Late marriages (personalised services).
9611919477
9886884291
8904264291
9741143905

BUSINESS

Business to Business

Business

COLLATERALS/ JOINT VENTURES/ Finance for big Projects/ Take Overs/ Buying/ Selling/ Any Other Good Projects. Vamshadhara Projects And Services. Dr.Swamy Naidu:- 9342247637.

GOA WINE Factory 2.5 Acre Land with all Govt Licenses in working condition. Contact:- Dr.Swamy Naidu Vamshadhara Projects:- 9342247637.

MYSORE 10 Acre (Converted) Offering for Collaterals for 10 years. Contact:- Dr.Swamy Naidu Vamshadhara Projects:- 9342247637.

FOR OUTDOOR Branding, Autoback, Bus back, Cycle, Mobile Van, Police Barricades, Hoardings No parking boards. branding for Educational institutions, Corporates, Business, Jewellery Brands, FMNG's/ Small Eateries/ Events branding Contact Venuscast Technologies Pvt.Ltd. (UAE& Bangalore). www.Venuscast.com Call:9482303339/ 8722123445/ 9538123445

INSURANCE FOR Life, General, Health, Automobile, Factories, Business, Educational institutions, Students, international Travel/ Private &Public sector employees insurances. Contact Victory Fin Services. www.victoryfinservices.com. Call: 7411692219/ 8618576685/ 9482303339

Finance

LOANS ARRANGED for Housing, Business, Educational institutions, Personal, Automobile, Govt.Employees, Software Employees from Banks. Contact Victory Fin Services. www.victoryfinservices.com Call: 7411692219/ 8618576685/ 9482303339

INSTANT LOAN Avail @ 3.5% per annum Personal, Business, Education, Takeover All Type Loan Sundaram Finance. Phone:: 7678360713

Business Offers

General

WE HAVE buyers for well-established schools, International schools, Educational Institutions and colleges in Bangalore. Arun 9945699789.

PERSONAL

Change of Name

I, LINGARAJU. A. S/o.Late. Andanaiah R/a.#04, Mallenahalli Village Gutthalahunase Maralavadi Hobli Ramanagar Dist.562121. Declare that ANDANAIAH, ANDANAPPA and ANDANIGOWDA all Names are one and the same person,which represents my Father's Name. Vide affidavit dated:1.9.2025 before Notary G.R.Rajanna Bangalore.

I, AFIFA TAZMEEN MOHAMMED JAVED SHAIKH R/@. #10, 10th Cross, Vasanthnagar, Bangalore-560001, have changed my name to AFIFA TAZMEEN SHAIKH vide affidavit dated 06/09/2025, before notary Meer Hassan Bangalore.

I, SHIMMANTH ARJUN SHIVAKUMAR have changed my name to SHIMANTH ARJUN DODDAMANE SHIVAKUMAR vide affidavit dated: 6/9/2025 Before Notary Manohar Jeerige Bangalore.

DH Classifieds More value, more impact — ಪ್ರಜಾವಾಣಿ
NAME CHANGE @50/-* PER WORDS
Book your Name change Ad in DH All Karnataka + Prajavani Bengaluru City All Days
*Conditions apply
www.dhclassifieds.com BOOK NOW
For more details contact: 7795158424 9900428036

ದರ ಇಳಿಸಿದ ವಾಹನ ಕಂಪನಿಗಳು

ಒಂದನೇ ಪುಟದಿಂದ...

'ಜಿಎಸ್‌ಟಿ ದರ ಇಳಿಕೆಯ ಪ್ರಯೋಜನವನ್ನು ನಮ್ಮ ಗ್ರಾಹಕರಿಗೆ ವರ್ಗಾಯಿಸಲು ನಿರ್ಧರಿಸಿದ್ದೇವೆ. ಇದು ಗ್ರಾಹಕರಿಗೆ ಕಾರುಗಳು ಕೈಗೆಟಕುವಂತೆ ಮಾಡಲಿದೆ. ಜೊತೆಗೆ ಹಬ್ಬದ ಋತುವಿನಲ್ಲಿ ವಾಹನಗಳಿಗೆ ಬೇಡಿಕೆಯನ್ನು ಹೆಚ್ಚಿಸುವ ನಿರೀಕ್ಷೆ ಇದೆ' ಎಂದು ರೆನೊ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ವೆಂಕಟ್‌ರಾಮ್ ಎಂ. ಹೇಳಿದ್ದಾರೆ.

ಟೊಯೊಟ ಬೆಲೆ ಇಳಿಕೆ: ಟೊಯೊಟ ಕಿರ್ಲೋಸ್ಕರ್ ಮೋಟರ್ (ಟಿಕೆಎಂ) ತನ್ನ ವಾಹನಗಳ ಬೆಲೆಯನ್ನು ₹3.49 ಲಕ್ಷದವರೆಗೆ ಕಡಿಮೆ ಮಾಡಿದೆ. ಪರಿಷ್ಕೃತ ದರವು ಇದೇ 22ರಿಂದ ಜಾರಿಗೆ ಬರಲಿದೆ.

ಗ್ಲಾನ್ಜಾ ಹ್ಯಾಚ್‌ಬ್ಯಾಕ್ ವಾಹನದ ಬೆಲೆ ₹85,300 ಇಳಿಕೆ ಆಗಿದೆ. ಟೈಸರ್ ₹1.11 ಲಕ್ಷ, ರೂಮಿಯನ್ ₹48,700, ಹೈರೈಡರ್ ₹65,400, ಕ್ರಿಸ್ಟಾ ₹1.80 ಲಕ್ಷ, ಹೈಕ್ರಾಸ್ ₹1.15 ಲಕ್ಷ ಮತ್ತು ಫಾರ್ಚುನರ್ ಕಾರಿನ ಬೆಲೆಯನ್ನು ₹3.49 ಲಕ್ಷ ತಗ್ಗಿಸಿದೆ.

ಲೆಜೆಂಡರ್ ₹3.34 ಲಕ್ಷ, ಹಿಲಕ್ಸ್ ₹2.52 ಲಕ್ಷ, ಕ್ಯಾಮ್ರಿ ₹1.01 ಲಕ್ಷ ಮತ್ತು ವೆಲ್‌ಫೈರ್ ಬೆಲೆ ₹2.78 ಲಕ್ಷ ತಗ್ಗಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಮರ್ಸಿಡೀಸ್ ಬೆಂಜ್ ಕಂಪನಿಯು ಗರಿಷ್ಠ ₹11 ಲಕ್ಷದವರೆಗೆ ಬೆಲೆ ಇಳಿಸಿದೆ.

ಟಾಟಾ ಮೋಟರ್ಸ್ ತನ್ನ ವಾಹನಗಳ ಬೆಲೆಯನ್ನು ₹65 ಸಾವಿರ ದಿಂದ ₹1.55 ಲಕ್ಷ ದವರೆಗೆ ಈಗಾಗಲೇ ಕಡಿಮೆ ಮಾಡಿದೆ.

ಪ್ರಯೋಜನ ವರ್ಗಾವಣೆ ಮೇಲೆ ನಿಗಾ

'ಜಿಎಸ್‌ಟಿ ಇಳಿಕೆಯ ಪ್ರಯೋಜನ ವರ್ಗಾಯಿಸುವ ಬಗ್ಗೆ ಕಂಪನಿಗಳಿಂದ ಪೂರಕ ಪ್ರತಿಕ್ರಿಯೆ'

ನವದೆಹಲಿ (ಪಿಟಿಐ): ಜಿಎಸ್‌ಟಿ ದರ ಇಳಿಕೆಯ ಪ್ರಯೋಜನವು ಗ್ರಾಹಕರಿಗೆ ವರ್ಗಾವಣೆ ಆಗುವುದನ್ನು ತಾವು ಖುದ್ದಾಗಿ ಮೇಲ್ವಿಚಾರಣೆ ನಡೆಸುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ದರ ಇಳಿಕೆಯ ವಿಚಾರವಾಗಿ ಕಂಪನಿಗಳು ಧನಾತ್ಮಕ ಪ್ರತಿಕ್ರಿಯೆ ನೀಡಿವೆ ಎಂದೂ ಅವರು ಹೇಳಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ನಿರ್ಮಲಾ ಅವರು, ದರ ಇಳಿಕೆಯು ಪ್ರತಿ ಕುಟುಂಬಕ್ಕೂ ಪ್ರಯೋಜ ನಕಾರಿ, ಇದು ಬೇಡಿಕೆಯನ್ನು ಹೆಚ್ಚಿಸುವಂಥದ್ದು ಹಾಗೂ ಅರ್ಥ ವ್ಯವಸ್ಥೆಗೆ ಬಲ ನೀಡುವಂಥದ್ದು ಎಂದು ಹೇಳಿದ್ದಾರೆ.

'ತೆರಿಗೆ ಇಳಿಕೆಯ ತೀರ್ಮಾನ ಪ್ರಕಟವಾದ ಕೆಲವೇ ದಿನಗಳಲ್ಲಿ ಕಾರು ತಯಾರಿಕಾ ಕಂಪನಿಗಳು, ವಿಮಾ ಕಂಪನಿಗಳು, ಪಾದರಕ್ಷೆ ಹಾಗೂ ಸಿದ್ಧ ಉಡುಪುಗಳ ತಯಾರಕರು ಬೆಲೆ ಇಳಿಕೆಯ ಘೋಷಣೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಇತರರೂ ಇದೇ ಹಾದಿ ತುಳಿಯುವ ನಿರೀಕ್ಷೆ ಇದೆ' ಎಂದು ಹೇಳಿದ್ದಾರೆ.

ಈ ಸುಧಾರಣೆಯು ದೇಶದ ಎಲ್ಲ 140 ಕೋಟಿ ಜನರ ಬದುಕಿನ ಮೇಲೆ ಪರಿಣಾಮ ಉಂಟುಮಾಡುತ್ತದೆ.

ವಿಪಕ್ಷಗಳ ನಾಯಕರು ಅಪ್ರಬುದ್ಧ ಹೇಳಿಕೆಗಳನ್ನು ನೀಡಿ ಜನರ ದಾರಿ ತಪ್ಪಿಸುತ್ತಿದ್ದಾರೆ. ಅವರು ದೇಶಕ್ಕೆ ಹಾನಿ ಮಾಡುತ್ತಿದ್ದಾರೆಯೇ ಹೊರತು, ದೇಶಕ್ಕೆ ಸೇವೆ ಸಲ್ಲಿಸುತ್ತಿಲ್ಲ

ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವೆ

ಆರ್ಥಿಕತೆಗೆ ಉತ್ತೇಜನ: ವೈಷ್ಣವ್

ಜಿಎಸ್‌ಟಿ ಸರಳೀಕರಣವು ಸಾಮಾನ್ಯ ಜನರಿಗೆ ಪ್ರಯೋಜನ ಉಂಟುಮಾಡುವುದರ ಜತೆಯಲ್ಲೇ ಭಾರತದ ಆರ್ಥಿಕತೆಗೆ ಉತ್ತೇಜನ ನೀಡಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಶನಿವಾರ ಪ್ರತಿಪಾದಿಸಿದರು. ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ಜನರ ಮೇಲೆ 'ಭಾರಿ ತೆರಿಗೆಯ ಹೊರೆ' ಇತ್ತು ಎಂದು ಅವರು ಆರೋಪಿಸಿದರು.

ಜನಸಾಮಾನ್ಯರನ್ನು ಗಮನದಲ್ಲಿ ಇರಿಸಿಕೊಂಡು ಸುಧಾರಣೆಗಳನ್ನು ತರಲಾಗಿದೆ ಎಂದು ತಿಳಿಸಿದ್ದಾರೆ.

ಫೆಬ್ರುವರಿಯಲ್ಲಿ ಮಂಡಿಸಿದ ಬಜೆಟ್‌ನಲ್ಲಿ ನಿರ್ಮಲಾ ಅವರು ಆದಾಯ ತೆರಿಗೆ ಮಿತಿಯನ್ನು ಹೆಚ್ಚಿಸಿ, ಜನರ ಕೈಯಲ್ಲಿ ಹೆಚ್ಚು ಹಣ ಉಳಿಯುವಂತೆ ಮಾಡಿದರು. ಈಗ ಜಿಎಸ್‌ಟಿ ದರ ಇಳಿಕೆಯ ಮೂಲಕ ಉತ್ಪನ್ನಗಳ ಬೆಲೆ ತಗ್ಗುವಂತೆ ಮಾಡಲಾಗಿದೆ.

ಜಿಎಸ್‌ಟಿ ದರ ಇಳಿಕೆಯ ಪ್ರಯೋಜನವು ಗ್ರಾಹಕರಿಗೆ ಲಭ್ಯವಾಗುವುದನ್ನು ಖಾತರಿಪಡಿಸುವ ಕುರಿತ ಪ್ರಶ್ನೆಗೆ ನಿರ್ಮಲಾ ಅವರು, 'ನಮ್ಮ ಸಚಿವಾಲಯವು ಉದ್ಯಮಗಳು ಮತ್ತು ವರ್ತಕ ವಲಯದ ಜೊತೆ ಮಾತುಕತೆ ನಡೆಸುತ್ತಿದೆ. ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸುವುದಾಗಿ ಎಲ್ಲರೂ ಹೇಳಿದ್ದಾರೆ... ಎಲ್ಲರೂ ಅದನ್ನು ಮಾಡುತ್ತಾರೆ ಎಂಬ ವಿಶ್ವಾಸ ನನಗಿದೆ' ಎಂದಿದ್ದಾರೆ.

'ಸೆಪ್ಟೆಂಬರ್ 22ರಿಂದ ನನ್ನ ಕೆಲಸದಲ್ಲಿ ಆದ್ಯತೆ ಪಡೆದುಕೊಳ್ಳುವ ಸಂಗತಿಯು, ದರ ಇಳಿಕೆಯ ಪ್ರಯೋಜನವು ಗ್ರಾಹಕರಿಗೆ ವರ್ಗಾವಣೆ ಆಗಿದೆಯೇ ಎಂಬುದನ್ನು ಪರಿಶೀಲಿಸುವುದು. ಎಲ್ಲೆಲ್ಲಿ ಇದು ಗ್ರಾಹಕರಿಗೆ ವರ್ಗಾವಣೆ ಆಗಿಲ್ಲವೋ ಅಲ್ಲಿ ನಾನು ಉದ್ದಿಮೆಗಳ ಜೊತೆ ಮಾತುಕತೆ ನಡೆಸಿ, ಪ್ರಯೋಜನವನ್ನು ಗ್ರಾಹಕರಿಗೆ ದಾಟಿಸಬೇಕು ಎಂಬುದನ್ನು ಹೇಳುತ್ತೇನೆ' ಎಂದಿದ್ದಾರೆ.

'ಉತ್ತಮ ವಿಪಕ್ಷ ನಾಯಕರ ಅಗತ್ಯವಿದೆ'

ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ಸರಳೀಕರಣ ನಿರ್ಧಾರವನ್ನು ಟೀಕಿಸುತ್ತಿರುವ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿರುವ ಸಚಿವೆ ನಿರ್ಮಲಾ ಸೀತಾರಾಮನ್, 'ಭಾರತಕ್ಕೆ ಉತ್ತಮ ವಿಪಕ್ಷ ನಾಯಕರ ಅಗತ್ಯವಿದೆ' ಎಂದಿದ್ದಾರೆ.

'ಭಾರತವು ಒಳ್ಳೆಯ ವಿಪಕ್ಷವನ್ನು ಹೊಂದಲು ಅರ್ಹವಾಗಿದೆ ಎಂಬುದನ್ನು ನಾನು ಬಲವಾಗಿ ನಂಬುತ್ತೇನೆ. ಭಾರತಕ್ಕೆ ಉತ್ತಮ ವಿರೋಧ ಪಕ್ಷದ ನಾಯಕರ ಅಗತ್ಯವಿದೆ. ಇಂತಹ ಅಪ್ರಬುದ್ಧ ಹೇಳಿಕೆಗಳು ಯಾವುದೇ ಪ್ರಯೋಜನ ನೀಡದು' ಎಂದು ಟೀಕಿಸಿದ್ದಾರೆ.

ಜಿಎಸ್‌ಟಿ ಸರಳೀಕರಣ ನಿರ್ಧಾರವನ್ನು ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಘೋಷಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಸಾಂವಿಧಾನಿಕ ಸಂಸ್ಥೆಯಾಗಿರುವ ಜಿಎಸ್‌ಟಿ ಮಂಡಳಿಯ ಶಕ್ತಿಗುಂದಿಸಿದ್ದಾರೆ ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಮಾಡಿರುವ ಆರೋಪವನ್ನು ಅವರು ಅಲ್ಲಗಳೆದರು.

'ತೆರಿಗೆ ವ್ಯವಸ್ಥೆಯಲ್ಲಿನ ಸುಧಾರಣೆಗಳ ಕುರಿತು ದೇಶದ ಪ್ರಧಾನಿಯಾಗಿ ಮೋದಿ ಅವರು ಹೇಳಿಕೆ ನೀಡಿರುವುದರಲ್ಲಿ ತಪ್ಪೇನಿದೆ' ಎಂದು ನಿರ್ಮಲಾ ಪ್ರಶ್ನಿಸಿದರು. '2017ರಲ್ಲಿ ಜಿಎಸ್‌ಟಿ ಜಾರಿಗೆ ಬಂದಾಗ ನಾಲ್ಕು ತೆರಿಗೆ ಹಂತಗಳನ್ನು ನಿಗದಿಪಡಿಸಿದ್ದಕ್ಕೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ದೂಷಿಸುವುದರಲ್ಲಿ ಅರ್ಥವಿಲ್ಲ' ಎಂದು ಹೇಳಿದರು.

'ಜಿಎಸ್‌ಟಿ ಜಾರಿಯಲ್ಲಿ ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳು ಕೂಡಾ ಪ್ರಮುಖ ಪಾತ್ರ ವಹಿಸಿದ್ದವು. ಕಾಂಗ್ರೆಸ್‌ನವರಿಗೆ ಜಿಎಸ್‌ಟಿ ಇತಿಹಾಸದ ಬಗ್ಗೆ ತಿಳಿವಳಿಕೆಯಿಲ್ಲದಿದ್ದರೆ, ಮೌನವಾಗಿರುವುದು ಒಳಿತು' ಎಂದರು.

'ಜಿಎಸ್‌ಟಿ ಜಾರಿ ಸಂದರ್ಭದಲ್ಲಿ ನಾಲ್ಕು ತೆರಿಗೆ ಹಂತಗಳು ಇರಬೇಕೆಂಬ ತೀರ್ಮಾನವನ್ನು ವಿವಿಧ ರಾಜ್ಯಗಳ ಹಣಕಾಸು ಸಚಿವರ ಉನ್ನತಾಧಿಕಾರ ಸಮಿತಿಯು ತೆಗೆದುಕೊಂಡಿತ್ತು. ಬಿಜೆಪಿ ಅಥವಾ ಅಂದಿನ ಹಣಕಾಸು ಸಚಿವ ಅರುಣ್ ಜೇಟ್ಲಿ ತೆಗೆದುಕೊಂಡ ನಿರ್ಧಾರ ಆಗಿರಲಿಲ್ಲ' ಎಂಬುದನ್ನು ನೆನಪಿಸಿದರು.

ಸುದ್ದಿ 2 ನಿಮಿಷ

ಯುಎನ್‌ಜಿಎ: ಮೋದಿ ಬದಲು ಜೈಶಂಕರ್ ಭಾಷಣ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 80ನೇ ಅಧಿವೇಶನದ ಉನ್ನತ ಮಟ್ಟದ ಸಾಮಾನ್ಯ ಚರ್ಚೆಯಲ್ಲಿ (ಯುಎನ್‌ಜಿಎ) ಈ ಬಾರಿ ಪ್ರಧಾನಿ ನರೇಂದ್ರ ಮೋದಿ ಭಾಷಣ ಇರುವುದಿಲ್ಲ. ಭಾಷಣಗಾರರ ತಾತ್ಕಾಲಿಕ ಪರಿಷ್ಕೃತ ಪಟ್ಟಿ ಪ್ರಕಟಿಸಲಾಗಿದ್ದು, ಅದರಲ್ಲಿ ಭಾರತದ ಪ್ರಧಾನಿಯ ಹೆಸರಿಲ್ಲ. ಭಾರತದಿಂದ ಒಬ್ಬ 'ಸಚಿವ' ಪ್ರತಿನಿಧಿಸುತ್ತಾರೆ ಎಂಬ ಮಾಹಿತಿ ಪಟ್ಟಿಯಲ್ಲಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನ ಇದೇ 9ರಿಂದ ಆರಂಭವಾಗಲಿದೆ. ಇದೇ 23ರಿಂದ ಇದೇ 29ರವರೆಗೆ ಉನ್ನತ ಮಟ್ಟದ ಸಾಮಾನ್ಯ ಚರ್ಚೆ ನಡೆಯಲಿದೆ. ಈ ಅಧಿವೇಶನದಲ್ಲಿ ವಾಡಿಕೆಯಂತೆ ಮೊದಲು ಮಾತನಾಡುವ ಅವಕಾಶ ಬ್ರೆಜಿಲ್ ನಂತರ ಅಮೆರಿಕಕ್ಕೆ ಇದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 'ಯುಎನ್‌ಜಿಎ' ವೇದಿಕೆಯಲ್ಲಿ ವಿಶ್ವ ಮುಖಂಡರನ್ನು ಉದ್ದೇಶಿಸಿ ಇದೇ 23ರಂದು ಭಾಷಣ ಮಾಡಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಬದಲು, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಇದೇ 27ರಂದು ಭಾಷಣ ಮಾಡಲಿದ್ದಾರೆ. ಇಸ್ರೇಲ್, ಚೀನಾ, ಪಾಕಿಸ್ತಾನ, ಬಾಂಗ್ಲಾದೇಶಕ್ಕೆ 'ಯುಎನ್‌ಜಿಎ' ವೇದಿಕೆಯಲ್ಲಿ ಮಾತನಾಡಲು ಇದೇ 26ರಂದು ಅವಕಾಶ ನೀಡಲಾಗಿದೆ.



ಇಸ್ರೇಲ್–ಹಮಾಸ್ ಸಂಘರ್ಷ, ರಷ್ಯಾ–ಉಕ್ರೇನ್ ಯುದ್ಧದ ಬಗ್ಗೆಯೂ ಚರ್ಚೆ ನಡೆಯುವ ಸಾಧ್ಯತೆಗಳಿವೆ.

ಅಮೆರಿಕ: ರಕ್ಷಣಾ ಇಲಾಖೆ ಹೆಸರು 'ಯುದ್ಧ' ಎಂದು ನಾಮಕರಣ

ವಾಷಿಂಗ್ಟನ್ (ಎಪಿ): ವಿಶ್ವದಾದ್ಯಂತ ಯುದ್ಧ ನಿಲ್ಲಿಸುವ ಕುರಿತು ಶಾಂತಿ ಪ್ರಚಾರ ಮಾಡುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಇದೀಗ ತಮ್ಮ ದೇಶದ ರಕ್ಷಣಾ ಇಲಾಖೆಯ ಹೆಸರನ್ನೇ 'ಯುದ್ಧ ಇಲಾಖೆ'ಯನ್ನಾಗಿ ಮರುನಾಮಕರಣ ಮಾಡಿ ಶುಕ್ರವಾರ ಆದೇಶ ಹೊರಡಿಸಿದ್ದಾರೆ.

'ಅಮೆರಿಕವು ವಿಶ್ವದ ಶಕ್ತಿಶಾಲಿ ರಾಷ್ಟ್ರ ಎಂಬ ಸಂದೇಶ ನೀಡಲು ಈ ನಿರ್ಧಾರ ಕೈಗೊಳ್ಳಲಾಗಿದೆ. ಇದು ಗೆಲುವು ಮತ್ತು ಪ್ರಬಲ ಸಾಮರ್ಥ್ಯದ ಸಂದೇಶವನ್ನು ನೀಡುತ್ತದೆ ಎಂದು ಭಾವಿಸಿದ್ದೇನೆ' ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ.

ಕಾಂಗ್ರೆಸ್ (ಅಮೆರಿಕ ಸಂಸತ್ತು) ಸಂಸದರು ಮರುನಾಮಕರಣಕ್ಕೆ ಔಪಚಾರಿಕವಾಗಿ ಒಪ್ಪಿಗೆ ಸೂಚಿಸಿದ್ದಾರೆ. ಮರುನಾಮಕರಣ ಆದೇಶದ ಬಳಿಕ ರಕ್ಷಣಾ ಇಲಾಖೆಯ ಕಚೇರಿಯ ಆವರಣದಲ್ಲಿನ ಫಲಕ ಹಾಗೂ ವೆಬ್‌ಸೈಟ್ ಸೇರಿದಂತೆ ಎಲ್ಲಾ ಕಡೆ ಹೆಸರು ಬದಲಾವಣೆ ಮಾಡಲಾಗಿದೆ.

ತಂಬಾಕಿಗೆ ಜಿಎಸ್‌ಟಿ ಅಡಿ ತೆರಿಗೆ ಹೆಚ್ಚಳ; ಬೆಳೆಗಾರರಲ್ಲಿ ಆತಂಕ

ಅಡಿಕೆ ಮಾರುಕಟ್ಟೆಯಲ್ಲಿ ಮಿಶ್ರ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಮಂಗಳೂರು/ಶಿವಮೊಗ್ಗ: ತಂಬಾಕಿನ ಮೇಲಿನ ಜಿಎಸ್‌ಟಿ ಹೆಚ್ಚಳ ಆಗಲಿರುವ ಪರಿಣಾಮವಾಗಿ ಕೆಲವರು ಹಿಂಬಾಗಿಲಿನಿಂದ, ಬಿಲ್ ಇಲ್ಲದೆ ಅಡಿಕೆ ವ್ಯಾಪಾರಕ್ಕೆ ಕೈ ಹಾಕುವ ಸಾಧ್ಯತೆ ಇದೆ ಎಂಬ ಆತಂಕ ಕರಾವಳಿ ಭಾಗದ ಬೆಳೆಗಾರರಲ್ಲಿ ಉಂಟಾಗಿದೆ.

ಅಡಿಕೆ ಉತ್ಪಾದನೆಯಲ್ಲಿ ದೊಡ್ಡ ಭಾಗವು ಗುಟ್ಕಾ, ಪಾನ್ ಮಸಾಲಾ ತಯಾರಿಕೆಗೆ ಬಳಕೆಯಾಗುತ್ತದೆ. ತಂಬಾಕು ಇರುವ ಪಾನ್ ಮಸಾಲ ತಿನ್ನುವುದನ್ನು ಚಟ ಮಾಡಿಕೊಂಡವರು ಅದನ್ನು ಬಿಡುವುದು ಕಷ್ಟ. ಹೀಗಾಗಿ ಅಡಿಕೆ ಮಾರುಕಟ್ಟೆಗೆ ತೊಂದರೆ ಆಗುವ, ಅಡಿಕೆಗೆ ಬೇಡಿಕೆ ಕುಸಿಯುವ ಸಾಧ್ಯತೆ ಇಲ್ಲ ಎಂದು ಕೂಡ ಕೆಲವು ತಜ್ಞರು ಹೇಳಿದ್ದಾರೆ.

ಆದರೆ ಅಡಿಕೆಗೆ ಬೇಡಿಕೆ ಕುಸಿಯಬಹುದು ಎಂಬ ಆತಂಕ ಸೃಷ್ಟಿಸಿ ಬಿಲ್ ರಹಿತ ವ್ಯವಹಾರದಂಥ ಬೆಳವಣಿಗೆಗೆ ಮಾರುಕಟ್ಟೆ ಸಾಕ್ಷಿಯಾಗಬಹುದು ಎಂಬುದು ತಜ್ಞರ ಅಭಿಪ್ರಾಯ.

'ಆತಂಕಪಡುವ ಅಗತ್ಯವಿಲ್ಲ': 'ಜಿಎಸ್‌ಟಿ ಹೆಚ್ಚಾದರೆ ಒಂದು ಪ್ಯಾಕೆಟ್ ಪಾನ್ ಮಸಾಲ ಬೆಲೆ 25 ಪೈಸೆ ಹೆಚ್ಚಳ ಆಗಬಹುದು. ಚಟಕ್ಕೆ ಬಿದ್ದವರಿಗೆ ಇದು ದೊಡ್ಡದಲ್ಲ. ಪಾನ್ ಮಸಾಲ ಕಂಪನಿಯವರು ಪ್ಯಾಕೆಟ್‌ನಲ್ಲಿ ಉತ್ಪನ್ನದ ಪ್ರಮಾಣ ಕಡಿಮೆ ಮಾಡಿ ಬೆಲೆ ಸರಿದೂಗಿಸುವಂಥ ಕ್ರಮಕ್ಕೆ ಮುಂದಾದರೂ ಅಚ್ಚರಿಪಡಬೇಕಾಗಿಲ್ಲ. ಆದ್ದರಿಂದ ಅಡಿಕೆ ವ್ಯಾಪಾರದ ಮೇಲೆ ದುಷ್ಪರಿಣಾಮವಾಗುವ ಸಾಧ್ಯತೆ ಕಡಿಮೆ' ಎಂದು ತಜ್ಞ ವಿಘ್ನೇಶ್ವರ ವರ್ಮುಡಿ ಹೇಳಿದರು.

ತಂಬಾಕಿನ ಮೇಲೆ ಶೇ 40ರಷ್ಟು ಜಿಎಸ್‌ಟಿ ವಿಧಿಸುವ ನಿರ್ಧಾರದಿಂದ ಅಡಿಕೆ ಬೆಲೆಯ ಮೇಲೆ ಪರಿಣಾಮ ಆಗಲಿದೆ. ತೆರಿಗೆ ಹೆಚ್ಚಳದಿಂದ ಪಾನ್ ಮಸಾಲಾ ಬೆಲೆ ಹೆಚ್ಚಳ ಆಗುತ್ತದೆ. ಅದು ಖರೀದಿ ಹಾಗೂ ಬಳಕೆಯ ಮೇಲೆ ಪರಿಣಾಮ ಬೀರುತ್ತದೆ. ಖರೀದಿ ಕಡಿಮೆ ಆಗುತ್ತಿದ್ದಂತೆಯೇ ಉತ್ಪಾದನೆಯೂ ತಗ್ಗಿ ಗುಟ್ಕಾ, ಪಾನ್ ಮಸಾಲ ಉದ್ಯಮದಿಂದ ಬೇಡಿಕೆ ಕಡಿಮೆ ಆಗಲಿದೆ. ಇದರಿಂದ ಅಡಿಕೆ ಬೆಲೆ ಕುಸಿತ ಆಗಿ ಬೆಳೆಗಾರರಿಗೆ ತೊಂದರೆ ಆಗಲಿದೆ ಎಂದು ಶಿವಮೊಗ್ಗದ ಮ್ಯಾಮ್‌ಕೋಸ್ ವ್ಯವಸ್ಥಾಪಕ ನಿರ್ದೇಶಕ ಶ್ರೀಕಾಂತ್ ಬರುವಾ ಹೇಳಿದರು.

ಪರಿಣಾಮವಿಲ್ಲ: 'ಶೇ 40ರಷ್ಟು ಜಿಎಸ್‌ಟಿಯಿಂದಾಗಿ ಅಡಿಕೆ ಬೆಳೆಗಾರರಿಗೆ ತೊಂದರೆ ಆಗದು. ಗುಟ್ಕಾ ಜೊತೆ ತಂಬಾಕು ಮಿಶ್ರಣವನ್ನು ಸರ್ಕಾರ ನಿಷೇಧಿಸಿದೆ. ಹೀಗಾಗಿ ಇಲ್ಲಿ ತಂಬಾಕು ಹಾಗೂ ಗುಟ್ಕಾವನ್ನು ಪ್ರತ್ಯೇಕವಾಗಿಯೇ ನೋಡಬೇಕಿದೆ' ಎಂದು ಶಿವಮೊಗ್ಗ ಅಡಿಕೆ ವರ್ತಕರ ಸಂಘದ ಅಧ್ಯಕ್ಷ ಮಾದೇಶ ಹೆಗ್ಡೆ ಹೇಳುತ್ತಾರೆ.

'ಗುಟ್ಕಾ ಜೊತೆ ತಂಬಾಕು ಮಿಶ್ರಣ ಮಾಡಿಕೊಂಡು ತಿನ್ನುವವರಿಗೆ ತಂಬಾಕಿನ ಬೆಲೆ ಹೆಚ್ಚಳದಿಂದ ಸ್ವಲ್ಪ ಹೊರೆಯಾಗಬಹುದು. ಆ ಬಗ್ಗೆ ತಂಬಾಕು ತಯಾರಿಕಾ ಕಂಪನಿಗಳು ಹಾಗೂ ತಂಬಾಕು ಮಿಶ್ರಣ ಮಾಡಿಕೊಂಡು ತಿನ್ನುವವರು ಚಿಂತಿಸಬೇಕಿದೆಯೇ ಹೊರತು ಅಡಿಕೆ ಬೆಳೆಗಾರರು ಮತ್ತು ಮಾರಾಟಗಾರರು ಅಲ್ಲ' ಎಂದು ತಿಳಿಸಿದರು.

'ತಂಬಾಕು ಉತ್ಪನ್ನಗಳ ಮೇಲೆ ಜಿಎಸ್‌ಟಿ ಹೇರಿರುವುದರಿಂದ ಅಡಿಕೆ ದರದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ಬೇಡಿಕೆಯೂ ತಗ್ಗುವುದಿಲ್ಲ. ಈ ಹಿಂದೆ ವ್ಯಾಟ್ ದರವನ್ನು ಶೇ 2 ರಿಂದ 8ಕ್ಕೆ ಏರಿಕೆ ಮಾಡಿದಾಗ, ನಂತರ ಇನ್ನೂ ಶೇ 2ರಷ್ಟು ಹೆಚ್ಚಳ ಮಾಡಿದಾಗಲೂ ಯಾವುದೇ ತೊಂದರೆ ಆಗಿರಲಿಲ್ಲ. ಈಗಲೂ ಆಗುವುದಿಲ್ಲ' ಎಂದರು.

ತಂಬಾಕು ಉತ್ಪನ್ನಗಳಿಗೆ ಜಿಎಸ್‌ಟಿ ಹೆಚ್ಚಳವು ಅಡಿಕೆ ದರದ ಮೇಲೆ ಅಷ್ಟೇನೂ ಪರಿಣಾಮ ಬೀರುವ ಸಾಧ್ಯತೆ ಇಲ್ಲ. ಈಗ ತಂಬಾಕು ಉತ್ಪನ್ನಗಳಿಗೆ ಸೆಸ್ ಮತ್ತು ಇತರ ತೆರಿಗೆ ಸೇರಿ ಶೇ 40ರವರೆಗೆ ಸುಂಕ ಆಗುತ್ತಿತ್ತು. ಈಗ ಅಡಿಕೆ ದರವೂ ಹೆಚ್ಚೇ ಇರುವ ಕಾರಣ ರೈತರ ಮೇಲೆ ತೀರಾ ಪರಿಣಾಮ ಉಂಟಾಗುವ ಸಾಧ್ಯತೆ ಕಡಿಮೆ. ಆದರೆ, ಈಗಿನ ಲಭ್ಯ ಮಾಹಿತಿ ಪ್ರಕಾರ ತೆರಿಗೆಯೇ ಶೇ 40ಷ್ಟು ಆಗುವ ಸಾಧ್ಯತೆಯಿದೆ. ತೆರಿಗೆ ಶೇ 40ರಷ್ಟು, ಸೆಸ್ ಸೇರಿ ಶೇ 52ಕ್ಕಿಂತ ಹೆಚ್ಚಾದರೆ ದರದಲ್ಲಿ ಸ್ವಲ್ಪ ಪ್ರಮಾಣದ ವ್ಯತ್ಯಾಸ ಆಗಬಹುದು. ಈ ಕುರಿತು ಸರಿಯಾದ ಮಾಹಿತಿ ಇನ್ನಷ್ಟೇ ತಿಳಿದು ಬರಬೇಕಿದೆ.

ಗೋಪಾಲಕೃಷ್ಣ ವೈದ್ಯ, ಅಧ್ಯಕ್ಷ, ಟಿಎಸ್‌ಎಸ್, ಶಿರಸಿ

ಅಡಿಕೆ ಧಾರಣೆ

ಚಿತ್ರದುರ್ಗ	
ಆಪಿ	57219-57629
ಬೆಟ್ಟೆ	34649-35099
ಕೆಂಪುಗೋಟು	24600-25000
ರಾಶಿ	56739-57169
ಕಾರ್ಕಳ	
ಹೊಸತು	32500-49000
ಹಳತು	32500-53000
ಕುಮಟಾ	
ಚಾಲಿ	37619-43399
ಚಿಪ್ಪು	21011-31599
ಕೋಕ	8879-23899
ಫ್ಯಾಕ್ಟರಿ	22379-30469
ಹೊಸಚಾಲಿ	34289-43599
ಪುತ್ತೂರು	
ಕೋಕ	20000-28000
ಹೊಸತು	26000-49000
ಹಳತು	37500-53000
ಸಿದ್ದಾಪುರ	
ಬಿಳಿಗೋಟು	26100-32419
ಚಾಲಿ	35090-42899
ಕೋಕ	19319-23699
ಕೆಂಪುಗೋಟು	23700-26800
ರಾಶಿ	44099-49599
ತಟ್ಟಿಬೆಟ್ಟೆ	27800-35089
ಶಿರಸಿ	
ಬೆಟ್ಟೆ	33009-40969
ಬಿಳಿಗೋಟು	27300-36200
ಚಾಲಿ	39011-44219
ಕೆಂಪುಗೋಟು	13000-25599
ರಾಶಿ	47011-49299

ಸುಧಾ, ಮಯೂರ ಓದಿರಿ

'ಆಪ್ತ ಸ್ನೇಹಿತ'ರ ಬಾಂಧವ್ಯ ಜಪ

ಒಂದನೇ ಪುಟದಿಂದ...

ಭಾರತ ಜತೆ ತಲೆದೋರಿರುವ ಬಿಕ್ಕಟ್ಟನ್ನು ಅಮೆರಿಕವು ಬಗೆಹರಿಸುವ ಸಾಧ್ಯತೆಯ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಎರಡೂ ರಾಷ್ಟ್ರಗಳು ವಿಶೇಷ ಸಂಬಂಧ' ಹೊಂದಿವೆ ಎಂದಿದ್ದಾರೆ.

ಜೂನ್ 17ರಂದು ದೂರವಾಣಿ ಸಂಭಾಷಣೆ ನಡೆಸಿದ ನಂತರ ಉಭಯ ದೇಶಗಳ ನಾಯಕರು ತಮ್ಮ ನಡುವಿನ ಅಭಿಪ್ರಾಯ ವಿನಿಮಯ ಮಾಡಿಕೊಂಡಿರುವುದು ಇದೇ ಮೊದಲು. ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕವು ಶೇ 50ರಷ್ಟು ಸುಂಕ ವಿಧಿಸಿದ ಬಳಿಕ ಉಭಯ ದೇಶಗಳ ನಡುವಣ ಬಾಂಧವ್ಯ ಕುಸಿತದ ಹಾದಿ ಹಿಡಿದಿದೆ. ಭಾರತವು ರಷ್ಯಾದಿಂದ ತೈಲ ಖರೀದಿ ಮುಂದುವರಿಸಿರುವುದಕ್ಕೆ ಪ್ರತಿಯಾಗಿ ಅಮೆರಿಕವು ಹೆಚ್ಚಿನ ಸುಂಕ ವಿಧಿಸುವ ನಿರ್ಧಾರ ತೆಗೆದುಕೊಂಡಿದೆ. ಟ್ರಂಪ್ ಆಡಳಿತದ ನಿರ್ಧಾರವನ್ನು ಭಾರತ, 'ಅನ್ಯಾಯ ಮತ್ತು ಅಸಮಂಜಸ ಕ್ರಮ' ಎಂದು ಟೀಕಿಸಿತ್ತು.

'10 ಕೋಟಿ ರೈತರಿಗೆ ಅನುಕೂಲ'

ನವದೆಹಲಿ (ಪಿಟಿಐ): ಹಾಲಿನ ಉತ್ಪನ್ನಗಳು, ಕೃಷಿಯಲ್ಲಿ ಬಳಕೆ ಮಾಡುವ ವಿವಿಧ ಉತ್ಪನ್ನಗಳು ಹಾಗೂ ಆಹಾರ ಸಂಸ್ಕರಣೆಯಲ್ಲಿ ಬಳಕೆಯಾಗುವ ಉತ್ಪನ್ನಗಳ ಮೇಲಿನ ಜಿಎಸ್‌ಟಿ ಇಳಿಕೆ ಕ್ರಮದಿಂದಾಗಿ 10 ಕೋಟಿಗೂ ಹೆಚ್ಚಿನ ರೈತರಿಗೆ ನೇರವಾಗಿ ಪ್ರಯೋಜನ ಆಗಲಿದೆ ಎಂದು ಕೇಂದ್ರ ಸಹಕಾರ ಸಚಿವಾಲಯ ಹೇಳಿದೆ.

ಹಾಲು ಮತ್ತು ಪನೀರ್‌ಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡಲಾಗಿದೆ. ಕೆಲವು ಉಪಕರಣಗಳ ಮೇಲಿನ ತೆರಿಗೆ ಕಡಿಮೆ ಮಾಡಲಾಗಿದೆ. ಇದರಿಂದಾಗಿ ರೈತರಿಗೆ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹೆಚ್ಚು ಲಾಭ ಆಗುವ ಸಾಧ್ಯತೆ ಇದೆ. ಅಮುಲ್‌ನಂತಹ ಪ್ರಮುಖ ಹಾಲು ಉತ್ಪಾದಕ ಸಂಸ್ಥೆಗಳು ತೆರಿಗೆ ಇಳಿಕೆ ಕ್ರಮವನ್ನು ಸ್ವಾಗತಿಸಿವೆ.

ಟ್ರ್ಯಾಕ್ಟರ್ ಹಾಗೂ ಕೆಲವು ಕೃಷಿ ಉಪಕರಣಗಳ ಮೇಲಿನ ತೆರಿಗೆ ಇಳಿಕೆ ಕ್ರಮ ಮಿಶ್ರ ಬೇಸಾಯ ಹಾಗೂ ಪಶು ಸಾಕಣೆಯಲ್ಲಿ ತೊಡಗಿರುವ ಸಣ್ಣ ರೈತರಿಗೆ ಪ್ರಯೋಜನಕಾರಿ ಆಗಿದೆ ಎಂದು ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ) — ಬೆಂಗಳೂರು

ಬೆಂಗಳೂರು	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹565

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹222-640
ದ್ವಿತಳಿ (ಬಿ.ವಿ)	₹370-863

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹167

ಈರುಳ್ಳಿ ಧಾರಣೆ — ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1700
ಮಧ್ಯಮ	₹600-1000
ಸಣ್ಣ	₹200-600

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹23000-23000
ದಾವಣಗೆರೆ	₹14800-15000
ತುಮಕೂರು	₹24500-28100

ಗಾಜಾದ ಮಗುವಿಗೆ ಇಟಲಿಯಲ್ಲಿ ಚಿಕಿತ್ಸೆ

ನೇಪಲ್ಸ್ (ಎಪಿ): ಇಸ್ರೇಲ್ ಮತ್ತು ಹಮಾಸ್ ಮಧ್ಯೆ ಯುದ್ಧ ಆರಂಭವಾಗುವುದಕ್ಕೂ ಕೆಲವೇ ತಿಂಗಳು ಮುಂಚೆ ಹುಟ್ಟಿ, ಈಗ ಎರಡು ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ಶಾಮ್ ಖುದೇ ಎಂಬ ಹೆಣ್ಣುಮಗುವಿಗೆ ಇಟಲಿಯ ಆಸ್ಪತ್ರೆಯಲ್ಲಿ ಆರೈಕೆ ನಡೆಯುತ್ತಿದೆ.

ಹುಟ್ಟಿನಿಂದಲೇ ಆಕೆಗೆ ಪಚನ ಸಂಬಂಧಿ ಕಾಯಿಲೆ ಇತ್ತು. ಯುದ್ಧ ಆರಂಭವಾದ ಬಳಿಕ ಈ ಕುಟುಂಬವು ಹಲವು ಬಾರಿ ಅಲ್ಲಿಂದ ಇಲ್ಲಿಗೆ ಓಡಾಡಿ, ನಿರಾಶ್ರಿತರಾಗಿದ್ದಾರೆ. ಮಗುವಿಗೆ ಪೌಷ್ಟಿಕ ಊಟವನ್ನೇ ನೀಡಲು ಕುಟುಂಬಕ್ಕೆ ಸಾಧ್ಯವಾಗಿರಲಿಲ್ಲ.

ಚರ್ಮವು ಮೂಳೆಗೆ ಅಂಟಿ ಹೋಗಿ, ಎದೆಗೂಡಿನ ಮೂಳೆಗಳು ಹೊರಗೆ ಬಂದಿದ್ದ ಸ್ಥಿತಿಯಲ್ಲಿ ಶಾಮ್‌ಳನ್ನು ಕೆಲವು ವಾರಗಳ ಹಿಂದಷ್ಟೇ ಇಟಲಿ ಆಸ್ಪತ್ರೆಗೆ ಕರೆತರಲಾಗಿತ್ತು. ಈಕೆಯೊಂದಿಗೆ ಇನ್ನೂ 181 ಗಾಜಾದ ಮಕ್ಕಳು ಇಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಾಮ್ ಈಗ ನಿಧಾನಕ್ಕೆ ಚೇತರಿಸಿಕೊಳ್ಳುತ್ತಿದ್ದಾಳೆ. ಆಸ್ಪತ್ರೆಗೆ ಬರುವಾಗ ಅಮ್ಮನ ಎದೆಗವಚಿಕೊಂಡು ಬಂದಿದ್ದ ಇವಳು 4 ಕೆ.ಜಿ. ಇದ್ದಳು. ಈಗ ಒಂದು ವಾರದಲ್ಲಿ 5.5 ಕೆ.ಜಿ ಆಗಿದ್ದಾಳೆ. ಅಮ್ಮ, ಅಕ್ಕ ಕರೆದರೆ ನಗುತ್ತಾಳೆ. ವೈದ್ಯರು ಚಿಕಿತ್ಸೆ ಮುಂದುವರಿಸಿದ್ದಾರೆ.

ಲಿಲ್ಲಿ ಹೂ...

ಪಿಟಿಐ ಚಿತ್ರ

ಪಶ್ಚಿಮ ಬಂಗಾಳ ನಾದಿಯಾದ ಕೊಳದಲ್ಲಿ ಅರಳಿದ ಲಿಲ್ಲಿ ಹೂ ಗಳನ್ನು ಕಾರ್ಮಿಕರು ಸಂಗ್ರಹಿಸಿದರು

ಬ್ರಿಟನ್ ಸಂಪುಟ: ಮಹತ್ವದ ಸ್ಥಾನಗಳಿಗೆ ಮಹಿಳೆಯರ ನೇಮಕ

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಸಚಿವ ಸಂಪುಟ ಪುನಾರಚನೆಯನ್ನು ಶನಿವಾರ ಅಂತಿಮಗೊಳಿಸಿದರು. ಪರಿಣಾಮವಾಗಿ ಮಹತ್ವದ ಸ್ಥಾನಗಳಿಗೆ ಮಹಿಳಾ ಸದಸ್ಯರನ್ನು ಆಯ್ಕೆ ಮಾಡಲಾಗಿದೆ.

ಪಾಕಿಸ್ತಾನ ಮೂಲದ ಶಬಾನಾ ಮಹಮ್ಮದ್ ಅವರಿಗೆ ಗೃಹ ಕಾರ್ಯದರ್ಶಿ ಸ್ಥಾನ ನೀಡಲಾಗಿದೆ ಮತ್ತು ಅವೆಟ್ ಕೂಪರ್ ಅವರನ್ನು ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಇದರೊಂದಿಗೆ ಇದೇ ಮೊದಲ ಬಾರಿಗೆ ಸರ್ಕಾರದ ಮಹತ್ವದ ಹುದ್ದೆಗಳಿಗೆ ಮಹಿಳೆಯರನ್ನು ನೇಮಕ ಮಾಡಲಾಗಿದೆ.

'ಗೃಹ ಇಲಾಖೆಯಲ್ಲಿ ಸೇವೆ ಸಲ್ಲಿಸುವುದು ನನಗೆ ಸಿಕ್ಕ ಅತಿ ದೊಡ್ಡ ಗೌರವ. ಸರ್ಕಾರದ ಮೊದಲ ಆದ್ಯತೆ ನಾಗರಿಕರ ಸುರಕ್ಷತೆ' ಎಂದು ಹೇಳಿ ಶಬಾನಾ ಅವರು ಪ್ರಮಾಣವಚನ ಸ್ವೀಕರಿಸಿದರು.

ಕೆನಡಾ ಸರ್ಕಾರದ ವರದಿಯಲ್ಲಿ ಮಾಹಿತಿ ಬಹಿರಂಗ

ಖಾಲಿಸ್ತಾನಿ ಉಗ್ರರಿಗೆ ಆರ್ಥಿಕ ನೆರವು

ಮುಖ್ಯಾಂಶಗಳು

- ಕೆನಡಾದಲ್ಲಿ ಭಾರತ ವಿರೋಧಿ ಚಟುವಟಿಕೆ
- ನವದೆಹಲಿಯ ನಿಲುವು ಸಮರ್ಥಿಸಿದ ವರದಿ
- ಎನ್‌ಜಿಒ, ವಲಸಿಗರಿಂದ ದೇಣಿಗೆ

ಒಟ್ಟಾವ (ಪಿಟಿಐ): ಕನಿಷ್ಠ ಎರಡು ಖಾಲಿಸ್ತಾನಿ ಭಯೋತ್ಪಾದಕ ಸಂಘಟನೆಗಳು ಕೆನಡಾದಿಂದ ಆರ್ಥಿಕ ನೆರವು ಪಡೆದಿವೆ ಎಂದು ಕೆನಡಾ ಸರ್ಕಾರದ ವರದಿಯೊಂದು ತಿಳಿಸಿದೆ.

'ಕೆನಡಾದಲ್ಲಿ ಹಣದ ಅಕ್ರಮ ಚಲಾವಣೆ ಮತ್ತು ಭಯೋತ್ಪಾದಕರಿಗೆ ಹಣಕಾಸಿನ ನೆರವು ನೀಡುತ್ತಿರುವುದರಿಂದ ಸೃಷ್ಟಿಯಾಗಿರುವ ಅಪಾಯಗಳು–2025 ಮೌಲ್ಯಮಾಪನ' ಎಂಬ ಶೀರ್ಷಿಕೆಯ ವರದಿಯಲ್ಲಿ ಈ ಉಲ್ಲೇಖವಿದೆ.

ಬಬ್ಬರ್ ಖಾಲ್ಸಾ ಹಾಗೂ ಸಿಖ್ ಯೂತ್ ಫೆಡರೇಷನ್ ಭಯೋತ್ಪಾದಕ ಸಂಘಟನೆಗಳು ಕೆನಡಾದಲ್ಲಿ ಹಣ ಸಂಗ್ರಹಿಸುತ್ತಿವೆ ಎಂದು ವರದಿ ತಿಳಿಸಿದೆ.

'ಭಾರತದ ಪಂಜಾಬ್‌ನಲ್ಲಿ ಖಾಲಿಸ್ತಾನ್ ಎಂಬ ಸ್ವತಂತ್ರ ರಾಷ್ಟ್ರದ ನಿರ್ಮಾಣಕ್ಕಾಗಿ ಕೆನಡಾದಲ್ಲಿ 1980ರ ದಶಕದಿಂದಲೂ ರಾಜಕೀಯ ಪ್ರೇರಿತ ಹಿಂಸಾತ್ಮಕ ಚಟುವಟಿಕೆಗಳನ್ನು ಖಾಲಿಸ್ತಾನಿ ಉಗ್ರರು ನಡೆಸಿದ್ದಾರೆ' ಎಂದು ಒಟ್ಟಾವದ ಗುಪ್ತಚರ ಸಂಸ್ಥೆಯು ವರದಿ ನೀಡಿದ ಎರಡು ತಿಂಗಳ ಬಳಿಕ ಈ ಬೆಳವಣಿಗೆ ನಡೆದಿದೆ.

'ರಾಜಕೀಯ ಪ್ರೇರಿತ ಹಿಂಸಾತ್ಮಕ ಉಗ್ರವಾದವು (ಪಿಎಂವಿಇ) ನೂತನ ರಾಜಕೀಯ ವ್ಯವಸ್ಥೆ ರೂಪಿಸಲು ಅಥವಾ ಅಸ್ತಿತ್ವದಲ್ಲಿರುವ ವ್ಯವಸ್ಥೆಯಲ್ಲೇ ಹೊಸ ರಚನೆಗಾಗಿ ಹಿಂಸಾಚಾರವನ್ನು ಪ್ರೋತ್ಸಾಹಿಸಲಿದೆ' ಎಂದು ಈಚಿನ ವರದಿಯು ಹೇಳಿದೆ.

'ಕೆನಡಾ ಕ್ರಿಮಿನಲ್ ಕೋಡ್‌ನಡಿ ಪಟ್ಟಿ ಮಾಡಲಾದ ಹಲವು ಭಯೋತ್ಪಾದಕ ಸಂಘಟನೆಗಳು ಪಿಎಂವಿಇ ವರ್ಗದಡಿ ಬರುತ್ತಿವೆ. ಹಮಾಸ್, ಹೆಜ್ಬೊಲ್ಲಾ, ಖಾಲಿಸ್ತಾನಿ ಉಗ್ರರ ಗುಂಪುಗಳಾದ ಬಬ್ಬರ್ ಖಾಲ್ಸಾ ಹಾಗೂ ಇಂಟರ್‌ನ್ಯಾಷನ್ ಸಿಖ್ ಯೂತ್ ಫೆಡರೇಷನ್ ಇದಕ್ಕೆ ಉದಾಹರಣೆಗಳಾಗಿದ್ದು, ಇವುಗಳು ಕೆನಡಾದಲ್ಲಿ ಆರ್ಥಿಕ ನೆರವು ಪಡೆಯುತ್ತಿರುವುದನ್ನು' ಕಾನೂನು ಜಾರಿ ಮತ್ತು ಗುಪ್ತಚರ ಸಂಸ್ಥೆಗಳು ಗಮನಿಸಿವೆ ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕೆನಡಾದ ಹಣಕಾಸು ವಹಿವಾಟುಗಳು ಮತ್ತು ವರದಿಗಳ ವಿಶ್ಲೇಷಣಾ ಕೇಂದ್ರವು ಭಯೋತ್ಪಾದಕ ಚಟುವಟಿಕೆಗಳ ಹಣಕಾಸು ಕುರಿತ 2022ರ ವರದಿಯಲ್ಲಿ ಹೆಜ್ಬೊಲ್ಲಾ ಉಗ್ರ ಸಂಘಟನೆಯು ಕೆನಡಾದಿಂದ ನೆರವು ಪಡೆಯುತ್ತಿರುವ ಎರಡನೇ ಅತಿದೊಡ್ಡ ಸಂಘಟನೆಯಾಗಿದೆ ಎಂದಿದೆ.

ಉಗ್ರ ಸಂಘಟನೆಗಳು ತಮ್ಮ ವಹಿವಾಟಿಗಾಗಿ ಹಣಕಾಸು ಸೇವಾ ವಹಿವಾಟು (ಎಂಎಸ್‌ಬಿ), ಬ್ಯಾಂಕಿಂಗ್ ವಲಯ, ಕ್ರಿಪ್ಟೋಕರೆನ್ಸಿಗಳ ಬಳಕೆ, ರಾಜ್ಯ ಹಣಕಾಸು, ದತ್ತಿ ಹಾಗೂ ಲಾಭೋದ್ದೇಶವಿಲ್ಲದ ಸಂಸ್ಥೆಗಳ (ಎನ್‌ಪಿಒ) ವಲಯವನ್ನು ದುರುಪಯೋಗ ಮಾಡಿಕೊಳ್ಳುತ್ತಿವೆ. ಇದಕ್ಕಾಗಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿವೆ ಎಂಬ ಉಲ್ಲೇಖವಿದೆ.

ನಿಷೇಧಿತ ಸಂಘಟನೆಗಳು ಕೆನಡಾದಲ್ಲಿ ವ್ಯಾಪಕವಾದ ನಿಧಿ ಸಂಗ್ರಹಣೆ ಜಾಲವನ್ನು ಈ ಹಿಂದೆ ಹೊಂದಿದ್ದವು. ಬೇರೆ ದೇಶಗಳಲ್ಲೂ ಹಣ ಸಂಗ್ರಹಿಸುತ್ತಿದ್ದವು. ಇದೀಗ ತಮಗೆ ನಿಷ್ಠರಾಗಿರುವವರಿಂದ ಮಾತ್ರ ಸಂಗ್ರಹಿಸುತ್ತಿವೆ ಎಂಬ ಅಂಶವನ್ನು ವರದಿ ಬಹಿರಂಗಪಡಿಸಿದೆ.

ಖಾಲಿಸ್ತಾನಿ ಉಗ್ರಗಾಮಿ ಸಂಘಟನೆಗಳು ಎನ್‌ಜಿಒ ಸೇರಿದಂತೆ ವಲಸಿಗರಿಂದ ದೇಣಿಗೆ ಸಂಗ್ರಹಿಸುತ್ತಿವೆ.

ಕೆನಡಾದಲ್ಲಿ ಖಾಲಿಸ್ತಾನಿ ಉಗ್ರರು ಭಾರತ ವಿರೋಧಿ ಚಟುವಟಿಕೆಗಳನ್ನು ನಿರ್ಭಯದಿಂದ ನಡೆಸುತ್ತಿದ್ದಾರೆ ಎಂಬ ನವದೆಹಲಿಯ ನಿಲುವನ್ನು ಈ ವರದಿಯಲ್ಲಿನ ಅಂಶಗಳು ಸಮರ್ಥಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ.,
(ನೊಂ. ಜೆ.ಆರ್.ಬಿ.ಎಂಡಿ:14:2009–2010)
ನಂ.7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು– 560094. ಫೋ.ನಂ. 080–2351 1414 / 2341 1416
60ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನೆ
ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಯ 2024–25ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ದಿನಾಂಕ 14-09-2025ರ ಭಾನುವಾರ ಮಧ್ಯಾಹ್ನ 2-00 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ರವರ ಅಧ್ಯಕ್ಷತೆಯಲ್ಲಿ, ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್, ಪೋಸ್ಟ್ ಆಫೀಸ್ ರಸ್ತೆ, ಸಂಜಯನಗರ, ಬೆಂಗಳೂರು-560094 ಈ ಆವರಣದಲ್ಲಿ ನಡೆಸಲಾಗುವುದೆಂದು ಸಂಘದ ಸದಸ್ಯರೆಲ್ಲರಿಗೂ ಈಗಾಗಲೇ ಅಂಚೆ ಮೂಲಕ ಆಹ್ವಾನ ಪತ್ರಿಕೆಯನ್ನು ಕಳುಹಿಸಿದೆ, ಆಹ್ವಾನ ಪತ್ರ ತಲುಪದೇ ಇದ್ದ ಪಕ್ಷದಲ್ಲಿ ಇದೇ ಆಹ್ವಾನ ಪತ್ರ ಎಂದು ಸದಸ್ಯರು ತಿಳಿದು, ವಾರ್ಷಿಕ ಮಹಾ ಸಭೆಗೆ ಹಾಜರಾಗಲು ಕೋರಲಾಗಿದೆ. ಸಂಘದ ಉಪನಿಯಮದ ಸಂಖ್ಯೆ 7(6)ರ ಪ್ರಕಾರ ಸಹ ಸದಸ್ಯರು ಮತ್ತು ನಾಮಮಾತ್ರ ಸದಸ್ಯರು ಮಹಾ ಸಭೆಗೆ ಹಾಜರಾಗಲು ಅವಕಾಶವಿರುವುದಿಲ್ಲ.
ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– (ಮಹೇಶ್. ಎಂ.ಎನ್), ಕಾರ್ಯದರ್ಶಿ, K.P.T.E.H.C.S. LTD.,
ಸ್ಥಳ: ಬೆಂಗಳೂರು ದಿನಾಂಕ: 06–09–2025

ವೈಯಕ್ತಿಕ
Change of Name
I THRIBHUVAN H K son of Hungenahalli Krishnamurthy residing at 208, 20th cross, 27th main, 2nd sector, HSR layout, Bangalore- 560102, have changed the name of my minor son Pradyun Hungenahalli Thribhuvan aged 14 years and he shall be hereafter be know as Pradyun Thribhuvan Gowda
I, RANI W/O H R Krishna Prasad born on 01/01/1971 residing at 2171, Karthikeya, 4th Cross, E Block, Nethaji Circle, Dattagalli 3rd Stage, Mysuru, have changed my name to Veda G S vide affidavit dated 29-Mar-2024 at Mysuru.

ಉದ್ಯೋಗಾವಕಾಶ
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೈವಾಹಿಕ
Brides Wanted
Bride Required Others
ವಧು ಬೇಕಾಗಿದ್ದಾರೆ
ನಾಯಕ (ವಾಲ್ಮೀಕಿ) 40 ವರ್ಷ 5'10", ಬಿಎ ಸರಕಾರಿ ನೌಕರಿ ಬೆಂಗಳೂರಿನಲ್ಲಿ ನೆಲೆಸಿರುವ ವರನಿಗೆ, ಸುಸಂಸ್ಕೃತ ಮನೆತನದ ವಿದ್ಯಾವಂತ ಸೂಕ್ತ ವಧು ಬೇಕಾಗಿದ್ದಾರೆ.
ಮೊ:96328 62052

ಪ್ರವಾಸ
Travel
ಭಾರತೀಯ ರೈಲ್ವೆ
ಶಿವ ಸಾಯಿ ಯಾತ್ರಾ
ನವ ಬೃಂದಾವನ, ಮಂತ್ರಾಲಯ ಪಂಢರಪುರ, ತ್ರ್ಯಂಬಕೇಶ್ವರ ಭೀಮಾಶಂಕರ,ಗೃಷ್ಣೇಶ್ವರ ಶ್ರೀಶೈಲಂ,ಮತ್ತು ಶಿರಡಿ
02.10.25 | 3AC Rs, 37000 | 11 ದಿವಸ
ರೈಲಿನಲ್ಲಿ ಪ್ರಯಾಣ - ವಸತಿ - ಊಟ
93550 21516
WWW.TOURTIMES.IN

WEEKEND CORNER

ಪ್ರಾಚೀನ ಗಾಂಧಾರಿ ಯೋಗ ವಿದ್ಯೆ
7 ರಿಂದ 20 ವರ್ಷ ಒಳಗಿನ ಮಕ್ಕಳಿಗೆ ಮಾತ್ರ ತರಬೇತಿ. ಕೇವಲ 10 ದಿನಗಳು. ಈ ವಿದ್ಯೆ ಕಲಿತ ಮಕ್ಕಳು ಕಣ್ಣುಗಳಿಗೆ ಬಟ್ಟೆ ಕಟ್ಟಿಕೊಂಡು ಪುಸ್ತಕ ಓದುತ್ತಾರೆ, ಬಣ್ಣಗಳನ್ನು ಗುರುತಿಸುತ್ತಾರೆ, ಸೈಕಲ್ ತುಳಿಯುತ್ತಾರೆ, ಬೈಕ್ ಓಡಿಸುತ್ತಾರೆ, ಡ್ರಾಯಿಂಗ್ ಮತ್ತು ಶಾಲೆ ಹೋಂವರ್ಕ್ ಮಾಡುತ್ತಾರೆ, ಬಚ್ಚಿಟ್ಟ ವಸ್ತು-ವ್ಯಕ್ತಿಗಳನ್ನು ಪತ್ತೆ ಮಾಡುತ್ತಾರೆ. ವ್ಯಕ್ತಿಯ ಮನಸ್ಸನ್ನು ಅಧ್ಯಯನ ಮಾಡುತ್ತಾರೆ. ಹೀಗೆ ಅನೇಕ ಇವೆ. ಈ ವಿದ್ಯೆ ಕಲಿತವರ ಚಮತ್ಕಾರಗಳು ನೋಡುಗರನ್ನು ಮೂಕವಿಸ್ಮಿತರಾಗಿಸಿದರೂ ನಿಜ. ಈ ತರಬೇತಿ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಯೋಗ, ಪ್ರಾಣಾಯಾಮ, ಧ್ಯಾನ ಮತ್ತು ಇತರೆ ಚಟುವಟಿಕೆಗಳ ಮೂಲಕ ಮಕ್ಕಳ ಬೌದ್ಧಿಕ, ಮಾನಸಿಕ ಮತ್ತು ಜ್ಞಾಪಕ ಶಕ್ತಿ ವೃದ್ಧಿಗೆ ಈ ತರಬೇತಿ.
ಊಟ ಮತ್ತು ವಸತಿಯುತ ಕಾರ್ಯಕ್ರಮ
ಆಶ್ರಮದಲ್ಲಿ ಮಾತ್ರ- No Branches
ತರಬೇತಿ ಆರಂಭದ ದಿನಾಂಕ:
20/09/2025 ರಿಂದ 29/09/2025
29/09/2025 ರಿಂದ 07/10/2025
ಗಾಂಧಾರಿ ಯೋಗ ವಿದ್ಯೆಯ ಮಕ್ಕಳ ಪ್ರಾತ್ಯಕ್ಷಿಕೆ ಗಾಗಿ Ananda Yoga Pranayama Trust ನ ಯೂಟ್ಯೂಬ್ ವೀಕ್ಷಿಸಿ
ಪೂಜ್ಯ ಶ್ರೀ ಮಂಜುನಾಥ ಗುರೂಜಿ
ಆನಂದ ಯೋಗಾಶ್ರಮ (ರಿ.)
ಜೋಗಿಸರದ ಹತ್ತಿರ, ಉಜ್ಜಿನ ರಸ್ತೆ, ಕೊಟ್ಟೂರು ವಿಜಯನಗರ ಜಿಲ್ಲೆ 583134
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಪೂಜ್ಯ ಶ್ರೀ ಮಂಜುನಾಥ ಗುರೂಜಿ
9900603013/9663921094

ಸ್ಪಂದನ ಚಾರಿಟಬಲ್ ಟ್ರಸ್ಟ್ (ರಿ)
ತಿಮ್ಮಲಾಪುರ ರಸ್ತೆ, ದೂಪದಹಳ್ಳಿ, ಕೊಟ್ಟೂರು ತಾಲೂಕು, ವಿಜಯನಗರ ಜಿಲ್ಲೆ–583134 ಮೊ : 9448394686, 7483388919.
E-Mail Id: Naalkudinadabaduku@gmail.com
ಆಶ್ರಯ ಕೇಂದ್ರ
ಹಲವಾರು ವರ್ಷಗಳಿಂದ ನಮ್ಮ ಸಂಸ್ಥೆಯು ಸಾಮಾಜಿಕ ಜವಾಬ್ದಾರಿ ಹೊತ್ತು ಅನಾಥರಿಗೆ, ವಯೋವೃದ್ಧರಿಗೆ, ಅಂಗವಿಕಲರಿಗೆ (ವಿಕಲಚೇತನ) ನಿಶ್ಯಕ್ತರಿಗೆ ಹಾಗೂ ಹಾಸಿಗೆ ಹಿಡಿದಿರುವ ರೋಗಿಗಳಿಗೆ ನಿಲುಕುವ ಆಶ್ರಯ ತಾಣವಾಗಿದೆ.
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ದೂರವಾಣಿಗಳಿಗೆ ಸಂಪರ್ಕಿಸಲು ಕೋರಲಾಗಿದೆ
7483388919, 9448394686

ದೇಶವ್ಯಾಪಿ 'ಎಸ್‌ಐಆರ್'ಗೆ ಸಿದ್ಧತೆ

ರಾಜ್ಯ ಚುನಾವಣಾ ಅಧಿಕಾರಿಗಳೊಂದಿಗೆ ಸೆಪ್ಟೆಂಬರ್ 10ರಂದು ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳ ಸಭೆ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧ ವ್ಯಕ್ತವಾಗುತ್ತಿರುವಾಗಲೇ, ದೇಶಾದ್ಯಂತ 'ಎಸ್‌ಐಆರ್' ಜಾರಿಗೊಳಿಸಲು ಕೇಂದ್ರ ಚುನಾವಣಾ ಆಯೋಗ ಸಿದ್ಧತೆ ನಡೆಸಿದೆ.

ದೇಶವ್ಯಾಪಿ 'ಎಸ್‌ಐಆರ್' ಜಾರಿಗೆ ಕೈಗೊಳ್ಳಬೇಕಿರುವ ಸಿದ್ಧತೆಗಳ ಕುರಿತು ಚರ್ಚಿಸಲು ಆಯೋಗದ ಉನ್ನತ ಅಧಿಕಾರಿಗಳು ಸೆಪ್ಟೆಂಬರ್ 10ರಂದು ವಿವಿಧ ರಾಜ್ಯಗಳ ಚುನಾವಣಾ ಅಧಿಕಾರಿಗಳೊಂದಿಗೆ ಮಹತ್ವದ ಸಭೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಖ್ಯ ಚುನಾವಣಾ ಆಯುಕ್ತರಾಗಿ (ಸಿಇಸಿ) ಜ್ಞಾನೇಶ್ ಕುಮಾರ್ ಅವರು ಅಧಿಕಾರ ಸ್ವೀಕರಿಸಿದ ಬಳಿಕ, ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳೊಂದಿಗೆ ನಡೆಸುತ್ತಿರುವ ಮೂರನೇ ಸಭೆ ಇದಾಗಿದೆ.

ಬಿಹಾರದ ನಂತರ ದೇಶದ ಉಳಿದ ರಾಜ್ಯಗಳಲ್ಲೂ 'ಎಸ್‌ಐಆರ್' ಜಾರಿಗೊಳಿಸುವುದಾಗಿ ಚುನಾವಣಾ ಆಯೋಗ ಈ ಹಿಂದೆಯೇ ಹೇಳಿತ್ತು. 2026ರಲ್ಲಿ ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು ಇದಕ್ಕೂ ಮುನ್ನ ಅಂದರೆ, ಈ ವರ್ಷಾಂತ್ಯದಿಂದಲೇ ಈ ರಾಜ್ಯಗಳಲ್ಲಿ 'ಎಸ್‌ಐಆರ್' ಪ್ರಕ್ರಿಯೆಗಳು ಆರಂಭಗೊಳ್ಳುವ ಸಾಧ್ಯತೆ ಇದೆ.

'ಎಸ್‌ಐಆರ್' ಉದ್ದೇಶ

- ಜನಸ್ಥಳ ಪರಿಶೀಲನೆಯ ಮೂಲಕ ವಿದೇಶಿ ಅಕ್ರಮ ವಲಸಿಗರನ್ನು ಮತದಾರರ ಪಟ್ಟಿಯಿಂದ ಹೊರಗಿಡುವುದು
- ಬಾಂಗ್ಲಾದೇಶ, ಮ್ಯಾನ್ಮಾರ್ ಸೇರಿ ದೇಶದಲ್ಲಿ ನುಸುಳಿರುವ ವಿದೇಶಿ ಅಕ್ರಮ ವಲಸಿಗರನ್ನು ಗುರುತಿಸುವುದು
- ಮತದಾರರ ಪಟ್ಟಿಯ ಸಮಗ್ರತೆ ರಕ್ಷಿಸಲು, ಸಾಂವಿಧಾನಿಕ ಆದೇಶ ನಿರ್ವಹಿಸಲು ಆಯೋಗದ ಕ್ರಮ
- ಮತಗಟ್ಟೆ ಅಧಿಕಾರಿಗಳು ಬೂತ್ ಮಟ್ಟದಲ್ಲಿ ಪ್ರತಿ ಮನೆಗೆ ಭೇಟಿ ನೀಡಿ, ಮತದಾರರ ವಿವರವನ್ನು ಸಂಗ್ರಹಿಸಿ, ಖಚಿತಪಡಿಸಿಕೊಳ್ಳುವುದು

ವಿಪಕ್ಷಗಳ ಆರೋಪ

- ಬಿಹಾರದಲ್ಲಿ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿಗೆ ಸಹಾಯ ಮಾಡಲು ಆಯೋಗವು 'ಎಸ್‌ಐಆರ್' ಜಾರಿಗೊಳಿಸಿದೆ
- ಅರ್ಹ ಮತದಾರರು ದಾಖಲೆಗಳ ಕೊರತೆ ಕಾರಣದಿಂದ ಅಮೂಲ್ಯವಾದ ಮತದಾನದ ಹಕ್ಕಿನಿಂದ ವಂಚಿತರಾಗುತ್ತಾರೆ

ಘೋಷಣಾ ಪತ್ರ– ಹೊಸ ನಮೂನೆ

ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆ ಮಾಡಲು ಬಯಸುವವರಿಗೆ ಮತ್ತು ಹೊರರಾಜ್ಯಗಳಿಗೆ ಸ್ಥಳಾಂತರಗೊಂಡವರಿಗೆ 'ಎಸ್‌ಐಆರ್'ನಲ್ಲಿ 'ಘೋಷಣಾ ಪತ್ರ' ಎಂಬ ಹೊಸ ನಮೂನೆಯನ್ನು ಪರಿಚಯಿಸಲಾಗಿದೆ.

ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವವರು 1987ರ ಜುಲೈ 1ರ ಮೊದಲು ಜನಿಸಿದವರಾಗಿದ್ದರೆ, ಭಾರತದಲ್ಲಿ ಜನಿಸಿದ್ದೇವೆ ಎನ್ನುವುದಕ್ಕೆ ಜನ್ಮ ದಿನಾಂಕ ಮತ್ತು ಜನ್ಮಸ್ಥಳದ ದಾಖಲೆ ಒದಗಿಸಬೇಕು. 1987ರ ಜುಲೈ 1ರಿಂದ 2004ರ ಡಿಸೆಂಬರ್ 2ರ ಒಳಗೆ ಜನಿಸಿದವರು ತಮ್ಮ ಪೋಷಕರ ಜನ್ಮದಿನಾಂಕ, ಜನ್ಮಸ್ಥಳದ ದಾಖಲೆಯನ್ನೂ ಒದಗಿಸಬೇಕು.

ಸುಪ್ರೀಂಕೋರ್ಟ್ ಸೂಚನೆ

ಯಾವುದೇ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಮತ್ತು ಮತದಾನದ ಹಕ್ಕಿನಿಂದ ವಂಚಿತರಾಗುತ್ತಿಲ್ಲ ಎನ್ನುವುದನ್ನು ಖಚಿತಪಡಿಸಿಕೊಳ್ಳುವಂತೆ ಸುಪ್ರೀಂಕೋರ್ಟ್ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದೆ.

ಕೆಲವು ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳು ಈಗಾಗಲೇ ತಮ್ಮ ರಾಜ್ಯಗಳಲ್ಲಿ ಕೊನೆಯ ಬಾರಿ ಪರಿಷ್ಕರಣೆ ಆಗಿರುವ ಮತದಾರರ ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತಿದ್ದಾರೆ. ಹೆಚ್ಚಿನ ರಾಜ್ಯಗಳು 2002–2004ರ ಅವಧಿಯಲ್ಲಿ ಮತದಾರರ ಪಟ್ಟಿಯನ್ನು ಪರಿಷ್ಕರಿಸಿದ್ದವು.

₹12 ಸಾವಿರ ಕೋಟಿ ಮೌಲ್ಯದ ಮೆಫೆಡ್ರೋನ್ ವಶ

ಮುಂಬೈ: ರಾಸಾಯನಿಕ ಕಂಪನಿ ಹೆಸರಿನಲ್ಲಿ ಮಾದಕವಸ್ತು ತಯಾರಿಸುತ್ತಿದ್ದ ತೆಲಂಗಾಣದ 12 ಮಂದಿಯನ್ನು ಮುಂಬೈ ಪೊಲೀಸರು ಹೈದರಾಬಾದ್‌ನಲ್ಲಿ ಬಂಧಿಸಿದ್ದಾರೆ.

'ಮಾದಕವಸ್ತು ತಯಾರಿಕೆಗೆ ಬೇಕಾದ ಕಚ್ಚಾ ವಸ್ತುಗಳನ್ನೂ ವಶಪಡಿಸಿಕೊಳ್ಳಲಾಗಿದೆ. ಇವನ್ನು ಬಳಸಿಕೊಂಡು ಅಂತರರಾಷ್ಟ್ರೀಯ ಮಾರುಕಟ್ಟೆ ಬೆಲೆಯಲ್ಲಿ ಸುಮಾರು ₹12 ಸಾವಿರ ಕೋಟಿ ಮೌಲ್ಯದ ಮಾದಕವಸ್ತು ತಯಾರಿಸಬಹುದಿತ್ತು' ಎಂದಿದ್ದಾರೆ.

ಮಾದಕವಸ್ತುಗಳನ್ನು ವಶಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ 'ಇದು ಇಲ್ಲಿಯವರೆಗಿನ ಅತ್ಯಂತ ದೊಡ್ಡ ಪ್ರಕರಣ ಎನ್ನಲಾಗುತ್ತಿದೆ. ಕಳೆದ ಹಲವು ವರ್ಷಗಳಿಂದ ಈ ಘಟಕದಲ್ಲಿ ನೂರಾರು ಕೆ.ಜಿ 'ಮೆಫೆಡ್ರೋನ್' ಎಂಬ ಮಾದಕವಸ್ತುವನ್ನು ತಯಾರಿಸಿ ಮಾರಾಟ ಮಾಡಲಾಗಿದೆ ಎಂದು ಅಂದಾಜಿಸಲಾಗಿದೆ.

ಪರೀಕ್ಷೆ ಬರೆಯಲು ಹೆಲಿಕಾಪ್ಟರ್

ಪಿತ್ತೋರಗಢ (ಉತ್ತರಾಖಂಡ) (ಪಿಟಿಐ): ಉತ್ತರಾಖಂಡದಲ್ಲಿ ಮಳೆಯಿಂದಾಗಿ ರಸ್ತೆಗಳಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿರುವ ಕಾರಣ ರಾಜಸ್ಥಾನದ ನಾಲ್ವರು ಬಿ.ಇಡಿ ವಿದ್ಯಾರ್ಥಿಗಳು ಮುನ್ಸಿಯಾರಿ ಪರೀಕ್ಷಾ ಕೇಂದ್ರವನ್ನು ತಲುಪಲು ಹೆಲಿಕಾಪ್ಟರ್ ಬಾಡಿಗೆಗೆ ತೆಗೆದುಕೊಂಡಿದ್ದಾರೆ.

ಓಮಾರಾಮ್ ಜಾಟ್, ಮಂಗಲಾರಾಮ್ ಜಾಟ್, ಪ್ರಕಾಶ್ ಗೋದಾರ ಜಾಟ್ ಮತ್ತು ನರಪತ್ ಕುಮಾರ್ ಹೆಲಿಕಾಪ್ಟರ್‌ನಲ್ಲಿ ಪ್ರಯಾಣ ಬೆಳೆಸಿದ ವಿದ್ಯಾರ್ಥಿಗಳು.

'ಆಗಸ್ಟ್ 31ರಂದು ಹಲ್ದ್ವಾನಿಗೆ ಬಂದಾಗ ಭೂಕುಸಿತದಿಂದ ಪರೀಕ್ಷಾ ಕೇಂದ್ರದ ಮಾರ್ಗಗಳಲ್ಲಿ ಸಂಚಾರಕ್ಕೆ ರದ್ದಾಗಿರುವುದು ತಿಳಿಯಿತು. ಹಲ್ದ್ವಾನಿ ಮತ್ತು ಮುನ್ಸಿಯಾರಿ ನಡುವೆ ಹೆಲಿಕಾಪ್ಟರ್ ಸೇವೆ ನೀಡುವುದು ತಿಳಿಯಿತು. ಆದರೆ, ಹವಾಮಾನ ವೈಪರೀತ್ಯದಿಂದ ಸೇವೆಯನ್ನು ತಾತ್ಕಾಲಿಕವಾಗಿ ರದ್ದು ಮಾಡಲಾಗಿತ್ತು. ಆದರೆ ವಿಮಾನ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯೊಂದಿಗೆ ಜೊತೆ ಮಾತನಾಡಿದ ಬಳಿಕ ಅವರು ನಮಗೆ ಸಹಾಯ ಮಾಡಿದರು' ಎಂದು ವಿದ್ಯಾರ್ಥಿ ಒಮರಾಮ್ ಜಾಟ್ ತಿಳಿಸಿದರು.

ಏಕಮುಖ ಪ್ರಯಾಣಕ್ಕೆ ₹5,200 ಪಾವತಿಸಿದ್ದರು.

ಚಿಟಿಕೆ ಸುದ್ದಿ

ಅಸ್ವಸ್ಥ; ಆಸ್ಪತ್ರೆಗೆ ಸಿಬಿಐ ನಿರ್ದೇಶಕ

ಹೈದರಾಬಾದ್: ಕೇಂದ್ರೀಯ ತನಿಖಾ ಸಂಸ್ಥೆಯ (ಸಿಬಿಐ) ನಿರ್ದೇಶಕ ಪ್ರವೀಣ್ ಸೂದ್, ಹಠಾತ್ ಅಸ್ವಸ್ಥಗೊಂಡು ಶನಿವಾರ ಇಲ್ಲಿನ ಆಸ್ಪತ್ರೆಗೆ ದಾಖಲಾದರು.


ಪ್ರವೀಣ್ ಸೂದ್

ಶ್ರೀಶೈಲದಿಂದ ಹೈದರಾಬಾದ್‌ಗೆ ವಾಪಾಸ್ಸಾಗುತ್ತಿದ್ದ ಅವರ ಆರೋಗ್ಯದಲ್ಲಿ ಏರುಪೇರು ಉಂಟಾಯಿತು. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಸದ್ಯ ಅವರ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಪ್ರವೀಣ್ ಸೂದ್ ಅವರು ಶ್ರೀಶೈಲದ ಭ್ರಮರಾಂಬಿಕಾ ಮತ್ತು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಗಳಿಗೆ ಭೇಟಿ ನೀಡಿ ಮರಳುತ್ತಿದ್ದರು. ಹೈದರಾಬಾದ್‌ನ ಜ್ಯೂಬಿಲಿ ಹಿಲ್‌ನಲ್ಲಿರುವ ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ.

ತನಿಖಾ ಸಮಿತಿಗೆ ಗಣೇಶ್ ಭಟ್

ನವದೆಹಲಿ: ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ವಿರುದ್ಧದ ಆರೋಪಗಳ ಕುರಿತ ತನಿಖಾ ಸಮಿತಿಯ ಕಾರ್ಯದರ್ಶಿಯಾಗಿ ಕರ್ನಾಟಕದ ನಿವೃತ್ತ ಐಆರ್‌ಎಸ್ ಅಧಿಕಾರಿ ಗಣೇಶ್ ಭಟ್ ನೇಮಕವಾಗಿದ್ದಾರೆ.

ಗಣೇಶ್ ಭಟ್

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಗಣೇಶ್ ಭಟ್ ಅವರನ್ನು ಮೂವರು ಸದಸ್ಯರ ತನಿಖಾ ಸಮಿತಿಯ ಕಾರ್ಯದರ್ಶಿಯನ್ನಾಗಿ ನೇಮಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಅರವಿಂದ್ ಕುಮಾರ್, ಮದ್ರಾಸ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮನೀಂದ್ರ ಮೋಹನ್ ಶ್ರೀವಾಸ್ತವ ಹಾಗೂ ಕರ್ನಾಟಕದ ಹಿರಿಯ ವಕೀಲ ಬಿ.ವಿ.ಆಚಾರ್ಯ ಈ ಸಮಿತಿಯ ಸದಸ್ಯರಾಗಿದ್ದಾರೆ.

ಕೊಚ್ಚಿಗೆ ಮರಳಿದ ಇಂಡಿಗೊ ವಿಮಾನ

ಕೊಚ್ಚಿ (ಪಿಟಿಐ): ಅಬುಧಾಬಿಗೆ ತೆರಳುತ್ತಿದ್ದ ಇಂಡಿಗೊ ವಿಮಾನವು ಎರಡು ಗಂಟೆಗಳಿಗೂ ಹೆಚ್ಚು ಹಾರಾಟ ನಡೆಸಿದ ಬಳಿಕ ತಾಂತ್ರಿಕ ದೋಷದಿಂದಾಗಿ ಕೊಚ್ಚಿಗೆ ಹಿಂದಿರುಗಿದೆ ಎಂದು ವಿಮಾನ ನಿರ್ವಾಹಕರು ತಿಳಿಸಿದ್ದಾರೆ.

6ಇ- 1403 (ಕೊಚ್ಚಿ- ಅಬುಧಾಬಿ) ವಿಮಾನವು ಶುಕ್ರವಾರ ರಾತ್ರಿ 11.10ಕ್ಕೆ ಕೊಚ್ಚಿಯಿಂದ ಹೊರಟಿದೆ. ಬಳಿಕ, ತಾಂತ್ರಿಕ ದೋಷ ಕಂಡುಬಂದ ಕಾರಣ ಮುನ್ನೆಚ್ಚರಿಕೆ ಕ್ರಮವಾಗಿ ಶನಿವಾರ ಮುಂಜಾನೆ 1.44ರ ಸುಮಾರಿಗೆ ಕೊಚ್ಚಿ ವಿಮಾನ ನಿಲ್ದಾಣಕ್ಕೆ ಹಿಂದಿರುಗಿದೆ ಎಂದು ಇಂಡಿಗೊ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ವಿಮಾನದಲ್ಲಿ 180 ಪ್ರಯಾಣಿಕರು ಮತ್ತು 6 ಸಿಬ್ಬಂದಿ ಇದ್ದರು. ಮುಂಜಾನೆ 3.30ರ ಸುಮಾರಿಗೆ ಹೊರಟ ಮತ್ತೊಂದು ವಿಮಾನದಲ್ಲಿ ಪ್ರಯಾಣಿಕರನ್ನು ಅಬುಧಾಬಿಗೆ ಕರೆದೊಯ್ಯಲಾಯಿತು ಎಂದು ಮೂಲಗಳು ತಿಳಿಸಿವೆ.

ಮಿದುಳು ಸೋಂಕಿಗೆ ಮತ್ತೊಬ್ಬರು ಬಲಿ

ವಯನಾಡ್ (ಪಿಟಿಐ): ಅತ್ಯಂತ ವಿರಳ ಮತ್ತು ಮಾರಣಾಂತಿಕ ಮಿದುಳು ಸೋಂಕಾದ ಅಮೋಬಿಕ್ ಮೆನಿಂಗೋಎನ್ಸೆಫಲಿಟಿಸ್ ಕಾಯಿಲೆಯಿಂದ 45 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಮೃತರನ್ನು ಸುಲ್ತಾನ್ ಬತ್ತೇರಿಯ ರತೀಶ್ ಎಂದು ಗುರುತಿಸಲಾಗಿದೆ. ಇವರು ಹೃದಯ ಸಂಬಂಧಿ ಕಾಯಿಲೆಯಿಂದಲೂ ಬಳಲುತ್ತಿದ್ದರು ಎಂದು ಆರೋಗ್ಯ ಅಧಿಕಾರಿಗಳು ಶನಿವಾರ ತಿಳಿಸಿದರು.

ಕೋಯಿಕ್ಕೋಡ್‌ನ ವೈದ್ಯಕೀಯ ಕಾಲೇಜಿನಲ್ಲಿ ಸುಮಾರು 11 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಕಾಯಿಲೆಯಿಂದ ಆಗಸ್ಟ್‌ನಲ್ಲಿ ಮೂವರು ಮೃತಪಟ್ಟಿದ್ದರು.

ಬೆತ್ತಲೆ ಗ್ಯಾಂಗ್ ವದಂತಿ: ಆತಂಕ

ಲಖನೌ: ಉತ್ತರ ಪ್ರದೇಶದ ಮೀರತ್ ಜಿಲ್ಲೆಯ ದೌರ್ಲಾ ಸೇರಿದಂತೆ ಹಲವು ಗ್ರಾಮಗಳಲ್ಲಿ 'ಬೆತ್ತಲೆ ಗ್ಯಾಂಗ್'ನ ಭಯದಿಂದ ಮಹಿಳೆಯರು ಮನೆಗಳಿಂದ ಹೊರಬರಲು ಹಿಂದೇಟು ಹಾಕುತ್ತಿದ್ದಾರೆ.

ಗ್ರಾಮದ ಹೊರ ವಲಯದ ತೋಟಗಳು, ಜಮೀನಿನ ಬದಿಯಿಂದ ದಿಢೀರನೆ ನಗ್ನರಾಗಿ ಪ್ರತ್ಯಕ್ಷರಾಗುವ ವ್ಯಕ್ತಿಗಳು, ಮಹಿಳೆಯರನ್ನು ಬಲವಂತವಾಗಿ ಹಿಡಿದು, ಎಳೆದುಕೊಂಡು ಹೋಗುತ್ತಿದ್ದಾರೆ ಎಂಬ ವದಂತಿ ಈ ಭಾಗದಲ್ಲಿ ಕಾಳ್ಗಿಚ್ಚಿನಂತೆ ಹರಡಿರುವುದು ಆತಂಕಕ್ಕೆ ಕಾರಣವಾಗಿದೆ.

ವಾರದಿಂದೀಚೆಗೆ ಇಂತಹ 4 ಘಟನೆ ದೌರ್ಲಾ ಗ್ರಾಮದಲ್ಲಿ ನಡೆದಿವೆ ಎನ್ನುತ್ತಾರೆ ಸ್ಥಳೀಯರು. ಆದರೆ, ಪೊಲೀಸ್ ಇಲಾಖೆ ಇದನ್ನು ಅಲ್ಲಗಳೆದಿದೆ. ವದಂತಿಗೆ ಜನರು ಭಯಪಡುವ ಅಗತ್ಯವಿಲ್ಲ ಎಂದಿದೆ.

ಸಂಕ್ಷಿಪ್ತ ಸುದ್ದಿ

ಪಶ್ಚಿಮ ಬಂಗಾಳ: ಥಳಿಸಿ ದಂಪತಿ ಹತ್ಯೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯ ನಿಶ್ಚಿಂತಪುರದಲ್ಲಿ ಬಾಲಕನ ಮೃತದೇಹವೊಂದು ಶನಿವಾರ ಪತ್ತೆಯಾಗಿದ್ದು, ಆತನ ಸಾವಿಗೆ ಕಾರಣ ಎನ್ನಲಾದ ದಂಪತಿಯನ್ನು ಉದ್ರಿಕ್ತ ಗುಂಪೊಂದು ಹೊಡೆದು ಕೊಂದಿದೆ ಎಂದು ಪೊಲೀಸರು ತಿಳಿಸಿದರು.

ಮೂರನೇ ತರಗತಿಯ ಬಾಲಕ ಸ್ವರ್ಣಭಾ ಮಂಡಲ್ ಶುಕ್ರವಾರ ಮಧ್ಯಾಹ್ನದಿಂದ ನಾಪತ್ತೆಯಾಗಿದ್ದ. ಶನಿವಾರ ಬೆಳಿಗ್ಗೆ ಆತನ ಮೃತದೇಹವು ಆರೋಪಿಗಳ ಮನೆಯ ಸಮೀಪದ ಕೆರೆಯಲ್ಲಿ ಪತ್ತೆಯಾಗಿದೆ. ಈ ಬೆನ್ನಲ್ಲೇ, ಬಾಲಕನ ಸಾವಿಗೆ ದಂಪತಿಯೇ ಕಾರಣ ಎಂದು ಆರೋಪಿಸಿರುವ ಕುಟುಂಬಸ್ಥರನ್ನು ಒಳಗೊಂಡ ಉದ್ರಿಕ್ತ ಗುಂಪು ಆರೋಪಿಗಳಿಗೆ ಥಳಿಸಿ, ಅವರ ಮನೆಗೆ ಬೆಂಕಿ ಇಟ್ಟಿದೆ, ಆಸ್ತಿಗೆ ಹಾನಿ ಮಾಡಿದೆ ಎಂದು ಹೇಳಿದರು.

ತೀವ್ರವಾಗಿ ಗಾಯಗೊಂಡಿದ್ದ ಆರೋಪಿಗಳನ್ನು ಆಸ್ಪತ್ರೆಗೆ ಕೊಂಡೊಯ್ಯಲಾಗಿತ್ತು. ಅವರು ಮೃತಪಟ್ಟಿರುವುದನ್ನು ವೈದ್ಯರು ಖಚಿತಪಡಿಸಿದರು.

ಬೆದರಿಕೆ: ಬಂಧನ

ನೊಯಿಡಾ (ಪಿಟಿಐ): ತನ್ನ ಮೇಲೆ ಪ್ರಕರಣ ದಾಖಲಿಸಿದ್ದ ಸ್ನೇಹಿತನ ವಿರುದ್ಧ ಸೇಡು ತೀರಿಸಿಕೊಳ್ಳಲು, ಆತನ ಹೆಸರನ್ನು ಬಳಸಿಕೊಂಡು 'ಲಷ್ಕರ್ ಎ ಜಿಹಾದಿ' ಸಂಘಟನೆಯ ಹೆಸರನ್ನು ನಮೂದಿಸಿ ಮುಂಬೈನ ಸಂಚಾರ ವಿಭಾಗದ ಪೊಲೀಸರಿಗೆ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ್ದ ಅಶ್ವಿನಿ ಕುಮಾರ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಕುಮಾರ್ ಅವರು ತಮ್ಮನ್ನು ತಾವು ಜ್ಯೋತಿಷಿ ಮತ್ತು ವಾಸ್ತುಶಾಸ್ತ್ರಜ್ಞ ಎಂದು ಕರೆದುಕೊಳ್ಳುತ್ತಾರೆ. ಇವರು ಪಟ್ನಾದವರಾಗಿದ್ದು, 5 ವರ್ಷಗಳಿಂದ ನೊಯಿಡಾದಲ್ಲಿ ವಾಸಿಸುತ್ತಿದ್ದಾರೆ. ಇವರ ಸ್ನೇಹಿತ ಇವರ ವಿರುದ್ಧ 2023ರಲ್ಲಿ ಪ್ರಕರಣ ದಾಖಲಿಸಿದ್ದರು. ಈ ಸಂಬಂಧ ಕುಮಾರ್ ಅವರು 3 ತಿಂಗಳು ಜೈಲುವಾಸ ಅನುಭವಿಸಿದ್ದರು.

ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್ ಜತೆ ಮೋದಿ ಮಾತುಕತೆ

ಮೋದಿ, ಮ್ಯಾಕ್ರನ್

ನವದೆಹಲಿ (ಪಿಟಿಐ): ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ದೂರವಾಣಿ ಸಂಭಾಷಣೆ ನಡೆಸಿದ್ದಾರೆ. ಉಕ್ರೇನ್ ಸಂಘರ್ಷ, ಭಾರತ–ಫ್ರಾನ್ಸ್ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿ ಸೇರಿದಂತೆ ವಿವಿಧ ವಿಚಾರಗಳ ಕುರಿತು ಚರ್ಚೆ ನಡೆಸಿರುವುದಾಗಿ ಹೇಳಿದ್ದಾರೆ.

ರಷ್ಯಾ–ಉಕ್ರೇನ್ ನಡುವಿನ ಯುದ್ಧವನ್ನು ಕೊನೆಗೊಳಿಸಲು ಅಮೆರಿಕವು ಹೊಸ ಪ್ರಯತ್ನಗಳನ್ನು ಮಾಡುತ್ತಿರುವಂತೆಯೇ ಮೋದಿ ಮತ್ತು ಮ್ಯಾಕ್ರನ್ ಈ ಮಾತುಕತೆ ನಡೆಸಿದ್ದಾರೆ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

'ಉಕ್ರೇನ್ ಸಂಘರ್ಷವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳು ಸೇರಿದಂತೆ ಜಾಗತಿಕ ಹಾಗೂ ಪ್ರಾದೇಶಿಕ ವಿಚಾರಗಳಿಗೆ ಸಂಬಂಧಿಸಿದಂತೆ ಮ್ಯಾಕ್ರನ್ ಅವರೊಂದಿಗೆ ಮಾತುಕತೆ ನಡೆಸಿದೆ. ವಿವಿಧ ಕ್ಷೇತ್ರಗಳಲ್ಲಿ ಭಾರತ ಮತ್ತು ಫ್ರಾನ್ಸ್ ನಡುವಿನ ದ್ವಿಪಕ್ಷೀಯ ಸಹಕಾರ ವೃದ್ಧಿ ಕುರಿತಂತೆಯೂ ಧನಾತ್ಮಕ ವಿಶ್ಲೇಷಣೆ ನಡೆಸಲಾಯಿತು' ಎಂದು ಮೋದಿ ತಿಳಿಸಿದ್ದಾರೆ.

ಅಲ್ಲದೇ, ಭಾರತ ಮತ್ತು ಫ್ರಾನ್ಸ್ ನಡುವಿನ ಕಾರ್ಯತಂತ್ರ ಪಾಲುದಾರಿಕೆಯು ಜಾಗತಿಕ ಶಾಂತಿ ಮತ್ತು ಸ್ಥಿರತೆಯನ್ನು ಖಾತರಿಪಡಿಸುವಲ್ಲಿ ಮಹತ್ತರ ಪಾತ್ರ ವಹಿಸಲಿದೆ ಎಂದೂ ಮೋದಿ ಹೇಳಿದ್ದಾರೆ.

ರಾಜಾ ರಘುವಂಶಿ ಕೊಲೆ: ಆರೋಪ ಪಟ್ಟಿ ಸಲ್ಲಿಕೆ

ಶಿಲ್ಲಾಂಗ್ (ಪಿಟಿಐ): ಇಂದೋರ್‌ನ ಉದ್ಯಮಿ ರಾಜಾ ರಘುವಂಶಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ನಿ ಸೋನಮ್ ರಘುವಂಶಿ ಸೇರಿ ಎಂಟು ಆರೋಪಿಗಳ ವಿರುದ್ಧ ಮೇಘಾಲಯ ಪೊಲೀಸರು ಆರೋಪ ಪಟ್ಟಿ ಸಲ್ಲಿಸಿದ್ದಾರೆ.

ಆರೋಪವನ್ನು ಬೆಂಬಲಿಸುವ ಪುರಾವೆಗಳೊಂದಿಗೆ ಸೊಹ್ರಾ ಉಪ ವಿಭಾಗದ ನ್ಯಾಯಾಲಯಕ್ಕೆ 790 ಪುಟಗಳ ಆರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಈಸ್ಟ್ ಕಾಶಿ ಹಿಲ್ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ವಿವೇಕ್ ಸೈಮ್ ತಿಳಿಸಿದ್ದಾರೆ.

ಪತ್ನಿ ಸೋನಮ್ ಜತೆ ಮಧುಚಂದ್ರಕ್ಕೆ ಬಂದಿದ್ದಾಗ ಮೇ 26ರಂದು ರಾಜಾ ನಾಪತ್ತೆಯಾಗಿದ್ದರು. ಜೂನ್ 2ರಂದು ಸೊಹ್ರಾ ಸಮೀಪದ ವೀಸಾಡೊಂಗ್ ಜಲಪಾತದ ಕಣಿವೆಯಲ್ಲಿ ಅವರ ಮೃತದೇಹ ಪತ್ತೆಯಾಗಿತ್ತು. ಪತ್ನಿಯೇ ಪ್ರಿಯಕರನ ಜೊತೆ ಸೇರಿಕೊಂಡು ಪತಿಯ ಕೊಲೆ ಮಾಡಿದ್ದು ತನಿಖೆಯಲ್ಲಿ ಪತ್ತೆಯಾಗಿತ್ತು. ಪ್ರಕರಣದ ತನಿಖೆಗಾಗಿ ಈಸ್ಟ್ ಕಾಶಿ ಹಿಲ್ ಜಿಲ್ಲೆಯ ನಗರ ಪೊಲೀಸ್ ವರಿಷ್ಠಾಧಿಕಾರಿ ಹರ್ಬಟ್ ಕೆ. ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಸೋನಮ್ ಪ್ರಿಯಕರ ರಾಜ್ ಕುಶ್ವಾಹ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಇವರಿಬ್ಬರು ಸೇರಿಕೊಂಡು ಅಖಿಲೇಶ್ ಸಿಂಗ್ ರಜಪೂತ್, ವಿಶಾಲ್ ಸಿಂಗ್ ಚೌಹಾಣ್, ಆನಂದ್ ಕುರ್ಮಿ ಎಂಬುವರ ಸಹಾಯ ಪಡೆದು ರಾಜಾ ರಘುವಂಶಿಯನ್ನು ಕೊಲೆ ಮಾಡಿದ್ದರು ಎಂದು ಆರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಡಾ|| ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು.

Dr. B.R. Ambedkar School of Economics University Bengaluru

ಸಂಖ್ಯೆ: BASE/26/2025-26 ದಿನಾಂಕ: 04.09.2025

ಟೆಂಡರ್ ಪ್ರಕಟಣೆ

ಡಾ. ಬಿ. ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯವು ಅರ್ಹತೆವುಳ್ಳ ಟೆಂಡರ್‌ದಾರರಿಂದ ಕೆಳಕಂಡ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಅಂದಾಜು ಮೊತ್ತ ರೂ.	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1.	ಸೆಕ್ಯೂರಿಟಿ, ಹೌಸಕೀಪಿಂಗ್ ಮತ್ತು ಗಾರ್ಡನರ್‌ಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಸರಬರಾಜು ಮಾಡುವುದು. Tender No.BASE/2025-26/SE0012	1,67,10,000/-	19.09.2025
2.	ವಿಶ್ವವಿದ್ಯಾಲಯದ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಎರಡು (2) ಸಂಖ್ಯೆಯ ಹವಾನಿಯಂತ್ರಿತ ಕಾರ್‌ಗಳನ್ನು ಬಾಡಿಗೆಗೆ ಪಡೆಯಬಹುದು. Tender No.BASE/2025-26/SE0015	10,08,000/-	22.09.2025

ಟೆಂಡರ್‌ಗಳ ಹೆಚ್ಚಿನ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ Website (kttps://kppp.karnataka.gov.in) ಮುಖಾಂತರ ಪಡೆದು, ಟೆಂಡರ್‌ಗಳನ್ನು Website (kttps://kppp.karnataka.gov.in) ಸಲ್ಲಿಸಲು ಕೋರಿದೆ.

ಸಹಿ/– ಹಣಕಾಸು ಅಧಿಕಾರಿಗಳು,
ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ, ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು.

DIPR/CP/RO2679/AAPL/2025-26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂ.ಕಾನಿಅ/ಲೋಇ/ಕವಿ/ತಾಶಾ–5/.ಟೆಂಡರ್.ಅಧಿಸೂಚನೆ/2025–26/2999 ದಿನಾಂಕ:25.08.2025

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ (ಕೆ.ಡಬ್ಲ್ಯೂ–1,2,&3)ರಲ್ಲಿ ಲೆಕ್ಕ ಶೀರ್ಷಿಕೆ 3054 ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಯೋಜನೆಯಡಿಯಲ್ಲಿ ಸಾಮಾನ್ಯ ವರ್ಗ–57, ಎಸ್.ಸಿ. ವರ್ಗ–15, ಎಸ್.ಟಿ. ವರ್ಗ–07, ಕ್ಯಟಗೇರಿ 2ಎ ವರ್ಗ–15 ಮತ್ತು ಕ್ಯಾಟಗೇರಿ–1 ವರ್ಗ–04 ಮೀಸಲಿರಿಸಲಾಗಿದ್ದು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ, : ಕನಿಷ್ಠ ರೂ. 58.06 ಲಕ್ಷಗಳು ಮತ್ತು ಗರಿಷ್ಠ ರೂ. 0.80ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ,: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕನೇ ಮತ್ತು ಮೂರನೇ ದರ್ಜೆ ಮೇಲ್ಪಟ್ಟ ನೊಂದಾಯಿತ ಗುತ್ತಿಗೆದಾರರಾಗಿರಬೇಕು., 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ.ಮೊತ್ತದ ವಿವರ : ಅರ್ಜಿ ಬೆಲೆ KPPP Portal ನಂತೆ, ಇ.ಎಮ್.ಡಿ. ಮೊತ್ತ ಕನಿಷ್ಠ ರೂ. 1,00,000.00 ಮತ್ತು ಗರಿಷ್ಠ ರೂ. 2,000.00, 5) ಪ್ರೀ ಬಿಡ್ ಸಭೆ ದಿನಾಂಕ : — 6) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : 18–09–2025 (17–30 ಗಂಟೆ.) 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 19–09–2025 (16–00 ಗಂಟೆ.) 8) ತಾಂತ್ರಿಕ ಬಿಡ್ ತೆರೆವುಗೊಳಿಸುವ ದಿನಾಂಕ: 20–09–2025 (16–30 ಗಂಟೆ.) 9) ಆರ್ಥಿಕ ಬಿಡ್ ತೆರೆವುಗೋಳಿಸುವ ದಿನಾಂಕ : 22–09–2025 (16–30 ಗಂಟೆ.) 10) ಹೆಚ್ಚಿನ ವಿವರಗಳಿಗೆ ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ. ಅಂತರ್ಜಾಲ ತಾಣದ ವಿಳಾಸ : https://kppp.karnataka.gov.in 12) ಗಮನಿಸಬೇಕಾದ ಅಂಶಗಳು : ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವೂದೇ ಕಾರಣಗಳನ್ನು ನೀಡದೆ ಟಂಡರ್ ಪ್ರಕ್ರಿಯೆಯನ್ನು ಮಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಮರು ಟೆಂಡರ್/ಟಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮೂಂದೆ ಟಂಡರ್ ಪ್ರಕ್ರಿಯೆಯಲ್ಲಿ ಯಾವೂದೆ ಬದಲಾವಣೆಗಳು ಇದ್ದಲ್ಲಿ, ಟೆಂಡರ್ ರದ್ದುಗೊಳಿಸುವ/ಮುಂದುಡುವ/ ಮರು ಟೆಂಡರ್/ಟಂಡರ್ ನಿರಾಕರಿಸುವಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/472/2025–26/ದೇಶಪಾಂಡೆ ಪಬ್ಲಿಸಿಟಿ

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.

ಸಂ:ಕಾನಿಇಂ/ಲೋಇ./ಸೇವಿ/ತಾಶಾ–2/2025–26/1441 ದಿನಾಂಕ : 04–09–2025

–:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::–

1) ಕಾಮಗಾರಿಯ ವಿವರ: 1. ಚಿಂಚೋಳಿ ತಾಲೂಕಿನ 02 ಕಟ್ಟಡ ಕಾಮಗಾರಿ ಇಂಡೆಂಟ್ ಸಂ : 22597, 22619, 2. ಸೇಡಂ ತಾಲೂಕಿನ 01 ಕಟ್ಟಡ ಕಾಮಗಾರಿ ಇಂಡೆಂಟ್ ಸಂ : 27391, 3. ಚಿತ್ತಾಪೂರ ತಾಲೂಕಿನ 05 ಕಟ್ಟಡ ಕಾಮಗಾರಿ ಇಂಡೆಂಟ್ ಸಂ : 22074, 22321, 23188, 22792, 22794, 2) ಲೆಕ್ಕ ಶೀರ್ಷಿಕೆ: 2024–25 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆಯಡಿಯಲ್ಲಿನ ಕಾಮಗಾರಿ, 3) ಟೆಂಡರಿಗಿಟ್ಟ ಮೊತ್ತ: ಕನಿಷ್ಠ ರೂ. 167.28 ಲಕ್ಷಗಳು ಗರಿಷ್ಠ ರೂ. 582.18 ಲಕ್ಷಗಳು, 4) ಗುತ್ತಿಗೆದಾರರ ಅರ್ಹತೆ: 1ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ: 15–09–2025 ಬೆಳಿಗ್ಗೆ 11:30 ಗಂಟೆವರೆಗೆ, 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ದಿನಾಂಕ: 16–09–2025 ಸಾಯಂಕಾಲ 17:30 ಗಂಟೆಯವರೆಗೆ, 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 18–09–2025 ರ ಸಾಯಂಕಾಲ 16:00 ಗಂಟೆಯವರೆಗೆ, 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19–09–2025 ರ ಸಾಯಂಕಾಲ 16:30 ಗಂಟೆಯವರೆಗೆ. 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 20–09–2025 ರ ಸಾಯಂಕಾಲ 16:30 ಗಂಟೆಯವರೆಗೆ. 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ

ವಾ.ಸಾ.ಸಂ.ಇ/ಕಲಬುರಗಿ/482/ಕೆ.ಎಸ್.ಎಂ.ಸಿ.&ಎ/2025–26

ಜಿಲ್ಲಾ ಪಂಚಾಯತ್, ದಾವಣಗೆರೆ.
ಲೋಕಿಕೆರೆ ರಸ್ತೆ, ದೂರದರ್ಶನ ಕೇಂದ್ರದ ಎದುರು, ದಾವಣಗೆರೆ–577005
ದೂ. 08192–261485, 261825 Email:-zpdvg@yahoo.co.in

ಸಂಖ್ಯೆ:ಜಿಪಂದಾ:ಆ(1)ಸಿಆರ್:14/2025–26 ದಿನಾಂಕ: 04.09.2025

ಇ–ಟೆಂಡರ್ ಪ್ರಕಟಣೆ

ದಾವಣಗೆರೆ ಜಿಲ್ಲಾ ಪಂಚಾಯತ್ ಕಾರ್ಯಾಲಯಕ್ಕೆ ಹಾಗೂ ಅಧೀನ ಇಲಾಖಾ ಕಛೇರಿಗಳಿಗೆ ಡಾಟಾ ಎಂಟ್ರಿ ಆಪರೇಟರ್/ಬೆರಳಚ್ಚುಗಾರರು ವಾಹನ ಚಾಲಕರು, ಗ್ರುಪ್–ಡಿ ಮತ್ತು ಭದ್ರತಾ ಸಿಬ್ಬಂದಿ ಸೇವೆ ಅವಶ್ಯವಿದ್ದು, ಸೇವೆಯನ್ನು ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯಲು ಇ–ಟೆಂಡರ್ ಕರೆಯುವ ಬಗ್ಗೆ.
1) ಇ–ಟೆಂಡರ್ ಪ್ರಕಟಣೆ ದಿನಾಂಕ:– ಸಂಖ್ಯೆ:ಜಿಪಂದಾ:ಆ(1)ಸಿಆರ್:14/2025–26 ದಿನಾಂಕ: 04.09.2025 (2) ಇ–ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 04.10.2025 ಅಪರಾಹ್ನ : 4.00 ಗಂಟೆ (3) ಇ–ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.10.2025 ಸ್ಥಳ:– ಜಿಲ್ಲಾ ಪಂಚಾಯತ್, ದಾವಣಗೆರೆ (4) ಇ–ಟೆಂಡರ್ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ, ಸ್ಥಳ, ನಂತರ ತಿಳಿಸಲಾಗುವುದು. (5) ಅರ್ಜಿ ಮೊತ್ತ:– ರೂ. 500/– (6) ಇ–ಟೆಂಡರ್ ಅಂದಾಜು ಮೊತ್ತ ರೂ. 238.00 ಲಕ್ಷ. ಇ–ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ ರೂ. 6,00,000–00 (7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ ಮತ್ತು ದೂರವಾಣಿ ಸಂಖ್ಯೆ: 08192–261485, 260016

ವಾಸಾಇ/ದಾವಣಗೆರೆ/324/ಕೆಎಸ್‌ಎಂಸಿಎ/2025–26
ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ದಾವಣಗೆರೆ.

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776466 / 29776467
ಇ–ಮೇಲ್: ed@bannerughattabiopark.org

ಸಂಖ್ಯೆ:ಎ3/ಬಬಪಾ/ಎಫ್‌ಡಿ/ಇ–ಬಿಡ್ಡಿಂಗ್–03/2025–26 ದಿನಾಂಕ: 03–09–2025

ಅಧಿಸೂಚನೆ

ಕಾರ್ಯನಿರ್ವಾಹಕ ನಿರ್ದೇಶಕರು, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು, ಕರ್ನಾಟಕ ಮೃಗಾಲಯ ಪ್ರಾಧಿಕಾರದ (ZAK) ದ ಅಂಗ ಸಂಸ್ಥೆ, ಇನ್ನು ಮುಂದೆ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಎಂದು ಉಲ್ಲೇಖಿಸಲಾಗುವುದು, ಇವರು ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನವನದ ಹೆಚ್ಚುವರಿ ಹಣವನ್ನು ಸ್ಥಿರ ಠೇವಣಿಗಳಲ್ಲಿ (Non-Callable) ಇಡಲು ಬೆಂಗಳೂರು ಮಿತಿಗಳಲ್ಲಿ ಮಾತ್ರ ಶಾಖೆ ಹೊಂದಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸ್ಪರ್ಧಾತ್ಮಕ ಬಡ್ಡಿ ದರಕ್ಕಾಗಿ ಇ–ಬಿಡ್‌ನ್ನು ಆಹ್ವಾನಿಸಿದೆ. ವಿವರವಾದ ಇ–ಬಿಡ್ ದಾಖಲೆಗಳನ್ನು ಜಿಓಕೆ ವೆಬ್‌ಸೈಟ್: https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 10–09–2025 ರಂದು ಮಧ್ಯಾಹ್ನ 3.00 ಗಂಟೆವರೆಗೆ. ಹರಾಜಿನಲ್ಲಿ ಭಾಗವಹಿಸುವಿಕೆಯ ಆಸಕ್ತಿಯನ್ನು ದೃಢೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 11–09–2025 ರಂದು ಮಧ್ಯಾಹ್ನ 3.00 ಗಂಟೆವರೆಗೆ. ಮೌಲ್ಯಮಾಪನ: 15–09–2025 ರಂದು ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆವರೆಗೆ. ಲೈವ್ ಬಿಡ್ಡಿಂಗ್: 18–09–2025 ರಂದು ಬೆಳಗ್ಗೆ 10.30 ಗಂಟೆಗೆ ಪ್ರಾರಂಭವಾಗುತ್ತದೆ ಮತ್ತು ಮಧ್ಯಾಹ್ನ 1.00 ಗಂಟೆಗೆ ಮುಕ್ತಾಯವಾಗುತ್ತದೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/2673/ಅಡ್ವರ್ಟೋ/2025–26

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ.
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾ.ಕು.ನೀ&ನೈ.ಇ, ಕೊಠಡಿ ಸಂಖ್ಯೆ–11 ಮತ್ತು ಎಸ್–14, ಜಿಲ್ಲಾಡಳಿತ ಭವನ, ಕೋಲಾರ–563101.
ದೂರವಾಣಿ ಸಂಖ್ಯೆ: 08152–222331, ಇ–ಮೇಲ್: eerdwsd.klr@gmail.com

ಸಂಖ್ಯೆ:ಕಾಪಾಅ/ಗ್ರಾಕುನೀ&ನೈವಿ/ಕೋ/ಕಿಇಂ/2025–26, ದಿನಾಂಕ:30.08.2025

ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 07/2025–26, ದಿನಾಂಕ: 30.08.2025

2024–25ನೇ ಸಾಲಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಕೋಲಾರ ಜಿಲ್ಲಾ ವ್ಯಾಪ್ತಿಗೆ ಅನುಮೋದನೆಯಾದ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಅನುಮೋದನೆಯಾದ (ಮನೆ ಮನೆಗೆ ನಳ ಸಂಪರ್ಕ ಕಲ್ಪಿಸುವ) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಹಾಗೂ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೆಯ ದಿನಾಂಕ: 13.09.2025 ರಂದು 17:30 ಗಂಟೆಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್–https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ.&ನೈ ವಿಭಾಗ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:267/ಎಂ.ಸಿ.ಎ/2025–26

ಕರ್ನಾಟಕ ರಾಜ್ಯ ಪೋಲಿಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ), ಬೆಂಗಳೂರು–560025.
ದೂರವಾಣಿ ಸಂ:080–25584102/25594893 ವೆಬ್‌ಸೈಟ್: www.ksphc.org
ಇ–ಮೇಲ್: eecontractksphc@gmail.com

ಸಂಖ್ಯೆ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಸಿಎನ್‌ಟಿ/ಟಿಎನ್‌ಡಿ/05/2025–26/154
ದಿನಾಂಕ: 06–09–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆಎಸ್‌ಪಿಹೆಚ್ & ಐಡಿಸಿಎಲ್ ಕೆಟಿಪಿಪಿ 2000 ಕಾಯ್ದೆಯ ಪ್ರಕಾರ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಪ್ರಕಾರ ಕೆ.ಪಿ.ಪಿ ಪೋರ್ಟಲ್ https://kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗಾಗಿ ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಿದೆ.
ಕಾಮಗಾರಿಗಳ ಹೆಸರು: ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಪೊಲೀಸ್ ಗೃಹ–2025 ಹಂತ–5ರ ಯೋಜನೆಯಡಿಯಲ್ಲಿ ಪಿ.ಎಸ್.ಐ ಮತ್ತು ಪಿ.ಸಿ ವಸತಿ ಗೃಹಗಳ ಕಟ್ಟಡ ನಿರ್ಮಾಣ.
ಇಚ್ಛೆಯುಳ್ಳ ಮತ್ತು ಅರ್ಹತೆವುಳ್ಳ ಗುತ್ತಿಗೆದಾರರು ಇ–ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇ.ಎಂ.ಡಿ, ಟೆಂಡರ್ ದಾಖಲೆಗಳು ಮತ್ತು ಇತ್ಯಾದಿ ವಿವರಗಳು ದಿನಾಂಕ: 08/09/2025 ರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆ.ಪಿ.ಪಿ.ಪಿ) ನಲ್ಲಿ ಲಭ್ಯವಿರುತ್ತದೆ.
"ಕೆಎಸ್‌ಪಿಹೆಚ್ & ಐಡಿಸಿಎಲ್ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ."
ಸೂಚನೆ: ಯಾವುದೇ ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು–ಗುತ್ತಿಗೆ

DIPR/CP/2684/SPAN/2025-26

ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಡಿಕೇರಿಯ ಸರ್ಕಾರಿ ಬಾಲಮಂದಿರಗಳಲ್ಲಿ ಪ್ರಸ್ತುತ ಪೋಷಣೆ ಹಾಗೂ ರಕ್ಷಣೆ ಪಡೆಯುತ್ತಿರುವ ಕು|| ರೋಷನ್, ಕು|| ಸುಧಾ, ಕು|| ಸವಿತ ಎಂ ಹಾಗೂ ಕು|| ಸೌಜನ್ಯ ಎಂ. ಈ ಮಕ್ಕಳ ತಾಯಿ ಮೃತಪಟ್ಟಿದ್ದು, ತಂದೆ ಹಾಗೂ ಸಂಬಂಧಿಕರು ಇದುವರೆಗೂ ಪತ್ತೆಯಾಗಿರುವುದಿಲ್ಲ. ಈ ಮಗುವಿನ ಪೋಷಕರು ಅಥವಾ ಸಂಬಂಧಿಕರು ಯಾರಾದರೂ ಇದ್ದಲ್ಲಿ ಕೂಡಲೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಛೇರಿ, ಶಾಂತಿನಿಲಯ ಕಾನ್ವೆಂಟ್ ಜಂಕ್ಷನ್, ಮಡಿಕೇರಿ ಹಾಗೂ ದೂರವಾಣಿ: 08272–228800ಯನ್ನು ಸಂಪರ್ಕಿಸಲು ತಿಳಿಯಪಡಿಸಲಾಗಿದೆ. ಮಗುವಿನ ಪೋಷಕರು ಯಾರೂ ಬಾರದಿದ್ದಲ್ಲಿ ಈ ಮಕ್ಕಳನ್ನು ಕಾನೂನು ಪ್ರಕಾರ ದತ್ತು ನೀಡಲು ಕ್ರಮಕೈಗೊಳ್ಳಲಾಗುವುದು.

ಕು|| ರೋಷನ್
ವಯಸ್ಸು ಸಂಸ್ಥೆಗೆ ಬಂದಾಗ: 03 ವರ್ಷ, ಪ್ರಸ್ತುತ ವಯಸ್ಸು: 13 ವರ್ಷ ತಂದೆಯ ಹೆಸರು ಮಂಜು, ತಾಯಿಯ ಹೆಸರು: ದಿ| ಶೋಭ. ದಿನಾಂಕ 30–12–2015ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ದಾಖಲಾಗಿರುತ್ತಾನೆ. **ಮಾತನಾಡುವ ಭಾಷೆ:** ಕನ್ನಡ, ಈ ಹಿಂದೆ ವಾಸವಿದ್ದ ವಿಳಾಸ: C/o ಸತೀಶ್ ಸಿ.ಪಿ. ನಾಣಿ ಎಸ್ಟೇಟ್, ಕೆದಕಲ್ ಗ್ರಾಮ, ಸುಂಟಿಕೊಪ್ಪ ಕೊಡಗು ಜಿಲ್ಲೆ. ಪ್ರಸ್ತುತ 13 ವರ್ಷದ ದುಂಡು ಮುಖ, ಕುತ್ತಿಗೆ ಮತ್ತು ಎದೆಯ ಭಾಗದಲ್ಲಿ ಸುಟ್ಟ ಗಾಯದ ಕಲೆ ಇರುತ್ತದೆ.

ಕು|| ಸುಧಾ
ವಯಸ್ಸು ಸಂಸ್ಥೆಗೆ ಬಂದಾಗ: 08 ತಿಂಗಳು, ಪ್ರಸ್ತುತ ವಯಸ್ಸು: 10 ವರ್ಷ 03 ತಿಂಗಳು ತಂದೆಯ ಹೆಸರು ಮಂಜು, ತಾಯಿಯ ಹೆಸರು: ದಿ|| ಶೋಭ. ದಿನಾಂಕ 30–12–2015ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾಳೆ. **ಮಾತನಾಡುವ ಭಾಷೆ:** ಕನ್ನಡ, ಈ ಹಿಂದೆ ವಾಸವಿದ್ದ ವಿಳಾಸ: C/o ಸತೀಶ್ ಸಿ.ಪಿ. ನಾಣಿ ಎಸ್ಟೇಟ್, ಕೆದಕಲ್ ಗ್ರಾಮ, ಸುಂಟಿಕೊಪ್ಪ ಕೊಡಗು ಜಿಲ್ಲೆ. ಪ್ರಸ್ತುತ 10 ವರ್ಷದ ಕೋಲು ಮುಖ, ಬಿಳಿ ಮೈ ಬಣ್ಣದ ಹೆಣ್ಣು ಮಗುವಾಗಿರುತ್ತದೆ.

ಕು|| ಸವಿತ ಎಂ.
ವಯಸ್ಸು ಸಂಸ್ಥೆಗೆ ಬಂದಾಗ: 10 ತಿಂಗಳು, ಪ್ರಸ್ತುತ ವಯಸ್ಸು: 14 ವರ್ಷ 07 ತಿಂಗಳು ತಂದೆಯ ಹೆಸರು ಮಂಜು, ತಾಯಿಯ ಹೆಸರು: ದಿ|| ಶೋಭ. ದಿನಾಂಕ 23–09–2024 ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾಳೆ. **ಮಾತನಾಡುವ ಭಾಷೆ:** ಕನ್ನಡ, ಈ ಹಿಂದೆ ವಾಸವಿದ್ದ ವಿಳಾಸ: C/o ಸತೀಶ್ ಸಿ.ಪಿ. ನಾಣಿ ಎಸ್ಟೇಟ್, ಕೆದಕಲ್ ಗ್ರಾಮ, ಸುಂಟಿಕೊಪ್ಪ ಕೊಡಗು ಜಿಲ್ಲೆ. ಪ್ರಸ್ತುತ 14 ವರ್ಷದ ಕೋಲು ಮುಖದ ಬಿಳಿ ಮೈ ಬಣ್ಣದ ಹೆಣ್ಣು ಮಗುವಾಗಿರುತ್ತದೆ.

ಕು|| ಸೌಜನ್ಯ ಎಂ
ವಯಸ್ಸು ಸಂಸ್ಥೆಗೆ ಬಂದಾಗ: 16 ವರ್ಷ 03 ತಿಂಗಳು, ಪ್ರಸ್ತುತ ವಯಸ್ಸು: 16 ವರ್ಷ 10 ತಿಂಗಳು. ತಂದೆಯ ಹೆಸರು ಮಂಜು, ತಾಯಿಯ ಹೆಸರು: ದಿ|| ಶೋಭ. ದಿನಾಂಕ 23–09–2024 ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾಳೆ. **ಮಾತನಾಡುವ ಭಾಷೆ:** ಕನ್ನಡ, ಈ ಹಿಂದೆ ವಾಸವಿದ್ದ ವಿಳಾಸ: C/o ಸತೀಶ್ ಸಿ.ಪಿ. ನಾಣಿ ಎಸ್ಟೇಟ್, ಕೆದಕಲ್ ಗ್ರಾಮ, ಸುಂಟಿಕೊಪ್ಪ ಕೊಡಗು ಜಿಲ್ಲೆ. ಪ್ರಸ್ತುತ 16 ವರ್ಷದ ಕೋಲು ಮುಖದ ಬಿಳಿ ಮೈ ಬಣ್ಣದ ಹೆಣ್ಣು ಮಗುವಾಗಿರುತ್ತದೆ.

ಸುಂದರ ಸಂಡೂರು
ಬಳ್ಳಾರಿ ಜಿಲ್ಲೆಯ ಸಂಡೂರಿನ ಪ್ರಕೃತಿ ಸೌಂದರ್ಯವನ್ನು ಸೆಪ್ಟೆಂಬರ್‌ನಲ್ಲೇ ನೋಡಬೇಕು ಎಂದಿದ್ದರು ಮಹಾತ್ಮಾ ಗಾಂಧಿ. ಇಂತಹ ಪ್ರದೇಶದಲ್ಲೊಂದು ಸುತ್ತು... 11

ಐಎಎಸ್, ಕೆಎಎಸ್ ಕನಸುಗಳ ಮೆರವಣಿಗೆ

ಬೆಂಗಳೂರಿನ ವಿಜಯನಗರ, ಚಂದ್ರಾ ಲೇಔಟ್ ಸ್ಪರ್ಧಾತ್ಮಕ ಪರೀಕ್ಷೆಗಳ ಹಬ್ ಆಗಿದೆ. ಅಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದ ಸಾವಿರಾರು ಯುವಕ–ಯುವತಿಯರು ನೌಕರಿಯ ಕನಸುಗಳನ್ನು ಬೆನ್ನಟ್ಟಿ ಪರೀಕ್ಷೆಗೆ ಸಜ್ಜಾಗುತ್ತಿದ್ದಾರೆ. ಈ ಭಾಗದಲ್ಲಿನ ಅಪರೂಪದ ಚಿತ್ರಣ ಇಲ್ಲಿದೆ.

• ಅಬ್ದುಲ್‌ರಹಿಮಾನ್

ಸಂಜೆ ನಾಲ್ಕೂವರೆ ಆಸುಪಾಸು. ಬೆಂಗಳೂರಿನ ವಿಜಯನಗರ ಮೆಟ್ರೊ ನಿಲ್ದಾಣದಿಂದ ಕೆಲವೇ ಮೀಟರ್ ದೂರದಲ್ಲಿರುವ ಮಾರೇನಹಳ್ಳಿ ಮುಖ್ಯದ್ವಾರದ ಬಳಿ ಯುವಕ–ಯುವತಿಯರು ಗುಂಪು ಗುಂಪಾಗಿ ನಡೆದು ಹೋಗುತ್ತಿದ್ದರು. ಒಂದೊಂದು ಗುಂಪು ಬೇರೆ ಬೇರೆ ದಿಕ್ಕಿನಲ್ಲಿ ಸಾಗುತ್ತಿತ್ತು. ಒಂದು ಗುಂಪು ಪಕ್ಕದಲ್ಲೇ ಇರುವ ಕಾಂಡಿಮೆಂಟ್ಸ್‌ನಲ್ಲಿ ಚಹಾ ಹೀರುತ್ತಾ ಹರಟಿದರೆ, ನಾಲ್ಕೈದು ಜನರ ತಂಡ ಸ್ಟೇಷನರಿ ಅಂಗಡಿಗೆ ನುಗ್ಗಿತು. ಇನ್ನು ಕೆಲವರು ಗ್ರಂಥಾಲಯ ಹೊಕ್ಕರೆ, ಕೆಲವಷ್ಟು ಮಂದಿ ಅಲ್ಲೇ ಇರುವ ಪಾರ್ಕ್‌ನಲ್ಲಿ ಕುಳಿತು ಗಹನ ಚರ್ಚೆಯಲ್ಲಿ ತೊಡಗಿಕೊಂಡರು. ರಸ್ತೆ ಬದಿಯಲ್ಲಿ ಹರಟೆ ಹೊಡೆಯುತ್ತ ನಿಂತವರೂ ಇದ್ದರು. ಕೆಲವರು ಅವಸರದಲ್ಲಿ ಸರಿದು ರಸ್ತೆಯ ಅಂಚಿನಲ್ಲಿ ಮಾಯವಾದರು.

ವಿಜಯನಗರ, ಹಂಪಿನಗರ, ಅತ್ತಿಗುಪ್ಪೆ ಹಾಗೂ ಚಂದ್ರಾ ಲೇಔಟ್‌ನಲ್ಲಿ ಪ್ರತಿ ಸಂಜೆ ಕಾಣುವ ದೃಶ್ಯಗಳಿವು.

ಅಲ್ಲಿರುವ ಹತ್ತಾರು ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ಸಾವಿರಾರು ಆಕಾಂಕ್ಷಿಗಳು ಸಂಜೆ ವೇಳೆಗೆ ದಿನದ ಒತ್ತಡ ಬದಿಗಿಟ್ಟು ಕೆಲ ಹೊತ್ತು ನಿರುಮ್ಮಳರಾಗುತ್ತಾರೆ. ರಾಜ್ಯದ ವಿವಿಧ ಭಾಗಗಳ ಆಕಾಂಕ್ಷಿಗಳು ಇರುವುದರಿಂದ ಅಲ್ಲಿ ಸಂಸ್ಕೃತಿ ವೈವಿಧ್ಯದ ಅನಾವರಣವೂ ಆಗುತ್ತದೆ. ಬೆಳಗ್ಗಿನಿಂದ ಮಂದವಾಗಿ ಗೋಚರಿಸುತ್ತಿದ್ದ ಬೀದಿಗಳು ಕಳೆಗಟ್ಟುತ್ತವೆ. ಫುಡ್ ಸ್ಟ್ರೀಟ್‌ಗಳಿಗೆ ಹೊಸ ಚೈತನ್ಯ ಬರುತ್ತದೆ.

‘ವಿಜಯನಗರದ ಬೀದಿಗಳಲ್ಲಿ ಭವಿಷ್ಯದ ಸರ್ಕಾರಿ ಅಧಿಕಾರಿಗಳು ಓಡಾಡುತ್ತಿರುತ್ತಾರೆ’, ‘ವಿಜಯನಗರದಲ್ಲಿ ಇಂದು ಹೊತ್ತು ಊಟಕ್ಕೆ ಪರದಾಡುವ ಆಕಾಂಕ್ಷಿಗಳು ಮುಂದೆ ಸರ್ಕಾರದ ಯಾವುದಾದರೂ ಇಲಾಖೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ’ ಎನ್ನುವಷ್ಟರ ಮಟ್ಟಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ವಿಜಯನಗರ ಹೆಸರುವಾಸಿ. ಹಿಂದೆ ಐಎಎಸ್, ಐಪಿಎಸ್ ಪರೀಕ್ಷೆಯ ತರಬೇತಿಗೆ ದೆಹಲಿ, ರಾಜಸ್ಥಾನಕ್ಕೆ ಹೋಗಬೇಕಾಗಿತ್ತು. ಈಗ ಬೆಂಗಳೂರಿನಲ್ಲಿಯೇ ಸಿಗುತ್ತಿದೆ. ವಿಜಯನಗರದ ಸುತ್ತಮುತ್ತ ಇಂತಹ ಹತ್ತಾರು ಸಂಸ್ಥೆಗಳಿವೆ. ದೆಹಲಿಯ ರಾಜೇಂದ್ರನಗರ, ರಾಜಸ್ಥಾನದ ಕೋಟಾಗೆ ಪೈಪೋಟಿ ನೀಡುವಷ್ಟು ವಿಜಯನಗರ ಬೆಳೆಯುತ್ತಿದೆ. ಉತ್ತರ ಭಾರತದ ಸಂಸ್ಥೆಗಳು ಚಂದ್ರಾ ಲೇಔಟ್, ವಿಜಯನಗರ ಭಾಗದಲ್ಲಿ ಶಾಖೆಗಳನ್ನು ತೆರೆದಿವೆ. ಆ ಮಟ್ಟಿಗೆ ಈ ಪ್ರದೇಶ ‘ಐಎಎಸ್, ಕೆಎಎಸ್ ಹಬ್’ಗಳಾಗಿ ಮಾರ್ಪಟ್ಟಿದೆ.

ತರಬೇತಿ ಕೇಂದ್ರವೊಂದರಲ್ಲಿ ಭವಿಷ್ಯದ ಕನಸು ಹೊತ್ತ ವಿದ್ಯಾರ್ಥಿಗಳು

ಚಿತ್ರಗಳು: ಪ್ರಶಾಂತ್ ಎಚ್.ಜಿ.

ಈ ಕಲಿಕೆ ನಿರಂತರ...

ವಿಜಯನಗರವೇ ಯಾಕೆ?

ಐಟಿ-ಬಿಟಿ, ಶಿಕ್ಷಣ, ಸಾಫ್ಟ್‌ವೇರ್ ಕಂಪನಿಗಳು ಬೆಂಗಳೂರಿನ ವಿವಿಧ ಭಾಗಗಳಲ್ಲಿ ಚದುರಿದ್ದರೂ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರಗಳು ಹೆಚ್ಚಿನ ಪ್ರಮಾಣದಲ್ಲಿ ವಿಜಯನಗರದ ಸುತ್ತಮುತ್ತಲೇ ಇವೆ. ನಗರದಲ್ಲಿರುವ ಇಂತಹ ಕೋಚಿಂಗ್ ಸಂಸ್ಥೆಗಳ ಪೈಕಿ ಬಹುತೇಕ ಇಲ್ಲಿಯೇ ಕಾರ್ಯನಿರ್ವಹಿಸುತ್ತಿವೆ ಅಥವಾ ಅವುಗಳ ಶಾಖೆಯೊಂದು ವಿಜಯನಗರದಲ್ಲಿ ಇದೆ. ‘ಇಲ್ಲಿನ ಸುರಕ್ಷಿತ ಹಾಗೂ ಶಾಂತ ಪರಿಸರವೇ ಇದನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಕೇಂದ್ರವನ್ನಾಗಿ ಮಾಡಿದೆ’ ಎಂದು ‘ಸ್ಪರ್ಧಾ ವಿಜೇತ’ ಸಂಸ್ಥೆಯ ಮುಖ್ಯಸ್ಥ ಕೆ.ಎಂ ಸುರೇಶ್ ಅರ್ಥೈಸುತ್ತಾರೆ.

ಮೆಜೆಸ್ಟಿಕ್, ಕೆ.ಆರ್. ಮಾರುಕಟ್ಟೆ, ಕೆಂಗೇರಿಗೆ ಬಸ್, ಮೆಟ್ರೊ ಸಂಪರ್ಕ ಇದೆ. ಟ್ರಾಫಿಕ್ ಸಮಸ್ಯೆ ಕಡಿಮೆ. ವಸತಿ ಪ್ರದೇಶವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಬೇಕಾದ ಶಾಂತ ವಾತಾವರಣ ಇದೆ. ಮೂಲ ಸೌಕರ್ಯಗಳ ಲಭ್ಯತೆ, ವೈವಿಧ್ಯಮಯ ಆಹಾರ ಸಂಸ್ಕೃತಿ, ಮನೆಯಂಥ ವಾತಾವರಣ, ಕಡಿಮೆ ಜೀವನ ನಿರ್ವಹಣಾ ವೆಚ್ಚ ವಿದ್ಯಾರ್ಥಿಗಳಿಗೆ ಪೂರಕವಾಗಿದೆ.

ಮಾರೇನಹಳ್ಳಿ ಸುತ್ತಮುತ್ತ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಸಂಸ್ಥೆಗಳು 2000ನೇ ಇಸವಿ ಆಸುಪಾಸಿನಲ್ಲಿ ಪ್ರಾರಂಭವಾದವು. ಅಲ್ಲಿ ತರಬೇತಿ ಪಡೆದು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ಆರಂಭಿಸಿದರು. ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಆಕಾಂಕ್ಷಿಗಳ ಒಲವು ಹೆಚ್ಚುತ್ತಿದ್ದಂತೆಯೇ, ಕೋಚಿಂಗ್ ಸೆಂಟರ್‌ಗಳ ಸಂಖ್ಯೆಯೂ ಹೆಚ್ಚಾಗತೊಡಗಿದವು. ವಿದ್ಯಾರ್ಥಿಗಳ ಹರಿವು ಹೆಚ್ಚಾದಂತೆ ಮನೆಗಳು ಪಿ.ಜಿಗಳಾಗಿ ರೂಪಾಂತರಗೊಂಡವು. ಸ್ಟೇಷನರಿ, ಪುಸ್ತಕದಂಗಡಿಗಳ ಸಂಖ್ಯೆ ಏರತೊಡಗಿದವು. ಹೋಟೆಲ್, ಬೇಕರಿ ಉದ್ಯಮಗಳು ಗರಿಗೆದರಿದವು. ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಖಾಸಗಿ ಗ್ರಂಥಾಲಯಗಳು ತಲೆ ಎತ್ತಿದವು. ಸಂಜೆ ಬೀದಿಬದಿಯ ಆಹಾರ ಉದ್ಯಮ ಚುರುಕು ಪಡೆಯಿತು. ವಿಜಯನಗರದ ಸಂಸ್ಥೆಗಳಲ್ಲಿಯೇ ತರಬೇತಿ ಪಡೆದು ಗುರಿ ಸಾಧಿಸಿದವರ ಯಶೋಗಾಥೆಗಳು ಬಾಯಿ ಮಾತಿನ ಮೂಲಕ ಹರಿದಾಡಿ ವಿಜಯನಗರ ಪ್ರದೇಶವು ಸ್ಪರ್ಧಾತ್ಮಕ ಪರೀಕ್ಷೆಗಳ ಕೇಂದ್ರವಾಗಿದೆ. ಈ ಸಂಸ್ಥೆಗಳು ನೀಡುವ ಫಲಿತಾಂಶ, ಅದೇ ಪ್ರದೇಶದಲ್ಲಿ ಸರ್ಕಾರಿ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಾಸವಿದ್ದುದೂ ಕೂಡ ವಿಜಯನಗರ ‘ಬೆಂಗಳೂರಿನ ರಾಜೇಂದ್ರ ನಗರ’ವಾಗಲು ಕಾರಣ ಎನ್ನುವುದು ಸಂಸ್ಥೆ ನಡೆಸುತ್ತಿರುವ ಬಹುತೇಕರ ಅಭಿಪ್ರಾಯ. ಕಾರ್ಡ್ ರಸ್ತೆಯ ಇಕ್ಕೆಲಗಳಲ್ಲೂ ಇಂತಹ ಸಂಸ್ಥೆಗಳು, ಅವುಗಳ ಶಾಖೆಗಳಿವೆ.

ಬ್ರೇಕ್‌ನಲ್ಲೊಂದು ಚಹಾ ಗುಟುಕು...

ಕೆಎಎಸ್ ಸಹಿತ ರಾಜ್ಯ ಮಟ್ಟದ ಪರೀಕ್ಷೆಗಳಿಗೆ ತರಬೇತಿ ನೀಡುವ ಉತ್ತಮ ಸಂಸ್ಥೆಗಳಿದ್ದರೂ, ಐಎಎಸ್, ಐಪಿಎಸ್ ಮುಂತಾದ ರಾಷ್ಟ್ರ ಮಟ್ಟದ ಪರೀಕ್ಷೆಗಳಿಗೆ ಸಜ್ಜುಗೊಳಿಸುವ ಸಂಸ್ಥೆಗಳು ಅಡಿಯಿಟ್ಟಿದ್ದು 2013ರಲ್ಲಿ. ಅಲ್ಲಿಯವರೆಗೂ ಯುಪಿಎಸ್ಸಿ ತರಬೇತಿಗಾಗಿ ಕನ್ನಡಿಗರು ದೆಹಲಿ, ರಾಜಸ್ಥಾನ, ಹೈದರಾಬಾದ್ ಆಶ್ರಯಿಸಬೇಕಾಗಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ದೆಹಲಿ, ಕೋಟಾದ ಸಂಸ್ಥೆಗಳಿಗೆ ಪೈಪೋಟಿ ನೀಡಿ, ತಂತ್ರಜ್ಞಾನ ಆಧಾರಿತ ಶಿಕ್ಷಣ ನೀಡುತ್ತಿವೆ.

‘2013ರಲ್ಲಿ ಪಠ್ಯಕ್ರಮ ಬದಲಾಗಿದ್ದರಿಂದ ಯುಪಿಎಸ್ಸಿ ಪೂರ್ಣಗೊಳಿಸಲಾಗದೇ ನಾನೇ ಸಂಸ್ಥೆಯೊಂದನ್ನು ಹುಟ್ಟು ಹಾಕಿದೆ. ಇದು ಈ ಭಾಗದಲ್ಲಿ ಯುಪಿಎಸ್ಸಿ ಪರೀಕ್ಷೆಗಳಿಗೆ ತರಬೇತಿ ನೀಡಲು ಸ್ಥಾಪಿಸಲಾದ ಮೊದಲ ಸಂಸ್ಥೆ. ಮೊದಲ ಬ್ಯಾಚ್‌ನಲ್ಲೇ ರ್‍ಯಾಂಕ್ ಬಂತು. 2016ರಲ್ಲಿ ಅಖಿಲ ಭಾರತ ಮಟ್ಟದಲ್ಲಿ ರ್‍ಯಾಂಕ್ ಬಂತು. ಇದು ಬೆಂಗಳೂರಿನ ಬಗ್ಗೆ ದೇಶದ ಗಮನ ಸೆಳೆಯಿತು. ಕೋಚಿಂಗ್ ಬಗ್ಗೆ ವಿದ್ಯಾರ್ಥಿಗಳಿಗೆ, ಪೋಷಕರಿಗೆ ನಂಬಿಕೆ ಬಂತು. ತರಬೇತಿಗಾಗಿ ಉತ್ತರ ಭಾರತಕ್ಕೆ ಹೋಗುತ್ತಿದ್ದವರೆಲ್ಲಾ ಬೆಂಗಳೂರಿನತ್ತ ಮುಖ ಮಾಡಿದರು. ಒಂದೇ ಬೀದಿಯಲ್ಲಿ ಏಳೆಂಟು ಸಂಸ್ಥೆಗಳು ಸ್ಥಾಪನೆಯಾಗುವಷ್ಟರ ಮಟ್ಟಿಗೆ ಬೇಡಿಕೆ ಹೆಚ್ಚಾಯಿತು. ಚಂದ್ರಾ ಲೇಔಟ್‌ನಲ್ಲೇ 40-50 ಸಂಸ್ಥೆಗಳಿರಬಹುದು. ಇದೀಗ ದೆಹಲಿ ಬಿಟ್ಟರೆ ಯುಪಿಎಸ್ಸಿ ಕೋಚಿಂಗ್‌ಗೆ ಬೆಂಗಳೂರೇ ನಂತರದ ಆಯ್ಕೆ’ ಎಂದು ಚಂದ್ರಾ ಲೇಔಟ್ ‘ಬೆಂಗಳೂರಿನ ಯುಪಿಎಸ್ಸಿ ಹೃದಯಭಾಗ’ ಆಗಿದ್ದರ ಬಗ್ಗೆ ಇನ್‌ಸೈಟ್ ಸಂಸ್ಥೆಯ ಸ್ಥಾಪಕ ವಿನಯ್‌ಕುಮಾರ್ ಜಿ.ಬಿ ವಿವರ ನೀಡುತ್ತಾರೆ.

ಈಗ ತರಬೇತಿ ಸಂಸ್ಥೆ ಸ್ಥಾಪಿಸಿದವರಲ್ಲಿ ಬಹುತೇಕರು ಹಿಂದೊಮ್ಮೆ ಪರೀಕ್ಷೆ ಬರೆದವರು, ಸಂದರ್ಶನ ಎದುರಿಸಿದವರೇ ಎನ್ನುವುದು ವಿಶೇಷ. ಹೀಗಾಗಿ ಪರೀಕ್ಷಾ ತಯಾರಿ ವಿಧಾನದ ಬಗ್ಗೆ ಸಮಗ್ರ ತರಬೇತಿ, ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಳ್ಳುವುದು, ಸಮಯ ನಿರ್ವಹಣೆ, ಪರೀಕ್ಷೆ, ಸಂದರ್ಶನ ಎದುರಿಸುವ ಬಗ್ಗೆಯೂ ವಿದ್ಯಾರ್ಥಿಗಳನ್ನು ಅಣಿಗೊಳಿಸಲಾಗುತ್ತದೆ. ಈ ಹಿಂದೆ ಇದೇ ಸಂಸ್ಥೆಗಳಲ್ಲಿ ಕಲಿತು ಅಧಿಕಾರಿಯಾದವರಿಂದ ಸಿಗುವ ಮಾರ್ಗದರ್ಶನ ಆಕಾಂಕ್ಷಿಗಳನ್ನು ಮತ್ತಷ್ಟು ಹುರಿಗೊಳಿಸುತ್ತದೆ.

ವಿದ್ಯಾರ್ಥಿಗಳ ಜೀವನ ಶೈಲಿ ಹೇಗೆ?

ಅಧಿಕಾರಿಯಾಗುವ ಕನಸು ಹೊತ್ತು ಊರು ಬಿಟ್ಟು ಬಂದಿರುವ ಆಕಾಂಕ್ಷಿಗಳು ಶಿಸ್ತಿನ ಜೀವನ ಶೈಲಿ ಅಳವಡಿಸಿಕೊಳ್ಳಲೇಬೇಕು. ಪಠ್ಯಕ್ರಮ ಆರಂಭಿಸುವುದಕ್ಕೂ ಮುನ್ನ ಇವರನ್ನು ಇವುಗಳಿಗೆ ಅಣಿಗೊಳಿಸಲಾಗುತ್ತದೆ. ವಿವಿಧ ಸಾಮಾಜಿಕ, ಆರ್ಥಿಕ ಹಿನ್ನೆಲೆಯಿಂದ ಬಂದಿರುವ ವಿದ್ಯಾರ್ಥಿಗಳು ನಗರ ಬದುಕಿಗೆ ಹೊಂದಿಕೊಳ್ಳುವ ಸವಾಲಿನೊಂದಿಗೆ ತಯಾರಿ ನಡೆಸಬೇಕು. ಇಂತಹ ಪರೀಕ್ಷೆಗೆ ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕ ಭಾಗದಿಂದ ಹೆಚ್ಚಿನ ಆಕಾಂಕ್ಷಿಗಳು ಬರುತ್ತಾರೆ. ಬಡತನದ ಹಿನ್ನೆಲೆ ಇರುವ ಆಕಾಂಕ್ಷಿಗಳು ತರಬೇತಿ ಸಂಸ್ಥೆಯ ಶುಲ್ಕ ಪಾವತಿಸುವ ಜೊತೆಗೆ ಹಲವು ವರ್ಷ ದೈನಂದಿನ ಖರ್ಚನ್ನೂ ಸರಿದೂಗಿಸಿಕೊಂಡು ಹೋಗಬೇಕು. ಪೋಷಕರಿಗೆ ಹೊರೆಯಾಗದಂತೆ ಬದುಕುವುದು ಕೂಡ ಅನಿವಾರ್ಯ.

‘ಬೆಳಗ್ಗೆ ಆರು ಗಂಟೆಗೆ ಗ್ರಂಥಾಲಯಕ್ಕೆ ಹೋಗಿ ನಾಲ್ಕೈದು ಪತ್ರಿಕೆ ಓದುತ್ತೇನೆ. ಬಹುತೇಕ ದಿನ ಬೆಳಗಿನ ಉಪಾಹಾರ ಒಂದು ಕಪ್ ಚಹಾ ಹಾಗೂ ಬ್ರೆಡ್. ಮಧ್ಯಾಹ್ನ ಹಾಗೂ ರಾತ್ರಿಯ ಊಟ ಇಂದಿರಾ ಕ್ಯಾಂಟೀನ್‌ನಲ್ಲಿ. ಪಿ.ಜಿಯಲ್ಲಿ ಓದಲು ಅನುಕೂಲ ಇಲ್ಲದಿರುವುದರಿಂದ ಹೆಚ್ಚಿನ ಸಮಯವನ್ನು ಗ್ರಂಥಾಲಯದಲ್ಲಿ ಕಳೆಯುತ್ತೇನೆ. ಊರಿಗೆ ಹೋಗಿಬಂದು ಏಳು ತಿಂಗಳಾಯಿತು’ ಎಂದು ಮೂರು ವರ್ಷಗಳಿಂದ ಕೆಎಎಸ್ ಪರೀಕ್ಷೆಗೆ ತಯಾರಾಗುತ್ತಿರುವ ಶಹಾಪುರ ತಾಲ್ಲೂಕಿನ ಆಕಾಂಕ್ಷಿಯೊಬ್ಬರು ಹೇಳುತ್ತಾರೆ. 11ನೇ ಪುಟಕ್ಕೆ...

ರತ್ನಪುರಿಯಲ್ಲೊಂದು ಉರಗ ಕೇಂದ್ರ

• ಪವನ್‌ಕುಮಾರ್ ಎಚ್.

ನಿತ್ಯಹರಿದ್ವರ್ಣ ಕಾಡಿನಲ್ಲಿ ಕಾಳಿಂಗಸರ್ಪವೊಂದಕ್ಕೆ ಇರಬಹುದಾದ ಆವಾಸಸ್ಥಾನವನ್ನು ಒಂದು ಟೊಳ್ಳಾದ ಮರದ ದಿಮ್ಮಿಯೊಳಗೆ ಕೃತಕವಾಗಿ ರೂಪಿಸಲಾಗಿತ್ತು. ಅಲ್ಲಿ ‘ಅರಗ್ರಾನ್’ ಎನ್ನುವ ಸುಮಾರು 14 ವರ್ಷದ ಕಾಳಿಂಗಸರ್ಪವೊಂದು ಮಲಗಿ ವಿಶ್ರಾಂತಿ ಪಡೆಯುತ್ತಿತ್ತು. ಸುಮಾರು 14 ಅಡಿಗಳಿಗಿಂತ ಉದ್ದವಿರುವ ಈ ಸರ್ಪವನ್ನು ನಾಲ್ಕು ವರ್ಷಗಳ ಹಿಂದೆ ಆಗುಂಬೆ ತಪ್ಪಲಿನಿಂದ ರಕ್ಷಿಸಿ, ತರಲಾಯಿತು. ಅದರ ವಿಷವನ್ನು ಸಂಶೋಧನೆಗಾಗಿ ಹೊರತೆಗೆಯಲಾಗುತ್ತದೆ.

ವಿಶ್ವದ ಅತಿ ಉದ್ದದ ವಿಷಪೂರಿತ ಹಾವು ಎಂಬ ಕುಖ್ಯಾತಿಗೆ ಒಳಗಾಗಿದ್ದರೂ ಕಾಳಿಂಗಸರ್ಪಗಳು ಕಚ್ಚುವುದು ಅಪರೂಪ. ಆದರೆ, ಸೂಕ್ತ ತರಬೇತಿ ಪಡೆಯದೇ ಇಂಥ ಸರ್ಪಗಳನ್ನು ರಕ್ಷಿಸಲು ಪ್ರಯತ್ನಿಸಿದಾಗ ಅಥವಾ ವಿನಾಕಾರಣ ಅವುಗಳಿಗೆ ತೊಂದರೆ ಕೊಟ್ಟಾಗ ಸರ್ಪಗಳು ರೊಚ್ಚಿಗೇಳುವುದು ಸಹಜ. ಇಂತಹ ಸಂದರ್ಭಗಳಿಗಾಗಿ ಸಂಶೋಧಕರು ವಿಷ ನಿರೋಧಕ ಔಷಧಿಯನ್ನು ಅಭಿವೃದ್ಧಿಪಡಿಸುವುದು ಅನಿವಾರ್ಯವಾಗುತ್ತದೆ.

‘ಅರಗ್ರಾನ್’ ಇದ್ದದ್ದು ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ರತ್ನಪುರಿಯಲ್ಲಿರುವ ಲಿಯಾನ ಟ್ರಸ್ಟ್ ನಡೆಸುತ್ತಿರುವ ‘ಹಾವುಗಳ ಸಂರಕ್ಷಣಾ ಕೇಂದ್ರ’ದಲ್ಲಿ. ಇದರ ಜತೆಗೆ ರಸೆಲ್ ವೈಪರ್, ಕಾಮನ್ ಕ್ರೈಟ್ಸ್, ಸಾ–ಸ್ಕೇಲ್ಡ್ ವೈಪರ್ ಹಾಗೂ ನಾಗರಹಾವುಗಳಿವೆ. ಈ ನಾಲ್ಕು ಪ್ರಭೇದದ ಹಾವುಗಳು ತಮ್ಮ ಕಡಿತದಿಂದಾಗಿ ಕುಖ್ಯಾತಿ ಪಡೆದಿದ್ದು, ಕರ್ನಾಟಕ ಹಾಗೂ ಭಾರತದಾದ್ಯಂತ ಪ್ರತಿ ವರ್ಷ ಸಾವಿರಾರು ಜನ ಇವುಗಳ ಕಡಿತದಿಂದ ಸಾಯುತ್ತಾರೆ.

ಪ್ರತಿ ವಿಷಕಾರಿ ಹಾವಿನ ವಿಷವು ವಿಭಿನ್ನ ಸಂಯೋಜನೆಯನ್ನು ಹೊಂದಿರುತ್ತದೆ. ಅಷ್ಟೆ ಅಲ್ಲದೇ ಅವುಗಳು ಮನುಷ್ಯನ ದೇಹದ ವಿವಿಧ ಭಾಗಗಳ ಮೇಲೆ ವಿಭಿನ್ನ ಪರಿಣಾಮವನ್ನು ಬೀರುತ್ತವೆ. ನಾಗರಹಾವಿನ ವಿಷವು ನರಮಂಡಲದ ಮೇಲೆ ಪರಿಣಾಮ ಬೀರುತ್ತದೆ. ಆದರೆ ವೈಪರ್‌ನ ವಿಷವು ಹೆಮೊಟಾಕ್ಸಿಕ್ ಆಗಿದ್ದು, ರಕ್ತದ ಮೇಲೆ ದಾಳಿ ಮಾಡುತ್ತದೆ. ಇದರ ಜತೆಗೆ ಒಂದೇ ಪ್ರಭೇದದ ಹಾವಿನ ವಿಷದ ಸಂಯೋಜನೆಯು ಪ್ರದೇಶಗಳಿಂದ ಪ್ರದೇಶಕ್ಕೆ ಬದಲಾಗುತ್ತದೆ ಎಂಬುದನ್ನು ಅಧ್ಯಯನಗಳು ಹೇಳುತ್ತವೆ.

ಸದ್ಯಕ್ಕೆ ಭಾರತದಾದ್ಯಂತ ವೈದ್ಯಕೀಯ ಆರೈಕೆ ಘಟಕಗಳು ಹಾವಿನಿಂದ ಕಚ್ಚಿಸಿಕೊಂಡವರಿಗೆ ಒಂದೇ ಸ್ಥಳದಿಂದ ಸಂಗ್ರಹಗೊಂಡ ವಿಷದಿಂದ ತಯಾರಾದ ವಿಷ ನಿರೋಧಕ ನೀಡುವ ಮೂಲಕ (ಆ್ಯಂಟಿ ವೆನಮ್) ಚಿಕಿತ್ಸೆ ನೀಡುತ್ತಿವೆ. ಇಂಥ ಸಂದರ್ಭದಲ್ಲಿ ಹೆಚ್ಚಿನವರು ಚೇತರಿಸಿಕೊಂಡರೂ, ಅನೇಕರು ವಿಷಕ್ಕೆ ಬಲಿಯಾಗುತ್ತಾರೆ ಅಥವಾ ಶಾಶ್ವತವಾಗಿ ಅಂಗವಿಕಲರಾಗುತ್ತಾರೆ.

ಆದರೆ, ರತ್ನಪುರಿಯ ಲಿಯಾನ ಟ್ರಸ್ಟ್ ನಡೆಸುತ್ತಿರುವ ‘ಹಾವು ಸಂರಕ್ಷಣಾ ಕೇಂದ್ರ’ವು ವಿಭಿನ್ನ ರೀತಿಯಲ್ಲಿ ಸಂಶೋಧನಾ ಕಾರ್ಯವನ್ನು ಕೈಗೊಂಡಿದ್ದು, ವಿಷ ನಿರೋಧಕ ಔಷಧ ಕಾರ್ಯಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿದೆ. ಅಲ್ಲದೇ ಪರಿಣಾಮಕಾರಿ ಔಷಧವನ್ನು ತಯಾರಿಸುವಲ್ಲಿ ಹಲವು ಬಗೆಯ ಸಂಶೋಧನಾ ಕಾರ್ಯಗಳನ್ನು ನಡೆಸುತ್ತಿದೆ. ಹಾವು ಕಡಿತಕ್ಕೆ ಚಿಕಿತ್ಸೆ ನೀಡಲು ಬಳಸುವ ಪ್ರತಿವಿಷವನ್ನು ಹಾವಿನ ವಿಷದಿಂದಲೇ ತಯಾರಿಸಲಾಗುತ್ತದೆ.

ವಿಷ ಸಂಗ್ರಹಕ್ಕಾಗಿ ಹಾವುಗಳನ್ನು ಹಿಡಿಯುತ್ತಿರುವುದು

ರಕ್ಷಣೆ ಮತ್ತು ಅಧ್ಯಯನ

ಸರ್ಪಗಳ ಸ್ವಭಾವ, ವರ್ತನೆ ಸೇರಿದಂತೆ ಅವುಗಳ ಬಗ್ಗೆ ನಮಗೆ ತಿಳಿದಿರುವುದು ಅತ್ಯಲ್ಪ. ಹಾವು ಕಡಿತ ಪ್ರಕರಣಗಳನ್ನು ಕಡಿಮೆ ಮಾಡಲು ಮೊದಲಿಗೆ ಹಾವಿನ ಸ್ವಭಾವವನ್ನು ವೈಜ್ಞಾನಿಕವಾಗಿ ಅರಿಯುವುದು ಮುಖ್ಯ. ಹಾವಿನ ಕಡಿತದಿಂದ ಜೀವಗಳನ್ನು ಉಳಿಸಬೇಕಾದರೆ ವಿಷ ನಿರೋಧಕ ಔಷಧನ್ನು ಉತ್ಪಾದಿಸಬೇಕಾದರೆ ಹಾವಿನ ವಿಷದ ಬಗ್ಗೆ ಸಮಗ್ರ ಸಂಶೋಧನೆ ನಡೆಯಬೇಕು ಎನ್ನುತ್ತಾರೆ ಲಿಯಾನ ಟ್ರಸ್ಟ್‌ನ ಸಹ ಸಂಸ್ಥಾಪಕ ಗೆರಾಡ್ ಮಾರ್ಟಿನ್.

ಹಾವಿನ ಬಗ್ಗೆ ಸುಮಾರು 30 ವರ್ಷ ಅಧ್ಯಯನ ಮಾಡಿರುವ ಅವರು, ಹಾವುಗಳ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವುದರ ಅಗತ್ಯತೆಯನ್ನು ಒತ್ತಿ ಹೇಳುತ್ತಾರೆ. 10ನೇ ಪುಟಕ್ಕೆ...

ಕುರಿಗಾಹಿ ಮುತ್ತಣ್ಣನ ಒಂದು ತೋಟದ ಕಥೆ

ಶಾಲೆಯ ಮೆಟ್ಟಿಲನ್ನೇ ಏರದ ಕುರಿಗಾಹಿ, ಪ್ರಗತಿಪರ ರೈತ ಮುತ್ತಣ್ಣ ಬೀರಪ್ಪ ಪೂಜಾರ ಅವರು ಧಾರವಾಡ ಕೃಷಿ ವಿ.ವಿಯ ಗೌರವ ಡಾಕ್ಟರೇಟ್ ಮನ್ನಣೆಗೆ ಪಾತ್ರರಾಗಿದ್ದಾರೆ. ಇದೊಂದು ಅಪರೂಪದ ವಿದ್ಯಮಾನ. ಇವರ ಯಶೋಗಾಥೆ ನಿಮ್ಮ ಓದಿಗಾಗಿ...

• ಸಂತೋಷ ಜಿಗಳಿಕೊಪ್ಪ

ಆಗ ಮುತ್ತಣ್ಣ ಬೀರಪ್ಪ ಪೂಜಾರಗೆ ಆರು ವರ್ಷ. ಅಪ್ಪ ಮೂವತ್ತು ಕುರಿಗಳನ್ನು ಖರೀದಿಸಿ, ಅವುಗಳನ್ನು ಲಾರಿಯಲ್ಲಿ ತುಂಬಿಸಿಕೊಂಡು ಬಂದು ಇಳಿದದ್ದು ಹಾವೇರಿಯಲ್ಲಿ. ತಮ್ಮೂರಿನ ಕುರಿಗಾಹಿಗಳ ಜೊತೆಗೆ ಮುತ್ತಣ್ಣನನ್ನು ಸೇರಿಸಿದರು. ಮೂರ್ನಾಲ್ಕು ವರ್ಷಗಳಲ್ಲಿ ಕುರಿಗಳ ಸಂಖ್ಯೆ 150ಕ್ಕೆ ಏರಿತು. ಇದರಿಂದ ಅಸೂಯೆಗೆ ಒಳಗಾದ ಸಹ ಕುರಿಗಾಹಿಗಳು ಇನ್ನು ಮುಂದೆ ತಮ್ಮೊಂದಿಗೆ ಕುರಿ ಮೇಯಿಸಲು ಬರದಂತೆ ಕಟ್ಟಪ್ಪಣೆ ಹೊರಡಿಸಿದರು. ಇದರಿಂದ ನೊಂದಿದ್ದ ಮಗನನ್ನು ತಂದೆ–ತಾಯಿ, ತಮ್ಮ ಸೇರಿಕೊಂಡರು. ನಾಲ್ಕು ಮಂದಿ ಒಟ್ಟಿಗೆ ಕುರಿ ಮೇಯಿಸುತ್ತಾ ಹೋದರು. ಮುಂದಿನ ಎರಡು ವರ್ಷಗಳಲ್ಲಿ ಕುರಿಗಳ ಸಂಖ್ಯೆ 500ಕ್ಕೆ ಏರಿತು. ಕಡೂರು, ಬೀರೂರು, ಅರಸೀಕೆರೆ, ಭದ್ರಾವತಿಯಲ್ಲಿ ಅಲೆದಾಡಿದ ಮುತ್ತಣ್ಣ ಮತ್ತು ಕುಟುಂಬವು ಕೊನೆಯಲ್ಲಿ ಹಾವೇರಿ ಜಿಲ್ಲೆಯ ಹಿರೇಕೆರೂರಿಗೆ ಲಗ್ಗೆ ಇಟ್ಟಿತು. ಅಷ್ಟರಲ್ಲೇ ಅವರ ಬಳಿ 2,500 ಕುರಿಗಳಿದ್ದವು!

ಮುತ್ತಣ್ಣ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ನವಲಿಹಾಳದವರು. ಈಗ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕಾಮನಹಳ್ಳಿಯಲ್ಲಿ ನೆಲೆನಿಂತಿದ್ದಾರೆ.

ಕುರಿಗಳ ಸಂಖ್ಯೆ ಎರಡೂವರೆ ಸಾವಿರ ತಲುಪಿದ ಸಂದರ್ಭದಲ್ಲಿ ದಿನಕ್ಕೆ 20–30 ಕುರಿಗಳು ಸಾಯಲಾರಂಭಿಸಿದವು. ದೇವರ ಹೇಳಿಕೆ ನಂಬುತ್ತಿದ್ದ ಮುತ್ತಣ್ಣ ಮಂತ್ರವಾದಿಗಳನ್ನು ಕರೆಸಿ ಪೂಜೆ ಮಾಡಿದರೂ ಪ್ರಯೋಜನವಾಗಲಿಲ್ಲ. ಪರಿಚಯಸ್ಥ ಬಸ್ ಚಾಲಕರೊಬ್ಬರು ಪಶುವೈದ್ಯರನ್ನು ಕರೆಸಿ ಕುರಿಗಳ ತಪಾಸಣೆ ಮಾಡಿಸಿದರು. ಕುರಿಗಳಿಗೆ ಕರುಳು ಬೇನೆ ಇರುವುದು ಗೊತ್ತಾಯಿತು. ಔಷಧೋಪಚಾರ ಮಾಡುವಷ್ಟರಲ್ಲೇ ಬದುಕುಳಿದಿದ್ದು 900 ಕುರಿಗಳು ಮಾತ್ರ.

ಕಣ್ಣೆದುರೇ ಕುರಿಗಳು ಸಾಯುವುದನ್ನು ನೋಡಿದ್ದ ಅವರು ಮರುಕಪಟ್ಟಿದ್ದರು. ಮುಂದೆ ಇದೇ ರೀತಿ ಕುರಿಗಳು ಸತ್ತರೆ ನಮ್ಮ ಬದುಕಿಗೆ ಆಧಾರವೇನು ಎಂಬ ಚಿಂತೆಯಲ್ಲಿದ್ದರು. ಆಗ ಬೆಂಗಳೂರು ಸೇರಿ ಚಾಲಕನಾಗಲು ಮನಸ್ಸು ಮಾಡಿದ್ದರು. ಅದಕ್ಕೆ ಒಪ್ಪದ ತಾಯಿ ಹೊಲ ಮಾಡುವಂತೆ ಸಲಹೆ ನೀಡಿದರು. ಆಗ ತಂದೆ ಜೊತೆ ಕಾಮನಹಳ್ಳಿಗೆ ಬಂದ ಮುತ್ತಣ್ಣ 2000 ಇಸವಿಯಲ್ಲಿ 30 ಎಕರೆ ಹೊಲ ಖರೀದಿಸಿದರು. ಆವಾಗಲೇ ಮುತ್ತಣ್ಣರಿಗೆ ಮತ್ತೊಂದು ಸವಾಲು ಎದುರಾಯಿತು.

ಕೈಸುಟ್ಟುಕೊಂಡರು

ಕುರಿ ಕಾಯುತ್ತಿದ್ದ ಮುತ್ತಣ್ಣನಿಗೆ, ಕೃಷಿಯ ಜ್ಞಾನವೇ ಇರಲಿಲ್ಲ. ಬರಡುಭೂಮಿಯಲ್ಲಿ ಯಾವ ಬೆಳೆ ಬೆಳೆದರೆ ಸೂಕ್ತವೆಂಬುದು ಗೊತ್ತಿರಲಿಲ್ಲ. ಅವರಿವರ ಮಾತು ಕೇಳಿ ಮೆಕ್ಕೆಜೋಳ ಹಾಗೂ ಭತ್ತ ಬೆಳೆದು ಕೈ ಸುಟ್ಟುಕೊಂಡರು. ನಿರಂತರ ಬರಗಾಲದಿಂದ ಸಾಲಗಾರರೂ ಆದರು. ‘ಕೃಷಿ ಸಹವಾಸವೇ ಬೇಡ. ಜಮೀನು ಮಾರಿ ಎಲ್ಲರೂ ಕುರಿ ಕಾಯಲು ಹೋಗೋಣ’ ಎಂದು ತಂದೆ–ತಾಯಿ ಮುತ್ತಣ್ಣನಿಗೆ ಕಿವಿಮಾತು ಹೇಳಿದರು. ಆದರೆ, ಇದಕ್ಕೆ ಒಪ್ಪದೇ ಕೃಷಿ ಮುಂದುವರಿಸಿದರು. ಕೃಷಿಯ ಮಜಲುಗಳನ್ನು ತಿಳಿದುಕೊಳ್ಳಲಾರಂಭಿಸಿದರು. ಭತ್ತ, ಮೆಕ್ಕೆಜೋಳ ಮಾಡಿದರೆ ಲಾಭ ಸಿಗುವುದಿಲ್ಲವೆಂದು ಅರಿತು ಸಮಗ್ರ ಕೃಷಿಯತ್ತ ವಾಲಿದರು. ಮತ್ತೊಂದು ಹೊಸ ಪ್ರಯೋಗಕ್ಕೆ ಕೈ ಹಾಕಿದರು. ಅದು ಮಾವಿನ ತೋಟ.

ನರ್ಸರಿಯಲ್ಲಿ ಗಿಡಗಳ ಆರೈಕೆಯಲ್ಲಿ ಮುತ್ತಣ್ಣ

ಚಿತ್ರಗಳು: ಮಾಲತೇಶ ಇಚ್ಚಂಗಿ

ಆಗ ಹಾವೇರಿಯಲ್ಲಿ ಮಾವಿನಗಿಡಗಳು ಸಿಗುತ್ತಿರಲಿಲ್ಲ. ರತ್ನಗಿರಿಯಿಂದ ತರಬೇಕಿತ್ತು. ಹಣದ ಕೊರತೆ ಎದುರಿಸುತ್ತಿದ್ದ ಮುತ್ತಣ್ಣ, ಆನವಟ್ಟಿ ರಸ್ತೆಯ ಅಕ್ಕಪಕ್ಕದಲ್ಲಿದ್ದ ಹಳೇ ಮಾವಿನಮರಗಳ ಕೆಳಗೆ ಬೀಳುತ್ತಿದ್ದ ವಾಟೆಗಳನ್ನು ಆರಿಸಿ ತಂದು ತೋಟಗಾರಿಕೆ ಇಲಾಖೆ ಸಹಾಯದಿಂದ ಸಸಿ ಮಾಡಿದರು. ಮೊದಲ ಯತ್ನದಲ್ಲೇ 12 ಸಾವಿರ ಮಾವಿನಸಸಿಗಳು ಇವರ ಬಳಿ ಇದ್ದವು. ಹತ್ತು ಎಕರೆಗೆ ಅಗತ್ಯವಿದ್ದ ಒಂದು ಸಾವಿರ ಸಸಿಗಳನ್ನು ಇಟ್ಟುಕೊಂಡು, ಹನ್ನೊಂದು ಸಾವಿರ ಸಸಿಗಳನ್ನು ಮಾರಿ ಅದರಿಂದ ಲಾಭ ಕಂಡರು.



ಮುತ್ತಣ್ಣ ಗೌರವ ಡಾಕ್ಟರೇಟ್ ಸ್ವೀಕರಿಸಿದ ಕ್ಷಣ

ಮುಂದೆಲ್ಲಾ ಪವಾಡ

ಬಂದ ಲಾಭದಲ್ಲಿ ಮಾವಿನ ಸಸಿ ಹಚ್ಚಿ, ಕೊಳವೆಬಾವಿ ಕೊರೆಸಿ ಹನಿ ನೀರಾವರಿ ಮಾಡಿದರು. ಮಾವಿನ ನಡುವೆಯೇ ಬಾಳೆ ಬೆಳೆದು, ಬದುಕಿನ ಮೊದಲ ಹೆಜ್ಜೆ ಮುಂದಕ್ಕೆ ಇಟ್ಟರು. ಆನಂತರ ಆಗಿದ್ದೆಲ್ಲವೂ ಪವಾಡವೇ. ತೋಟಗಾರಿಕೆ ಬೆಳೆಯತ್ತ ವಾಲಿದ ಮುತ್ತಣ್ಣ, ಮಾವು, ಬಾಳೆ ಜೊತೆಯಲ್ಲಿ ಅಡಿಕೆ, ಸಪೋಟಾ, ಎಲೆಬಳ್ಳಿ, ವಿವಿಧ ಹಣ್ಣುಗಳನ್ನೂ ಬೆಳೆಸಿದರು. ಈಗ ಅವರು 37 ಎಕರೆ ಜಮೀನಿನ ಒಡೆಯ. 15 ತಳಿಗಳ ಭತ್ತ ಕೃಷಿಯನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ. ಸಿರಿ ಪದ್ಧತಿಯಲ್ಲಿ ಭತ್ತ ಬೆಳೆದು ಅತೀ ಹೆಚ್ಚು ಲಾಭ ಪಡೆದ ರಾಜ್ಯದ ಮೊದಲ ಕೃಷಿಕ. ಹೈನುಗಾರಿಕೆ, ಮೀನುಗಾರಿಕೆ, ಜೇನು ಕೃಷಿಯಲ್ಲೂ ಪಳಗಿದ್ದಾರೆ.

ತೋಟಗಾರಿಕೆ ಬೆಳೆ ಬೆಳೆಯುವುದರ ಜೊತೆಯಲ್ಲಿಯೇ ಸಸಿಗಳನ್ನು ಸಿದ್ಧಪಡಿಸಿ ಮಾರಲು ನರ್ಸರಿ ಆರಂಭಿಸಿದರು. ತೋಟಗಾರಿಕೆಯಲ್ಲಿ ಪಳಗಿದ್ದ ಮುತ್ತಣ್ಣನವರ ಸಸಿಗಳನ್ನು ಖರೀದಿಸಲು ರೈತರು ಮುಗಿಬಿದ್ದರು. 40 ಸಾವಿರ ಸಸಿಗಳಿಂದ ಆರಂಭವಾದ ನರ್ಸರಿಯಲ್ಲಿ ಈಗ ಪ್ರತಿ ವರ್ಷ ಮೂರೂವರೆ ಲಕ್ಷ ಸಸಿಗಳನ್ನು ಸಿದ್ಧಪಡಿಸಲಾಗುತ್ತದೆ.

ಇವರು ರಾತ್ರಿ ತೋಟದಲ್ಲಿ ಸುತ್ತಾಡುತ್ತಾರೆ. ಪ್ರತಿಯೊಂದು ಗಿಡದ ಕಾಳಜಿ ಮಾಡುತ್ತಾರೆ. ತೋಟದಲ್ಲಿ ‘ಶಾಸ್ತ್ರೀಯ ಸಂಗೀತ’ ಅನುರಣಿಸುವಂತೆ ಮಾಡಿದ್ದಾರೆ. 9ನೇ ಪುಟಕ್ಕೆ...

‘ಸಮಗ್ರ ಕೃಷಿಗೆ ಮುಂದಾಗಿ’

‘ರೈತರು ಬದುಕಬೇಕಾದರೆ, ಸಮಗ್ರ ಕೃಷಿ ಪದ್ಧತಿ ಮಾಡಲೇಬೇಕು. ನಮ್ಮಲ್ಲಿ ಒಂದು–ಎರಡು ಎಕರೆ ಇರುವ ರೈತರು ಹೆಚ್ಚಿದ್ದಾರೆ. ಅಂಥವರು ಸಮಗ್ರ ಕೃಷಿ ಪದ್ಧತಿ ಮಾಡಬಹುದು’ ಎಂದು ಮುತ್ತಣ್ಣ ಹೇಳುತ್ತಾರೆ.

‘ಕೃಷಿಯಲ್ಲಿರುವ ನೆಮ್ಮದಿ ಯಾವುದರಲ್ಲೂ ಇಲ್ಲ. ಯುವಕರು ಊರು ಬಿಟ್ಟು ಕೆಲಸಕ್ಕಾಗಿ ವಲಸೆ ಹೋಗುತ್ತಾರೆ. ಅಲ್ಲಿ ನೆಮ್ಮದಿ ಇರುವುದಿಲ್ಲ. ಶ್ರಮಪಟ್ಟು ದುಡಿಯಬೇಕು. ತಾಳ್ಮೆಬೇಕು. ಅವಾಗಲೇ ಕೃಷಿಯಲ್ಲಿ ಸಾಧನೆ ಮಾಡಬಹುದು. ಆರಂಭದಲ್ಲಿ ನಾನೂ ಎಡವಿದೆ. ಒಂದೇ ಬೆಳೆಗೆ ಜೋತು ಬಿದ್ದು ಸಾಲಗಾರನಾದೆ. ಹೊಡೆತ ಬಿದ್ದಾಗಲೇ ಮನುಷ್ಯ ಎದ್ದೇಳುವುದು’ ಎನ್ನುತ್ತಾರೆ.

ರಂಗದಲ್ಲಿನ ವಿಭಿನ್ನ ಪ್ರಯೋಗಗಳಿಗೆ ಮತ್ತೊಂದು ಹೆಸರು ಎಂಬಂತಿದೆ 'ಅಭಿನಯ ತರಂಗ'. ಇಲ್ಲಿನ ವಿದ್ಯಾರ್ಥಿಯಾಗಿದ್ದು ಈಗ ನಿರ್ದೇಶನದತ್ತ ಹೊರಳಿರುವ ವೈಷ್ಣವಿ ವಿ.ಎ. ಅವರು ಇದೀಗ ವಿಶಿಷ್ಟ ಪ್ರಯೋಗವೊಂದಕ್ಕೆ ಕೈಹಾಕಿದ್ದಾರೆ. ಕಲಾವಿದ ಎ.ಎಂ. ಪ್ರಕಾಶ್ ಅವರ ರೇಖಾಚಿತ್ರಗಳನ್ನು 'ಒಳ ಹೊರಗೆ' ರಂಗ ಪ್ರದರ್ಶನವಾಗಿ ಮಾರ್ಪಡಿಸಿದ್ದಾರೆ.

ಎ.ಎಂ. ಪ್ರಕಾಶ್ ಅವರ ರೇಖಾಚಿತ್ರಗಳು

ಕಲಾಕೃತಿಗಳು ಕ್ಯಾನ್ವಾಸ್‌ನಿಂದ ರಂಗಕ್ಕೆ ಜಿಗಿದಾಗ..

• ಜಿ ಎನ್ ಮೋಹನ್

ಕ್ಯಾನ್ವಾಸ್ ಮೇಲೆ ಎಳೆದ ರೇಖೆಗಳು ರಂಗದ ಮೇಲೆ ಪಾತ್ರಗಳಾಗಿ ಎದ್ದು ಬರಬಹುದೇ? ಕಂಬಳಿಹುಳು ಚಿಟ್ಟೆಯಾಗಿ ರೂಪಾಂತರಗೊಳ್ಳುವ ಹಾಗೆ? ಇಂತಹ ಒಂದು ವಿಭಿನ್ನ ಪ್ರಯೋಗಕ್ಕೆ ಮುಂದಾದದ್ದು 'ಅಭಿನಯ ತರಂಗ'. ಅ. ನ. ಸುಬ್ಬರಾಯರು ಕಲೆಗೆ ಹೊಸ ಆಯಾಮ ನೀಡಲು 'ಕಲಾಮಂದಿರ' ಹುಟ್ಟು ಹಾಕಿದರು. ಅವರ ಮಗ ಎ.ಎಸ್. ಮೂರ್ತಿಯವರು ಅದರೊಂದಿಗೆ ರಂಗಭೂಮಿಗೂ ಜಾಗ ನೀಡಲು 'ಅಭಿನಯ ತರಂಗ' ಹುಟ್ಟು ಹಾಕಿದರು. ಈ ಎರಡೂ ಸಂಸ್ಥೆಗಳು ಕಲೆ, ರಂಗಭೂಮಿಯ ಜೊತೆಗೆ ಕವಿತೆ, ಫೋಟೋಗ್ರಫಿ, ಹಾಡು ಹೀಗೆ ಹಲವು ಸೃಜನಶೀಲ ಕ್ಷೇತ್ರದಲ್ಲಿನ ಪ್ರಯೋಗದ ತಾಣವಾಗಿ ಬದಲಾಯಿತು. ಇಂತಹ ಪ್ರಯೋಗಗಳ ಸಾಲಿಗೆ ಹೊಸ ಸೇರ್ಪಡೆ- 'ಒಳ ಹೊರಗೆ' ರಂಗ ಪ್ರದರ್ಶನ.

ಅಭಿನಯ ತರಂಗದ ವಿದ್ಯಾರ್ಥಿಯಾಗಿದ್ದು ಈಗ ನಿರ್ದೇಶನದತ್ತ ಹೊರಳಿರುವ ವೈಷ್ಣವಿ ವಿ.ಎ. ಅವರು ಕಲಾವಿದ ಎ.ಎಂ. ಪ್ರಕಾಶ್ ಅವರ ರೇಖಾಚಿತ್ರಗಳನ್ನು ಬೆಂಗಳೂರಿನಲ್ಲಿ 'ಒಳ ಹೊರಗೆ' ರಂಗ ಪ್ರದರ್ಶನವಾಗಿ ಮಾರ್ಪಡಿಸಿದ್ದರು.

'ಒಳ ಹೊರಗೆ' ರಂಗ ಪ್ರದರ್ಶನದ ದೃಶ್ಯ

'ಅಮ್ಮನ ಸಾವು ನನ್ನೊಳಗೆ ರೇಖೆಗಳು ಮೂಡಲು, ಆಡಲು ಕಾರಣವಾಯಿತು' ಎನ್ನುತ್ತಾರೆ ಕಲಾವಿದ ಎ.ಎಂ. ಪ್ರಕಾಶ್. ಇವರು ಕಲಾ ವಿದ್ಯಾರ್ಥಿಯಾಗಿದ್ದ ಸಮಯದಲ್ಲಿ ಅವರ ತಾಯಿ ಐಸಿಯುಗೆ ದಾಖಲಾಗಿ ಸಾವು ಬದುಕಿನ ನಡುವೆ ಹೊಯ್ದಾಡುತ್ತಿದ್ದರು. 'ಎದುರಿಗಿದ್ದ ಮಾನಿಟರ್‌ನಲ್ಲಿ ಏರಿಳಿಯುತ್ತಿದ್ದ ರೇಖೆಗಳು ನಂತರ ಅಡ್ಡಗೆರೆಯಾಗಿ ಬದಲಾಯಿತು. ಅಲ್ಲಿಂದ ನನ್ನ ಗೆರೆಗಳ ದಿಕ್ಕೇ ಬದಲಾಯಿತು' ಎನ್ನುತ್ತಾರೆ. ಬಹುಶಃ ತಲ್ಲಣ ಹಾಗೂ ರೇಖೆ ಜೊತೆ ಜೊತೆಯಾಗಿಯೇ ಇವರೊಳಗೆ ಹೆಜ್ಜೆ ಹಾಕಿತ್ತೇನೋ.

ಕೋವಿಡ್ ಇಡೀ ಜಗತ್ತನ್ನು ನುಂಗಿ ನೊಣೆಯಲು ಹೊರಟಾಗ ಕಲಾವಿದ ಪ್ರಕಾಶ್ ಕಂಡದ್ದು ಮತ್ತೆ ಈ ರೇಖೆಗಳ ಆಟವನ್ನೇ. ಏರಿಳಿಯುವ ರೇಖೆಗಳು ಅಡ್ಡಗೆರೆಯಾಗಿ ಬಿಡುವ ಆತಂಕವನ್ನು. ಇದರ ಹಿಂದೆ ಇರುವ ರೋದನ, ಹಾಹಾಕಾರ, ಕಣ್ಣೀರು ಅವರನ್ನು ಇನ್ನಿಲ್ಲದಂತೆ ಕಾಡಿತ್ತು. ಕಪ್ಪು ಬಿಳಿ ರೇಖೆಗಳಲ್ಲಿ ಆತಂಕವನ್ನೂ ಹಾಗೂ ಸಂಭ್ರಮವನ್ನೂ ದಾಖಲಿಸುತ್ತಾ ಹೋದರು. ಸಾವಿನ ಆತಂಕ, ಅದರ ನಡುವೆಯೇ ಅರಳುವ ಪ್ರಕೃತಿಯ ಸಂಭ್ರಮ ಎರಡೂ ಅವರ ಚಿತ್ರಗಳ ಉಸಿರು.

ಪ್ರಕಾಶ್ ತಮ್ಮ ರೇಖಾಚಿತ್ರ ಪ್ರದರ್ಶನವನ್ನು 'ನನ್ನೊಳಗಿನ ಮಾತುಕತೆ' ಎಂದೇ ಕರೆದುಕೊಂಡಿದ್ದರು. ಆ ಕಲೆಗೆ ಹೊರ ಮಾತು ಜೋಡಿಸಿದ್ದಕ್ಕಾಗಿ ಇರಬೇಕು ನಿರ್ದೇಶಕಿ ವೈಷ್ಣವಿ ಇದನ್ನು 'ಒಳ ಹೊರಗೆ' ಎಂದು ಕರೆದಿದ್ದಾರೆ. ಈ ರಂಗಕೃತಿಯನ್ನು ಅಭಿನಯಿಸಿದ ಕಲಾವಿದರು ಪ್ರಕಾಶ್ ಅವರ ಅಷ್ಟೂ ಕಲಾಕೃತಿಗಳ ಪೈಕಿ ತಮ್ಮನ್ನು ಇನ್ನಿಲ್ಲದಂತೆ ಕಾಡಿದ ಒಂದು ಚಿತ್ರವನ್ನು ಆಯ್ಕೆ ಮಾಡಿಕೊಂಡಿದ್ದರು. ಆ ಒಂದು ಕಲಾಕೃತಿ ಇವರೊಳಗೆ ಚಿಮ್ಮಿಸಿದ ಭಾವಗಳನ್ನು ಅಭಿನಯದ ಮೂಲಕ ಹೊರಗೆಡಹಿದ್ದರು. ಹಾಗೆ ಎಲ್ಲಾ ನಟರ ಅಭಿವ್ಯಕ್ತಿಯನ್ನು ಹುರಿಗೊಳಿಸಿ ಅದಕ್ಕೆ ಮತ್ತೊಂದು ಆಯಾಮವನ್ನು ಸೇರಿಸಿ ರಂಗ ಕೃತಿಯಾಗಿಸಲಾಗಿದೆ. ಕ್ಯಾನ್ವಾಸ್‌ನೊಳಗಿಂದ ಚಿಮ್ಮಿದ ಒಂದು ಚಿಟ್ಟೆ ರಂಗದ ಮೇಲೆ ಹಾರಾಡಿದ ಹಾಗೆ.

ಕಲಾಕೃತಿಯೊಳಗೆ ಬಿಳಿಯ ಹಾಳೆಯ ಮೇಲೆ ಕಪ್ಪು ರೇಖೆಗಳಿಂದ ಮೂಡಿದ ಚಿತ್ರಗಳಿವೆ. ಅಂತೆಯೇ ಕಪ್ಪು ಹಾಳೆಯ ಮೇಲೆ ಬಿಳಿಯ ರೇಖೆಗಳೂ ಇವೆ. ಒಟ್ಟು ಐದು ಕಲಾಕೃತಿಗಳ ಮೂಲಕ ನಾಲ್ಕು ಕಲಾವಿದರು ಕಟ್ಟಿದ ಕಥನ ಇದು. ಹರ್ಷವರ್ಧನ, ಪ್ರಮೋದ್, ಅಮೃತ ಬಿರಾದಾರ್, ಗೌತಮ್ ಎಚ್. ಜಿ. ಇವರು ಆಯ್ಕೆ ಮಾಡಿದ ಕೃತಿಗಳಿಗೆ ನೀಡಿದ ದೈಹಿಕ ಅಭಿವ್ಯಕ್ತಿ ಕಾಡುವಂತಿತ್ತು. ಕೋವಿಡ್ ಕಾಲದ ತಳಮಳ, ರೋದನ, ಅಸಹಾಯಕತೆ ಎಲ್ಲವನ್ನೂ ಮಾತು ಇಲ್ಲದೆ ಕೇವಲ ದೈಹಿಕ ಚಲನೆಗಳ ಮೂಲಕ ಕಟ್ಟಿಕೊಟ್ಟರು. ಕೋವಿಡ್ ಕಾಲ ಸರಿದು ಲಾಕ್ ಡೌನ್ ಮುಗಿಯುತ್ತಿದ್ದಂತೆ ಮತ್ತೆ ಬದುಕು ಕಟ್ಟಿಕೊಳ್ಳುತ್ತಾ ಹೋದದ್ದನ್ನೂ ಬಿಂಬಿಸಿದರು. ಈ ಎರಡರ ನಡುವಣ ವ್ಯತ್ಯಾಸವನ್ನು ವೈಷ್ಣವಿ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ. ಇದನ್ನು ಸಂಗೀತದಲ್ಲಿ ಸುನೀಲ್ ಸಮರ್ಥವಾಗಿ ತಂದಿದ್ದಾರೆ. ಈ ನಾಟಕದ ಕೊನೆಗೆ ಅದುವರೆಗೂ ಬೆನ್ನು ತಿರುಗಿಸಿ ನಿಂತಿದ್ದ ಕಲಾಕೃತಿ ಹಸಿರು ಚಿಮ್ಮಿಸುವ ಚಿತ್ರವನ್ನು ಕಾಣಿಸಿದಾಗ ಒಂದು ನಿಟ್ಟುಸಿರು ಹೊರಚೆಲ್ಲುವಂತಾಗುತ್ತದೆ. ಇದೇ ನಾಟಕದ ಗೆಲುವು ಕೂಡಾ.

ಶಿಷ್ಯಪಡೆಯನ್ನು ರೂಪಿಸಿದ ತಬಲಾ ವಾದಕ

ಬೆಂಗಳೂರಿನಲ್ಲಿ ನೂರಾರು ಮಕ್ಕಳಿಗೆ ತಬಲಾ ನುಡಿಸಾಣಿಕೆ ಹೇಳಿಕೊಟ್ಟ ಸತೀಶ್ ಹಂಪಿಹೊಳಿ, ಹಲವು ಗಾಯಕರಿಗೆ ತಬಲಾ ಸಾಥಿಯನ್ನೂ ನೀಡಿದವರು. ಸುಮಾರು ನಾಲ್ಕು ದಶಕಗಳಿಂದ ಲಯವಾದ್ಯದಲ್ಲಿ ತೊಡಗಿಕೊಂಡಿರುವ ಅವರು, ತಬಲಾ ಸ್ವತಂತ್ರವಾದನ ನಡೆಸಿಕೊಡುವ ಸಾಮರ್ಥ್ಯವಿರುವ ಹಲವಾರು ಶಿಷ್ಯಂದಿರನ್ನೂ ತಯಾರು ಮಾಡಿದ್ದಾರೆ.

• ಉಮಾ ಅನಂತ್

ಹನ್ನೊಂದರ ಹರೆಯದಲ್ಲೇ ತಬಲಾ ಕಲಿಯಲು ಆರಂಭಿಸಿದ ಸತೀಶ್ ಹಂಪಿಹೊಳಿ ಸದ್ಯ ತಬಲಾ ವಾದನವನ್ನು ಮಕ್ಕಳಿಗೆ ಕಲಿಸುತ್ತ, ಹಲವಾರು ಶಿಷ್ಯರನ್ನು ತಯಾರು ಮಾಡಿದವರು. ಇವರು ತಬಲಾ ಕಲಿಯಲು ಆರಂಭಿಸಿದ ರೀತಿಯೂ ಬಹಳ ರೋಚಕವಾದದ್ದು.

ಹನ್ನೊಂದು ವರ್ಷದ ಬಾಲಕನಾಗಿದ್ದಾಗ ಒಮ್ಮೆ ಬೆಳಗಾವಿ ಜಿಲ್ಲೆಯ ಹಂಪಿಹೊಳಿಯಲ್ಲಿರುವ ಇವರ ಮನೆ ಬಳಿ 'ಶಾರದಾ ಸಂಗೀತ ನಾಟಕ ಮಂಡಳಿ' ಎಂಬ ನಾಟಕ ಕಂಪನಿ ಬೀಡು ಬಿಟ್ಟಿತ್ತು. ಆ ನಾಟಕ ಪ್ರದರ್ಶನ ನಡೆಯುವಾಗ ಒಬ್ಬ ತಬಲಾ ವಾದಕ ತನ್ನ ನುಡಿಸಾಣಿಕೆಯಲ್ಲಿ ಚಾಕಚಕ್ಯತೆಯನ್ನು ಪ್ರದರ್ಶಿಸಿದಾಗ ಇದು ಹಂಪಿಹೊಳಿ ಅವರನ್ನು ಬಹುವಾಗಿ ಆಕರ್ಷಿಸಿತು. ಇದೇ ಮುಂದೆ ಇವರಿಗೆ ತಬಲಾ ವಾದನವನ್ನು ನುಡಿಸಲು ಪ್ರೇರೇಪಿಸಿತು.

ತಬಲಾ ನುಡಿಸುವ ಕಲೆಯನ್ನು ಮೊದಲಿಗೆ ಎಂ.ಎನ್. ಕಸ್ತೂರಿ ಅವರ ಬಳಿ ಕಲಿತು, ಮುಂದೆ ಹೆಚ್ಚಿನ ಅಭ್ಯಾಸವನ್ನು ಪಂಡಿತ್ ಪಿ.ಟಿ. ಬಸವರಾಜ ಬೆಂಡಿಗೇರಿ ಅವರ ಬಳಿ ಮಾಡಲಾರಂಭಿಸಿದರು. ತಬಲಾ ಕಲಿಯಲು ಇವರು ಹುಬ್ಬಳ್ಳಿಯಲ್ಲಿ ಪ್ರತಿದಿನ ಕಾಲೇಜು ಮುಗಿದ ನಂತರ ಧಾರವಾಡಕ್ಕೆ ಹೋಗಬೇಕಾಗಿತ್ತು. ಅಲ್ಲಿ ಗುರುಗಳ ಸಮ್ಮುಖದಲ್ಲಿ ತಬಲಾವನ್ನು ಬಹಳ ಕಷ್ಟಪಟ್ಟು ಕಲಿತರು.

'ನೂರು ಮಕ್ಕಳನ್ನು ಒಂದೇ ವೇದಿಕೆಯಲ್ಲಿ ಕೂರಿಸಿ, 'ಶತ ತಬಲಾ ವಾದನ' ನಡೆಸಿಕೊಟ್ಟದ್ದು ನನ್ನ ಸಾಧನೆ. ಇದೇ ರೀತಿ 'ದಾಸ ನಿರಂತರ', 'ವಚನ ನಿರಂತರ' ಮುಂತಾದ ಕಾರ್ಯಕ್ರಮಗಳನ್ನೂ ತಮ್ಮ ಶಿಷ್ಯಂದಿರ ಕಡೆಯಿಂದ ನಡೆಸಿಕೊಟ್ಟು ಸಂಗೀತದಲ್ಲಿ ವಿಶೇಷ ಎನಿಸುವ ಕಾರ್ಯಕ್ರಮ ರೂಪಿಸಿದರು. ರಾಗ ತರಂಗ, ಶ್ರಾವಣ ಸಂಗೀತೋತ್ಸವ, ಸದ್ಗುರು ಸಂಗೀತೋತ್ಸವ ಏರ್ಪಡಿಸಿದ್ದು ಸಹ ತಮ್ಮ ಸಾಧನೆ' ಎನ್ನುವುದು ಹಂಪಿಹೊಳಿ ಅವರ ವಿವರಣೆ.

ಆಕಾಶವಾಣಿಯಲ್ಲಿ ಗ್ರೇಡೆಡ್ ಕಲಾವಿದರಾಗಿರುವ ಹಂಪಿಹೊಳಿ, ಹಲವು ಹಿಂದೂಸ್ತಾನಿ ಗಾಯಕರಿಗೆ ತಬಲಾ ಸಾಥಿ ನೀಡಿದ್ದಾರೆ. ಮುಂಬೈಯ ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ ನಡೆಸುವ ವಿವಿಧ ಪರೀಕ್ಷೆಗಳಿಗೆ ತೀರ್ಪುಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ ಹಾಗೂ ವಿವಿಧ ಸಂಸ್ಥೆ, ಸಂಸ್ಥೆಗಳ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಹಂಪಿಹೊಳಿ ಅವರು 'ಸತೀಶ್ ಹಂಪಿಹೊಳಿ ಸಂಗೀತ ಅಕಾಡೆಮಿ' ಸ್ಥಾಪಿಸಿದ್ದಾರೆ.

ತಂದೆ ದತ್ತಾತ್ರೇಯ ಹಂಪಿಹೊಳಿ ಹಾಗೂ ತಾಯಿ ಸರಸ್ವತಿ ಬಾಯಿ ಅವರ ಮೂರನೆ ಮಗನಾಗಿ 1965ರಲ್ಲಿ ಹುಬ್ಬಳ್ಳಿಯ ಚಿಟಗುಪ್ಪಿಯಲ್ಲಿ ಜನಿಸಿದ ಇವರು, ಮನೆಯಲ್ಲಿ ಭಜನಾ ಕಾರ್ಯಕ್ರಮ ನಡೆಯುತ್ತಿದ್ದಾಗ ತಬಲಾ ನುಡಿಸುತ್ತಿದ್ದರು. ಇವರ ತಾತ ರಾಮಪ್ಪಯ್ಯ ಇನಾಂದಾರ್ ಅವರೂ ತಬಲಾವಾದಕರಾಗಿದ್ದುದರಿಂದ ಇವರಿಗೆ ಸ್ವಲ್ಪ ಮಟ್ಟಿಗೆ ನುಡಿಸಾಣಿಕೆ ಕಲೆ ರಕ್ತಗತವಾಗಿಯೇ ಬಂದಿದೆ ಎನ್ನಬಹುದು. ಸಂಗೀತ ಬದುಕಿನಲ್ಲಿ ಸುಮಾರು ನಲವತ್ತು ವರ್ಷ ಸವೆಸಿರುವವರು. ಬೆಂಗಳೂರಿನಲ್ಲಿ ಲಯವಾದ್ಯ ನುಡಿಸಾಣಿಕೆ ಅಲ್ಲದೆ ಸಂಘಟನೆಯಲ್ಲಿಯೂ ತೊಡಗಿಕೊಂಡಿದ್ದಾರೆ.

ಹಾಗೆ ನೋಡಿದರೆ ಸತೀಶ್, ಬೆಂಗಳೂರಿಗೆ ಬಂದದ್ದೇ ಆಕಸ್ಮಿಕವಾಗಿ. ಒಮ್ಮೆ ಕುಂದಗೋಳದ ಸವಾಯ್ ಗಂಧರ್ವ ಅವರ ಪುಣ್ಯಸ್ಮರಣೆಗಾಗಿ ಹಿಂದೂಸ್ತಾನಿ ಸಂಗೀತದ ಮೇರು ಕಲಾವಿದ ಪಂಡಿತ್ ಶೇಷಾದ್ರಿ ಗವಾಯಿ ಅವರು ಬಂದಿದ್ದ ಸಂದರ್ಭದಲ್ಲಿ ಹಂಪಿಹೊಳಿ ಅವರ ಪರಿಚಯವಾಯಿತು. ಅಲ್ಲಿಂದ ಗವಾಯಿ ಅವರ ಸಲಹೆಯಂತೆ 1986ರಲ್ಲಿ ಹಂಪಿಹೊಳಿ ಅವರು ಬೆಂಗಳೂರಿಗೆ ಬಂದರು. ತಮ್ಮ ಆಶ್ರಮದಲ್ಲೇ ಇವರಿಗೆ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿದ ಗವಾಯಿಗಳು, ಇಲ್ಲಿ ಮಕ್ಕಳಿಗೆ ತಬಲಾ ಕಲಿಸಲೂ ಏರ್ಪಾಡು ಮಾಡಿದರು. ಇದೇ ತನ್ನ ಸಂಗೀತ ಬದುಕಿನ ಮಹತ್ವದ ತಿರುವು ಎನ್ನುತ್ತಾರೆ ಇವರು.

ಮುಂದೆ ಉಭಯಗಾನ ವಿದುಷಿಯಾಗಿದ್ದ ಶ್ಯಾಮಲಾ ಭಾವೆ ಅವರ ಸರಸ್ವತಿ ಸಂಗೀತ ವಿದ್ಯಾಲಯದಲ್ಲೂ ಮಕ್ಕಳಿಗೆ ತಬಲಾ ನುಡಿಸಲು ವ್ಯವಸ್ಥೆ ಮಾಡಿದರು. ಮುಂದೆ 1990ರಲ್ಲಿ ಬೆಂಗಳೂರಿನ ಶ್ರೀನಿವಾಸನಗರದಲ್ಲಿ ತಮ್ಮ ವಾಸ್ತವ್ಯ ಆರಂಭಿಸಿದ ಹಂಪಿಹೊಳಿ ಅವರು ಇಲ್ಲೂ ಆಸಕ್ತ ಮಕ್ಕಳಿಗೆ ತಬಲಾ ಕಲಿಸಲಾರಂಭಿಸಿ ಹಲವಾರು ಶಿಷ್ಯಪಡೆಯನ್ನೇ ತಯಾರು ಮಾಡಿದ್ದಾರೆ.

ಸತೀಶ್ ಹಂಪಿಹೊಳಿ

ಕುರಿಗಾಹಿ ಮುತ್ತಣ್ಣನ ಒಂದು ತೋಟದ ಕಥೆ

8ನೇ ಪುಟದಿಂದ...

ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡು ಮಾದರಿ ರೈತ ಎನಿಸಿಕೊಂಡಿರುವ ಇವರ ಕೃಷಿ ಪಯಣದ ಮಜಲುಗಳನ್ನು ತಿಳಿಯಲು ಕೃಷಿ ವಿಶ್ವವಿದ್ಯಾಲಯದ ಸಂಶೋಧಕರು, ಬೋಧಕರು, ವಿದ್ಯಾರ್ಥಿಗಳು, ಆಸಕ್ತ ರೈತರು ತೋಟಕ್ಕೆ ಭೇಟಿ ಕೊಡುತ್ತಿರುತ್ತಾರೆ.

ತಮ್ಮ ಜಮೀನಿಗೆ ದ್ರವ ರೂಪದ ಸಾವಯವ ಗೊಬ್ಬರ ಪೂರೈಸಲು ಜೀವಸಾರ ಘಟಕ ನಿರ್ಮಿಸಿಕೊಂಡಿದ್ದಾರೆ. ಯಾವುದೇ ರಾಸಾಯನಿಕ ಬಳಸುವುದಿಲ್ಲ. ಇವರದ್ದು ಸಾವಯವ ಸಮಗ್ರ ಕೃಷಿ.

ಕೃಷಿ ಜೊತೆಯಲ್ಲಿ 900 ಕುರಿಗಳನ್ನು ಸಾಕುತ್ತಿದ್ದಾರೆ. ಅವುಗಳ ಜವಾಬ್ದಾರಿಯನ್ನು ತಮ್ಮ ವಹಿಸಿಕೊಂಡಿದ್ದಾರೆ. ಪತ್ನಿ, ತಂದೆ-ತಾಯಿ ಜೊತೆಯಲ್ಲಿ ತೋಟದ ಮನೆಯಲ್ಲಿ ವಾಸವಿದ್ದಾರೆ. ಮುತ್ತಣ್ಣ ಅವರ ಮಕ್ಕಳು, ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ.

ಇವರ ಸಮಗ್ರ ಕೃಷಿಗಾಗಿ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ. ಧಾರವಾಡ ಕೃಷಿ ವಿಶ್ವವಿದ್ಯಾಲಯ 2025ನೇ ಸಾಲಿನ 38ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಶಾಲೆಯ ಮೆಟ್ಟಿಲುಗಳನ್ನೇ ತುಳಿಯದ ರೈತ ಇಂತಹ ಗೌರವಕ್ಕೆ ಪಾತ್ರರಾಗಿರುವುದು ಒಂದು ಅಪರೂಪದ ವಿದ್ಯಮಾನ.

ಎದೆಗೆ ಬಿದ್ದ ಅಕ್ಷರ...

ಊರೂರು ಅಲೆಯುತ್ತಾ ಕುರಿ ಕಾಯುತ್ತಿದ್ದ ದಿನಗಳಲ್ಲಿ ಮುತ್ತಣ್ಣ ಅವರಿಗೆ ಅಕ್ಷರ ಕಲಿಯಬೇಕೆಂಬ ಆಸೆ ಹುಟ್ಟಿತು. ತಂದೆಯಿಂದ ಪಾಟಿ, ಪೆನ್ಸಿಲ್ ತರಿಸಿಕೊಂಡರು. ಕುರಿ ಕಾಯುತ್ತ ದಾರಿಯಲ್ಲಿ ಹೋಗುವಾಗ ಸಿಗುತ್ತಿದ್ದ ವಿದ್ಯಾರ್ಥಿಗಳು ಹಾಗೂ ವಿದ್ಯಾವಂತರಿಂದ ಪಾಟಿಯಲ್ಲಿ ಅ ಆ ಇ ಈ ಅಕ್ಷರ ಬರೆಸಿಕೊಂಡು ರಾತ್ರಿ ಅಭ್ಯಾಸ ಮಾಡುತ್ತಿದ್ದರು. ನಂತರ, ವಿದ್ಯಾರ್ಥಿಯಿಂದ ಹಳೆ ಪಠ್ಯಪುಸ್ತಕವನ್ನು ಪಡೆದುಕೊಂಡರು. ಶಾಲೆಗೆ ಹೋಗಿ ಬರುವ ವೇಳೆ ರಸ್ತೆಯಲ್ಲಿ ಸಿಗುತ್ತಿದ್ದ ವಿದ್ಯಾರ್ಥಿಗಳಿಂದ ಓದುಬರಹ ಕಲಿತರು. ಕುರಿಗಳಿಗಾಗಿ ಅರಣ್ಯದಲ್ಲಿ ಮರಗಳನ್ನು ಕಡಿಯುತ್ತಿದ್ದ ಅವರು, ಅಲ್ಲಿಯ ಫಲಕಗಳನ್ನು ಓದುವುದನ್ನು ಶುರು ಮಾಡಿದರು. ಆಮೇಲೆ ಮರ ಕಡಿಯುವುದನ್ನೇ ನಿಲ್ಲಿಸಿದರು! ಇತರೆ ಕುರಿಗಾಹಿಗಳಿಗೂ ಅಕ್ಷರ ಕಲಿಸಿ, ಬದುಕಲು ಅಗತ್ಯವಿರುವಷ್ಟು ಓದು ಹೇಳಿಕೊಟ್ಟರು.

ಮುನ್ನೋಟ 07-09-2025 ರಿಂದ 13-09-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಆರಂಭದಲ್ಲಿ ಸ್ವಲ್ಪ ಅನಾರೋಗ್ಯ ಇರಬಹುದು. ಮನಸ್ಸಿನಲ್ಲಿ ಕೋಪ ತುಂಬಿಕೊಂಡಿರುತ್ತದೆ. ಆದಾಯವು ಕಡಿಮೆಯಿದ್ದು, ಖರ್ಚು ಹೆಚ್ಚಾಗುವ ಸಂದರ್ಭವಿದೆ. ಹಿರಿಯರ ಸಹಕಾರ ಗಳಿಸಿಕೊಳ್ಳಲು ಪ್ರಯತ್ನಪಡುವಿರಿ. ಭೂಮಿಯ ವ್ಯಾಪಾರ ಮಾಡುವವರಿಗೆ ಲಾಭ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಿಶ್ರಫಲವಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆದಾಯವು ಉತ್ತಮವಾಗಿರುತ್ತದೆ. ನಿಮ್ಮೆಲ್ಲಾ ಕೆಲಸಗಳಿಗೆ ಸಹೋದರಿಯರಿಂದ ಸಹಕಾರ ಸಿಗುತ್ತದೆ. ಭೂಮಿ ವ್ಯಾಪಾರ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಕ್ರೀಡಾಪಟುಗಳಿಗೆ ಹೆಚ್ಚಿನ ತರಬೇತಿ ಮತ್ತು ಸೌಕರ್ಯ ದೊರೆಯುತ್ತದೆ. ಸ್ತ್ರೀಯರ ನಡುವೆ ನಡೆಯುವ ವ್ಯವಹಾರಗಳು ನಷ್ಟಕ್ಕೆ ಕಾರಣವಾಗಬಹುದು. ವ್ಯಾಪಾರ ವ್ಯವಹಾರಗಳಲ್ಲಿ ಅಭಿವೃದ್ಧಿ ಇರುತ್ತದೆ. ಹಿರಿಯರಿಗಾಗಿ ಸ್ವಲ್ಪ ಹಣ ಖರ್ಚಾಗುವುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಬಹಳ ಗೌರವಯುತವಾದ ನಡವಳಿಕೆ ಇರುತ್ತದೆ. ಸಮಾಜದಿಂದ ನಿಮಗೆ ಹೆಚ್ಚು ಗೌರವ ದೊರೆಯುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಮಹಿಳೆಯರ ಆದಾಯವು ಹೆಚ್ಚಾಗುವುದು. ಹಿರಿಯರು ವ್ಯಾಪಾರ-ವ್ಯವಹಾರಗಳಲ್ಲಿ ನಿಮಗೆ ಸಹಕಾರ ನೀಡುವವರು. ಹೆಚ್ಚು ಭೂಮಿಯನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವನ್ನು ಪಡೆಯುವ ಯೋಗವಿದೆ. ಕೃಷಿಗಾಗಿ ಹೆಚ್ಚು ಹಣ ಖರ್ಚಾಗುವುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಾರದ ಆರಂಭ ಬಹಳ ಆನಂದದಾಯಕವಾಗಿರುತ್ತದೆ. ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ಕೆಲವೊಂದು ಕೆಲಸಗಳಿಗೆ ಬಂಧುಗಳ ಪ್ರತಿರೋಧ ಎದುರಾಗಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ದೇಹದಲ್ಲಿ ಪಿತ್ತ ಜಾಸ್ತಿಯಾಗಿ ಆರೋಗ್ಯದಲ್ಲಿ ವ್ಯತ್ಯಾಸಗಳು ಕಾಣಿಸಬಹುದು. ಸಂಗಾತಿಯು ಈಗ ಕೆಲಸ ಕಾರ್ಯಗಳಿಗೆ ಹೆಚ್ಚಿನ ಸಹಕಾರ ನೀಡುವರು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಸ್ವಾಭಿಮಾನ ಹೆಚ್ಚಾಗಿರುತ್ತದೆ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಕೃಷಿಯಿಂದ ಹೆಚ್ಚಿನ ಆದಾಯವಿರುತ್ತದೆ. ಸಹೋದರಿಯರಿಗಾಗಿ ಹಣ ಖರ್ಚಾಗುತ್ತದೆ. ಕೃಷಿಭೂಮಿಯನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಕೀಲು ನೋವು ಕಾಣಿಸಬಹುದು. ವಿದೇಶದಲ್ಲಿರುವ ಸಂಗಾತಿಯನ್ನು ಈಗ ಹೋಗಿ ಸೇರಿಕೊಳ್ಳಬಹುದು. ಕಬ್ಬಿಣದ ವ್ಯಾಪಾರಿಗಳಿಗೆ ಅನಿರೀಕ್ಷಿತ ಲಾಭವಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಮನಸ್ಸಿನಲ್ಲಿ ಕೋಪ ತುಂಬಿಕೊಂಡಿರುತ್ತದೆ. ಆದಾಯವು ಕಡಿಮೆ ಇದ್ದು ಖರ್ಚು ಹೆಚ್ಚಾಗುವ ಸಂದರ್ಭವಿದೆ. ಹಿರಿಯರ ಸಹಕಾರ ಗಳಿಸಿಕೊಳ್ಳಲು ಪ್ರಯತ್ನಪಡುವಿರಿ. ಭೂಮಿಯ ವ್ಯಾಪಾರ ಮಾಡುವವರಿಗೆ ಲಾಭ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಿಶ್ರಫಲವಿರುತ್ತದೆ. ಅತಿ ಉಷ್ಣದಿಂದ ಆರೋಗ್ಯ ವ್ಯತ್ಯಾಸವಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸಂಗೀತಗಾರರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಆದಾಯದಷ್ಟೇ ಖರ್ಚೂ ಇರುತ್ತದೆ. ಹೊರದೇಶದಲ್ಲಿ ಇದ್ದವರು ಈಗ ಸ್ಥಿರಾಸ್ತಿಯನ್ನು ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಮಾತ್ರ ಇರುತ್ತದೆ. ಬಂಧುಗಳ ನಡುವೆ ನಡೆದ ಹಣಕಾಸಿನ ವ್ಯವಹಾರದಲ್ಲಿ ನಿಮಗೆ ಲಾಭವಾಗುತ್ತದೆ. ಹಿರಿಯರಿಂದ ಆರ್ಥಿಕ ಸಹಾಯವನ್ನು ನಿರೀಕ್ಷೆ ಮಾಡಬಹುದು. ವೃತ್ತಿಯಲ್ಲಿ ಅನುಕೂಲಗಳು ಹೆಚ್ಚಾಗುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಕ್ರೀಡಾಪಟುಗಳಿಗೆ ಹೆಚ್ಚು ಅವಕಾಶಗಳು ದೊರೆಯುತ್ತವೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳಿಂದ ಸಾಕಷ್ಟು ಪ್ರತಿರೋಧವನ್ನು ಕಾಣಬಹುದು. ವಾಯುಯಾನ ಕ್ಷೇತ್ರದಲ್ಲಿ ಅಭ್ಯಾಸ ಮಾಡುತ್ತಿರುವವರಿಗೆ ಸಾಕಷ್ಟು ಅಭಿವೃದ್ಧಿ ಇರುತ್ತದೆ. ಬಂಧುಗಳ ಜೊತೆ ಹಣಕಾಸಿನ ವ್ಯವಹಾರಗಳು ಬೇಡ. ಸಂಗಾತಿಯ ಕಡೆಯ ಹಿರಿಯರಿಂದ ನಿಮಗೆ ಹೆಚ್ಚು ಅನುಕೂಲಗಳಾಗುತ್ತವೆ. ಕೆಲವರಿಗೆ ಅನಿರೀಕ್ಷಿತ ಆದಾಯ ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಗೌರವಯುತವಾಗಿ ಇರಲು ಬಯಸುವಿರಿ. ಆದಾಯವು ಸಾಮಾನ್ಯವಾಗಿರುತ್ತದೆ. ಹಣಕಾಸಿನ ವ್ಯವಹಾರಗಳು ಸದ್ಯಕ್ಕೆ ಖಂಡಿತ ಬೇಡ. ತಾಯಿಯಿಂದ ನಿಮ್ಮ ಕೆಲಸಕಾರ್ಯಗಳಿಗೆ ಸಹಕಾರ ದೊರೆಯುತ್ತದೆ. ಕೃಷಿಭೂಮಿಯನ್ನು ಕೊಳ್ಳಬಹುದು. ಮಹಿಳೆಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಸಂಗಾತಿ ಆದಾಯದಲ್ಲಿ ಏರಿಕೆ ಉಂಟಾಗುತ್ತದೆ. ಆಭರಣ ಮಾರಾಟಗಾರರಿಗೆ ಸ್ವಲ್ಪ ಮಟ್ಟಿನ ಹಿನ್ನಡೆ ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವಾರದ ಆರಂಭ ಆಲಸ್ಯದಿಂದ ಕೂಡಿರುತ್ತದೆ. ಆದಾಯದಲ್ಲಿ ಸ್ವಲ್ಪ ಚೇತರಿಕೆಯನ್ನು ಕಾಣಬಹುದು. ವಿದೇಶಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ಶತ್ರುಗಳನ್ನು ಪರಾಕ್ರಮದಿಂದ ಎದುರಿಸುವಿರಿ. ಶ್ರಮಪಟ್ಟು ಕೆಲಸ ಮಾಡಿ ಎಲ್ಲರ ಗಮನವನ್ನು ಸೆಳೆಯುವಿರಿ. ಹಿರಿಯರ ಜಮೀನು ಕೊಳ್ಳುವ ಸಾಧ್ಯತೆ ಕೆಲವರಿಗೆ ಇದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ವೈದ್ಯರುಗಳಿಗೆ ಬೇಡಿಕೆ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರ ನಡವಳಿಕೆಯಲ್ಲಿ ದ್ವಂದ್ವ ನೀತಿ ಇರುತ್ತದೆ. ಆದಾಯವು ಕಡಿಮೆ ಇರುತ್ತದೆ. ರಾಜಕೀಯ ಮುಖಂಡರುಗಳು ಮಾತನಾಡುವಾಗ ಬಹಳ ಎಚ್ಚರಿಕೆ ಇರಲಿ. ಸ್ಥಿರಾಸ್ತಿ ಖರೀದಿ ವಿಚಾರದಲ್ಲಿ ಸಾಕಷ್ಟು ಎಚ್ಚರಿಕೆ ಇರಲಿ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಸ್ತ್ರೀರೋಗ ತಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ. ಸಂಗಾತಿಯ ಸಹಾಯದಿಂದ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅಭಿವೃದ್ಧಿ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಬಹಳ ಕಷ್ಟಪಟ್ಟು ಕೆಲಸ ಮಾಡಬೇಕಾಗುತ್ತದೆ. ಅವಮಾನಕರ ಘಟನೆಗಳು ನಡೆಯಬಹುದು. ಆದಾಯವು ಈಗ ಕಡಿಮೆ ಇರುತ್ತದೆ. ಸಹೋದರಿಯರಿಂದ ಹೆಚ್ಚು ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಉಸಿರಾಟದ ತೊಂದರೆ ಮತ್ತು ಕಣ್ಣಿನ ತೊಂದರೆ ಇರುವವರು ಎಚ್ಚರ ವಹಿಸಿರಿ.

ಪದಬಂಧ 2908

ಮೇಲಿನಿಂದ ಕೆಳಕ್ಕೆ

1. ಮಾತಿಲ್ಲದೆ ನೀಡುವ ತೀರ್ಪು 3
2. ಬಟ್ಟೆಯ ಕೊಳೆ ತೆಗೆಯುವ ಸುಸಂಸ್ಕೃತ 3
3. ....ಕರ್ನಾಟಕ ಮಾತೆ, ಜನಗಣಮನ ಅಧಿನಾಯಕ 3
4. ದಪ್ಪ ದನಿಯ ಹಣವಂತ 3
7. ಮೈತುಂಬಿ ಬಂದ ಮನಸ್ಸಿನ ಸ್ವೇಚ್ಛಾವಿಹಾರ 3
9. ಕೊಂದ ನಂತರ ವೇಣಿಯನ್ನು ಮುಡಿಕಟ್ಟುವಿಕೆ 3
10. ಮುಖ ಗಂಟುಹಾಕಿ ಮಾತಾಡು 3
11. ಕತ್ತಿಯ ಚಳಕದಲ್ಲಿ ಇರುವ ವಾವೆ 3
12. ಆಡಿಸಿದಳು .... ಜಗದ್ದೋದ್ಧಾರನ ಮಗುಗಳ ಮಾಣಿಕ್ಯನ 3
13. ಕಾವ್ಯದ ಬಳಕೆಯಲ್ಲಿ ದೀರ್ಘ ಕಾಡು 3
14. ಒಳ್ಳೆಯ ಮೈಕಟ್ಟಿನ ಸಾಹಸ ವೀರ 3
16. ದೇವರಿಗೆ ತೆಗೆದಿಡುವ ಪ್ರತ್ಯೇಕತೆಯ ವ್ಯವಸ್ಥೆ 3
18. ಮೃಚ್ಛಕಟಿಕಾ ನಾಟಕದಲ್ಲಿ ಬರುವ ರೈತಾಪಿ ರಾಜ 3
20. ಸಲ್ಲಾಪಕ್ಕೆ ಬೇಕಾದ ದ್ರವಭರಿತ ಕ್ರಿಯೆ 3
21. ಚತುರ್ಬಲಕ್ಕೆ ಒಳಗಾಗುವ ಕುದುರೆ 3
22. ಪಿಡಿಯಲು ಬಳಕೆಗೆ ಅನುಕೂಲವಾಗುವ ಸಾಧನ 3
23. ಪೆನ್ಸಿಲ್‌ನಲ್ಲಿ ಬರೆದಿದ್ದನ್ನು ಅಳಿಸುವ ಸಾಧನ 3

ಎಡದಿಂದ ಬಲಕ್ಕೆ

1. ಸ್ವರೂಪ ರಹಿತ ಜನಕ್ಕೆ ದೇವರಾಗಿ ಕಂಡ 4
3. ಸೀಳಿದರೂ ಸೇರುತ್ತಿದ್ದ ಮಹಾರಾಕ್ಷಸ 4
5. ಜಾನಪದದ ಯಮಧರ್ಮ 4
6. ಪಟ್ಟು ಬಿಡದೆ ಸಾಧಿಸುವ ಮಲ್ಲನ ಅಲ್ಪಪ್ರಾಣ 4
8. ಒಂದರ್ಥ ಚಿನ್ನದ ಕೊಳ, ಮತ್ತೊಂದರ್ಥ ಬಂಗಾರದ ನಡುಗಟ್ಟು 5
10. ಶ್ರೀಮಂತವಾದ ಈ ಭೂಮಿಯನ್ನು ವರ್ಣಿಸುವ ಗ್ರಂಥ 6
13. ಹೊಟ್ಟೆಗೆ ಸಾಲದ ಮಜ್ಜಿಗೆಯ ರೊಕ್ಕ 4
15. ದೀಪದ ಕೊನೆಯಂತೆ ತರುಣನ ಮೂಗಿನ ಕೆಳಗೆ ಚಿಗುರುವ ಕೂದಲು 4
17. ಕೊಡುಗೈಯಲ್ಲಿ ಮಹಾದಾನಿ, ಯುದ್ಧದಲ್ಲಿ ಮಹಾ ಪರಾಕ್ರಮಿಯಾದ ಕರ್ಣನ ಅಭಿದಾನ 6
19. ಬಡ್ಡಿಗಳಿಸುವ ಮೂಲಧನದಂತ ನುಡಿ 5
22. ಮನಸ್ಸಿಗೆ ಮತ್ತು ದೇಹಕ್ಕೆ ನೆಮ್ಮದಿ ಕಲ್ಪಿಸುವ ಕೈ 4
24. ರತ್ನಗಳಿಗೆ ಹೆಸರಾದ ವಾಸ ಸ್ಥಳ 'ಗದಾಯುದ್ಧ' ಕವಿಗೆ ಸೇರಿದ್ದೇ? 4
25. ಪರಿತ್ಯಜಿಸಬೇಕಾದ ಎಲ್ಲರ ಸಹವಾಸ 4
26. ಲೆಕ್ಕದಲ್ಲಿ ಸ್ವಲ್ಪ ಬಗೆಯ ಷಟ್ ಸಂಖ್ಯೆ 4



ಪದಬಂಧ ಉತ್ತರ -2907

ಮೇಲಿಂದ ಕೆಳಕ್ಕೆ

1.ಓಬೀರಾಯ್ 2.ಸುಮೇರು 3.ರಾಟೆ 4.ಗಜಪತಿ 7.ಬಾಗಿನ 9.ಒಗೆತ 10.ಮಾರಜನಕ 11.ಜನಜಾತ್ರೆ 12.ತೆರೆಮರೆ 13.ಭರಣಿ 15.ಕಲ್ಲೇಶ 16.ಕಾರ್ಯಕ್ರಮ 17.ಅಡಿಪಾಯ 18.ಇಸವಿ 20.ಅಜ

ಎಡದಿಂದ ಬಲಕ್ಕೆ

1.ಓಲೈಸು 3.ರಾಜ್ಯಾಂಗ 5.ಮೇಲುಕೋಟೆ 6.ಜಗದಂಬಾ 8.ರಾಯರು 10.ಮಾರುತಿ 12.ತೆರಿಗೆದಾರ 14.ನಗರಯಾತ್ರೆ 15.ಕರೆ 16.ಕಾಯಕ 18.ಇಮ್ಮಡಿ 19.ಶತವಕ್ರ 20.ಅಟ್ಟಹಾಸ 21.ಮನುಜ 22.ವಿಜಯ

ರಾಜ್ಯ ಕಂಡ ಅಪರೂಪದ ರಾಜಕಾರಣಿ ಎಂದೇ ಜನಪ್ರಿಯರಾಗಿದ್ದ ಕೆ.ಹೆಚ್. ಶ್ರೀನಿವಾಸ ಅವರು ಡಿ. ದೇವರಾಜ ಅರಸು ಅವರ ಸಂಪುಟದಲ್ಲಿ ಮಂತ್ರಿಯಾಗಿದ್ದರು. ಕೇವಲ ರಾಜಕಾರಣಿ ಮಾತ್ರವಲ್ಲದೆ ಉತ್ತಮ ಕವಿ, ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಗೆ ಕಾರಣರಾದ ತಮ್ಮ ತಂದೆಯ ಕುರಿತು ಮಗಳು ಬರೆದಿದ್ದಾರೆ...



ಅಪೂರ್ವ ನೆನಪುಗಳೊಂದಿಗೆ...

• ಕೆ.ಎಸ್ ವೈಶಾಲಿ

"ಶ್ರೀನಿವಾಸರು ತಮ್ಮ ಕವನಗಳನ್ನು ನನಗೆ ಓದುತ್ತಿದ್ದಂತೆ ನಾನು ಕಾಲದಿಂದ ಕಾಲಕ್ಕೆ ಕುಪ್ಪಳಿಸುತ್ತ, ಶ್ರೀನಿವಾಸರನ್ನು ಅವರ ಹಲವು ಅವತಾರಗಳಲ್ಲಿ ನೆನೆಯುತ್ತ ಒಂದಕ್ಕೊಂದನ್ನು ಬೆಸೆಯುತ್ತ, ಮೆಚ್ಚುತ್ತ ಕೇಳಿಸಿಕೊಂಡಿದ್ದು, ಈವರೆಗೂ ಹಲವು ಉಪದ್ವ್ಯಾಪಗಳನ್ನು ಹಚ್ಚಿಕೊಂಡು ಮಂತ್ರಿಯಾಗಿಬಿಟ್ಟಿದ್ದ ಶ್ರೀನಿವಾಸ ಇಷ್ಟು ಸೊಗಸಾಗಿ ಇಂಥ ಒಳ್ಳೆಯ ಕವನಗಳನ್ನು ಬರೆದರೆಂದು ನನಗೆ ಆಶ್ಚರ್ಯವಾಯಿತು. ಪ್ರಾಯಶಃ ಈ ಆಶ್ಚರ್ಯವೂ ನನಗೆ ಈ ರಚನೆಗಳು ಅಷ್ಟೊಂದು ಇಷ್ಟವಾಗುವುದಕ್ಕೆ ಕಾರಣವಾಗಿರಬೇಕು. ಆದರೆ ಇವಕ್ಕೆ ನನ್ನ ಮನಸ್ಸು ಸೋಲಲಿಲ್ಲ, ನಾನು ಸೋತದ್ದು ಇವರ 'ಕಾನುಗೋಡು ಮನೆ' ಪದ್ಯಕ್ಕೆ. ಈಗ ಯೋಚಿಸಿದಾಗ ನಾನು ಅಷ್ಟು-ಕಣ್ಣು ಹನಿಯಾಗುವಷ್ಟು-ಈ ಪದ್ಯಕ್ಕೆ ಸೋತಿದ್ದಕ್ಕೆ ಕಾರಣ ನನ್ನ ಬಾಲ್ಯದ ಪ್ರಪಂಚಕ್ಕೆ ಹೋಲುವ ಪ್ರಪಂಚದ ಮನೋಜ್ಞ ವಿವರಗಳು ಈ ಪದ್ಯದಲ್ಲಿ ನನಗೆ ಎದುರಾದದ್ದೇ ಇರಬಹುದು"- ಯು.ಆರ್.ಅನಂತಮೂರ್ತಿ.

ನನ್ನ ತಂದೆ ಕೆ.ಹೆಚ್. ಶ್ರೀನಿವಾಸ ಅವರ ಪ್ರಥಮ ಕವನ ಸಂಕಲನ 'ಕಾನುಗೋಡು ಮನೆ'ಗೆ ಅಪ್ಪನ ಮೇಷ್ಟ್ರು, ತದನಂತರ ಮೈಸೂರು ಮಹಾರಾಜ ಕಾಲೇಜಿನಲ್ಲಿ ಸಹೋದ್ಯೋಗಿಯೂ ಆಗಿದ್ದ ಅನಂತಮೂರ್ತಿಯವರು ಬರೆದ ಪ್ರಾಸ್ತಾವಿಕ ನುಡಿಯಿಂದ ಆಯ್ದ ಸಾಲುಗಳಿವು.

ರಾಜ್ಯ ಕಂಡ ಅಪರೂಪದ ರಾಜಕಾರಣಿ ಎಂದೇ ಗುರುತಿಸಲ್ಪಟ್ಟ ಶ್ರೀನಿವಾಸ ಅವರು ಡಿ. ದೇವರಾಜ ಅರಸು ಅವರ ಸಂಪುಟದಲ್ಲಿ ಮಂತ್ರಿಯಾಗಿದ್ದರು. ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕರಾಗಿ ಪ್ರಬುದ್ಧ ಸಂಸದೀಯಪಟು ಎಂದು ಜನಮನ್ನಣೆಯನ್ನು ಗಳಿಸಿದ್ದರು. ಸಾಗರ ಪ್ರಾಂತ್ಯದಲ್ಲಿ 1963ಕ್ಕಿಂತ ಮುಂಚೆ ಶಿಕ್ಷಣ ಎನ್ನುವುದು ಗಗನಕುಸುಮವಾಗಿತ್ತು. ಆಗ ಶಿಕ್ಷಣ ಸಂಸ್ಥೆಯೊಂದನ್ನು ಪ್ರಾರಂಭಿಸಿ, ವಿಶೇಷವಾಗಿ ಸಮಾಜದ ಮಧ್ಯಮ ಮತ್ತು ಬಡವರ್ಗದ ವಿದ್ಯಾರ್ಥಿಗಳಿಗೆ ಕಾಲೇಜು ಶಿಕ್ಷಣ ಸಿಗುವಂತಾಗಲು ಶ್ರೀನಿವಾಸ ಅವರು ಅಪಾರವಾದ ಕೊಡುಗೆ ನೀಡಿದರು.

ಸಾಗರ ಪ್ರಾಂತ್ಯದಲ್ಲಿ ವಿದ್ಯಾವರ್ಧಕ ಸಂಘವನ್ನು ಸಂಘಟಿಸಿ, ಆ ಮೂಲಕ ಲಾಲ್ ಬಹದ್ದೂರ್ ಕಲಾ, ವಿಜ್ಞಾನ ಮತ್ತು ಸೊಲಬಕ್ಕಿಶೆಟ್ಟಿ ವಾಣಿಜ್ಯ ಮಹಾವಿದ್ಯಾಲಯವನ್ನು ಪ್ರಾರಂಭಿಸಿ, ಸಂಸ್ಥಾಪಕ ಅಧ್ಯಕ್ಷರಾಗಿದ್ದ ಕೆ.ಜಿ ಒಡೆಯರ್ ಅವರೊಂದಿಗೆ ಪ್ರಧಾನಿಯಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರೀ ಅವರನ್ನು ಆಹ್ವಾನಿಸಿ ಜನವರಿ 24, 1965 ರಂದು ಕಾಲೇಜಿಗೆ ಶಿಲಾನ್ಯಾಸ ಮಾಡಿಸಿದ್ದು ಸಂಚಲನ ಮೂಡಿಸಿತ್ತು. ಅದೊಂದು ಚರಿತ್ರಾರ್ಹವಾದ ಶೈಕ್ಷಣಿಕ ಕ್ರಾಂತಿಯೆಂದೇ ಪರಿಗಣಿಸಲ್ಪಟ್ಟಿತ್ತು. ಈ ಸಂಸ್ಥೆಯನ್ನು ಪ್ರಾರಂಭಿಸಿದ್ದರಿಂದ ಸಾಗರ, ಸೊರಬ , ಹೊಸನಗರ ಮತ್ತಿತರ ಭಾಗದ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆದು ಈ ಭಾಗವು ಬೌದ್ಧಿಕವಾಗಿ ಶ್ರೀಮಂತವಾಗಲು ನಾಂದಿಯಾಯಿತು. ಈವರೆಗೆ ಲಕ್ಷಾಂತರ ವಿದ್ಯಾಥಿಗಳು ಕಾಲೇಜು ಶಿಕ್ಷಣ ಪಡೆದು, ಇಂದು ದೇಶ-ವಿದೇಶಗಳಲ್ಲಿ ದೊಡ್ಡ ಹುದ್ದೆಗಳಲ್ಲಿ ಇರುವುದು ಹೆಮ್ಮೆಯ ವಿಷಯ. ಸುಮಾರು ಐವತ್ತು ವರ್ಷಗಳ ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಶ್ರೀನಿವಾಸ ಅವರು, ಲಾಲ್ ಬಹದ್ದೂರ್ ಕಲಾ, ವಿಜ್ಞಾನ ಕಾಲೇಜು, ಡಿ.ದೇವರಾಜ ಅರಸು ಕಲಾಕ್ಷೇತ್ರ, ಪದವಿಪೂರ್ವ ಕಾಲೇಜುಗಳು, ಕೆ.ಹೆಚ್. ಶ್ರೀನಿವಾಸ ಸ್ನಾತಕೋತ್ತರ ಅಧ್ಯಯನ ಸಂಸ್ಥೆ, ಡಾ.ಜಿ.ಎ. ನಾರೀಬೋಲಿ ಶಿಕ್ಷಣ ಮಹಾವಿದ್ಯಾಲಯ, ಪ್ರಗತಿ ಸಂಯುಕ್ತ ಶಾಲೆ, ವಿದ್ಯಾರ್ಥಿ/ವಿದ್ಯಾರ್ಥಿನಿ ನಿಲಯಗಳು ಇವೇ ಮೊದಲಾದ ಪ್ರಮುಖ ಅಂಗ ಸಂಸ್ಥೆಗಳನ್ನು ಕೂಡ ಹುಟ್ಟುಹಾಕಿ, ಸಂಸ್ಥೆಗೆ ಎಂಬತ್ತು ಎಕರೆಗಳ ವಿಶಾಲ ಆವರಣವನ್ನು ಕೂಡ ನಿರ್ಮಾಣ ಮಾಡುವುದರಲ್ಲಿ ಯಶಸ್ವಿಯಾದರು.

ಸಾರ್ವಜನಿಕ ಕ್ಷೇತ್ರದಲ್ಲಿ ರಾಜಕಾರಣಿಯಾಗಿ, ಜನಪ್ರತಿನಿಧಿಯಾಗಿ, ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿದ ಶ್ರೀನಿವಾಸ ಅವರು ಉತ್ಕಟ ಸಾಹಿತ್ಯ ಪ್ರೇಮಿಯೂ ಆಗಿದ್ದರು. ಅವರು ಸಂಗ್ರಹಿಸಿದ ನಮ್ಮ ಮನೆಯಲ್ಲಿರುವ ಅಮೂಲ್ಯವಾದ ಗ್ರಂಥ ಭಂಡಾರದಲ್ಲಿ ಸಾವಿರಾರು ಸಾಹಿತ್ಯ, ತತ್ತ್ವಶಾಸ್ತ್ರ, ಸಮಾಜ ಶಾಸ್ತ್ರ, ಇತಿಹಾಸ, ಸಂಗೀತ, ರಾಜ್ಯಶಾಸ್ತ್ರಗಳಿಗೆ ಸಂಬಂಧಿಸಿದ ಪುಸ್ತಕಗಳ ಸಾಗರವೇ ಇದ್ದು, ಅವರು ತಮ್ಮ ಬಿಡುವಿನ ಸಮಯದಲ್ಲಿ ಗಾಢವಾದ ಅಧ್ಯಯನದಲ್ಲಿ ತಲ್ಲೀನರಾಗಿರುತ್ತಿದ್ದರು. ವಿಧಾನಸಭಾ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಅಲ್ಪಮತಗಳ ಅಂತರದಲ್ಲಿ ಸೋತಾಗ, ಅವರು ತಮ್ಮ ಜೀವನದ ಮೊದಲ ಸೋಲನ್ನು ಸ್ವಾನುಕಂಪದಿಂದ ವಿಜೃಂಭಿಸಿಕೊಳ್ಳಲಿಲ್ಲ, ನೋವಿನಿಂದ ಕುಗ್ಗಿಹೋಗಲೂ ಇಲ್ಲ. ಈ ಸಂದರ್ಭದಲ್ಲಿ ರೂಪುಗೊಂಡಿದ್ದೇ 'ಕಾನುಗೋಡು ಮನೆ' ಕವನ ಸಂಕಲನ. ಈ ಸಂಕಲನವನ್ನು ಕವಿ ಗೋಪಾಲಕೃಷ್ಣ ಅಡಿಗ ಅವರಿಗೆ ಅರ್ಪಿಸಿದ್ದರು. ಇದಾದ ಒಂದು ದಶಕದ ತರುವಾಯ 'ಒಳಸೊನ್ನೆ-ಹೊರಸೊನ್ನೆ' ಕವನ ಸಂಕಲನವನ್ನು ಹೊರತಂದರು. ಭವ ನಿಮಜ್ಜನ ಮತ್ತು ಲಘಿಮಾ ಕೌಶಲ ಎರಡೂ ಸೇರಿದಾಗ ಕಾವ್ಯ ಹುಟ್ಟುತ್ತದೆಯೆಂದು ತಾನು ಕೇಳಿರುವುದಾಗಿಯೂ, ಪ್ರಾಯಶಃ ಅಂಥದ್ದೊಂದರಿಂದ ಸಂಭವಿಸಬಹುದಾದ ಸಮಸ್ಥಿತಿಯೇ ತನ್ನ 'ಒಳಸೊನ್ನೆ-ಹೊರಸೊನ್ನೆ' ಎಂದು ಅವರು ವಿಶದೀಕರಿಸಿದ್ದರು.

ನಾಲ್ಕು ಕವನ ಸಂಕಲನಗಳಲ್ಲದೇ, ಫ್ರೆಂಚ್ ಸಾಹಿತಿ ಜೀನ್ ಪಾಲ್ ಸಾರ್ತ್ರನ 'ಕೀನ್' ನಾಟಕದ ಕನ್ನಡ ಅನುವಾದವೂ ಪ್ರಕಟಗೊಂಡಿದೆ. ಸಾರ್ತ್ರನ ಆತ್ಮಚರಿತ್ರೆ 'The Words' (ಫ್ರೆಂಚ್ ಮೂಲ -ಲೇ ಮೋ) ಕೃತಿಯನ್ನು ಅವರು ನನ್ನೊಡನೆ ಕುಳಿತು ಮೂಲ ಫ್ರೆಂಚ್ ಕೃತಿಯನ್ನು ಓದಿಸಿ ಕೇಳಿ ಸವಿಸ್ತಾರವಾದ ಟಿಪ್ಪಣಿಗಳನ್ನು ಅಸ್ತಿತ್ವವಾದ ಕುರಿತು ಬರೆದದ್ದು, ಫ್ರೆಂಚ್ ಸಾಹಿತ್ಯದ ಒಂದು ಇತಿಹಾಸವನ್ನೇ ಕಟ್ಟಿಕೊಡುವ ಪ್ರಯತ್ನವನ್ನು ಯಶಸ್ವಿಯಾಗಿ ಮಾಡಿದರು. ಈ ಕೃತಿಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿತು. 'ತೋಬಾ ತೇಕ್ ಸಿಂಗ್'ನಂಥ ಭಾರತ-ಪಾಕಿಸ್ತಾನದ ವಿಭಜನೆಯ ಕುರಿತಾಗಿ ಶ್ರೇಷ್ಠ ಕತೆಗಳನ್ನು ಬರೆದ ಸಾದತ್ ಹಸನ್ ಮಂಟೋವಿನ ಜೀವನ ಚರಿತ್ರೆಯನ್ನೂ ಕೂಡ ಶ್ರೀನಿವಾಸ ಅವರು ಕನ್ನಡಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಅನುವಾದಿಸಿದರು. ನ್ಯಾಷನಲ್ ಬುಕ್ ಟ್ರಸ್ಟಿಗಾಗಿ ಅವರು ಮಾನವ ಹಕ್ಕುಗಳ ಮೇಲಿನ ಒಂದು ಪುಸ್ತಕವನ್ನೂ ಅನುವಾದಿಸಿ ಪ್ರಕಟಿಸಿದ್ದರು. ತಮ್ಮ ಸುದೀರ್ಘವಾದ ರಾಜಕೀಯ ವೃತ್ತಿಯಲ್ಲಿ, ಶಾಸಕರಾಗಿ, ಮಂತ್ರಿಯಾಗಿ, ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿ ಸದನದಲ್ಲಿ ಮಾಡಿದ ವಿದ್ವತ್ಪೂರ್ಣ ಭಾಷಣಗಳ 600 ಪುಟಗಳ ಅಪರೂಪದ ಸಂಕಲನ 'ಮಲೆನಾಡಿನ ಮಾತುಗಾರ' ಪುಸ್ತಕಕ್ಕಾಗಿ ತಾವು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಸಮಯದಲ್ಲೂ ಹಗಲಿರುಳೆನ್ನದೇ ಶ್ರಮಿಸಿದ್ದನ್ನು ನೆನೆಸಿ ನನ್ನ ಹೃದಯ ಭಾರವಾಗುತ್ತದೆ.

ಈಗ ಅವರು ಇಲ್ಲ, ಅವರ ಅಪೂರ್ವ ನೆನಪುಗಳು ಸದಾ ನನ್ನೊಂದಿವೆ.

ರತ್ನಪುರಿಯಲ್ಲೊಂದು ಉರಗ ಕೇಂದ್ರ

8ನೇ ಪುಟದಿಂದ...

ಸದ್ಯಕ್ಕೆ ಈ ಸಂರಕ್ಷಣಾ ಕೇಂದ್ರದಲ್ಲಿ 350 ಹಾವುಗಳನ್ನು ಇರಿಸಲು ಅನುಮತಿ ನೀಡಲಾಗಿದೆ. ಹಲವು ರೀತಿಯಲ್ಲಿ ರಕ್ಷಿಸಲಾದ ಹಾವುಗಳಿಗೆ ಆಶ್ರಯ ನೀಡಲಾಗಿದೆ. ವಿಷಕಾರಿ ಹಾವಿನ ನಾಲ್ಕು ಪ್ರಭೇದಗಳ ಜತೆಗೆ, ಆಯಾ ಪ್ರದೇಶ ಹಾಗೂ ನಿರ್ದಿಷ್ಟ ವಿಷವನ್ನು ಉತ್ಪಾದಿಸುವ ಈ ಮೇಲೆ ತಿಳಿಸಿದ ಹಾವುಗಳ ಜೊತೆಗೆ ಮಲಬಾರ್ ಪಿಟ್ ವೈಪರ್‌ಗಳು, ಹಂಪ್ ನೋಸ್ಡ್ ಪಿಟ್ ವೈಪರ್‌ಗಳ ವಿಷವನ್ನು ಸಂಗ್ರಹಿಸಲು ಟ್ರಸ್ಟ್‌ಗೆ ಅನುಮತಿ ನೀಡಲಾಗಿದೆ.

ಭಾರತೀಯ ವಿಜ್ಞಾನ ಸಂಸ್ಥೆಯ ವಿಷ ಅಧ್ಯಯನ ಪ್ರಯೋಗಾಲಯದ ಸಹಯೋಗದೊಂದಿಗೆ ಟ್ರಸ್ಟ್ ಪ್ರತಿ ವಿಷಕಾರಿ ಹಾವಿನಲ್ಲಿರುವ ವಿಷದ ಮಾದರಿ ಹಾಗೂ ವಂಶವಾಹಿಗಳ ಬಗ್ಗೆ ಅಧ್ಯಯನ ನಡೆಸುತ್ತದೆ. ಈ ಹಾವುಗಳ ಸಂರಕ್ಷಣಾ ಕೇಂದ್ರದಲ್ಲಿ ಸಂಗ್ರಹಗೊಳ್ಳುವ ವಿಷವನ್ನು ಇತರೆ ಸಂಶೋಧನೆಗೆ ಕರ್ನಾಟಕ ಅರಣ್ಯ ಇಲಾಖೆ ಅನುಮೋದಿಸಿದ ಸಂಸ್ಥೆಗಳಿಗೆ ಮಾತ್ರ ಉಚಿತವಾಗಿ ನೀಡಲಾಗುತ್ತದೆ.

ಕಾಡಿನಿಂದ ವಿಷಕಾರಿ ಹಾವುಗಳನ್ನು ಸೆರೆಹಿಡಿದು, ಅದರ ವಿಷವನ್ನು ಹೊರತೆಗೆಯುವಲ್ಲಿ ಸ್ಥಳೀಯರು ಹಾಗೂ ಬುಡಕಟ್ಟು ಸಮುದಾಯಗಳನ್ನು ಬಳಸಿಕೊಳ್ಳುವ ವಿಧಾನವನ್ನು ಸಾಮಾನ್ಯವಾಗಿ ನೋಡಬಹುದು. ಆದರೆ, ರತ್ನಪುರಿಯಲ್ಲಿರುವ ಹಾವುಗಳ ಸಂರಕ್ಷಣಾ ಕೇಂದ್ರದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿಗಳ ಪ್ರಕಾರ ಹಾವುಗಳನ್ನು ಸೆರೆಹಿಡಿದು, ಅವುಗಳಿಂದ ಮಾತ್ರ ವಿಷವನ್ನು ತಜ್ಞರು ಸಂಗ್ರಹಿಸುತ್ತಾರೆ. ಮುಂದೆ ಈ ಕೇಂದ್ರದಲ್ಲಿ ಜನಿಸುವ ಹಾವುಗಳಿಂದಲೂ ವಿಷ ಸಂಗ್ರಹಿಸಲಾಗುತ್ತದೆ.

ಈ ಸಂರಕ್ಷಣಾ ಕೇಂದ್ರದಲ್ಲಿ ಪ್ರತಿ ಹಾವಿಗೂ ಪ್ರತ್ಯೇಕ ಆವಾಸಸ್ಥಾನವನ್ನು ರೂಪಿಸಲಾಗಿದೆ. ಪ್ರತಿ ಹಾವು ಆರೋಗ್ಯದಿಂದ ಇರಲು ನಿರ್ದಿಷ್ಟ ಸಮಯಕ್ಕೆ ಇಲಿಗಳು, ಮೊಲಗಳು, ಹುಳ, ಹುಪ್ಪಟೆಗಳನ್ನು ಆಹಾರವಾಗಿ ಒದಗಿಸಲಾಗುತ್ತದೆ.

ಸಂರಕ್ಷಣಾ ಕೇಂದ್ರದ ಮೇಲ್ವಿಚಾರಕ ಲಿಸಾ ಗೊನ್ಸಾಲ್ವೆಸ್, ಸಂರಕ್ಷಿಸಲಾದ ಪ್ರತಿ ಹಾವಿನ ವಿವರವನ್ನು ದಾಖಲಿಸುವ ಅಪ್ಲಿಕೇಷನ್‌ವೊಂದನ್ನು ಅಭಿವೃದ್ಧಿಪಡಿಲಾಗಿದೆ. ಇದರಲ್ಲಿ ಹಾವಿಗೆ ಕೊನೆಯದಾಗಿ ಆಹಾರ ನೀಡಿದ ಸಮಯ, ವಿಷ ಸಂಗ್ರಹಿಸಿದ ಸಮಯ, ಕೊನೆಯದಾಗಿ ಅದರ ಚರ್ಮ ಉದುರಿದ್ದು, ಸಂತಾನೋತ್ಪತ್ತಿ ಯಾವಾಗ ನಡೆಯಿತು? ಅದರ ಸಂಗಾತಿ ಯಾರು? ಹೀಗೆ ಪ್ರತಿ ವಿವರವನ್ನು ಒಳಗೊಂಡ ಮಾಹಿತಿಯನ್ನು ಈ ಅಪ್ಲಿಕೇಷನ್‌ನಲ್ಲಿ ದಾಖಲಿಸಲಾಗಿದೆ ಎಂದು ಹೇಳಿಕೊಂಡರು.

ಈ ಸಂರಕ್ಷಣಾ ಕೇಂದ್ರದಲ್ಲಿರುವ ತಂಡವು ಮಾಡುತ್ತಿರುವ ಬಹುಮುಖ್ಯ ಕೆಲಸವೆಂದರೆ, ಹಾವುಗಳ ಸ್ವಭಾವ ಹಾಗೂ ನಡವಳಿಕೆಯನ್ನು ಅರ್ಥ ಮಾಡಿಕೊಳ್ಳುವುದು. ಹಾವುಗಳು ಏಕೆ ಕಚ್ಚುತ್ತವೆ ಎಂಬುದು ಎಲ್ಲರನ್ನು ಕಾಡುವ ಪ್ರಶ್ನೆ. ಅದರಲ್ಲಿಯೂ

ರಸೆಲ್ ವೈಪರ್‌ನ ಸ್ವಭಾವ ಏಕೆ ಹಾಗಿದೆ? ಟೆಲಿಮೆಟ್ರಿಕ್ ಅಧ್ಯಯನ ಆಧಾರದ ಮೇಲೆ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ನಡೆದಿದೆ ಎನ್ನುತ್ತಾರೆ ಮಾರ್ಟಿನ್.

ಸಂಶೋಧನೆಯ ದಿಕ್ಕು ವೇಗ ಪಡೆದುಕೊಳ್ಳುತ್ತಿದ್ದು, ಮುಂದಿನ ಕೆಲವು ವರ್ಷಗಳಲ್ಲಿ ಹಲವು ಪ್ರಶ್ನೆಗಳಿಗೆ ನಿಖರವಾದ ಉತ್ತರ ದಕ್ಕಲಿದೆ. ಗದ್ದೆ ಹಾಗೂ ತೋಟಗಳಲ್ಲಿ ಹಾವುಗಳ ಕಡಿತದಿಂದ ರೈತರು ಸಾವನ್ನಪ್ಪುತ್ತಿದ್ದಾರೆ ಎಂಬುದು ಗಮನಾರ್ಹ ಅಂಶ. ಗಮ್‌ಬೂಟ್‌ಗಳನ್ನು ಧರಿಸುವುದರಿಂದ ಹಾವು ಕಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಎಂಬ ಪ್ರಯೋಗ ನಡೆಯಬೇಕಿದೆ. ಜತೆಗೆ ಸೊಳ್ಳೆ ಪರದೆಗಳ ಬಳಕೆಯು ಕ್ರೈಟ್ ಕಡಿತದಿಂದ ಪಾರಾಗಲು ಇರುವ ಮಾರ್ಗವೇ? ಕೃಷಿ ಪದ್ಧತಿಯಲ್ಲಿ ಅಳವಡಿಸಿಕೊಳ್ಳಬಹುದಾದ ಹಲವು ಅಂಶಗಳು ಹಾವುಗಳ ಸಂಖ್ಯೆಯನ್ನು ನಿಯಂತ್ರಣದಲ್ಲಿಡಲು ನೆರವಾಗುವುದೇ? ಹಾವುಗಳ ವರ್ತನೆಯನ್ನು ಸರಿಯಾಗಿ ಅರಿತರೆ, ಅದರ ಕಡಿತದಿಂದ ಪಾರಾಗುವುದು ಸುಲಭವೇ? ಹೀಗೆ ಹಲವು ಪ್ರಶ್ನೆಗಳನ್ನು ಇಟ್ಟುಕೊಂಡು ಪ್ರಯೋಗಗಳು ನಡೆಯುತ್ತಲೇ ಇವೆ.

ಮುಂದಿನ ದಿನಗಳಲ್ಲಿ ಸಂಶ್ಲೇಷಿತ ಮಾದರಿಯಲ್ಲಿ ವಿಷ ನಿರೋಧಕ ಔಷಧಗಳು ಲಭ್ಯವಾಗುವ ನಿರೀಕ್ಷೆ ಇದೆ. ಆಗ ಈ ಔಷಧಗಳನ್ನು ಪ್ರಯೋಗಿಸಲು ಕುದುರೆ ಹಾಗೂ ಹಾವುಗಳನ್ನು ಅವಲಂಬಿಸಬೇಕಾಗಿಲ್ಲ. ಸದ್ಯಕ್ಕೆ ಈ ಸಂರಕ್ಷಣಾ ಕೇಂದ್ರವು ಸಾರ್ವಜನಿಕರಿಗೆ ಮುಕ್ತವಾಗಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಹಾವುಗಳ ಬಗ್ಗೆ ಅರಿವು ಮೂಡಿಸಲು 'ಜಾಗೃತಿ ಕೇಂದ್ರ' ವನ್ನು ನಿರ್ಮಿಸುವ ಇರಾದೆ ಇರುವ ಬಗ್ಗೆ ಹೇಳಿಕೊಂಡರು.

(ಅನುವಾದ: ರೂಪಾ ಕೆ.ಎಂ.)

ಐದುನೂರು ವರ್ಷಗಳ ಅಪರೂಪದ ಮರವಿದು!

• ಈರಣ್ಣ ಬೆಂಗಾಲಿ

ಸಸ್ಯಲೋಕದ ವಿಸ್ಮಯಗಳು ಯಾವಾಗಲೂ ಜನಸಾಮಾನ್ಯರಿಗೆ ಅಚ್ಚರಿಯನ್ನುಂಟು ಮಾಡುತ್ತವೆ. ಕೆಲವು ಮರಗಳು 50 ವರ್ಷಗಳ ಕಾಲ ಬದುಕಿದ್ದರೆ ಇನ್ನು ಕೆಲವುದರ ಜೀವಿತಾವಧಿ ಸಾವಿರ ವರ್ಷಗಳು. ಅದೇ ರೀತಿ ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ನೆಲೆನಿಂತ ಐದುನೂರು ವರ್ಷಗಳ ಬೃಹತ್ ಮರ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಇಂಥ ವಿಸ್ಮಯಕಾರಿ ಬಾವೋಬಾಬ್ ಮರ ದೇವದುರ್ಗದಲ್ಲಿ ಬಿಟ್ಟರೆ ಹಾವೇರಿಯ ಹಾವನೂರ್‌ನಲ್ಲೊಂದಿದೆ. ಮೂಲತಃ ಈ ಜಾತಿಯ ಮರ ನಮ್ಮ ದೇಶದ್ದಲ್ಲ.

ಬಾವೋಬಾಬ್ ಮರದ ವೈಜ್ಞಾನಿಕ ಹೆಸರು ಅಡನಸೋನಿಯಾ ಡಿಜಿಟಾಟಾ. ಕನ್ನಡದಲ್ಲಿ ಇದನ್ನು ಗೊಡ್ಡು ಹುಣಸೆ ಮರ ಎಂದು ಕರೆಯಲಾಗುತ್ತಿದ್ದು, ಈ ಮರಗಳು ಆಫ್ರಿಕಾ, ಮಡಗಾಸ್ಕರ್, ಆಸ್ಟ್ರೇಲಿಯಾಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ. ಅಚ್ಚರಿ ಎಂಬಂತೆ ದೇವದುರ್ಗ ಪಟ್ಟಣದ ಸರ್ಕಾರಿ ಪದವಿ ಕಾಲೇಜಿನ ಆವರಣದಲ್ಲಿರುವ ಈ ಮರವು ಗಾತ್ರದಲ್ಲಿ 45 ಅಡಿ ಅಗಲ ಮತ್ತು 40 ಅಡಿ ಎತ್ತರವಿದೆ. ಇಂಧಾರ್ ಜಿಲ್ಲೆಯ 'ಮಾಂಡು' ವಿನಲ್ಲಿ ಈ ಮರಗಳನ್ನು ಹೆಚ್ಚಾಗಿ ಕಾಣಬಹುದಾಗಿದ್ದು, ಅಲ್ಲಿ ಬಾವೋಬಾಬ್ ಕಾಯಿಯ ಒಣಗಿಸಿರುವ ತಿರುಳನ್ನು ಪುಡಿ ಮಾಡಿ, ತಣ್ಣನೆಯ ಪಾನೀಯವನ್ನು ಮಾಡುತ್ತಾರೆ. ಈ ಮರದ ಕಾಯಿಗಳನ್ನು 'ಮಾಂಡು ಕಿ ಇಮ್ಲಿ' ಎಂದು ಕರೆಯುತ್ತಾರೆ. ಧಾರ್‌ನ ತೋಟಗಾರಿಕೆ ಇಲಾಖೆಯು ಬಾವೋಬಾಬ್ ಹಣ್ಣುಗಳಿಗೆ ಭೌಗೋಳಿಕ ಸೂಚ್ಯಂಕ ಜಿಐ ಟ್ಯಾಗ್‌ಗೆ ಪ್ರಸ್ತಾಪವಿಟ್ಟಿದೆ.

ಮೂರು ಸಾವಿರ ವರ್ಷಗಳಷ್ಟು ದೀರ್ಘಾಯುಷ್ಯವನ್ನು ಹೊಂದಿರುವ ಈ ಮರದಲ್ಲಿ ರಾತ್ರಿ ವೇಳೆ ಹೂಗಳು ಅರಳಿ ಸುಗಂಧ ಬೀರುತ್ತವೆ. ಅಚ್ಚರಿಯ ಸಂಗತಿ ಎಂದರೆ ಬಾವೋಬಾಬ್ ಮರದ ಕಾಂಡದಲ್ಲಿ ಒಂದು ಲಕ್ಷ ಲೀಟರ್ ನೀರನ್ನು ಹಿಡಿದಿಟ್ಟುಕೊಳ್ಳುವ ಅಗಾಧ ಸಾಮರ್ಥ್ಯ ಹೊಂದಿದ್ದು, ಪ್ರಾಕೃತಿಕ ವಾಟರ್ ಟ್ಯಾಂಕ್ ಎಂದೂ ಹೆಸರುವಾಸಿ. ಅಂತರ್ಜಲ ಮಟ್ಟವನ್ನು ಹೆಚ್ಚಿಸುವಲ್ಲಿ ಈ ಮರವು ಗಣನೀಯ ಪಾತ್ರವಹಿಸುತ್ತಿದೆ.



ಬಾವೋಬಾಬ್ ಮರ

ಕಥೆ

ಸಮುದ್ಯತಾ ವಿ ರಾಮು ಅವರ **ಮಾಯಕಾರ ಜೋಗಿಬಂದು ಬಾಗಿ ಬಾಗಿ ನೋಡುತ್ತಾನೆ**

prajavani.net/short-story

ಕವನ

ಸ್ಮಿತಾ ಅಮೃತರಾಜ್, ಸಂಪಾಜೆ ಅವರ **ಕಾಲದ ಹೊಣೆ**

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಬಾನ್ಬರೆಪ

ಬಾನ್ಬರಪ (ನಾ). (ಅಲಂ). ವಿಧಿಲಿಖಿತ; ದೈವಸಂಕಲ್ಪದ ಲಿಖಿತ.

ದೊರೆ ದಶರಥನು ಗಗನದಲ್ಲಿ ಧೂಮಕೇತುವಿನ ಭಯಂಕರ ಶಕುನವನ್ನು ನೋಡಿದನು. ಅದು ತನ್ನ ಕೊನೆಯ ದೈವಸಂಕಲ್ಪದ ಲಿಖಿತ ಎಂದು ತಿಳಿದನು. ಅದನ್ನು ಕುವೆಂಪು 'ಬಾನ್ಬರೆಪ' ನುಡಿಯಿಂದ ಹೀಗೆ ರೇಖಿಸಿದ್ದಾರೆ:

'ಆ ಭಯಂಕರ ಗಗನಶಕುನಮಂ ನೋಡಿ,
ದೊರೆ
ದಶರಥಂ ತನ್ನ ಕೊನೆಗದೆ ಬಾನ್‌ಬರೆಪಮೆಂದು
ಬಗೆದ'

ಪಕ್ಕಿದೇರು

ಪಕ್ಕಿದೇರು (ನಾ). ಹಕ್ಕಿ ಆಕಾರದ ತೇರು

ರಾಮ ಲಕ್ಷ್ಮಣ ಸೀತೆಯರನ್ನು ಹೊತ್ತ ಪುಷ್ಪಕ ವಿಮಾನ ಅಯೋಧ್ಯೆಯ ಧರೆಗೆ ಇಳಿಯಿತು. ಅವರನ್ನು ಕಂಡು ಜನರು ಜಯಘೋಷ ಹಾಕಿ ಸಂಭ್ರಮಿಸಿದರು. ಆ ಸಂದರ್ಭದಲ್ಲಿ ಕುವೆಂಪು ಅಚ್ಚರಿಯ ವಿಮಾನವನ್ನು 'ಪಕ್ಕಿದೇರು' ಎಂಬ ಪದದಿಂದ ಕರೆದು, ಹೀಗೆ ಜನರ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

'ಲೆಕ್ಕಿ ಪರದಾರ್
ಬೆಕ್ಕಸದ ಪಕ್ಕಿದೇರಂ?'

ನಿಲ್ಪಡು

ನಿಲ್ಪಡು (ಕ್ರಿ). ಸ್ತಂಭಿತನಾಗು

ಕುವೆಂಪು ಅವರು ಲಂಕೆಯನ್ನು ಪ್ರವೇಶಿಸಿದ ವಾಯುಪುತ್ರನು ಲಂಕಾಲಕ್ಷ್ಮಿಯ ಬಂಗಾರದ ಶಾಂತಿಯ ನಯ, ಸೌಂದರ್ಯ ಸಂಸ್ಕೃತಿ, ಕಲ್ಪನಾ ಕುಶಲತೆಯ ಶಿಲ್ಪವನ್ನು ಮೆಚ್ಚಿ ಸ್ತಂಭಿತನಾದನು ಎಂಬುದನ್ನು ವ್ಯಕ್ತಪಡಿಸುವಾಗ 'ನಿಲ್ಪಟ್ಟು' ಪದ ರೂಪಿಸಿ ಹೀಗೆ ಪ್ರಯೋಗಿಸಿದ್ದಾರೆ.

'ಕಲ್ಪನಾಕುಶಲತೆಯ ಶಿಲ್ಪಕೆ ಮನಂ ಮೆಚ್ಚಿ
ನಿಲ್ಪಟ್ಟು ತಲೆತೂಗಿದನು.'

ಜೇನ್ಸೊಗ

ಜೇನ್ಸೊಗ (ನಾ). ಜೇನಿನಂತೆ ಮಧುರವಾದ ಸುಖ

ಸೀತೆಯು ಸೂರ್ಯನಿಗೆ ಅರ್ಘ್ಯವನ್ನು ಅರ್ಪಿಸಲು ತೀರ್ಥವನ್ನು ಬೊಗಸೆಯಿಂದ ತೆಗೆದುಕೊಳ್ಳುವಳು. ಆಗ ಅವಳಿಗೆ ಒಂದು ಮರದ ಮೇಲೆ ಕುಳಿತು ಹೇಳಿದ ಆಂಜನೇಯನ ಮಾತುಗಳು ಕರ್ಣಾನಂದವನ್ನುಂಟು ಮಾಡುವವು. ಅವಳಿಗೆ ಉಂಟಾದ ಸುಖದಾನಂದವನ್ನು ಕುವೆಂಪು 'ಜೇನ್ಸೊಗ' ನುಡಿಯಿಂದ ಹೀಗೆ ವರ್ಣಿಸಿದ್ದಾರೆ:

'ಜನಕಜೆಗೆ
ನಾಳನಾಳದಿ ದುಮುಕುತಿರೆ ಜೇನ್ಸೊಗಂ'

ಮೊದಲ ಓದು



ಆರದ ಹೋರಾಟದ ಕಿಚ್ಚು
ಲೇ: ಪ್ರಬೀರ್ ಪುರಕಾಯಸ್ಥರ
ಕನ್ನಡಕ್ಕೆ: ಸದಾನಂದ ಆರ್.
ಪ್ರ: ಅಭಿರುಚಿ ಪ್ರಕಾಶನ
ಸಂ: 9980560013

ಅಘೋಷಿತ ತುರ್ತುಪರಿಸ್ಥಿತಿ ಇನ್ನೂ ಭಯಾನಕ

ಒಂದು ಘಟನೆ ಕೇಂದ್ರೀಕರಿಸಿ ಪ್ರಬೀರ್ ಅವರ ಆತ್ಮಕಥೆ ತೆರೆದುಕೊಳ್ಳುತ್ತದೆ. 1975ರ ಸೆ. 25ರ ಬೆಳಗ್ಗೆ ಆಂತರಿಕ ಭದ್ರತಾ ಕಾಯ್ದೆ (MISA) ಅಡಿ ಪ್ರಬೀರ್ ಪುರಕಾಯಸ್ಥರ ಬಂಧನಕ್ಕೆ ಒಳಗಾಗುತ್ತಾರೆ. ಅಂದಿನಿಂದ ಈ ದಿನಮಾನಗಳ ಚರಿತ್ರೆಯನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಐದು ದಶಕಗಳಿಂದ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) ವರ್ತಮಾನಕ್ಕೆ ಪ್ರತಿಕ್ರಿಯಿಸುತ್ತಿರುವ ಬಗೆಯನ್ನೂ ಅವಲೋಕಿಸಿದ್ದಾರೆ. ಘೋಷಿತ ತುರ್ತುಪರಿಸ್ಥಿತಿ ಮತ್ತು ಅಘೋಷಿತ ತುರ್ತುಪರಿಸ್ಥಿತಿಯನ್ನು ಲೇಖಕ ತಮ್ಮ ಅನುಭವದ ಹಿನ್ನೆಲೆಯಲ್ಲಿ ತುಲನಾತ್ಮಕವಾಗಿ ನೋಡಿದ್ದಾರೆ. ಪ್ರಜಾಪ್ರಭುತ್ವದ ಜೀವಂತಿಕೆಯನ್ನು ಸೂಕ್ಷ್ಮವಾಗಿ ಇಂದು ಪರೀಕ್ಷಿಸಿದರೆ ಅದು ಅಪಾಯದಲ್ಲಿದೆ ಎನ್ನುವ ಅಭಿಮತ ಅವರದು.

ಸ್ವತಂತ್ರ ಭಾರತದಲ್ಲಿ ತುರ್ತುಪರಿಸ್ಥಿತಿ ಘೋಷಿಸಿದ ತಕ್ಷಣ ಪ್ರಜಾಪ್ರಭುತ್ವದ ಮೂಲ ಲಕ್ಷಣ ನಾಶವಾಯಿತು. ನಂತರದ 21 ತಿಂಗಳು ವಾಕ್ ಸ್ವಾತಂತ್ರ, ಭಿನ್ನಮತದ ಹಕ್ಕು ಇಲ್ಲದಾಯಿತು. ಈಗ ಆ ತುರ್ತುಪರಿಸ್ಥಿತಿ ಹೇಗಿತ್ತು ಎಂದು ಕೇಳಿದರೆ, 'ನನ್ನನ್ನು ವರ್ತಮಾನದಲ್ಲಿ ತಂದು ನಿಲ್ಲಿಸುತ್ತದೆ. ಇದಕ್ಕೆ ಉತ್ತರಿಸಲು ನಾನು ಹಿಂದಕ್ಕೆ ಹೋಗುವುದಾದರೆ, ಹತ್ತು ವರ್ಷ ಹಿಂದಕ್ಕೆ ಹೋಗುತ್ತೇನೆ' ಎನ್ನುತ್ತಾರೆ. 'ಅಂದಿಗೆ ಹೋಲಿಸಿದರೆ, ಇಂದು ದೇಶದಲ್ಲಿ ದ್ವೇಷ ಮತ್ತು ಭಯದ ವಾತಾವರಣ ಆಳವಾಗಿ ಬೇರು ಬಿಟ್ಟಿದೆ' ಎನ್ನುವ ಅಂಶವನ್ನು ಗುರುತಿಸುತ್ತಾರೆ. ಪತ್ರಕರ್ತರು, ಅಲ್ಪಸಂಖ್ಯಾತರು, ಚಳವಳಿಗಳ ಮೇಲೆ ಒತ್ತಡ ಹೆಚ್ಚಿದೆ. ಅಂತರಧರ್ಮೀಯ ಮದುವೆ, ಗೋರಕ್ಷಣೆಯ ಹೆಸರಿನಲ್ಲಿ ಹಿಂಸಾಚಾರ ಏರಿದೆ. ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿರುವ ದ್ವೇಷಪೂರಿತ ನಡವಳಿಕೆ, ಟ್ರೋಲ್ ಮಾಡುವುದು, ದಾಳಿ ಹಿಂಸಾಚಾರವನ್ನು ಮೆಲುಕು ಹಾಕುತ್ತಾರೆ. ವಿಚಾರವಾದಿಗಳನ್ನು ವ್ಯವಸ್ಥಿತವಾಗಿ ಕೊಂದುಹಾಕಿದ ಘಟನೆಗಳು, ಅದಕ್ಕೆ ಸಾಂಸ್ಕೃತಿಕವಾಗಿ ವ್ಯಕ್ತವಾದ ಪ್ರತಿರೋಧ 'ಪ್ರಶಸ್ತಿ ವಾಪಸಾತಿ' ಚಳವಳಿಯನ್ನು ಒಬ್ಬ ಪತ್ರಕರ್ತ ಮತ್ತು ಸಾಮಾಜಿಕ ಕಾರ್ಯಕರ್ತನ ದೃಷ್ಟಿಯಲ್ಲಿ ಪ್ರಬೀರ್ ವಿಶ್ಲೇಷಣೆ ಮಾಡಿದ್ದಾರೆ. ಪ್ರಜಾಪ್ರಭುತ್ವದ ಉಳಿವಿಗೆ ಮಾಧ್ಯಮ ಹೇಗೆ ಸ್ಪಂದಿಸುತ್ತಿದೆ ಎನ್ನುವ ಅಂಶವನ್ನು 'ಮಾಧ್ಯಮಗಳು: ಅಂದು ಮತ್ತು ಇಂದು' ಅಧ್ಯಾಯದಲ್ಲಿ ವಿವರಿಸುತ್ತಾರೆ. ಅಂದು 'ಖಾಲಿ ಸಂಪಾದಕೀಯ ಪುಟ' ಪ್ರಜಾಪ್ರಭುತ್ವದ ನಾಲ್ಕನೇ ಸ್ಥಂಭ ಮಾಧ್ಯಮ ಎನ್ನುವುದನ್ನು ಸಂಕೇತಿಸುತ್ತಿತ್ತು. ಇಂದು ಸ್ವಯಂ ಸೆನ್ಸಾರ್‌ಶಿಪ್ ಜಾರಿಗೆ ಬಂದಿದೆ ಎನ್ನುತ್ತಾರೆ. ಸ್ವತಂತ್ರ ಮಾಧ್ಯಮ ಸಂಸ್ಥೆಗಳ ಮೇಲೆ ನಡೆಯುತ್ತಿರುವ ಐಟಿ, ಇಡಿ ದಾಳಿಯ ಸ್ವಯಂ ಅನುಭವವೂ ಕೃತಿಯಲ್ಲಿ ಕಣ್ದೆರೆದುಕೊಂಡಿದೆ.

'ಹೋರಾಟವನ್ನು ಕಲಿತ ಬಗೆ: ನನ್ನ ಜೀವನ ಯಾನ', 'ತುರ್ತುಪರಿಸ್ಥಿಯಡಿಯಲ್ಲಿ ವಿಶ್ವವಿದ್ಯಾನಿಲಯ', 'ರಾಜಕಾರಣವನ್ನು ಜೀವಿಸುವುದು' ಅಧ್ಯಾಯಗಳು ಸೇರಿ ಒಟ್ಟು ಏಳು ಅಧ್ಯಾಯಗಳನ್ನು ಈ ಕೃತಿ ಒಳಗೊಂಡಿದೆ.

ಪುಟ: 248 ₹250

ಗಿರಗಿಟ್ಲೆ
ಲೇ: ಶಿವಾನಂದ ಕರ್ಕಿ
ಪ್ರ: ಧ್ವನಿ ಪ್ರಕಾಶನ
ಸಂ: 99453 06617

ನೆಲಮೂಲದೊಂದಿಗೆ ವಿದೇಶಿ ಪ್ರವಾಸ ಮುಖಾಮುಖಿ

ಪ್ರವಾಸ ಕಥೆಗಳಲ್ಲಿ ಪ್ರೇಕ್ಷಣೀಯ ತಾಣಗಳ ಇತಿಹಾಸ, ವೈಶಿಷ್ಟ್ಯ, ಭೂತ ಹಾಗೂ ವರ್ತಮಾನದ ಪರಿಸ್ಥಿತಿಯ ವಿವರಗಳ ಜತೆಗೆ ಅದನ್ನು ತಮ್ಮ ನೆಲಮೂಲದ ಸಂಸ್ಕೃತಿ ಮತ್ತು ವೈಯಕ್ತಿಕ ಬದುಕಿನೊಂದಿಗೆ ಮುಖಾಮುಖಿಯಾಗಿಸುವ ಪ್ರಯತ್ನವನ್ನು ಲೇಖಕ ಶಿವಾನಂದ ಕರ್ಕಿ ಅವರು ತಮ್ಮ ಕೃತಿ 'ಗಿರಗಿಟ್ಲೆ'ಯಲ್ಲಿ ಮಾಡಿದ್ದಾರೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನವರಾದ ಲೇಖಕ ತಮ್ಮ ಪತ್ನಿಯೊಂದಿಗೆ ಸಿಂಗಪುರ, ಮಲೇಷಿಯಾ ಮತ್ತು ಥಾಯ್ಲೆಂಡ್ ಪ್ರವಾಸ ನಡೆಸಿದ ಸಂದರ್ಭದ ಹಲವು ಸಂಗತಿಗಳನ್ನು ದಾಖಲಿಸಿದ್ದಾರೆ. ಕೃತಿಯ ಅಡಿಬರಹ 'ವಿದೇಶದಲ್ಲೂ ನಾವು ಹೀಗೆ' ಎಂಬಂತೆ ಲೇಖಕ ಅಲ್ಲಿಯೂ ತಮ್ಮ ಸ್ವಂತಿಕೆ ಮತ್ತು ಅಸ್ತಿತ್ವದ ಮೂಲದೊಂದಿಗೆ ವಿದೇಶಿ ನೆಲವನ್ನು ಹೋಲಿಕೆ ಮಾಡಿ ನೋಡುವ ಪ್ರಯತ್ನ ಮಾಡಿದ್ದಾರೆ. ಪ್ರವಾಸದಲ್ಲಿ ಜತೆಗೂಡಿದವರೊಂದಿಗಿನ ಮೋಜು, ಮಸ್ತಿಯ ಜತೆಗೆ ಅಲ್ಲಿನ ಜನಜೀವನ, ರಾಜಕೀಯ, ಸಾಮಾಜಿಕ, ಜನರ ಸ್ಥಿತಿಗತಿಗಳ ಕುರಿತೂ ಹಲವು ಕುತೂಹಲಕರ ಅಂಶಗಳನ್ನು ಇಲ್ಲಿ ದಾಖಲಿಸಿದ್ದಾರೆ.

ಇಲ್ಲಿ ಮಾಹಿತಿ ದಾಖಲಿಸುವುದಕ್ಕಿಂತಲೂ ಅದನ್ನು ತನ್ನ ನೆಲದ ಹಲವು ಸಂಗತಿಗಳಿಗೆ ಹೋಲಿಸಿ ನೋಡುವ ಪ್ರಯತ್ನದಲ್ಲಿ ಓದುಗರಿಗೆ ಕಚಗುಳಿ ಇಡುತ್ತಾ, ನಗೆಗಡಲಿನಲ್ಲಿ ತೇಲಿಸುತ್ತಾ ಕೃತಿ ಸಾಗುತ್ತದೆ. ಅಲ್ಲಲ್ಲಿ ಬದುಕಿನ ಅನಿರೀಕ್ಷಿತ ಪರಿಸ್ಥಿತಿಗೆ ಮುಖಾಮುಖಿಯಾಗುವ ಈ ಕೃತಿಯಲ್ಲಿ ಹಾಸ್ಯ, ವಿಡಂಬನೆ, ನೋವು, ನಲಿವು, ಆಹಾರ, ವಿಹಾರ ಸೇರಿದಂತೆ ಹಲವು ಆಯಾಮಗಳು ದಾಖಲಾಗಿವೆ.

ಈ ಪುಟ್ಟ ಕೃತಿಯಲ್ಲಿ ಲೇಖಕ ಬಹಳಷ್ಟು ವಿಷಯಗಳನ್ನು ಮುಕ್ತವಾಗಿ ಹಂಚಿಕೊಂಡಿದ್ದಾರೆ. ಜತೆಗೆ ತಮ್ಮೂರು ಮಲೆನಾಡಿನ ಆಚಾರ, ವಿಚಾರ ಹಾಗೂ ಆಹಾರಗಳನ್ನೂ ಸೊಗಸಾಗಿ ಉಣಬಡಿಸಿದ್ದಾರೆ. ಈ ಪುಟ್ಟ ಕೃತಿಯಲ್ಲಿ 14 ಅಧ್ಯಾಯಗಳಿವೆ. ಅವುಗಳಲ್ಲಿ ತಾವು ಭೇಟಿ ನೀಡಿದ ದೇಶಗಳ ಇತಿಹಾಸದ ಜತೆಗೆ ಇಂದಿನ ರಾಜಕೀಯ ಪರಿಸ್ಥಿತಿಯನ್ನೂ ದಾಖಲಿಸಿದ್ದಾರೆ.

ಪುಟ: 106 ₹150



ಬಯಲು
ಲೇ: ಪ್ರವೀಣ್ ಕುಮಾರ್ ಜಿ.
ಪ್ರ: ಒಲವು ಬರೆಹ
ಸಂ: 9611360860

ಸಮಕಾಲೀನ ಬದುಕಿನ ಚಿತ್ರಣ ಕಟ್ಟಿಕೊಡುವ ಕಥೆಗಳು

ಇದು ಪ್ರವೀಣ್ ಕುಮಾರ್ ಜಿ. ಅವರ ಎರಡನೇ ಕಥಾಸಂಕಲನ. ಇದರಲ್ಲಿ ಒಟ್ಟು ಹತ್ತು ಕಥೆಗಳಿವೆ. ಅವರ ಮೊದಲ ಕಥಾಸಂಕಲನ 'ಎಡೆ'ಯ ಮುಂದುವರಿದ ಭಾಗದಂತಿರುವ ಇಲ್ಲಿನ ಕಥೆಗಳಲ್ಲಿ ಬೆಂಗಳೂರಿನ, ಅದರಲ್ಲೂ ವಿಜಯನಗರ ಏರಿಯಾದ ಸುತ್ತಮುತ್ತಲಿನ ಚಿತ್ರಣವಿದೆ. ನೂರಾರು ಕನಸಿಟ್ಟುಕೊಂಡು ಇಲ್ಲಿಗೆ ಓದಲು ಬರುವ ಹುಡುಗರು, ಮನೆಗೆಲಸ ಮಾಡುವ ಮಹಿಳೆಯರು, ಅದೇ ವರ್ಗದ ಜನರ ಚಿತ್ರಣವು ಕಥೆಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಪದೇ ಪದೇ ಅದೇ ಅದೇ, ಜಾರು ಬಂಡೆ ಕಥೆಗಳಲ್ಲಿ ಹೊಸಶೈಲಿಯ ನಿರೂಪಣೆಯನ್ನು ಕಥೆಗಾರ ಪ್ರಯತ್ನಿಸಿದ್ದಾರೆ. ಸರಳ ಭಾಷೆ ಹಾಗೂ ನಿರೂಪಣೆಯಿಂದ ಉಳಿದ ಕಥೆಗಳೂ ಕೂಡ ಸರಾಗವಾಗಿ ಓದಿಸಿಕೊಂಡು ಹೋಗುತ್ತವೆ.

ಬಯಲುಸೀಮೆ ಬಳ್ಳಾರಿಯ ಕನ್ನಡವನ್ನು ಇಲ್ಲಿನ ಕಥೆಗಳಲ್ಲಿ ಚೆನ್ನಾಗಿಯೇ ಉಪಯೋಗಿಕೊಂಡಿದ್ದಾರೆ. ಕೆಲವು ಕಥೆಗಳಲ್ಲಿ ಸಿನಿಮೀಯ ತಿರುವುಗಳನ್ನು ಕೂಡ ಕಾಣಬಹುದು.

ಬದಲಾಗುತ್ತಿರುವ ಬದುಕು ಮತ್ತು ಮಾನವೀಯ ಸಂಬಂಧಗಳ ಜಂಜಾಟವನ್ನು ಈ ಕಥಾ ಸಂಕಲನದ ಎಲ್ಲಾ ಕಥೆಗಳಲ್ಲೂ ಕಾಣಬಹುದು. ಆಧುನಿಕ ಕಾಲಘಟ್ಟದಲ್ಲಿ ತಲೆ ಎತ್ತುತ್ತಿರುವ ಹೊಸ ಸಮಸ್ಯೆಗಳ ಜೊತೆಗೆ ಮಾತೃಭಾಷಾ ಶಿಕ್ಷಣ, ಸಾಮಾಜಿಕ ಅವ್ಯವಸ್ಥೆಯ ಬಗ್ಗೆಯೂ ಇಲ್ಲಿನ ಕಥೆಗಳು ಮಾತನಾಡುತ್ತವೆ.

ಈ ಕಥಾಸಂಕಲನ ವಿಶೇಷವೆಂದರೆ, ಕನ್ನಡೇತರ ಪದಗಳನ್ನು ಆದಷ್ಟು ಕಡಿಮೆ ಬಳಕೆ ಮಾಡಿದ್ದಾರೆ. ಕೆಲವೆಡೆ ಕನ್ನಡದಲ್ಲಿ ಚಾಲ್ತಿಯಲ್ಲಿರುವ ಬೇರೆ ಭಾಷಿಕ ಪದಗಳಿಗೂ ಹೊಸ ಕನ್ನಡ ಪದವನ್ನು ಕಟ್ಟಿ ಕೊಡುವ ಪ್ರಯತ್ನವನ್ನು ಮಾಡಿದ್ದಾರೆ.

ಪುಟ: 150 ₹150

ಸೆಪ್ಟೆಂಬರ್‌ನಲ್ಲಿ ಸಂಡೂರು ನೋಡು

ಅದಿರು ಗಣಿಗಾರಿಕೆಗೆ ಹೆಸರುವಾಸಿಯಾಗಿರುವ ಬಳ್ಳಾರಿ ಜಿಲ್ಲೆಯ ಸಂಡೂರು ಸೆಪ್ಟೆಂಬರ್‌ನಲ್ಲಿ ಹಸಿರಿನಿಂದ ಕಂಗೊಳಿಸುತ್ತಿರುತ್ತದೆ. ಇಲ್ಲಿನ ಬಂಡ್ರಿ ಯಶವಂತನಗರ ಕಾಡು ಮಲೆನಾಡಿನಲ್ಲಿ ಇರುವ ಅನುಭವವನ್ನು ನೀಡುತ್ತದೆ. ಜನರಿಗೆ ಅಪರಿಚಿತವಾಗಿರುವ ಈ ಪ್ರದೇಶ ಸಂಡೂರಿನ ಒಡಲಲ್ಲಿ ತಣ್ಣಗೆ ಕುಳಿತಿದೆ.


ಬೆಟ್ಟದ ಮೇಲಿನಿಂದ ಕಾಣುವ ವಿಹಂಗಮ ನೋಟ

ಯಾವ ಕಾಲ ಸೂಕ್ತ..?

‘ಸೀ ಸಂಡೂರು ಇನ್ ಸೆಪ್ಟೆಂಬರ್’ ಎಂದು ಮಹಾತ್ಮ ಗಾಂಧಿ ಹೇಳಿದ್ದರು. ಮಳೆಗಾಲ ಅದರಲ್ಲೂ ಭರ್ಜರಿ ವರ್ಷಧಾರೆ ಆದರಂತೂ ಇನ್ನೂ ಚೆಂದ. ಇಲ್ಲಿ ಸುತ್ತಾಡಲು ಇತರೆಡೆ ಇರುವಂತೆ ನಿರ್ದಿಷ್ಟ ದಾರಿ ಇಲ್ಲ. ಜಾನುವಾರುಗಳು ಬೈತಲೆ ಎಳೆದಂತಹ ಅನೇಕ ಕವಲು ಕಾಲುದಾರಿಗಳನ್ನು ನಿರ್ಮಿಸಿದ್ದು, ಇವುಗಳು ನಿಸ್ಸಂದೇಹವಾಗಿ ಹಾದಿ ತಪ್ಪಿಸುತ್ತವೆ. ಹೀಗಾಗಿ ಸ್ಥಳೀಯರು, ಅದರಲ್ಲೂ ಕಾಡು ಬಲ್ಲವರು ಜೊತೆಗಿರಲಿ. ಅರಣ್ಯ ಇಲಾಖೆಗೆ ಮಾಹಿತಿ ನೀಡಿ, ಸಹಾಯ ಕೇಳಿ. ಎಲ್ಲಾ ವಯಸ್ಸಿನವರು ಚಾರಣ ಮಾಡಲು ಹೇಳಿ ಮಾಡಿಸಿದಂತಿದೆ. ಕಾಡಲ್ಲೇ ಶುದ್ಧ ನೀರು ಸಿಗುತ್ತದೆ. ಆಹಾರ, ಕುರುಕು ತಿಂಡಿ ಜೊತೆಗಿದ್ದರೆ ಸಾಕು.


ಕಿವಿಗಳಿಗೆ ಇಂಪು ನೀಡುತ್ತದೆ ಈ ನೀರ ಹರಿವಿನ ನಿನಾದ

• ಚಿತ್ರ-ಲೇಖನ: ಸ್ವರೂಪ್ ಕೊಟ್ಟೂರು

ಬಳ್ಳಾರಿ ಜಿಲ್ಲೆಯ ಸಂಡೂರು ಕಬ್ಬಿಣದ ಅದಿರು ಗಣಿಗಾರಿಕೆಗೆ ಹೆಸರುವಾಸಿ. ಇಲ್ಲಿ ಗಣಿಗಾರಿಕೆ ಮತ್ತು ಅದಿರು ಸಾಗಾಣಿಕೆಯಿಂದ ಗಾಯಗೊಂಡ ಬೆಟ್ಟಗುಡ್ಡಗಳು, ರಸ್ತೆಗಳು.. ಹೀಗೆ ಪರಿಸರವೆಲ್ಲ ಸದಾ ಕೆಂಧೂಳನ್ನೇ ಉಸಿರಾಡುತ್ತವೆ. ಉತ್ತರ ಕರ್ನಾಟಕದ ‘ಆಕ್ಸಿಜನ್ ಬ್ಯಾಂಕ್’ ಎಂದೇ ಹೆಸರಾಗಿರುವ ಸಂಡೂರು ಮಳೆಗಾಲದಲ್ಲಿ ಪ್ರಕೃತಿ, ಚಾರಣ ಪ್ರಿಯರನ್ನು ಸೆಳೆಯುತ್ತದೆ. ಹಸಿರಿನ ಸೊಬಗಿನ ಜೊತೆಗೆ ಗಣಿಗಾರಿಕೆ ಸೃಷ್ಟಿಸಿದ ಸಂಕಟವನ್ನೂ ಅನುಭವಿಸುವ ಕರ್ಮ ಇಲ್ಲಿನ ಹಸಿರು ಕಣ್ಣು ತುಂಬಿಕೊಳ್ಳಲು ಅಪೇಕ್ಷೆಪಟ್ಟು ಬಂದವರದ್ದು. ಹಾಗಾದರೆ ಗಣಿಗಾರಿಕೆ ಮತ್ತು ಅದಿರು ಸಾಗಾಣಿಕೆ ಮುಕ್ತ ಕಾಡನ್ನು ಸಂಡೂರಲ್ಲಿ ಕಾಣಲಿಕ್ಕೆ ಸಾಧ್ಯವಿಲ್ಲವೇ? ಎನ್ನುವ ಪ್ರಶ್ನೆ ಮೂಡುತ್ತದೆ. ಆದರೆ ಸ್ವಚ್ಛ ಮತ್ತು ಸುಂದರ ಪ್ರಾಕೃತಿಕ ತಾಣವೊಂದು ಸಂಡೂರಿನ ಒಡಲಲ್ಲಿ ತಣ್ಣಗೆ ಕುಳಿತಿದೆ. ‘ಬಂಡ್ರಿ ಯಶವಂತನಗರ ಕಾಡು’ ಅಕ್ಷರಶಃ ಮಲೆನಾಡಿನ ಅನುಭೂತಿಯನ್ನು ನೀಡುತ್ತದೆ.

‘ಇಲ್ಲಿನ ನೀರ ಹರಿವಿನ ನಿನಾದ, ಖಗಗಳ ಇಂಚರ, ಶುದ್ಧ ಗಾಳಿ, ಪ್ರಶಾಂತ ವಾತಾವರಣ, ಸಮೃದ್ಧ ಹಸಿರು, ಒತ್ತುಕಟ್ಟಾದ ಹುಲ್ಲಿನ ಗಾದಿ, ಬಂಡೆಗಳು... ಇವೆಲ್ಲ ಧ್ಯಾನಕ್ಕೆ ಪ್ರೇರೇಪಿಸುತ್ತಿವೆ’ ಎನ್ನುತ್ತಲೇ ಗೆಳೆಯರೊಬ್ಬರು ಧ್ಯಾನಕ್ಕೆ ಕುಳಿತೇಬಿಟ್ಟರು. ‘ಸಂಡೂರಿನ ಎತ್ತರದ, ಸರಣಿ ಬೆಟ್ಟಗುಡ್ಡಗಳಿಗಿಂತ ಈ ತಾಣ ಅತ್ಯುತ್ತಮ. ಇಲ್ಲಿ ಗಣಿಗಾರಿಕೆ ಇಲ್ಲ. ಅದಕ್ಕಾಗಿಯೇ ಈ ಕಾಡು ಇನ್ನೂ ಉಳಿದಿದೆ’ ಎನ್ನುವುದು ಚಾರಣ ಶ್ರೀನಿವಾಸ್ ಅವರ ಅಭಿಪ್ರಾಯ.

ಬಳ್ಳಾರಿ ಜಿಲ್ಲೆಗೆ ಗಣಿ ನಾಡು ಎಂಬ ಪ್ರಖ್ಯಾತಿ ಹಾಗೆ ಕುಖ್ಯಾತಿ ತಂದು ಕೊಟ್ಟ ಸಂಡೂರಿನ ಖನಿಜ ಸಂಪತ್ತಿನ ಸಾಲು ಬೆಟ್ಟಗಳ ಸೆರಗಿನಲ್ಲೇ ಈ ತಾಣವಿದೆ. ಅಂದರೆ, ರಾಜ್ಯ ಹೆದ್ದಾರಿ-4ರ ಸಂಡೂರು-ಕೂಡ್ಲಿಗಿ ರಸ್ತೆಯಲ್ಲಿಯ ಬಂಡ್ರಿ, ಸೋಮಲಾಪುರ ಸುತ್ತಮುತ್ತ ಈ ಕಾಡು ಸಿಗುತ್ತದೆ. ಸಂಡೂರಿನ ಎತ್ತರದ ಬೆಟ್ಟಗುಡ್ಡಗಳ ಶ್ರೇಣಿಗಳು, ಅಲ್ಲಿನ ದಟ್ಟ ಕಾಡು, ಮಂಜು- ಮೋಡಗಳ ಜುಗಲ್ ಬಂದಿ, ಮಳೆಯ ಮೇಲಾಟದ ಮೇಲೆಯೇ ಹಲವರಿಗೆ ಕಣ್ಣು. ಹಾಗಾಗಿ ‘ಇದು ಸಾಧಾರಣ ಕಾಡು, ಅಲ್ಲಿ ಏನಿರುತ್ತೆ?’ ಎನ್ನುವ ನಿರ್ಲಕ್ಷ್ಯವೇ ಈ ತಾಣವನ್ನು ಅಪರಿಚಿತವಾಗಿರಿಸಿದೆ.

ಎಳ‘ನೀರ’ ಹಾಡು...

ಈ ದಿನಗಳಲ್ಲಿ ಇಲ್ಲಿ ಎಲ್ಲೆಲ್ಲೂ ನೀರ ಹಾಡು. ಅಸಂಖ್ಯಾತ ಝರಿಗಳು, ಹತ್ತಾರು ಹಳ್ಳ-ಕೊಳ್ಳಗಳು



ಹುಟ್ಟಿ, ಕೆರೆ-ಕಟ್ಟೆಗಳನ್ನು ಸೇರುತ್ತವೆ. ಹೆಜ್ಜೆ ಹೆಜ್ಜೆಗೂ ನೀರ ಪಸೆಗಳಿವೆ. ‘ನಿಮಗೆ ಕಾಡಿಗಿಂತ ಇಲ್ಲಿನ ನೀರ ಹರಿವು ದಾರಿ ತಪ್ಪಿಸುತ್ತದೆ. ಜಲಕನ್ಯೆಯರಿಗೆ ಮನಸೋತು ಕಾನನದಲ್ಲಿ ತಪ್ಪಿಸಿಕೊಂಡ್ರೆ ನಾವು ಹೊಣೆ ಅಲ್ಲ..’ ಎಂದು ಜೊತೆಗಿದ್ದವರು ಎಚ್ಚರಿಸಿದ್ದು ಖರೆ ಅನಿಸಿತು. ಕಲ್ಲುಗಳನ್ನು ಮುಳುಗಿಸಿ, ತೇಲಿಸುವಂತೆ ವೈಯಾರ, ಗಾಂಭೀರ್ಯದಲಿ ಹರಿಯುವ ನೀರಿನ ಗತ್ತು-ಗಮ್ಮತ್ತು ಈ ಕಾಡಿನ ಗರ್ವ ಹೆಚ್ಚಿಸುತ್ತದೆ. ‘ಜುಳು, ಜುಳು, ದಬ ದಬ..’ ಹೀಗೆ ಸೃಷ್ಟಿಸುವ ಹರಿಯುವ ನೀರಿನ ಹಲವು ಸ್ವರಗಳು ಅಷ್ಟ ದಿಕ್ಕುಗಳಿಂದ ಅಲೆ ಅಲೆಯಾಗಿ ತೇಲಿ ಕಿವಿ ತುಂಬುತ್ತವೆ. ಒಂದೊಂದೆಡೆ ಅವುಗಳ ಮಧ್ಯೆ ಒಂದು ಆರೋಗ್ಯಕರ ಸಂಗೀತ ಸ್ಪರ್ಧೆ ಏರ್ಪಟ್ಟು, ಗೆಲ್ಲಲು ಜಿದ್ದಿಗೆ ಬಿದ್ದು ಹರಿಯುವಂತೆ ಮತ್ತೊಂದೆಡೆ ‘ನಮ್ಮನಮ್ಮಲ್ಲೇ ಯಾಕೆ ಈ ಸ್ಪರ್ಧೆಗಿರ್ದೆ..’ ಎಂದು ಒಳಒಪ್ಪಂದವಾಗಿ ತಣ್ಣಗೆ ಹರಿಯುವ ಹಾಗೆ ಭಾಸವಾಗುತ್ತದೆ.

‘ಇಲ್ಲಿ ಗಣಿಗಾರಿಕೆ ಇಲ್ಲದಿದ್ದಕ್ಕೆ ನೀರು ಕೆಂಪಾಗಿಲ್ಲ. ಥೇಟ್ ಎಳನೀರು, ಅನ್ನದ ಗಂಜಿಯಂತಿದೆ. ಕುಡಿದರೆ ಅಮೃತ...’ ಎನ್ನುತ್ತಾ ಒಬ್ಬರು ಹಳ್ಳಕ್ಕೇ ಬಾಯಿ ಹಚ್ಚಿದರು.

‘ಜಲ’ನಾಡು..

ಚಾರಣದ ಉದ್ದಕ್ಕೂ ವೈವಿಧ್ಯಮಯ ಜಲಮೂಲಗಳು ಅಯಾಚಿತವಾಗಿ ಸಿಕ್ಕು ‘ಇದು ಬರದ ನಾಡಲ್ಲ, ಅಕ್ಷರಶಃ ಜಲದ ನಾಡು’ ಎಂದೆನಿಸಿತು. ಯಶವಂತನಗರ ಸಮೀಪ ಇರುವ ಹಳ್ಳವೊಂದಕ್ಕೆ ಸ್ಥಳೀಯರು ಜರುಗಳ್ಳ ಅನ್ನುತ್ತಾರೆ. ಆದರೆ ಇದು ಝರಿಗಳ ಹಳ್ಳ. ಸೋಮಲಾಪುರ, ಬಂಡ್ರಿಯ ವ್ಯಾಪ್ತಿಯ ಅಂದಾಜು ಎಂಟು ಸಾವಿರ ಹೆಕ್ಟೇರ್ ಕಾಯ್ದಿಟ್ಟ ಅರಣ್ಯದಲ್ಲಿ ಹಿರೇಹಳ್ಳ, ದೇಶ ಹಳ್ಳ, ನೀರು ತುಂಬ ಹಳ್ಳ, ಕಟ್ಟ ಹಳ್ಳ, ಬಂಡೆ ಮಡುಗಿನ ಹಳ್ಳ, ಸನ್ಯಾಸಿ ಕೆರೆ ಹಳ್ಳ.. ಹೀಗೆ ಹತ್ತಾರು ಹಳ್ಳಗಳು, ನೂರಾರು ಝರಿಗಳಿವೆ. ಇದರಿಂದ ಅನೇಕ ಚೆಕ್‌ಡ್ಯಾಂ, ಗೋಕಟ್ಟೆ, ಕೆರೆ-ಕಟ್ಟೆಗಳು ಭರ್ತಿ ಆಗಿ ಕಾಡೆಲ್ಲಾ ಸಗ್ಗದ ಸಿರಿ, ಉದುಕದಿಂದ ತುಂಬಿದೆ.

ಮೂರ್ತ, ಅಮೂರ್ತ ಕಲ್ಪನೆ ನೀಡುವ ಶಿಲೆಗಳು ಹೆಜ್ಜೆ ಹೆಜ್ಜೆಗೂ ಸಿಗುತ್ತವೆ. ಅಲ್ಲಲ್ಲಿಯ ಸಮತಟ್ಟಾದ ಜಾಗ, ಹೆಬ್ಬಂಡೆ, ಹಾಸುಬಂಡೆಗಳು ವಿಶ್ರಾಂತಿ ಮತ್ತು ವ್ಯೂ ಪಾಯಿಂಟ್‌ಗಳಾಗಿವೆ. ಎಳೆ, ಹದ ಬಿಸಿಲು, ರವಿಯ ನೆರಳು ಬೆಳಕಿನ ಆಟ.. ಈ ಕಲ್ಲುಗಳ ಚೆಲುವನ್ನು ನೂರ್ಮಡಿಸಿ, ಕಣ್ಣು ಕೋರೈಸುತ್ತವೆ. ಬಿಳಿಕಲ್ಲು ಗುಡ್ಡವಂತೂ ಬೆಣಚು ಕಲ್ಲುಗಳ ಗಣಿ.

ಪರಿಸರದ ಬಗ್ಗೆ ಗಹನ ಚರ್ಚೆ ಮಾಡುತ್ತಾ ದಾರಿ ತಪ್ಪಿದೆವು. ಸೂರ್ಯಾಸ್ತ ಸಮೀಪಿಸಿದರೂ ದಾರಿ ಸಿಗದೇ ಪರದಾಡಿದೆವು. ಕಾಡು ಪ್ರಾಣಿಗಳೆಲ್ಲ ಚಿತ್ತದಲ್ಲಿ ಸುಳಿದು ಎದೆ ಬಡಿತ ಹೆಚ್ಚಿಸಿದವು. ಕೊನೆಗೆ ಗೈಡ್ ಅದ್ಹೇಗೋ ದಾರಿ ಪತ್ತೆ ಹಚ್ಚಿದರು. ಒಂದೆರಡು ಬೆಟ್ಟ ಹತ್ತಿ ಇಳಿದು, ಬೆವರು ಹರಿಸಿ ಮರಳುವಷ್ಟರಲ್ಲಿ ಹೋದ ಜೀವ ಮರಳಿ ಬಂತು.

ಹೀಗೆ ತಲುಪಿ

ಬೆಂಗಳೂರು, ಮಲೆನಾಡಿನ ಕಡೆಯಿಂದ ಬರುವವರು ಕೂಡ್ಲಿಗಿಗೆ ಬಂದು ಸಂಡೂರು ರಸ್ತೆ ಹಿಡಿದರೆ ಮೊದಲೇ ಬಂಡ್ರಿ ಸಿಗುತ್ತದೆ. ಉತ್ತರ ಕರ್ನಾಟಕದವರು ಹೊಸಪೇಟೆಗೆ ಬಂದು ಸಂಡೂರಿಗೆ ಇಲ್ಲವೆ ಬಳ್ಳಾರಿಯಿಂದ ಸಂಡೂರಿಗೆ ಬಂದು ಇಲ್ಲಿಗೆ ತಲುಪಬಹುದು. ❖

ಕೋಚಿಂಗ್ ಸೆಂಟರ್ ಗ್ರಂಥಾಲಯದಲ್ಲಿ ಆಕಾಂಕ್ಷಿಗಳು

ಕನಸುಗಳ ಮೆರವಣಿಗೆ

8ನೇ ಪುಟದಿಂದ...

ಆರ್ಥಿಕ ಸ್ಥಿತಿ ಚೆನ್ನಾಗಿರುವ ವಿದ್ಯಾರ್ಥಿಗಳು ಬಾಡಿಗೆ ಮನೆ ಮಾಡಿಕೊಂಡು, ಊಟಕ್ಕಾಗಿ ಮೆಸ್ ಅನ್ನು ಆಶ್ರಯಿಸುತ್ತಾರೆ. ಉತ್ತರ ಕರ್ನಾಟಕ ಶೈಲಿಯ ಊಟ ಸ್ವಲ್ಪ ತುಟ್ಟಿಯಾಗಿರುವುದರಿಂದ ಬೀದಿಬದಿ ಗಾಡಿಗಳಲ್ಲಿ ಊಟ ಸೇವಿಸುವವರೂ ಇದ್ದಾರೆ. ಹೋಟೆಲ್‌ಗಳಲ್ಲಿ, ಸ್ಟೇಷನರಿ ಅಂಗಡಿಗಳಲ್ಲಿ, ಬೇಕರಿಗಳಲ್ಲಿ, ಕ್ಯಾಟರಿಂಗ್ ಸೇವೆಗಳಲ್ಲಿ ಪಾರ್ಟ್‌ಟೈಮ್ ಕೆಲಸ ಮಾಡಿಕೊಂಡು ತರಬೇತಿ ಪಡೆಯುವವರೂ ಇದ್ದಾರೆ. ಅಕ್ಕಪಕ್ಕದ ಕಲ್ಯಾಣ ಮಂಟಪಗಳಲ್ಲಿ ಮದುವೆ ಇದ್ದರೆ ಆ ದಿನದ ಮಧ್ಯಾಹ್ನದ ಊಟ ಮುಗಿಸುವ ಬಡವರೂ ಇದ್ದಾರೆ. ಸಣ್ಣಪುಟ್ಟ ವ್ಯಾಪಾರ ಆರಂಭಿಸಿ ಅದರಿಂದ ಬರುವ ಆದಾಯದಲ್ಲಿ ಬೋಧನಾ ಶುಲ್ಕ ಪಾವತಿಸುವವರು ಕೆಲವರು. ವರ್ಷಗಳು ಕಾದು ಪರೀಕ್ಷೆ ಪಾಸು ಮಾಡಲಾಗದೇ ಉದ್ಯಮ ಆರಂಭಿಸಿದ, ಕಲಿತ ಸಂಸ್ಥೆಯಲ್ಲೇ ಬೋಧಕರಾಗಿ ಕೆಲಸ ಮಾಡುವವರೂ ಸಿಕ್ಕರು. ನಗರ ಜೀವನಕ್ಕೆ ಆಕರ್ಷಿತರಾಗಿ ದಾರಿ ತಪ್ಪಿದವರ ಕಥೆಗಳನ್ನು ಹೋಟೆಲ್ ಮಾಲೀಕರೊಬ್ಬರು ಹೇಳಿದರು.

‘ಐಎಎಸ್ ಅಧಿಕಾರಿಯಾಗಬೇಕೆಂಬ ಕನಸು ಹೊತ್ತು ಹಗಲು–ರಾತ್ರಿ ಅಧ್ಯಯನ ಮಾಡಿದೆ. ಮೊದಲ ವರ್ಷ ಮನೆಯಿಂದ ಬೆಂಬಲ ಸಿಗುತ್ತದೆ. ಬಳಿಕ ಮನೆಯವರ ಒತ್ತಡ, ಇನ್ನೂ ಮುಗಿದಿಲ್ಲವೇ ಎನ್ನುವ ಸ್ನೇಹಿತರ ಪ್ರಶ್ನೆಗಳನ್ನು ಎದುರಿಸುವುದೇ ದೊಡ್ಡ ಸವಾಲು. ಪ್ರಯತ್ನಗಳು ಫಲ ಕೊಡದೆ ಹೋದಾಗ ಖಿನ್ನತೆಗೆ ಒಳಗಾಗಿ ತಲೆಗೂದಲು ಉದುರಿತ್ತು. ಇದೀಗ ಒಂದು ವರ್ಷ ವಿರಾಮ ತೆಗೆದುಕೊಂಡು, ಖಾಸಗಿ ಕಾಲೇಜೊಂದರಲ್ಲಿ ಉಪನ್ಯಾಸಕಿಯಾಗಿದ್ದುಕೊಂಡು ಪರೀಕ್ಷಾ ತಯಾರಿ ನಡೆಸುತ್ತಿದ್ದೇನೆ’ ಎಂದು ತಮ್ಮ ಅನುಭವ ಬಿಚ್ಚಿಟ್ಟರು ಚಿಕ್ಕಮಗಳೂರಿನ ಐಶ್ವರ್ಯ.

ಉತ್ತರ ಕರ್ನಾಟಕದ ಯುವಕರಿಗೆ ಸ್ಪರ್ಧಾತ್ಮಕ ಪರೀಕ್ಷೆ ಬಗ್ಗೆ ಒಲವು ಹೆಚ್ಚು. ಹೊಲ ಇದ್ದರು ನೀರಿನ ಕೊರತೆ ಹಾಗೂ ಇತರ ಸವಾಲುಗಳಿಂದಾಗಿ ಕನಿಷ್ಠ ಒಬ್ಬ ಮಗನಾದರೂ ‘ಸಾಹೇಬ’ರಾಗಬೇಕು ಎನ್ನುವುದು ಪೋಷಕರ ಅಭಿಲಾಷೆ. ಇದಕ್ಕಾಗಿ ಹೊಲ ಮಾರಿ ಮಕ್ಕಳನ್ನು ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರಗಳಿಗೆ ಕಳುಹಿಸುತ್ತಾರೆ. ಕೈಯಲ್ಲಿ ಅರ್ಜಿ ಹಿಡಿದುಕೊಂಡು, ಕಣ್ಣುತುಂಬಾ ಕನಸುಗಳನ್ನು ಹೊತ್ತುಕೊಂಡು ಚಂದ್ರಾ ಲೇಔಟ್‌ನ ಹಲವು ಸಂಸ್ಥೆಗಳಲ್ಲಿ ಪ್ರವೇಶಾತಿಗಾಗಿ ಭೇಟಿ ನೀಡುವ ಉತ್ತರ ಕರ್ನಾಟಕದ ಯುವಕ–ಯುವತಿಯರನ್ನು ಕಾಣಬಹುದು. ಹುಬ್ಬಳ್ಳಿ, ಧಾರವಾಡದಲ್ಲಿ ತರಬೇತಿ ಸಂಸ್ಥೆಗಳಿದ್ದರೂ ಗುಣಮಟ್ಟದ ಕಾರಣಕ್ಕೆ ಬೆಂಗಳೂರಿಗೆ ಬರುತ್ತಾರೆ.

‘ಕೆಎಎಸ್‌ಗೆಂದು ಬರುವ ಉತ್ತರ ಕರ್ನಾಟಕದ ವಿದ್ಯಾರ್ಥಿಗಳು ಕಾನ್‌ಸ್ಟೇಬಲ್ ಪರೀಕ್ಷೆ ಬರೆಯಲೂ ಸಿದ್ಧರಿರುತ್ತಾರೆ. ಆದರೆ ಸರ್ಕಾರ ಪರೀಕ್ಷೆ ನಡೆಸುವುದಿಲ್ಲ. ಪದೇ ಪದೇ ನಡೆಯುವ ಪರೀಕ್ಷಾ ಅಕ್ರಮ ಪ್ರಾಮಾಣಿಕ ಅಭ್ಯರ್ಥಿಗಳ ಭವಿಷ್ಯ ಮಸುಕಾಗಿಸುತ್ತದೆ. ಪ್ರಯತ್ನ ಜಾರಿಯಲ್ಲಿರುವಾಗಲೇ ಗರಿಷ್ಠ ವಯಸ್ಸು ಮೀರಿ ಹೋಗುತ್ತದೆ. ವಯಸ್ಸು ಹೆಚ್ಚಾದರೆ ಖಾಸಗಿ ವಲಯಗಳಲ್ಲೂ ಕೆಲಸ ಸಿಗುವುದು ಕಷ್ಟ. ಕೌಶಲ ರಹಿತ ಶಿಕ್ಷಣದಿಂದಾಗಿ ಉದ್ಯೋಗ ಸಮಸ್ಯೆಯಾದರೆ, ಖಾಸಗಿಯಲ್ಲಿರುವ ಅನಿಶ್ಚಿತತೆ ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಯತ್ತ ಮುಖ ಮಾಡಿಸುತ್ತದೆ. ಆದರೆ ಸರ್ಕಾರಿ ವಲಯದಲ್ಲಿರುವ ಭ್ರಷ್ಟಾಚಾರ ಅವರ ಭವಿಷ್ಯವನ್ನೇ ನುಂಗಿ ಹಾಕುತ್ತದೆ’ ಎನ್ನುತ್ತಾರೆ ವಿಜಯನಗರದಲ್ಲಿ ‘ಎನ್‌ಸಿಸಿ ತರಬೇತಿ ಸಂಸ್ಥೆ’ ನಡೆಸುವ ನಾಗಪ್ಪ.

ತಾಳ್ಮೆ, ಛಲದ ಪಾಠ...

‘ಲೋಕ ಸೇವಾ ಆಯೋಗದ ಪರೀಕ್ಷೆ ಬರೆಯುವವರಿಗೆ ತಾಳ್ಮೆ ಹಾಗೂ ಛಲ ಇರಬೇಕು’ ಎನ್ನುತ್ತಲೇ ತಮ್ಮ ಯಶಸ್ಸಿನ ಪಯಣವನ್ನು ಹಂಚಿಕೊಂಡರು ಕೋಲಾರ ಜಿಲ್ಲೆಯ ಇರಗಸಂದ್ರದ ರೈತ ಕುಟುಂಬದ ಮಧು. ಇವರು ಐಎಎಸ್ ಅಧಿಕಾರಿಯಾಗಬೇಕು ಎನ್ನುವ ಕನಸು ಕಟ್ಟಿಕೊಂಡು, ಸತತ ಪ್ರಯತ್ನ ಮಾಡಿ ಈಗ ಅದನ್ನು ನನಸು ಮಾಡುವ ಹಂತ ತಲುಪಿದ್ದಾರೆ.

2020ರಲ್ಲಿ ಮೊದಲ ಬಾರಿಗೆ ಯುಪಿಎಸ್ಸಿಗೆ ಪ್ರಯತ್ನ ಮಾಡಿದಾಗ ಪ್ರಿಲಿಮ್ಸ್ ಪಾಸ್ ಮಾಡಲೂ ಆಗಿರಲಿಲ್ಲ. ಮರುವರ್ಷ ಮಾಡಿದ ಪ್ರಯತ್ನದಲ್ಲಿ ಸಂದರ್ಶನ ಕೊಟ್ಟರೂ 31 ಅಂಕಗಳಿಂದಾಗಿ ಹಿನ್ನಡೆಯಾಗಿತ್ತು. 2022ರಲ್ಲಿ ಈ ಅಂತರ 25 ಅಂಕಗಳಿಗೆ ಬಂದಿಳಿಯಿತು. ಆದರೂ ಛಲಬಿಡದೇ 2023ರಲ್ಲಿ ಮರಳಿ ಯತ್ನ ಮಾಡಿದ್ದ ಮಧುಗೆ ನಾಲ್ಕನೇ ಪ್ರಯತ್ನ ಭಾರಿ ಆಘಾತ ನೀಡಿತ್ತು. ಪ್ರಿಲಿಮ್ಸ್ ಪಾಸು ಮಾಡಲಾಗಲಿಲ್ಲ. 2024ರಲ್ಲಿ ಭಾರತ ಮಟ್ಟದಲ್ಲಿ 544ನೇ ರ‍್ಯಾಂಕ್ ಪಡೆದು ಐಆರ್‌ಎಸ್ ಅಧಿಕಾರಿಯಾದರು. ಆದರೆ ತಾನು ಗುರಿ ಇಟ್ಟಿರುವ ಐಎಎಸ್‌ಗಾಗಿ ಈ ವರ್ಷ ಮತ್ತೊಮ್ಮೆ ಪರೀಕ್ಷೆ ಬರೆದಿದ್ದಾರೆ. ಮೇನ್ಸ್ ಪರೀಕ್ಷೆ ಬರೆದು ಫಲಿತಾಂಶದ ನಿರೀಕ್ಷೆಯಲ್ಲಿರುವ ಅವರು, ಈ ಬಾರಿ ಐಎಎಸ್ ಗಿಟ್ಟಿಸಿಕೊಳ್ಳುವ ವಿಶ್ವಾಸದಲ್ಲಿದ್ದಾರೆ.

‘ಆರಂಭದಲ್ಲಿ ಹಣಕಾಸಿನ ತೊಂದರೆ ಇತ್ತು. ಮೊದಲ ವರ್ಷ ಮನೆಯವರು ಖರ್ಚಿಗೆ ಹಣ ಕಳುಹಿಸಿಕೊಡುತ್ತಿದ್ದರು. ಬಳಿಕ ಪಾರ್ಟ್‌ಟೈಮ್ ಕೆಲಸ ಮಾಡುತ್ತಾ ಓದಿದೆ. ನನ್ನ ಖರ್ಚಿಗೆ ಬೇಕಾಗುವಷ್ಟು ಹಣ ಹುಟ್ಟುತ್ತಿತ್ತು. ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡರೆ ಸಾಧಿಸಲು ಆಗುತ್ತದೆ’ ಎಂದರು ಮಧು.

ವಿಜಯನಗರ, ಚಂದ್ರಾ ಲೇಔಟ್‌ನಲ್ಲಿ ಸುತ್ತಾಡುವಾಗ ನನಗೆ ಈ ಆಕಾಂಕ್ಷಿಗಳ ಕಣ್ಣುಗಳಲ್ಲಿ ದೊಡ್ಡ ದೊಡ್ಡ ಕನಸುಗಳೇ ಮೆರವಣಿಗೆ ಹೊರಟಂತೆ ಕಾಣಿಸಿತು. ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ವಿಲೋಮಸಂಖ್ಯಾ ವಿನೋದ

ನೂರರೊಳಗಿನ ಒಂದು ಸಂಖ್ಯೆಯನ್ನು ಬರೆಯಿರಿ. ಅದರ ವಿಲೋಮ ಸಂಖ್ಯೆಯನ್ನು ಬರೆಯಿರಿ. ಅವುಗಳ ವ್ಯತ್ಯಾಸವನ್ನು ಸುಲಭವಾಗಿ ಕಳೆಯದೇ ಹೇಳಬಹುದು. ಹೇಗೆ...ಹೀಗೆ.

ಉದಾ:

75
57-ವಿಲೋಮ ಸಂಖ್ಯೆ
57ರಲ್ಲಿ ದೊಡ್ಡ ಅಂಕಿಯಲ್ಲಿ ಸಣ್ಣ ಅಂಕಿ ಕಳೆದು ಅದಕ್ಕೆ ಮನಸ್ಸಿನಲ್ಲಿ ಒಂಬತ್ತರಿಂದ ಗುಣಿಸಿದರೆ 18 ಉತ್ತರ ಬರುತ್ತದೆ. 75ರಿಂದ 57ನ್ನು ಕಳೆದರೆ 18 ಬರುತ್ತದೆ.

ದಸ್ಗ ಚಕ್ಕು ಕ್ಷೇತ್ರಪ್ಪ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಮೀನಿಗೆ ಪ್ರಾಣಸಂಕಟ!

ಬೆಕ್ಕೊಂದು ಗಾಜಿನ ಹೂಜಿಯೊಳಗಿದ್ದ ಮೀನನ್ನು ಹೇಗಾದರೂ ಮಾಡಿ ಹೊಟ್ಟೆಗಿಳಿಸಬೇಕು ಎಂದು ಬಾಯಲ್ಲಿ ನೀರೂರಿಸುತ್ತಾ ಯೋಚನೆ ಮಾಡುತ್ತಿತ್ತು. ಮೀನು ಬೆಕ್ಕನ್ನು ಕಂಡು ಹೆದರಿತ್ತು. ಬೆಕ್ಕು ಮೆಲ್ಲನೆ ತನ್ನ ಉದ್ದದ ಕೈಯನ್ನು ಹೂಜಿಯೊಳಗೆ ಹಾಕಿತು. ಇನ್ನೇನು ಮೀನು ಕೈಗೆ ಸಿಕ್ಕಿತು ಎನ್ನುವಷ್ಟರಲ್ಲಿ ನಾಯಿ ಬೊಗಳಿದ ಸದ್ದಾಯಿತು. ಕತ್ತೆತ್ತಿ ನೋಡಿದಾಗ ಹೂಜಿಯ ಮೇಲೊಂದು ನಾಯಿಯಿತ್ತು. ಅದನ್ನು ಕಂಡು ಬೆಕ್ಕು ಅಲ್ಲಿಂದ ಕಾಲ್ಕಿತ್ತಿತು. ಜೀವ ಉಳಿಸಲು ಉಪಾಯ ಮಾಡಿದ್ದ ಆ ಮೀನು ನಾಯಿಯ ಚಿತ್ರವೊಂದನ್ನು ಹಿಡಿದು ಅದರಂತೆಯೇ ಸದ್ದು ಮಾಡಿತ್ತು.



ಜಾಣಪದ ಆಟ

ಇಲ್ಲಿ ಕೊಟ್ಟಿರುವ ಒಂದಕ್ಷರದ ಆಚೆ ಈಚೆ ಪದಪಟ್ಟಿಯಿಂದ ಆಯ್ದ ಎರಡು ಪದ ಸೇರಿಸಿ ಒಟ್ಟು ಐದಕ್ಷರದ ಪದ ಮಾಡಿ

ಪದ ಪಟ್ಟಿ

ರಸ	ಸೋವಿ	ಬಲಿ	ದಾರ
ಪದ	ಶರ	ಪದ	ಜರಿ
ಕರಿ	ರಾಗಿ	ಜರ	ಪುಷ್ಪ
ಸುಖ	ಕರಿ	ಬಳಿ	ಗಡಿ
ಜನ	ಬನ	ಸಾರ	ದಣಿ

1			ಮಂ		
2			ಪಂ		
3			ಕಂ		
4			ಸಂ		
5			ಅಂ		
6			ಸಂ		
7			ಶಂ		
8			ಮಂ		
9			ಅಂ		
10			ಸಂ		

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಕೆಳಗಿನ ಇಮೇಲ್‌ಗೆ ಕಳುಹಿಸಿ...

majakoora@prajavani.co.in

ಹೊಂದಿಸು ಆನಂದಿಸು

ಇಲ್ಲಿ ಕೊಟ್ಟಿರುವ ಸಂಗತಿಗಳಿಗೂ, ಇಸ್ವಿಗಳಿಗೂ ಹೊಂದಿಸು

1	ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಸ್ಥಾಪನೆ	1976
2	ಲೈಫ್ ಇನ್‌ಶ್ಯೂರೆನ್ಸ್ ಆಫ್ ಇಂಡಿಯಾ(ಎಲ್.ಐ.ಸಿ) ಆರಂಭವಾದ ವರ್ಷ	1964
3	ಇಂಡಿಯಲ್ ಆಯಿಲ್ ಕಾರ್ಪೊರೇಷನ್ ಆರಂಭವಾದ ವರ್ಷ	1956
4	ಭಾರತದಲ್ಲಿ ಜೀತ ಪದ್ಧತಿ ರದ್ಧತಿಯಾದ ವರ್ಷ	1991
5	ಭಾರತದಲ್ಲಿ ನೂತನ ಕೈಗಾರಿಕಾ ನೀತಿ ಘೋಷಣೆಯಾದ ವರ್ಷ	1948

ಮೋGನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಎರಡು ಇಂಗ್ಲಿಷ್ ಪದಗಳನ್ನು ಕೂಡಿಸಿ(ಅದರಲ್ಲಿರುವ ಅಕ್ಷರಗಳನ್ನು) ಒಂದೇ ಪದ ಮಾಡಿ

1	HIT	+	WE	
2	BUS	+	NO	
3	ONE	+	MY	
4	SHE	+	IN	
5	SET	+	WE	

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ

1	ತೆಗೆ	+	ನರಿ	+	ಷ್ಟ	=	
2	ವಟು	+	ಕೋನ	+	ಮಾ	=	
3	ಯತಿ	+	ಕೋಲ	+	ಬಾ	=	
4	ಮಾತು	+	ಕಸಿ	+	ಕಂ	=	
5	ಅಂಗಿ	+	ಬಲಿ	+	ರಾ	=	

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ:
1.ಬಾಳಿನಗುರಿ
2.ನೀರಿನರುಚಿ
3.ಕರಡಿಕಾಲು 4.ಸುಲಿಗೆ ಮಾಡು 5.ಬಾಡಿಗೆ ಮನೆ

ಜಾಣಪದ ಆಟ:
1.ಹಾಹಾಕಾರ
2.ರಾರಾಜಿಸು 3.ನಾನಾಬಗೆ
4.ಮಮಕಾರ 5.ಗೀಗೀಪದ
6.ಟಾಟಾಬಿರ್ಲಾ
7.ಕೊಕೊಕೋಲ
8.ಲಾಲಾರಸ
9.ದಾದಾಭಾಯಿ
10.ಡುಡುಪಕ್ಷಿ

ಶಬ್ದಾಟ: ಪಕ್ಷಿಗಳ ಕಲರವ

ಪದಹುಡುಕಾಟ: ಬೂದುಗುಂಬಳಕಾಯಿ

ಮೋಡಿ ಮಾಯಾಚೌಕ:

1	13	8	11
16	3	10	5
9	6	15	4
7	12	1	14

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ತನ್ವಿಕ ಕೆ. ಎಚ್
ಕೆ.ಆರ್.ಪೇಟೆ

ಯಜತ್ ಎಚ್.ಆರ್.
ಹೊಸಕೋಟೆ

ಪ್ರಣಂ ದಿಗಂಬರ ಕುಲಕರ್ಣಿ, ಬೆಳಗಾವಿ

ಗಾನವಿ ಕೆ.ಕೆ.
ಮಂಡ್ಯ

ಪ್ರತೀಕ್ಷಾ ಜೋಯ್ಸ್
ಆನಂದಪುರ, ಸಾಗರ

ಭೂಮಿಕಾ ಕೆ. ಎಚ್
ಕೆ.ಆರ್.ಪೇಟೆ

ಅಮೆರಿಕ ಓಪನ್: ನೇರ ಸೆಟ್‌ಗಳಲ್ಲಿ ಮಣಿದ ಜೊಕೊವಿಚ್

ಬ್ಲಾಕ್‌ಬಸ್ಟರ್ ಸೆಣಸಾಟಕ್ಕೆ ಅಲ್ಕರಾಜ್–ಸಿನ್ನರ್ ಸಜ್ಜು



ಕಾರ್ಲೋಸ್ ಅಲ್ಕರಾಜ್ (ಎಡ) ಮತ್ತು ಯಾನಿಕ್ ಸಿನ್ನರ್ ಸಂಭ್ರಮ ಚಿತ್ರ: ಎಎಫ್‌ಪಿ

ನ್ಯೂಯಾರ್ಕ್ (ಎಎಫ್‌ಪಿ): ಅನುಭವಿ ನೊವಾಕ್ ಜೊಕೊವಿಚ್ ಅವರನ್ನು ಶುಕ್ರವಾರ ನೇರ ಸೆಟ್‌ಗಳಲ್ಲಿ ಮಣಿಸಿದ ಕಾರ್ಲೋಸ್ ಅಲ್ಕರಾಜ್ ಅವರು ಅಮೆರಿಕ ಓಪನ್ ಫೈನಲ್ ತಲುಪಿದರು. ಫೈನಲ್‌ನಲ್ಲಿ ಅವರು ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರನ್ನು ಎದುರಿಸಲಿದ್ದು, ಮತ್ತೊಂದು 'ಬ್ಲಾಕ್‌ಬಸ್ಟರ್' ಸೆಣಸಾಟಕ್ಕೆ ವೇದಿಕೆ ರೂಪಿಸಿಕೊಂಡರು.

ಎರಡನೇ ಶ್ರೇಯಾಂಕದ ಅಲ್ಕರಾಜ್ ಶುಕ್ರವಾರ 2 ಗಂಟೆ 23 ನಿಮಿಷಗಳ ವರೆಗೆ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಬಿರುಸಿನ ಆಟವಾಡಿ 6–4, 7–6 (7–4), 6–2 ರಿಂದ ಜೊಕೊವಿಚ್ ಅವರನ್ನು ಸೋಲಿಸಿದರು. ಇಲ್ಲಿ ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲ್ಲುವ ಜೊಕೊವಿಚ್ ಕನಸು ಕಮರಿಹೋಯಿತು.

ಅಲ್ಕರಾಜ್ ಇದೀಗ ತಮ್ಮ ಬದ್ಧ ಎದುರಾಳಿ, ಇಟಲಿಯ ಯಾನಿಕ್ ಸಿನ್ನರ್ ಅವರನ್ನು ಎದುರಿಸಬೇಕಾಗಿದೆ. ಇನ್ನೊಂದು ಸೆಮಿಫೈನಲ್‌ನಲ್ಲಿ ಸಿನ್ನರ್, 25ನೇ ಶ್ರೇಯಾಂಕದ ಕೆನಡಾದ ಆಟಗಾರ ಫೆಲಿಕ್ಸ್ ಓಜೆ ಅಲಿಯಾಸೀಮ್ ಅವರನ್ನು ಸೋಲಿಸಲು ಶ್ರಮ ಹಾಕಬೇಕಾಯಿತು. ಹಾಲಿ ಚಾಂಪಿಯನ್ ಈ ಪಂದ್ಯವನ್ನು 6–1, 3–6, 6–3, 6–4 ರಿಂದ ಗೆದ್ದರು.

ಈ ವರ್ಷ ಸತತ ಮೂರನೇ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಫೈನಲ್‌ನಲ್ಲಿ ಅಲ್ಕರಾಜ್ ಮತ್ತು ಸಿನ್ನರ್ ಮುಖಾಮುಖಿ ಯಾಗುತ್ತಿದ್ದಾರೆ. ಈ ಪೈಪೋಟಿಗೆ ಸಾಕ್ಷಿ ಆಗಲಿರುವ 23000 ಪ್ರೇಕ್ಷಕರಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೂ ಒಬ್ಬರಾಗಿರಲಿದ್ದಾರೆ.

ಜೂನ್‌ನಲ್ಲಿ ಸುಮಾರು ಐದೂವರೆ ಗಂಟೆಗಳ ಅವಿಸ್ಮರಣೀಯ ಫ್ರೆಂಚ್ ಓಪನ್ ಫೈನಲ್‌ನಲ್ಲಿ ಅಲ್ಕರಾಜ್ ಜಯಗಳಿಸಿದ್ದರು. ಆದರೆ ತಿಂಗಳ ನಂತರ ವಿಂಬಲ್ಡನ್ ಫೈನಲ್‌ನಲ್ಲಿ ಗೆದ್ದ ಸಿನ್ನರ್ ಅವರು ಅಲ್ಕರಾಜ್ ಅವರನ್ನು ಚಾಂಪಿಯನ್ ಪಟ್ಟದಿಂದ ಕೆಳಗಿಳಿಸಿದ್ದರು.

ಜೊಕೊವಿಚ್ ವಿರುದ್ಧ ಆಡಿದ ರೀತಿ ನೋಡಿದರೆ, ಅಲ್ಕರಾಜ್ ಅವರು ಸಿನ್ನರ್ ಅವರನ್ನು ಸೋಲಿಸಲು ಸಮರ್ಥರಾಗಿರುವಂತೆ ಕಾಣುತ್ತಿದೆ. ಏನಿದ್ದರೂ ಫೈನಲ್ ಪಂದ್ಯ ಗೆಲ್ಲುವ ಆಟಗಾರ ಸೋಮವಾರ ಪ್ರಕಟವಾಗುವ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಲಿದ್ದಾರೆ.

ಅಲ್ಕರಾಜ್ ಸಾಧನೆ: ಫೈನಲ್ ತಲುಪುವ ಹಾದಿಯಲ್ಲಿ 22 ವರ್ಷದ ಅಲ್ಕರಾಜ್ ಒಂದೂ ಸೆಟ್ ಕಳೆದುಕೊಂಡಿಲ್ಲ. ಆದರೆ ತಮ್ಮ ಆಟ ಸುಧಾರಣೆಗೆ ಇನ್ನೂ ಅವಕಾಶ ಇದೆ ಎನ್ನುವುದು ಐದು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡೆಯನ ಅನಿಸಿಕೆ.

'ಮುಂದಿನ ವರ್ಷವೂ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗೆ ಯತ್ನಿಸುವ ಉದ್ದೇಶವಿದೆ. ಆದರೆ ಅಲ್ಕರಾಜ್ ಮತ್ತು ಸಿನ್ನರ್ ಅವರನ್ನು ದೈಹಿಕ ಸಾಮರ್ಥ್ಯದಲ್ಲಿ ಸರಿಗಟ್ಟಲು ಇನ್ನು ತಮ್ಮಿಂದಾಗದು' ಎಂದು ನಿರಾಶರಾದ 38 ವರ್ಷ ವಯಸ್ಸಿನ ಸರ್ಬಿಯಾದ ಆಟಗಾರ ಒಪ್ಪಿಕೊಂಡರು.

ಸಿನ್ನರ್ ಸಾಹಸ: ಆಸ್ಟ್ರೇಲಿಯಾ ಓಪನ್‌ನಲ್ಲಿ ಚಾಂಪಿಯನ್ ಆಗಿದ್ದ ಸಿನ್ನರ್, ಟೆನಿಸ್ ಇತಿಹಾಸದಲ್ಲಿ ಒಂದೇ ವರ್ಷ ನಾಲ್ಕೂ ಗ್ರ್ಯಾನ್‌ಸ್ಲಾಮ್ ಫೈನಲ್ ತಲುಪಿದ ಕೇವಲ ನಾಲ್ಕನೇ ಆಟಗಾರ ಎನಿಸಿದರು. ಈ ಹಿಂದೆ ಆಸ್ಟ್ರೇಲಿಯಾದ ರಾಡ್ ಲೇವರ್, ರೋಜರ್ ಫೆಡರರ್ ಮತ್ತು ಜೊಕೊವಿಚ್ ಇತರ ಮೂವರು.

2022ರಲ್ಲಿ ಇದೇ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಸಿನ್ನರ್–ಅಲ್ಕರಾಜ್ ನಡುವಣ 'ಕ್ಲಾಸಿಕ್' ಸಮರ ಐದು ಸೆಟ್‌ಗಳಿಗೆ ಬೆಳೆದು ಬೆಳಗಿನ ಜಾವ 2.50 ನಿಮಿಷಕ್ಕೆ ಮುಗಿದಿತ್ತು. ಇದು ಟೂರ್ನಿಯ ಇತಿಹಾಸದಲ್ಲೇ ಅತಿ ತಡವಾಗಿ ಮುಗಿದ ಪಂದ್ಯವಾಗಿದ್ದು ಅಲ್ಕರಾಜ್ ಜಯಗಳಿಸಿದ್ದರು.

ಗೇಬ್ರಿಯೆಲಾ– ಎರಿನ್ ಜೋಡಿಗೆ ಪ್ರಶಸ್ತ: ಶುಕ್ರವಾರ ನಡೆದ ಮಹಿಳೆಯರ ಡಬಲ್ಸ್ ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಗೇಬ್ರಿಯೆಲಾ ದಬ್ರೋವ್‌ಸ್ಕಿ– ಎರಿನ್ ರೂಟ್ಲಿಫ್ ಜೋಡಿ 6–4, 6–4 ರಿಂದ ಅಗ್ರ ಶ್ರೇಯಾಂಕದ ಟೇಲರ್ ಟೌನ್ಸೆಂಡ್ (ಅಮೆರಿಕಾ)– ಕ್ಯಾಥೆರಿನಾ ಸಿನಿಕೋವಾ (ಝೆಕ್ ರಿಪಬ್ಲಿಕ್) ಅವರನ್ನು ಸೋಲಿಸಿತು.

ಚೀನಾ ಮಣಿಸಿದ ಭಾರತ ಫೈನಲ್‌ಗೆ

ಏಷ್ಯಾ ಕಪ್: ಪ್ರಶಸ್ತಿಗಾಗಿ ಇಂದು ಕೊರಿಯಾ ವಿರುದ್ಧ ಸೆಣಸಾಟ

ಗೆಲುವಿನ ಸಂಭ್ರಮದಲ್ಲಿ ಭಾರತ ಹಾಕಿ ತಂಡದ ಆಟಗಾರರು ಪಿಟಿಐ ಚಿತ್ರ

ರಾಜಗೀರ್ (ಬಿಹಾರ), (ಪಿಟಿಐ): ಅಮೋಘ ಆಟವಾಡಿದ ಭಾರತ ತಂಡ, ಪುರುಷರ ಏಷ್ಯಾ ಕಪ್ ಹಾಕಿ ಟೂರ್ನಿಯ ಸೂಪರ್ ಫೋರ್ ಹಂತದ ಕೊನೆಯ ಪಂದ್ಯದಲ್ಲಿ ಚೀನಾ ತಂಡವನ್ನು ಶನಿವಾರ 7–0 ಗೋಲುಗಳಿಂದ ಸದೆಬಡಿದು ಫೈನಲ್‌ಗೆ ಲಗ್ಗೆಯಿಟ್ಟಿತು.

ಭಾರತ ಆರಂಭದಿಂದ ಆಟದ ಮೇಲೆ ನಿಯಂತ್ರಣ ಸಾಧಿಸಿತು. ಶಿಲಾನಂದ ಲಾಕ್ರಾ (4ನೇ ನಿಮಿಷ), ದಿಲ್‌ಪ್ರೀತ್ ಸಿಂಗ್ (7ನೇ), ಮನದೀಪ್ ಸಿಂಗ್ (18ನೇ ನಿಮಿಷ), ರಾಜಕುಮಾರ್ ಪಾಲ್ (37ನೇ ನಿಮಿಷ), ಸುಖಜೀತ್ ಸಿಂಗ್ (39ನೇ ನಿಮಿಷ) ಮತ್ತು ಅಭಿಷೇಕ್ (46 ಮತ್ತು 50ನೇ ನಿಮಿಷ) ಗೋಲುಗಳನ್ನು ಗಳಿಸಿದರು.

ಭಾರತದ ಸತತವಾಗಿ ನಡೆಸುತ್ತಿದ್ದ ದಾಳಿಯನ್ನು ನಿಭಾಯಿಸಲಿಕ್ಕೇ ಚೀನಾ ತನ್ನ ಸಮಯ ವ್ಯಯಿಸಬೇಕಾಯಿತು. ಹೀಗಾಗಿ ಆತಿಥೇಯ ತಂಡದ ರಕ್ಷಣಾ ವಿಭಾಗಕ್ಕೆ ಹೆಚ್ಚಿನ ಪರೀಕ್ಷೆ ಎದುರಾಗಲಿಲ್ಲ. ವಿಶೇಷವೆಂದರೆ ಇಡೀ ಪಂದ್ಯದಲ್ಲಿ ಭಾರತ ಎದುರಾಳಿಗಳಿಗೆ ಒಂದೂ ಪೆನಾಲ್ಟಿ ಕಾರ್ನರ್ ಬಿಟ್ಟುಕೊಡಲಿಲ್ಲ.

ಭಾರತ ಸೂಪರ್ ಫೋರ್ ಲೀಗ್ ಪಟ್ಟಿಯಲ್ಲಿ ಏಳು ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನ ಗಳಿಸಿತು. ಹಾಲಿ ಚಾಂಪಿಯನ್ ಕೊರಿಯಾ ನಾಲ್ಕು ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನ ಪಡೆಯಿತು.

ಆತಿಥೇಯರು ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದ್ದಾರೆ. ಇಲ್ಲಿ ಗೆದ್ದು, ಮುಂದಿನ ವರ್ಷ ಬೆಲ್ಜಿಯಂ–ನೆದರ್ಲೆಂಡ್ಸ್‌ನಲ್ಲಿ ನಡೆಯಲಿರುವ ವಿಶ್ವಕಪ್ ಹಾಕಿಗೆ ನೇರ ಟಿಕೆಟ್ ಪಡೆಯುವ ಗುರಿ ತಂಡದ ಎದುರು ಇದೆ.

ಮೂರು ಮತ್ತು ನಾಲ್ಕನೇ ಸ್ಥಾನಕ್ಕಾಗಿ ಭಾನುವಾರ ನಡೆಯುವ ಮತ್ತೊಂದು ಪಂದ್ಯದಲ್ಲಿ ಮಲೇಷ್ಯಾ, ಚೀನಾ ತಂಡವನ್ನು ಎದುರಿಸಲಿದೆ.

ಕಜಾಕಸ್ತಾನಕ್ಕೆ ಏಳನೇ ಸ್ಥಾನ: ವಿಶ್ವ ಕ್ರಮಾಂಕದಲ್ಲಿ 88ನೇ ಸ್ಥಾನದಲ್ಲಿದ್ದು ಟೂರ್ನಿಯ ದುರ್ಬಲ ತಂಡವೆನಿಸಿದ ಕಜಾಕಸ್ತಾನ ತಂಡ ದಿನದ ಇನ್ನೊಂದು ಪಂದ್ಯದಲ್ಲಿ 41ನೇ ಕ್ರಮಾಂಕದ ಚೀನಾ ತೈಪೆ ತಂಡವನ್ನು 6–4 ಗೋಲುಗಳಿಂದ ಸೋಲಿಸಿ ಏಳನೇ ಸ್ಥಾನ ಪಡೆದುಕೊಂಡಿತು.

ಜಪಾನ್ ಎದುರು ಡ್ರಾ ಸಾಧಿಸಿದ ಭಾರತ

ನವನೀತ್ ಕೌರ್ (ಮಧ್ಯ) ಸಂಭ್ರಮ

ಹಾಂಗ್‌ಝೌ (ಚೀನಾ), (ಪಿಟಿಐ): ಮುಕ್ತಾಯದ ಸೀಟಿಗೆ ಸೆಕೆಂಡುಗಳ ಮೊದಲು ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸಿದ ನವನೀತ್ ಕೌರ್ ಅವರು ಭಾರತ ತಂಡ, ಏಷ್ಯಾ ಕಪ್ ಮಹಿಳಾ ಹಾಕಿ ಟೂರ್ನಿಯ ಎರಡನೇ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಜಪಾನ್ ಎದುರು 2–2 ಡ್ರಾ ಸಾಧಿಸಲು ನೆರವಾದರು.

ಶನಿವಾರ ನಡೆದ 'ಬಿ' ಗುಂಪಿನ ಈ ತೀವ್ರ ಹೋರಾಟದ ಪಂದ್ಯದಲ್ಲಿ ಹಿರೊಕಾ ಮುರಾಯಮಾ ಅವರು ಹತ್ತನೇ ನಿಮಿಷ ಜಪಾನ್ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ 30ನೇ ನಿಮಿಷ ರುತಜಾ ದಾದಸೊ ಪಿಸಾಳ್ ಅವರು ಗೋಲು ಹೊಡೆದಿದ್ದರಿಂದ ಸ್ಕೋರ್ ಸಮನಾಯಿತು.

ಅಂತಿಮ ಕ್ವಾರ್ಟರ್‌ನಲ್ಲಿ ಚಿಕೊ ಫುಜಿಬಯಾಶಿ ಅವರು ಜಪಾನ್‌ಗೆ ಮತ್ತೊಮ್ಮೆ ಮುನ್ನಡೆ ಒದಗಿಸಿದರು. ಆದರೆ ಪಂದ್ಯದ ಕೊನೆಯ ನಿಮಿಷ ನವನೀತ್ ಗೋಲು ಗಳಿಸಿ ಭಾರತ ಸೋಲಿನಿಂದ ಪಾರಾಗಲು ಕಾರಣರಾದರು.

ತನ್ನ ಮೊದಲ ಪಂದ್ಯದಲ್ಲಿ ಥಾಯ್ಲೆಂಡ್ ತಂಡವನ್ನು 11–0 ಗೋಲುಗಳಿಂದ ಬಗ್ಗುಬಡಿದ ಭಾರತ, ಗುಂಪಿನಲ್ಲಿ ತನ್ನ ಕೊನೆಯ ಪಂದ್ಯವನ್ನು ಸೆ. 8ರಂದು ಸಿಂಗಪುರ ವಿರುದ್ಧ ಆಡಲಿದೆ.

ಪ್ರಸ್ತುತ ವಿಶ್ವ ರ್‍ಯಾಂಕಿಂಗ್‌ನಲ್ಲಿ ಭಾರತ 10ನೇ ಸ್ಥಾನದಲ್ಲಿ ಮತ್ತು ಜಪಾನ್ 12ನೇ ಸ್ಥಾನದಲ್ಲಿವೆ.

ಎಂಟು ತಂಡಗಳು ಈ ಟೂರ್ನಿಯಲ್ಲಿ ಭಾಗವಹಿಸುತ್ತಿವೆ. 'ಎ' ಮತ್ತು 'ಬಿ' ಗುಂಪಿನಲ್ಲಿ ತಲಾ ನಾಲ್ಕು ತಂಡಗಳಿದ್ದು, ಅಗ್ರಸ್ಥಾನ ಪಡೆಯುವ ಎರಡು ತಂಡಗಳು ಸೂಪರ್ ಫೋರ್ ಹಂತದಲ್ಲಿ ಆಡಲಿವೆ. ಫೈನಲ್ ಸೆ. 14ರಂದು ನಿಗದಿಯಾಗಿದೆ.

ದುಲೀಪ್ ಟ್ರೋಫಿ ಸೆಮಿಫೈನಲ್: ಶುಭಂ ಖಜೂರಿಯಾ ಶತಕ • ನಿಶಾಂತ್ ಸಿಂಧು ಅರ್ಧಶತಕ

ಕುತೂಹಲಕರ ಘಟ್ಟದಲ್ಲಿ ಉತ್ತರ–ದಕ್ಷಿಣ ಪಂದ್ಯ

• ಗಿರೀಶದೊಡ್ಡಮನಿ

ಬೆಂಗಳೂರು: ದಕ್ಷಿಣ ವಲಯ ಮತ್ತು ಉತ್ತರ ವಲಯ ತಂಡಗಳ ನಡುವಣ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಈಗ ಕುತೂಹಲಕಾರಿ ಘಟ್ಟ ತಲುಪಿದೆ. ಉಭಯ ತಂಡಗಳಲ್ಲಿ ಯಾರು 'ಮೊದಲ ಇನಿಂಗ್ಸ್' ಮುನ್ನಡೆ ಗಳಿಸಲಿದ್ದಾರೆ ಎಂಬುದೇ ಈಗ ಕುತೂಹಲದ ಕೇಂದ್ರಬಿಂದು.

ನಗರದ ಹೊರವಲಯದಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲೆರಡೂ ದಿನ ಬ್ಯಾಟಿಂಗ್ ಮಾಡಿದ್ದ ದಕ್ಷಿಣ ವಲಯ ಪ್ರಥಮ ಇನಿಂಗ್ಸ್‌ನಲ್ಲಿ 536 ರನ್ ಗಳಿಸಿತ್ತು. ಶನಿವಾರ ಇನಿಂಗ್ಸ್ ಆರಂಭಿಸಿದ ಉತ್ತರ ವಲಯ 79 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 278 ರನ್ ಗಳಿಸಿದ್ದು, ಇನಿಂಗ್ಸ್ ಮುನ್ನಡೆ ಪಡೆಯಲು ಇನ್ನೂ 259 ರನ್‌ಗಳ ಅಗತ್ಯವಿದೆ. ಪಂದ್ಯದಲ್ಲಿ ಇನ್ನೊಂದು ದಿನದ ಆಟ ಮಾತ್ರ ಬಾಕಿಯಿದೆ. ಉತ್ತರ ವಲಯವು ಲೆಕ್ಕ ಚುಕ್ತಾ ಮಾಡುವ ಮುನ್ನವೇ ದಕ್ಷಿಣ ವಲಯವು ಇನ್ನೈದು ವಿಕೆಟ್ ಗಳಿಸಿದರೆ ಮುನ್ನಡೆ ಸಾಧಿಸಿ ಫೈನಲ್ ತಲುಪಬಹುದು.

ಪಂದ್ಯವು ಈ ರೋಚಕ ಘಟ್ಟ ತಲುಪಲು ಪ್ರಮುಖ ಕಾರಣರಾಗಿದ್ದು ಉತ್ತರ ವಲಯದ ಆರಂಭಿಕ ಬ್ಯಾಟರ್ ಶುಭಂ ಖಜೂರಿಯಾ (ಬ್ಯಾಟಿಂಗ್ 128; 245ಎ, 4X20, 6X1) ಅವರ ಶತಕ. ಅವರೊಂದಿಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 171 ರನ್ ಸೇರಲು ಕಾರಣರಾದ ನಿಶಾಂತ್ ಸಿಂಧು (82; 148ಎ, 4X9, 6X1) ಕೂಡ ತಂಡಕ್ಕೆ ಆಸರೆಯಾದರು. ಇವರಿಬ್ಬರ ಆಟದಿಂದಾಗಿ ಉತ್ತರ ವಲಯ ತಂಡವು ಆರಂಭಿಕ ಆಘಾತದಿಂದ (38ಕ್ಕೆ2) ಚೇತರಿಸಿಕೊಂಡಿತು. ದಕ್ಷಿಣ ವಲಯದ ವೇಗಿ ಗುರ್ಜಪನೀತ್ (67ಕ್ಕೆ3) ಅವರ ದಾಳಿಗೆ ಸಿಲುಕಿದ ತಂಡಕ್ಕೆ ಶುಭಂ ಮತ್ತು ನಿಶಾಂತ್ ಆಸರೆಯಾದರು.

ಶುಕ್ರವಾರ ದಿನದಾಟ ಸ್ಥಗಿತವಾಗುವ ಮುನ್ನ ದಕ್ಷಿಣ ವಲಯವು ಆಲೌಟ್ ಆಗಿತ್ತು. ಮೂರನೇ ದಿನ ಬೆಳಿಗ್ಗೆ ಗುರ್ಜಪನೀತ್ ಹಾಕಿದ ಆರನೇ ಓವರ್‌ನಲ್ಲಿ ಉತ್ತರ ವಲಯದ ಆರಂಭಿಕ ಬ್ಯಾಟರ್ ಅಂಕಿತ್ ಕುಮಾರ್ (6) ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಯಶ್ ಧುಳ್ (14; 13ಎ) ಅವರನ್ನೂ ಗುರ್ಜಪನೀತ್ ಕ್ಲೀನ್‌ಬೌಲ್ಡ್ ಮಾಡಿದರು.

ಶುಭಂ ಆಟ: ಕಳೆದ ರಣಜಿ ಋತುವಿನಲ್ಲಿ ಉತ್ತಮವಾಗಿ ಆಡಿದ್ದ ಶುಭಂ ಇಲ್ಲಿ ಎರಡು ಮಹತ್ವದ ಜೊತೆಯಾಟಗಳಲ್ಲಿ ಭಾಗಿಯಾದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ ಆಯುಷ್ ಬಡೋನಿ ಜೊತೆಗೆ 63 ರನ್ ಸೇರಿಸಿದರು. ಭೋಜನ ವಿರಾಮಕ್ಕೂ ಸ್ವಲ್ಪ ಮುನ್ನ ಮಧ್ಯಮವೇಗಿ ನಿಧೀಶ್ ಎಸೆತದಲ್ಲಿ ಆಯುಷ್ (40; 57ಎ) ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಕ್ರೀಸ್‌ಗೆ ಬಂದ ನಿಶಾಂತ್ ಅವರು ಶುಭಂ ಜೊತೆಗೂಡಿ ಬೌಲರ್‌ಗಳನ್ನು ಕಾಡಿದರು. ಎಡಗೈ ಬ್ಯಾಟರ್ ನಿಶಾಂತ್ ಕೂಡ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. ಮಧ್ಯಾಹ್ನ 3.25ರ ಸುಮಾರಿಗೆ ಮಳೆ ಆರಂಭವಾಯಿತು. 45 ನಿಮಿಷ ಆಟ ಸ್ಥಗಿತವಾಯಿತು. ಆಗ ಶುಭಂ 97 ರನ್ ಗಳಿಸಿದ್ದರು. ಆಟ ಮತ್ತೆ ಮುಂದುವರಿದ ಮೇಲೆ ಬೌಂಡರಿ ಹೊಡೆದ ಶುಭಂ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಎಂಟನೇ ಶತಕ ದಾಖಲಿಸಿದರು.

ಸಲ್ಮಾನ್ ನಿಜಾರ್‌ಗೆ ಗಾಯ: ದಕ್ಷಿಣ ವಲಯದ ಸಲ್ಮಾನ್ ನಿಜಾರ್ ಅವರು ಫೀಲ್ಡಿಂಗ್ ಮಾಡುವಾಗ ಆಯುಷ್ ಬಡೋಣಿ ಹೊಡೆದ ಚೆಂಡು ಚೆಂಡು ಬಡಿದು ಗಾಯಗೊಂಡರು.ಹಾಗಾಗಿ ಅವರನ್ನು ಮೈದಾನದಿಂದ ಹೊರಕರೆತರಬೇಕಾಯಿತು.

ಸಂಕ್ಷಿಪ್ತ ಸ್ಕೋರು: ಸೆಮಿಫೈನಲ್ (1): ಮೊದಲ ಇನಿಂಗ್ಸ್: ದಕ್ಷಿಣ ವಲಯ 169.2 ಓವರ್‌ಗಳಲ್ಲಿ 536. ಉತ್ತರ ವಲಯ: 79 ಓವರ್‌ಗಳಲ್ಲಿ 5ಕ್ಕೆ278 (ಶುಭಂ ಖಜೂರಿಯಾ ಬ್ಯಾಟಿಂಗ್ 128, ನಿಶಾಂತ್ ಸಿಂಧು 82, ಗುರ್ಜಪನೀತ್ 67ಕ್ಕೆ3)

ಸೆಮಿಫೈನಲ್ (2): ಮೊದಲ ಇನಿಂಗ್ಸ್: ಪಶ್ಚಿಮವಲಯ: 108 ಓವರ್‌ಗಳಲ್ಲಿ 438. ಕೇಂದ್ರ ವಲಯ: 152. 4 ಓವರ್‌ಗಳಲ್ಲಿ 7ಕ್ಕೆ538 (ಆಯುಷ್ ಪಾಂಡೆ 40, ದನೀಷ್ ಮಾಳೆವರ್ 76, ಶುಭಂ ಶರ್ಮಾ 96, ರಜತ್ ಪಾಟೀದಾರ್ 77, ಉಪೇಂದ್ರ ಯಾದವ್ 87, ಹರ್ಷ ದುಬೆ 75, ದೀಪಕ್ ಚಾಹರ್ ಬ್ಯಾಟಿಂಗ್ 31, ಧರ್ಮೇಂದ್ರಸಿಂಹ ಜಡೇಜ 101ಕ್ಕೆ4)

ಕೇಂದ್ರ ವಲಯ ಮುನ್ನಡೆ

ಬಿಸಿಸಿಐ ಸಿಒಇ ಎರಡನೇ ಮೈದಾನದಲ್ಲಿ ನಡೆಯುತ್ತಿರುವ ಇನ್ನೊಂದು ಸೆಮಿಫೈನಲ್‌ನಲ್ಲಿ ಕೇಂದ್ರ ವಲಯ ತಂಡ ಮೊದಲ ಇನಿಂಗ್ಸ್‌ನಲ್ಲಿ 118 ರನ್‌ಗಳ ಮುನ್ನಡೆ ಸಾಧಿಸಿದೆ.

ಪಶ್ಚಿಮ ವಲಯವು ಮೊದಲು ಬ್ಯಾಟಿಂಗ್ ಮಾಡಿ 438 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಕೇಂದ್ರವು ಮೂರನೇ ದಿನದಾಟದ ಕೊನೆಗೆ 157 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 556 ರನ್ ಗಳಿಸಿತು. ತಂಡದ ಶುಭಂ ಶರ್ಮಾ (96; 241ಎ, 4X11) ನಾಲ್ಕು ರನ್ ಅಂತರದಲ್ಲಿ ಶತಕ ತಪ್ಪಿಸಿಕೊಂಡರು. ನಾಯಕ ರಜತ್ ಪಾಟೀದಾರ್ (77), ಉಮೇಂದ್ರ ಯಾದವ್ (87) ಹಾಗೂ ಹರ್ಷ ದುಬೆ (75) ಉಪಯುಕ್ತ ಕಾಣಿಕೆ ನೀಡಿದರು.

ಉತ್ತರ ವಲಯ ತಂಡದ ಪರ ಶತಕ ಗಳಿಸಿದ ಶುಭಂ ಖಜೂರಿಯಾ (ಎಡ) ಮತ್ತು ಅರ್ಧಶತಕ ಹೊಡೆದ ನಿಶಾಂತ್ ಸಿಂಧು ಪಿಟಿಐ ಚಿತ್ರ

ಹಿಮಾಚಲ ತಂಡದ ಮುಂದೆ ನಡುಗಿದ ಕೆಎಸ್‌ಸಿಎ ಕೋಲ್ಟ್ಸ

ಮೈಸೂರು: ಕೆಎಸ್‌ಸಿಎ ಕೋಲ್ಟ್ಸ ತಂಡವು ಶನಿವಾರ ಇಲ್ಲಿನ ಎಸ್‌ಜೆಸಿಇ ಕ್ರೀಡಾಂಗಣದಲ್ಲಿ ನಡೆದ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ ಎದುರು 10 ವಿಕೆಟ್‌ಗಳ ಹೀನಾಯ ಸೋಲು ಅನುಭವಿಸಿತು.

ಪಂದ್ಯದ ಮೂರನೇ ದಿನ ಕೋಲ್ಟ್ಸ ತನ್ನ ಎರಡನೇ ಇನಿಂಗ್ಸ್‌ನಲ್ಲಿ 203 ರನ್ ಗಳಿಸಲಷ್ಟೇ ಶಕ್ತವಾಯಿತು. ನಾಯಕ ಅನೀಶ್ವರ್ ಗೌತಮ್ (56) ಹೋರಾಟದ ಅರ್ಧಶತಕ ಗಳಿಸಿದರು. ಎನ್. ಸಮರ್ಥ್ (31) ಸಾಥ್ ನೀಡಿದರು. ವೇಗಿ ದಿವೇಶ್ ಶರ್ಮ ಈ ಇಬ್ಬರನ್ನೂ ಬೌಲ್ಡ್ ಮಾಡುವ ಮೂಲಕ ಕೋಲ್ಟ್ಸ ಇನಿಂಗ್ಸ್‌ಗೆ ಮಂಗಳ ಹಾಡಿದರು. ಹಿಮಾಚಲ ಪ್ರದೇಶ ಪರ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ನೀಡಿದ ವಿಪಿನ್ ಶರ್ಮ 55ಕ್ಕೆ 5 ವಿಕೆಟ್ ಉರುಳಿಸಿದರು.

ಮೊದಲ ಇನಿಂಗ್ಸ್‌ನಲ್ಲಿ 163 ರನ್ ಮುನ್ನಡೆ ಗಳಿಸಿದ್ದ ಹಿಮಾಚಲ ಪ್ರದೇಶ ಎರಡನೇ ಇನಿಂಗ್ಸ್‌ನಲ್ಲಿ 41 ರನ್‌ಗಳ ಗುರಿಯನ್ನು ವಿಕೆಟ್ ನಷ್ಟವಿಲ್ಲದೇ ಮುಟ್ಟಿತು. ಈ ಗೆಲುವಿನೊಂದಿಗೆ 7 ಅಂಕ ಸಂಪಾದಿಸಿತು.

ಸಂಕ್ಷಿಪ್ತ ಸ್ಕೋರ್: ಎಸ್‌ಜೆಸಿಇ ಕ್ರೀಡಾಂಗಣ: ಮೊದಲ ಇನ್ನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ: 41 ಓವರ್‌ಗಳಲ್ಲಿ 140. ಹಿಮಾಚಲ ಪ್ರದೇಶ: 91.1 ಓವರ್‌ಗಳಲ್ಲಿ 303. ಎರಡನೇ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ: 46.1 ಓವರ್‌ಗಳಲ್ಲಿ 203 (ಅನೀಶ್ವರ್ ಗೌತಮ್ 56, ಎನ್. ಸಮರ್ಥ್ 31. ವಿಪಿನ್ ಶರ್ಮ 55ಕ್ಕೆ 5, ದಿವೇಶ್ ಶರ್ಮ 58ಕ್ಕೆ 3). ಹಿಮಾಚಲ ಪ್ರದೇಶ: 6.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 41 (ರವಿ ಠಾಕೂರ್ ಔಟಾಗದೇ 23, ಅಂಕುಶ್ ಬೈನ್ಸ್ ಔಟಾಗದೇ 17).

ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ: ಮೊದಲ ಇನಿಂಗ್ಸ್: ಆಂಧ್ರ ಕ್ರಿಕೆಟ್ ಸಂಸ್ಥೆ: 83.5 ಓವರ್‌ಗಳಲ್ಲಿ 257. ಬರೋಡ ಕ್ರಿಕೆಟ್ ಸಂಸ್ಥೆ: 152.5 ಓವರ್‌ಗಳಲ್ಲಿ 9 ವಿಕೆಟ್‌ಗೆ 424 ಡಿ (ಸುಕೃತ್ ಪಾಂಡೆ ಔಟಾಗದೇ 156, ಪಿ. ಮಹೇಶ್ 48; ಕೆಎಸ್‌ಎನ್ ರಾಜು 75ಕ್ಕೆ 4) ಎರಡನೇ ಇನಿಂಗ್ಸ್: ಆಂಧ್ರ ಕ್ರಿಕೆಟ್ ಸಂಸ್ಥೆ: 13 ಓವರ್‌ಗಳಲ್ಲಿ 2 ವಿಕೆಟ್‌ಗೆ 20 (ಸಿ.ಆರ್. ಜ್ಞಾನೇಶ್ವರ್ ಔಟಾಗದೇ 14; ಪಿ. ಮಹೇಶ್ 0ಕ್ಕೆ 2)

ವಿಶ್ವ ಆರ್ಚರಿ: ಭಾರತಕ್ಕೆ ಎರಡು ಪದಕ ಖಚಿತ

ಗ್ವಾಂಗ್‌ಜು (ದಕ್ಷಿಣ ಕೊರಿಯಾ), (ಪಿಟಿಐ): ಭಾರತದ ಬಿಲ್ಗಾರರು, ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು. ಪುರುಷರ ಕಾಂಪೌಂಡ್ ಆರ್ಚರಿ ತಂಡ ವಿಭಾಗದಲ್ಲಿ ಮತ್ತು ಮಿಶ್ರ ತಂಡ ವಿಭಾಗದಲ್ಲಿ ಶನಿವಾರ ಫೈನಲ್ ತಲುಪಿದ್ದು, ಕನಿಷ್ಠ ಎರಡು ಪದಕಗಳನ್ನು ಖಾತರಿಪಡಿಸಿಕೊಂಡಿದ್ದಾರೆ.

ಒತ್ತಡದಲ್ಲೂ ಏಕಾಗ್ರತೆ ಪ್ರದರ್ಶಿಸಿದ ಪುರುಷರ ತಂಡ ಮೂರು ಪಂದ್ಯಗಳನ್ನು ಜಯಿಸಿತು. ಆಸ್ಟ್ರೇಲಿಯಾವನ್ನು ಶೂಟ್ ಆಫ್‌ನಲ್ಲಿ, ಅಮೆರಿಕವನ್ನು ಒಂದು ಪಾಯಿಂಟ್‌ನಿಂದ, ಟರ್ಕಿಯನ್ನು ಎರಡು ಪಾಯಿಂಟ್‌ಗಳಿಂದ ಸೋಲಿಸಿತು. ಭಾನುವಾರ ಚಿನ್ನದ ಪದಕದ ಹಣಾಹಣಿಯಲ್ಲಿ ಫ್ರಾನ್ಸ್ ತಂಡವನ್ನು ಎದುರಿಸಲಿದೆ. 23 ವರ್ಷ ವಯಸ್ಸಿನ ರಿಷಭ್ ಯಾದವ್ ಭಾರತ ತಂಡದ ಕ್ವಾಲಿಫಿಕೇಷನ್‌ನಲ್ಲಿ 709 ಪಾಯಿಂಟ್ಸ್ ಕಲೆಹಾಕಿದರು. ಮಿಶ್ರ ತಂಡ ವಿಭಾಗದಲ್ಲಿ ಅವರು 29 ವರ್ಷ ವಯಸ್ಸಿನ ಜ್ಯೋತಿ ಸುರೇಖಾ ವೆಣ್ಣಂ ಜೊತೆಗೂಡಿ, ಜರ್ಮನಿ, ಎಲ್ ಸಾಲ್ವಡಾರ್ ಮತ್ತು ಚೀನಾ ತೈಪಿಯ ಸ್ಪರ್ಧಿಗಳನ್ನು ಸುಲಭವಾಗಿ ಸೋಲಿಸಿದರು.

ಬಿಸಿಸಿಐ ನೂತನ ಅಧ್ಯಕ್ಷರ ಆಯ್ಕೆ 28ಕ್ಕೆ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವಾರ್ಷಿಕ ಮಹಾಸಭೆ ಇದೇ ತಿಂಗಳ 28ರಂದು ಇಲ್ಲಿ ನಡೆಯಲಿದ್ದು, ಹೊಸ ಅಧ್ಯಕ್ಷರ ಆಯ್ಕೆ ನಡೆಯಲಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ಚೇರ್‌ಮನ್ ಆಯ್ಕೆಯೂ ಅಂದೇ ನಡೆಯಲಿದೆ.

ಈ ಎರಡು ಸ್ಥಾನಕ್ಕೆ ಆಯ್ಕೆ ಸಭೆಯ ಪ್ರಮುಖ ಕಾರ್ಯಸೂಚಿಯಾಗಿದೆ. ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರು ಜುಲೈನಲ್ಲಿ 70ನೇ ವರ್ಷಕ್ಕೆ ಕಾಲಿಟ್ಟ ಕಾರಣ ಹುದ್ದೆ ತ್ಯಜಿಸಿದ್ದರು. ಅವರನ್ನು 2022ರ ಅಕ್ಟೋಬರ್‌ನಲ್ಲಿ ಬಿಸಿಸಿಐ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗಿತ್ತು. ಬಿಸಿಸಿಐ ನಿಯಮಾವಳಿ ಪ್ರಕಾರ 70 ವರ್ಷ ದಾಟಿದ ಯಾರೂ ಪದಾಧಿಕಾರಿಯಾಗಿ ಮುಂದುವರಿಯುತ್ತಿಲ್ಲ.

ಐಪಿಎಲ್ ಅಧ್ಯಕ್ಷರಾಗಿ ಎರಡು ಅವಧಿಗೆ (ಗರಿಷ್ಠ ಆರು ವರ್ಷ) ಅಧಿಕಾರದಲ್ಲಿದ್ದ ಕಾರಣ ಅವರು ಕಡ್ಡಾಯ ಕೂಲ್‌ಆಫ್ ನಿಯಮದಡಿ ಈ ಸ್ಥಾನದಲ್ಲಿ ಮುಂದುವರಿಯುವಂತಿಲ್ಲ.

ಬಾಕ್ಸಿಂಗ್: ನಿಕಹತ್ ಮುನ್ನಡೆ, ಲವ್ಲಿನಾ ನಿರ್ಗಮನ

ನಿಖತ್

ಲಿವರ್‌ಪೂಲ್ (ಬ್ರಿಟನ್) (ಪಿಟಿಐ): ಶ್ರೇಯಾಂಕ ರಹಿತ ನಿಖತ್ ಜರೀನ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಶುಭಾರಂಭ ಮಾಡಿದರು. ಆದರೆ, ಟೋಕಿಯೊ ಒಲಿಂಪಿಕ್ಸ್ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ ಅವರು ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಆಘಾತ ಅನುಭವಿಸಿದರು.

ಎರಡು ಬಾರಿ ವಿಶ್ವ ಚಾಂಪಿಯನ್ ನಿಖತ್ ಅವರು ಮಹಿಳೆಯರ 51 ಕೆ.ಜಿ. ವಿಭಾಗದಲ್ಲಿ ಅಮೆರಿಕದ ಜೆನಿಫರ್ ಲೊಜಾನೊ ಎದುರು 5–0 ಬೌಟ್‌ಗಳಿಂದ ಗೆಲುವು ಸಾಧಿಸಿ, 16ರ ಘಟ್ಟ ಪ್ರವೇಶಿಸಿದರು. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡನೇ ಸುತ್ತಿನ ಪಂದ್ಯದಲ್ಲಿ ಗಾಯಗೊಂಡಿದ್ದ ಅವರು, ಈ ಟೂರ್ನಿಯ ಮೂಲಕ ಅಂತರರಾಷ್ಟ್ರೀಯ ಬಾಕ್ಸಿಂಗ್ ಸ್ಪರ್ಧೆಗೆ ಮರಳಿದ್ದಾರೆ.

ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ನರೇಂದ್ರ ಬರ್ವಾಲ್ ಅವರು 90 + ಕೆ.ಜಿ. ವಿಭಾಗದಲ್ಲಿ 4–1ರಿಂದ ಐರ್ಲೆಂಡ್‌ನ ಮಾರ್ಟಿನ್ ಕ್ರಿಸ್ಟೊಫರ್ ಮೆಕ್‌ಡೊನಾಗ್ ಅವರನ್ನು ಹಿಮ್ಮೆಟ್ಟಿಸಿ 16ರ ಘಟ್ಟಕ್ಕೆ ಮುನ್ನಡೆದರು.

ಅಗ್ರ ಶ್ರೇಯಾಂಕಿತೆ ಲವ್ಲಿನಾ, ಮಹಿಳೆಯರ 75 ಕೆ.ಜಿ. ವಿಭಾಗದಲ್ಲಿ 0–5ರಿಂದ ಟರ್ಕಿಯ ಬುಸ್ರಾ ಇಸಿಲ್ದಾರ್ ಎದುರು ಪರಾಭವಗೊಂಡರು.

ಎರಡು ಬಾರಿಯ ವಿಶ್ವಕಪ್ ವಿನ್ನರ್ ಹಿತೇಶ್ ಗುಲಿಯಾ ಅವರೂ ಸೋಲಿನ ಕಹಿ ಅನುಭವಿಸಬೇಕಾಯಿತು. ಪುರುಷರ 70 ಕೆ.ಜಿ. ವಿಭಾಗದಲ್ಲಿ ಕಣಕ್ಕಿಳಿದಿರುವ ಅವರು 1–4ರಿಂದ ಬೊಸ್ ಫಿನ್ ರಾಬರ್ಟ್ (ನೆದರ್ಲೆಂಡ್ಸ್) ವಿರುದ್ಧ 1–4ರಿಂದ ಸೋಲುಂಡರು. ಅವರು ಪ್ರಥಮ ಸುತ್ತಿನಲ್ಲಿ ಬೈ ಪಡೆದಿದ್ದರು.

ಚಿಟಿಕೆ ಸುದ್ದಿ

ಭಾರತ 'ಎ' ತಂಡಕ್ಕೆ ಶ್ರೇಯಸ್ ಸಾರಥ್ಯ

ಮುಂಬೈ (ಪಿಟಿಐ): ಟೆಸ್ಟ್ ತಂಡ ಮತ್ತು ಏಷ್ಯಾ ಕಪ್ ಟಿ20 ತಂಡದಿಂದ ಹೊರಬಿದ್ದಿರುವ ಶ್ರೇಯಸ್ ಅಯ್ಯರ್ ಅವರನ್ನು ಆಸ್ಟ್ರೇಲಿಯಾ 'ಎ' ತಂಡದ ವಿರುದ್ಧ ಎರಡು 'ಟೆಸ್ಟ್' ಪಂದ್ಯಗಳನ್ನು ಆಡಲಿರುವ ಭಾರತ 'ಎ' ತಂಡಕ್ಕೆ ನಾಯಕರನ್ನಾಗಿ ನೇಮಕ ಮಾಡಲಾಗಿದೆ. 15 ಸದಸ್ಯರ ತಂಡದಲ್ಲಿ ಕರ್ನಾಟಕದ ದೇವದತ್ತ ಪಡಿಕ್ಕಲ್ ಮತ್ತು ಪ್ರಸಿದ್ಧ ಕೃಷ್ಣ ಅವರು ಸ್ಥಾನ ಪಡೆದಿದ್ದಾರೆ.

ಲಖನೌದ ಏಕನಾ ಕ್ರೀಡಾಂಗಣದಲ್ಲಿ ಸೆ. 16 ರಿಂದ 19 ರವರೆಗೆ ಮತ್ತು 22 ರಿಂದ 26ರವರೆಗೆ ಈ ಪಂದ್ಯಗಳು ನಡೆಯಲಿವೆ.

ಏಷ್ಯಾ ಕಪ್ ತಂಡದಲ್ಲಿ ಅವಕಾಶ ವಂಚಿತರಾದ ಶ್ರೇಯಸ್, ದುಲೀಪ್ ಟ್ರೋಫಿ ಟೂರ್ನಿಯಲ್ಲಿ ಆಡುತ್ತಿದ್ದಾರೆ.

ಬ್ಯಾಟರ್–ಕೀಪರ್ ಧ್ರುವ್ ಜುರೇಲ್ ಉಪನಾಯಕರಾಗಿದ್ದಾರೆ.

ಪ್ರೊ ಕಬಡ್ಡಿ ಲೀಗ್: ಪಟ್ನಾ ಪೈರೇಟ್ಸ್ ವಿರುದ್ಧ 8 ಅಂಕಗಳ ಜಯ

ಗೆಲುವಿನ ಹಳಿಗೆ ಬೆಂಗಳೂರು ಬುಲ್ಸ್

ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಪಟ್ನಾ ರೇಡರ್‌ನನ್ನು ಹಿಡಿದೆಳೆದ ಬುಲ್ಸ್ ಆಟಗಾರರು

ವಿಶಾಖಪಟ್ಟಣ: ಅಲಿರೆಜಾ ಮಿರ್ಜೈಯನ್ ಅವರ ಸೂಪರ್ ಟೆನ್ ಸಾಹಸದ ಜತೆಗೆ ಚೇತೋಹಾರಿ ಪ್ರದರ್ಶನ ನೀಡಿದ ಬೆಂಗಳೂರು ಬುಲ್ಸ್ ತಂಡ ಪ್ರೊ ಕಬಡ್ಡಿ ಲೀಗ್ 12ನೇ ಆವೃತ್ತಿಯ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವನ್ನು 38–30 ಅಂಕಗಳಿಂದ ಸೋಲಿಸಿ ಮೊದಲ ಗೆಲುವು ದಾಖಲಿಸಿತು.

ಬುಲ್ಸ್ ತಂಡ ಮೊದಲ ಮೂರು ಪಂದ್ಯಗಳಲ್ಲಿ ಸೋಲನುಭವಿಸಿತ್ತು. ಈ ಗೆಲುವಿನೊಂದಿಗೆ ತಂಡದ ಖಾತೆಯಲ್ಲಿ ಎರಡು ಅಂಕ ಸೇರಿತು.

ವಿಶ್ವನಾಥ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಶನಿವಾರ ನಡೆದ ಮೊದಲ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ವಿರಾಮದ ವೇಳೆಗೆ 18–15ರಲ್ಲಿ ಮೂರು ಪಾಯಿಂಟ್‌ಗಳ ಅಲ್ಪ ಮುನ್ನಡೆ ಪಡೆದಿತ್ತು.

ಬೆಂಗಳೂರು ಬುಲ್ಸ್ ಪರ ಅಲಿರೆಜಾ ಮಿರ್ಜೈಯನ್ (10 ಅಂಕ) ಮಿಂಚಿದರೆ, ಆಶಿಶ್ ಮಲಿಕ್ (8 ಅಂಕ), ಯೋಗೇಶ್ (3 ಅಂಕ) ಮತ್ತು ದೀಪಕ್ (4 ಅಂಕ) ಅವರೂ ಉಪಯುಕ್ತ ಕೊಡುಗೆ ನೀಡಿದರು. ಮೂರು ಬಾರಿಯ ಚಾಂಪಿಯನ್ ಪಟ್ನಾ ಪೈರೇಟ್ಸ್ ಪರ ಆಯಾನ್ (10 ಅಂಕ) ಮಿಂಚಿದರೆ, ಡಿಫೆಂಡರ್‌ಗಳಾದ ದೀಪಕ್(3) ಮತ್ತು ಸುಧಾಕರ್ 6 ಅಂಕ ಗಳಿಸಿ ತಂಡದ ಹೋರಾಟ ನೀಡಲು ನೆರವಾದರು.

ಬುಲ್ಸ್ ತಂಡ ಇದೇ 8ರಂದು ನಡೆಯುವ ತನ್ನ ಮುಂದಿನ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಹರಿಯಾಣ ಸ್ಟೀಲರ್ಸ್ ತಂಡವನ್ನು ಎದುರಿಸಲಿದೆ.

ಭಾನುವಾರದ ಪಂದ್ಯಗಳು:
ಬೆಂಗಾಲ್ ವಾರಿಯರ್ಸ್– ತೆಲುಗು ಟೈಟನ್ಸ್ (ರಾತ್ರಿ 8)
ದಬಾಂಗ್ ಡೆಲ್ಲಿ ಕೆ.ಸಿ.– ಜೈಪುರ ಪಿಂಕ್ ಪ್ಯಾಂಥರ್ಸ್ (ರಾತ್ರಿ 9).

ತಲೈವಾಸ್‌ಗೆ ಹ್ಯಾಟ್ರಿಕ್ ಸೋಲು

ಆಲ್‌ರೌಂಡ್ ಆಟ ಆಡಿದ ಗುಜರಾತ್ ಜೈಂಟ್ಸ್ ತಂಡವು ದಿನದ ಎರಡನೇ ಪಂದ್ಯದಲ್ಲಿ 37–28ರಿಂದ ತಮಿಳು ತಲೈವಾಸ್ ತಂಡವನ್ನು ಸೋಲಿಸಿತು. ಇದು ಈ ಬಾರಿಯ ಲೀಗ್‌ನಲ್ಲಿ ತಲೈವಾಸ್‌ಗೆ ಸತತ ಮೂರನೇ ಸೋಲು.

ಗುಜರಾತ್ ಪರ ನಿತಿನ್ ಪನ್ವಾರ್ 5 ಟ್ಯಾಕಲ್ ಹಾಗೂ 3 ಬೋನಸ್ ಪಾಯಿಂಟ್ಸ್ ಪಡೆದು ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು. ರಾಕೇಶ್ ಸುಂಗ್ರೋಯಾ, ಮೊಹಮ್ಮದ್ ರೇಜಾ ಶಾಡ್ಲು ಹಾಗೂ ಶ್ರೀಧರ್ ಆನಂದ ಕದಂ ಅವರು ತಲಾ ಮೂರು ಅಂಕಗಳೊಂದಿಗೆ ಉತ್ತಮ ಬೆಂಬಲ ನೀಡಿದರು. ತಲೈವಾಸ್ ಪರ ಪವನ್ ಶೆರಾವತ್ 6 ರೇಡಿಂಗ್ ಪಾಯಿಂಟ್ಸ್ ಪಡೆದರೆ, ಅರ್ಜುನ್ ದೇಶವಾಲ್ 5 ಅಂಕ ಸಂಪಾದಿಸಿದರು.